"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಕರ್ನಾಟಕ ವಿಧಾನ ಪರಿಷತ್ತು**

**ಮಂಗಳವಾರ**
**3ನೇ ಜುಲೈ 2018**

**ವಿಷಯಾನುಕ್ರಮಣಿಕೆ**

1. **ನೂತನ ಸದಸ್ಯರು ಹಾಗೂ ಸಚಿವರ ಪರಿಚಯ.**

2. **ಸದನ ಪ್ರಾರಂಭವಾದ ದಿನದಿಂದ ಪ್ರಶ್ನೋತ್ತರವನ್ನು ಪ್ರಾರಂಭಿಸದಿರುವ ಬಗ್ಗೆ ಚರ್ಚೆ**

ಶ್ರೀ ಅರುಣ್ ಶಹಾಪೂರ್
ಶ್ರೀ ರಘುನಾಥ್ ರಾವ್ ಮಲ್ಕಾಪೂರೆ
ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು)
ಶ್ರೀ ಯು.ಟಿ.ಖಾದರ್ (ವಸತಿ ಸಚಿವರು)

3. **ವಿಶೇಷ ಪ್ರಸ್ತಾವಗಳು.**

**ಅ) ಕೈಲಾಸ ಮಾನಸ ಸರೋವರ ಯಾತ್ರೆಗೆ ತೆರಳಿರುವ ಕರ್ನಾಟಕ ರಾಜ್ಯದ ಯಾತ್ರಾರ್ಥಿಗಳ್ಲು ಪ್ರಕೃತಿ ವಿಕೋಪದಿಂದ ಸುರಿಯುತ್ತಿರುವ ಬಾರಿ ಮಳೆಯ ಮಧ್ಯೆ ಸಿಲುಕಿದ್ದು ಅವರುಗಳನ್ನು ರಕ್ಷಣೆ ಮಾಡುವ ಕುರಿತು.**

ಶ್ರೀ ಕೆ.ಟಿ.ಶ್ರೀಕಂಠೇಗೌಡ
ಶ್ರೀಮತಿ ಜಯಮಾಲ ರಾಮಚಂದ್ರ(ಸಭಾನಾಯಕರು)

**ಆ) ದಕ್ಷಿಣ ಕನ್ನಡ ಜಿಲ್ಲೆ 2018ನೇ ಸಾಲಿನಲ್ಲಿ ಮುಂಗಾರು ಮಳೆಯಿಂದ ಹಾನಿಯಾದ ಬಗ್ಗೆ ಉನ್ನತ ಮಟ್ಟದ ಅಧಿಕಾರಿಗಳ ಸಮಿತಿ ರಚಿಸುವ ಕುರಿತು..**

ಶ್ರೀ ಐವನ್ ಡಿ'ಸೋಜಾ
ಶ್ರೀಮತಿ ಜಯಮಾಲ ರಾಮಚಂದ್ರ(ಸಭಾನಾಯಕರು)

**ಇ) ಪಿಯು ಉಪನ್ಯಾಸಕರ ನೇಮಕಾತಿಯು ಕಳೆದ 3 ವರ್ಷಗಳಿಂದ ನನೆಗುದಿಗೆ ಬಿದ್ದಿರುವ ಬಗ್ಗೆ.**

ಶ್ರೀ ಎಸ್.ವ್ಹಿ.ಸಂಕನೂರ
ಡಾ॥ ಜಯಮಾಲ ರಾಮಚಂದ್ರ (ಸಭಾನಾಯಕರು)

**ಈ) ರಾಜ್ಯದಲ್ಲಿ ಹಿಂದುಳಿದ ಮತ್ತು ಸಮಾಜ ಕಲ್ಯಾಣ ಇಲಾಖೆಯ ಮೂಲಕ ನಡೆಸುತ್ತಿರುವ ಬಾಲಕ ಬಾಲಕಿಯರ ಹಾಸ್ಟೆಲ್‌ಗಳಲ್ಲಿ ಹೊರಗುತ್ತಿಗೆ ಆಧಾರದಮೇಲೆ ಕೆಲಸ ಮಾಡುತ್ತಿದ್ದ ನೌಕರರನ್ನು ಕೆಲಸದಿಂದ ತೆಗೆದುಹಾಕಿರುವ ಬಗ್ಗೆ.**

ಶ್ರೀ ಎನ್.ರವಿಕುಮಾರ್
ಶ್ರೀ ಸಿ.ಪುಟ್ಟರಂಗ ಶೆಟ್ಟಿ(ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)
ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಶ್ರೀ ಪ್ರಿಯಾಂಕ ಖರ್ಗೆ (ಸಮಾಜ ಕಲ್ಯಾಣ ಸಚಿವರು)
ಶ್ರೀ ಎನ್. ರವಿಕುಮಾರ್

**4. ಸಭೆಯ ಮುಂದಿಡಲಾದ ಕಾಗದಪತ್ರಗಳು**

**5. ಪ್ರಕಟಣೆ**

**6. ಗಮನ ಸೆಳೆಯುವ ಸೂಚನೆಗಳು.**

**ಅ) ಕನ್ನಡ ಚಲನಚಿತ್ರೋದ್ಯಮದ ಸಮಗ್ರ ಅಭಿವೃದ್ಧಿಗಾಗಿ ಸರ್ಕಾರವು ಸಹಕಾರ ನೀಡುವ ಬಗ್ಗೆ.**

ಶ್ರೀಮತಿ ತಾರಾ ಅನೂರಾಧ
ಶ್ರೀ ಐವನ್ ಡಿ'ಸೋಜಾ
ಶ್ರೀ ಭೋಜೇಗೌಡ
ಶ್ರೀ ಆಯನೂರು ಮಂಜುನಾಥ್
ಶ್ರೀ ಪ್ರಿಯಾಂಕ ಖರ್ಗೆ(ಸಮಾಜ ಕಲ್ಯಾಣ ಸಚಿವರು)
ಶ್ರೀಮತಿ ತೇಜಸ್ವಿನಿಗೌಡ
ಡಾ॥ ಜಯಮಾಲ ರಾಮಚಂದ್ರ(ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)
ಶ್ರೀ ಎನ್.ರವಿಕುಮಾರ್

**ಆ) ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿನ ಕೆರೆಗಳು ಒತ್ತುವರಿಯಾಗಿದ್ದು, ಸದರಿ ಕೆರೆಗಳನ್ನು ಸರ್ವೆ ಮಾಡಿ ಒತ್ತುವರಿಯನ್ನು ತೆರವುಗೊಳಿಸುವ ಬಗ್ಗೆ.**

ಶ್ರೀ ಕೆ.ಟಿ.ಶ್ರೀಕಂಠೇಗೌಡ
ಶ್ರೀ ಸಿ.ಎಸ್.ಪುಟ್ಟರಾಜು(ಸಣ್ಣ ನೀರಾವರಿ ಸಚಿವರು)
ಶ್ರೀ ವೈ.ಎ.ನಾರಾಯಣಸ್ವಾಮಿ
ಶ್ರೀಮತಿ ತೇಜಸ್ವಿನಿಗೌಡ
ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ
ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ
ಶ್ರೀ ಶರಣಪ್ಪ ಮಟ್ಟೂರ
ಶ್ರೀ ಬಸವರಾಜ ಪಾಟೀಲ್ ಇಟಗಿ
ಶ್ರೀ ಭೋಜೇಗೌಡ
ಶ್ರೀ ಎಸ್.ರುದ್ರೇಗೌಡ
ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ

**7. ಪ್ರಕಟಣೆ**

**8. ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾನಿರ್ಣಯದ ಮೇಲಿನ ಚರ್ಚೆ.**

ಶ್ರೀ ಐವನ್ ಡಿ'ಸೋಜಾ
ಶ್ರೀ ಕೋಟ ಶ್ರೀನಿವಾಸ ಪೂಜಾರಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಎಸ್.ಆರ್.ಪಾಟೀಲ್
ಶ್ರೀ ಕೃಷ್ಣ ಭೈರೇಗೌಡ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)
ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ವಿರೋಧಪಕ್ಷದ ಮುಖ್ಯ ಸಚೇತಕರು)
ಶ್ರೀ ಎಂ.ಕೆ.ಪ್ರಾಣೇಶ್
ಶ್ರೀ ಟಿ.ಎ.ಶರವಣ
ಶ್ರೀ ಎನ್.ರವಿಕುಮಾರ್
ಶ್ರೀ ಆಯನೂರು ಮಂಜುನಾಥ್
ಶ್ರೀ ಎನ್.ಎಚ್. ಶಿವಶಂಕರ ರೆಡ್ಡಿ (ಕೃಷಿ ಸಚಿವರು)
ಶ್ರೀಮತಿ ತೇಜಸ್ವಿನಿಗೌಡ
ಶ್ರೀ ಭೋಜೇಗೌಡ
ಶ್ರೀ ಪ್ರಿಯಾಂಕ ಖರ್ಗೆ(ಸಮಾಜ ಕಲ್ಯಾಣ ಸಚಿವರು)

<><><>

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

004)03.07.2018 10.40 ಕೆಜಿ.ವಿಕೆ

*ಕರ್ನಾಟಕ ವಿಧಾನ ಪರಿಷತ್ತು*

*ಮಂಗಳವಾರ, 03ನೇ ಜುಲೈ 2018*

*ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ*

*ಬೆಳಗ್ಗೆ 10 ಗಂಟೆ 40 ನಿಮಿಷಕ್ಕೆ ಸಮಾವೇಶಗೊಂಡಿತು.*

*ಹಂಗಾಮಿ ಸಭಾಪತಿ (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ರವರು*

*ಪೀಠದಲ್ಲಿ ಉಪಸ್ಥಿತರಿದ್ದರು.*

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

1. **ನೂತನ ಸದಸ್ಯರು, ಪುನರಾಯ್ಕೆಗೊಂಡಿರುವ ಸದಸ್ಯರು ಹಾಗೂ ನೂತನ ಸಚಿವರ ಪರಿಚಯ:-**

**ಸಭಾಪತಿಯವರು:-** ಈ ಸದನಕ್ಕೆ ಹೊಸ ಸದಸ್ಯರು ಆಯ್ಕೆಯಾಗಿ ಬಂದಿದ್ದಾರೆ. ನಾನು ಸದಸ್ಯರುಗಳ ಹೆಸರುಗಳನ್ನು ಹೇಳುತ್ತೇನೆ. ತಾವುಗಳು ಸದನಕ್ಕೆ ತಮ್ಮ ಪರಿಚಯವನ್ನು ಮಾಡಿಕೊಳ್ಳಬೇಕು. ವಿಧಾನಸಭೆಯಿಂದ, ಶಿಕ್ಷಕರ ಕ್ಷೇತ್ರದಿಂದ ಹಾಗೂ ಪದವೀಧರರ ಕ್ಷೇತ್ರದಿಂದ ನೂತನವಾಗಿ ಚುನಾಯಿತರಾಗಿ ಬಂದಿರುವ ಈ ಕೆಳಕಂಡ ಸದಸ್ಯರುಗಳಿಗೆ ನಾನು ಹೃತ್ಪೂರ್ವಕ ಸ್ವಾಗತವನ್ನು ಕೋರುತ್ತೇನೆ.

**ಶ್ರೀಯುತರುಗಳಾದ:-**

1) ಅರವಿಂದ ಕುಮಾರ್ ಅರಳಿ
2) ಕೆ.ಹರೀಶ್ ಕುಮಾರ್
3) ಚಂದ್ರಶೇಖರ್ ಬ.ಪಾಟೀಲ್
4) ಡಾ॥ತೇಜಸ್ವಿನಿ ಗೌಡ
5) ಕೆ.ಪಿ.ನಂಜುಂಡಿ ವಿಶ್ವಕರ್ಮ
6) ಎನ್.ರವಿಕುಮಾರ್
7) ಎಸ್.ರುದ್ರೇಗೌಡ
8) ಆಯನೂರು ಮಂಜುನಾಥ್
9) ಆ.ದೇವೇಗೌಡ
10) ಎಸ್.ಎಲ್.ಧರ್ಮೇಗೌಡ
11) ಬಿ.ಎಂ.ಫಾರೂಖ್
12) ಭೋಜೇಗೌಡ

(ಈ ಹಂತದಲ್ಲಿ ಮಾನ್ಯ ಸದಸ್ಯರುಗಳು ಎದ್ದು ನಿಂತು ಸಭೆಗೆ ವಂದಿಸಿದರು)

**ಸಭಾಪತಿಯವರು:-** ಹಾಗೆಯೇ, ವಿಧಾನ ಪರಿಷತ್ತಿಗೆ ಪುನರಾಯ್ಕೆಗೊಂಡಿರುವ ಈ ಕೆಳಕಂಡ ಮಾನ್ಯ ಸದಸ್ಯರುಗಳಿಗೂ ಹೃತ್ಪೂರ್ವಕ ಅಭಿನಂದನೆಗಳು.

**ಶ್ರೀಯುತರುಗಳಾದ:-**

1) ಸಿ.ಎಂ.ಇಬ್ರಾಹಿಂ
2) ಕೆ.ಗೋವಿಂದರಾಜ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

3) ರಘುನಾಥ ರಾವ್ ಮಲ್ಕಾಪೂರೆ

4) ವೈ.ಎ.ನಾರಾಯಣಸ್ವಾಮಿ

5) ಮರಿತಿಬ್ಬೇಗೌಡ

(ಈ ಹಂತದಲ್ಲಿ ಮಾನ್ಯ ಸದಸ್ಯರುಗಳು ಎದ್ದು ನಿಂತು ಸಭೆಗೆ ವಂದಿಸಿದರು)

**ಸಭಾಪತಿಯವರು:-** ಎಲ್ಲ ಮಾನ್ಯ ಸದಸ್ಯರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ಶ್ರೀ ಐವನ್ ಡಿ'ಸೋಜಾ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಈ ಸದನಕ್ಕೆ ಹೊಸ ಸಭಾನಾಯಕರು ಬಂದಿದ್ದಾರೆ. ಹಾಗಾಗಿ, ಅವರ ಪರಿಚಯವನ್ನು ಸಹ, ಈ ಸದನಕ್ಕೆ ಮಾಡಿಕೊಡುವುದು ಒಳ್ಳೆಯದೆಂದು ನನ್ನ ಭಾವನೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಹೊಸ ಸಭಾನಾಯಕರ ಪರಿಚಯವನ್ನು ನಿನ್ನೆ ದಿವಸವೇ ಈ ಸದನಕ್ಕೆ ಮಾಡಿಕೊಡಲಾಗಿದೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಡಾ||ಜಯಮಾಲ ರಾಮಚಂದ್ರರವರು ನನ್ನ ಜೊತೆಯಲ್ಲಿಯೇ ವಿಧಾನ ಪರಿಷತ್ತಿಗೆ ಪ್ರವೇಶ ಪಡೆದಿರುತ್ತಾರೆ. ನಾವಿಬ್ಬರು ಒಟ್ಟಿಗೆ ನಾಮನಿರ್ದೇಶಿತರಾಗಿ ವಿಧಾನ ಪರಿಷತ್ತಿಗೆ ಆಯ್ಕೆಯಾಗಿ ಬಂದಿರುತ್ತೇವೆ. ಡಾ||ಜಯಮಾಲ ರಾಮಚಂದ್ರರವರು ಮೂಲತಃ ಚಲನಚಿತ್ರ ನಟಿ. ಅವರು ಮೂಲತಃ ಮಂಗಳೂರು, ದಕ್ಷಿಣ ಕನ್ನಡದಲ್ಲಿ ತುಳು ಭಾಷೆಯಲ್ಲಿ ಮಾತನಾಡುವಂತಹವರು. ಅಲ್ಲದೇ, ಅವರು ಮೊದಲು ತುಳು ಭಾಷೆಯ ಚಲನಚಿತ್ರಗಳಲ್ಲಿ ನಟಿಸಿ ನಟನೆಯಲ್ಲಿ ಖ್ಯಾತಿಯನ್ನು ಪಡೆದಂತಹವರು. ವಿಧಾನ ಪರಿಷತ್ತಿನಲ್ಲಿ ಕೇವಲ ನಾಲ್ಕು ವರ್ಷಗಳಲ್ಲಿಯೇ, ಅವರು ಸಚಿವರಾಗಿ ಮತ್ತು ಸಭಾನಾಯಕರಾಗಿ ಬಂದಿದ್ದಾರೆ. ಹಾಗಾಗಿ, ನಾನು ಅವರಿಗೆ ಕರ್ನಾಟಕ ರಾಜ್ಯದ ಪರವಾಗಿ ಹಾಗೂ ಅದರಲ್ಲೂ ಪ್ರತ್ಯೇಕವಾಗಿ ಕರಾವಳಿ ಭಾಗದ ಜನರ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಮತ್ತು ಅವರಿಗೆ ಈ ಸಂದರ್ಭದಲ್ಲಿ ಶುಭವನ್ನು ಕೋರುತ್ತೇನೆ. ಅವರು ನಮ್ಮ ಸರ್ಕಾರ ಪ್ರತಿನಿಧಿಯಾಗಿ ಈ ಸದನದಲ್ಲಿ ನೇತೃತ್ವವನ್ನು ವಹಿಸಿರುತ್ತಾರೆ. ಅವರು ಸಭಾನಾಯಕರಾಗಿ ಬಹಳ ದೊಡ್ಡ ಹೊಣೆಗಾರಿಕೆಯನ್ನು ವಹಿಸಿಕೊಂಡಿದ್ದಾರೆ. ಅವರ ಹೊಣೆಗಾರಿಕೆಯಲ್ಲಿ ಅವರಿಗೆ ಒಳ್ಳೆಯ ಹೆಸರು ಸಿಗಲೆಂದು ಈ ಸದನದ ಪರವಾಗಿ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ಶ್ರೀಮತಿ ತಾರಾ ಅನೂರಾಧ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಅದಕ್ಕಿಂತ ಮುಂಚೆ ಈಗ..

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು**:- ಮಾನ್ಯ ಸದಸ್ಯರೇ, ಒಂದು ನಿಮಿಷ ಕುಳಿತುಕೊಳ್ಳಿ. ನಾನು ಮರೆತಿದ್ದೇನೆ. ಈ ಸದನಕ್ಕೆ ಹೊಸ ಸಚಿವರು ಬಂದಿದ್ದಾರೆ. ಅವರ ಪರಿಚಯವನ್ನು ಸಹ ಈ ಸದನಕ್ಕೆ ಮಾಡಿಕೊಳ್ಳಬೇಕಾಗಿದೆ. ದಯಮಾಡಿ ಹೊಸ ಸಚಿವರು ಸದನಕ್ಕೆ ತಮ್ಮ ಪರಿಚಯವನ್ನು ಮಾಡಿಕೊಳ್ಳಿ.

**ಶ್ರೀ ಎನ್.ಹೆಚ್.ಶಿವಶಂಕರ ರೆಡ್ಡಿ (ಕೃಷಿ ಸಚಿವರು)**:- ಮಾನ್ಯ ಸಭಾಪತಿಯವರೇ, ನನ್ನ ಹೆಸರು ಎನ್.ಹೆಚ್.ಶಿವಶಂಕರ ರೆಡ್ಡಿ. ನಾನು ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿ ಬಿದನೂರು ತಾಲ್ಲೂಕಿನಿಂದ ಶಾಸಕನಾಗಿ ಆಯ್ಕೆಯಾಗಿದ್ದು, ಕೃಷಿ ಸಚಿವನಾಗಿರುತ್ತೇನೆ.

**ಶ್ರೀ ಸಿ.ಪುಟ್ಟರಂಗ ಶೆಟ್ಟಿ (ಹಿಂದುಳಿದ ಕಲ್ಯಾಣ ಸಚಿವರು)**:- ಮಾನ್ಯ ಸಭಾಪತಿಯವರೇ, ನನ್ನ ಹೆಸರು ಸಿ.ಪುಟ್ಟರಂಗ ಶೆಟ್ಟಿ. ನಾನು ಚಾಮರಾಜನಗರದಿಂದ ಶಾಸಕನಾಗಿ ಆಯ್ಕೆಯಾಗಿದ್ದು, ಹಿಂದುಳಿದ ಕಲ್ಯಾಣ ಇಲಾಖೆ ಸಚಿವನಾಗಿರುತ್ತೇನೆ.

**ಶ್ರೀ ಸಿ.ಎಸ್.ಪುಟ್ಟರಾಜು (ಸಣ್ಣ ನೀರಾವರಿ ಸಚಿವರು)**:- ಮಾನ್ಯ ಸಭಾಪತಿಯವರೇ, ನನ್ನ ಹೆಸರು ಸಿ.ಎಸ್.ಪುಟ್ಟರಾಜು ನಾನು ಮಂಡ್ಯ ಜಿಲ್ಲೆಯ ಮೇಲುಕೋಟೆ ತಾಲ್ಲೂಕಿನಿಂದ ಶಾಸಕನಾಗಿ ಆಯ್ಕೆಯಾಗಿದ್ದು, ಸಣ್ಣ ನೀರಾವರಿ ಸಚಿವನಾಗಿರುತ್ತೇನೆ.

**ಶ್ರೀ ಯು.ಟಿ.ಖಾದರ್ (ನಗರಾಭಿವೃದ್ಧಿ ಮತ್ತು ವಸತಿ ಸಚಿವರು)**:- ಮಾನ್ಯ ಸಭಾಪತಿಯವರೇ, ನನ್ನ ಹೆಸರು ಯು.ಟಿ.ಖಾದರ್. ನಾನು ಮಂಗಳೂರಿನಿಂದ ಶಾಸಕನಾಗಿ ಆಯ್ಕೆಯಾಗಿದ್ದು, ನಗರಾಭಿವೃದ್ಧಿ ಮತ್ತು ವಸತಿ ಸಚಿವನಾಗಿರುತ್ತೇನೆ.

**ಸಭಾಪತಿಯವರು**:- ಶ್ರೀಮತಿ ತಾರಾಅನೂರಾಧರವರೇ, ತಾವು ಈಗ ಮಾತನಾಡಿ.

**ಶ್ರೀಮತಿ ತಾರಾ ಅನೂರಾಧ (ನಾಮನಿರ್ದೇಶಿತರು)**:- ಮಾನ್ಯ ಸಭಾಪತಿಯವರೇ, ನಾನು ಸಹ ವಿರೋಧಪಕ್ಷದ ನಾಯಕರಾಗಿ ಆಯ್ಕೆಯಾಗಿರುವಂತಹ ನಮ್ಮ ಪಕ್ಷದ ಶ್ರೀ ಕೋಟಶ್ರೀನಿವಾಸ ಪೂಜಾರಿರವರನ್ನು ಮತ್ತು ವಿಧಾನ ಪರಿಷತ್ತಿನ ವಿರೋಧ ಪಕ್ಷದ ಮುಖ್ಯ ಸಚೇತಕರಾಗಿ ಆಯ್ಕೆಯಾಗಿರುವಂತಹ ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ ಅವರನ್ನು ಹೃದಯಪೂರ್ವಕವಾಗಿ ಅಭಿನಂದಿಸುತ್ತೇವೆ.

**ಸಭಾಪತಿಯವರು**:- ಮಾನ್ಯ ಸದಸ್ಯರೇ, ತಾವು ಎಲ್ಲರ ಪರವಾಗಿ ಅಭಿನಂದನೆಗಳನ್ನು ಹೇಳುತ್ತೀರಾ?

**ಶ್ರೀಮತಿ ತಾರಾ ಅನೂರಾಧ:-** ಮಾನ್ಯ ಸಭಾಪತಿಯವರೇ, ಇಲ್ಲ, ಇಲ್ಲ. ನನ್ನ ಪರವಾಗಿ. ಮುಖ್ಯವಾಗಿ ಸಭಾನಾಯಕಿಯಾಗಿ ಆಯ್ಕೆಯಾಗಿರುವಂತಹ ಡಾ||ಜಯಮಾಲ ರಾಮಚಂದ್ರರವರು ನಮ್ಮ ವಂಶಕ್ಕೆ ಸೇರಿದವರು. ಇಲ್ಲಿ 'ವಂಶ' ಎಂದರೆ, ನಮ್ಮ ಚಿತ್ರರಂಗಕ್ಕೆ ಸೇರಿದವರು ಎಂದು ಅರ್ಥ. ಆದ್ದರಿಂದ, ಅವರಿಗೆ ಮನಸಾರೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಮಾನ್ಯ ಸಭಾಪತಿಯವರೇ, ತಮಗೂ ಸಹ ಧನ್ಯವಾದಗಳು.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ತಾವು ವಂಶದ ವಿಚಾರವಾಗಿ ಹೇಳಿದ್ದೀರಿ. ಇವತ್ತಿನ ದಿನಪತ್ರಿಕೆಯನ್ನು ಓದಿದ್ದೀರಾ ಅಥವಾ ಇಲ್ಲವಾ? ಇವತ್ತಿನ ದಿನಪತ್ರಿಕೆಯಲ್ಲಿ 11 ಮಂದಿಯ ವಿಷಯ ನೋಡಿ. ಆ ರೀತಿ ಆಗಬೇಡಿ.

**2. ಸದನ ಪ್ರಾರಂಭವಾದ ದಿನದಿಂದ ಪ್ರಶ್ನೋತ್ತರವನ್ನು ಪ್ರಾರಂಭಿಸದಿರುವ ಬಗ್ಗೆ ಚರ್ಚೆ**

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಹೊಸ ಸರ್ಕಾರ ಮೊದಲನೇ ಬಾರಿಗೆ ಅಧಿವೇಶನವನ್ನು ಕರೆದಿರುತ್ತದೆ. ಆದರೆ, ಅದರಲ್ಲಿ ಪ್ರಶ್ನೋತ್ತರ ವೇಳೆ ಇರಬೇಕಾಗಿತ್ತು. ಎಲ್ಲೋ ಒಂದು ಕಡೆ ಪ್ರಶ್ನೋತ್ತರ ವೇಳೆ ಇಲ್ಲದೆ ಇರುವಂತಹ ರೀತಿಯಲ್ಲಿ ಮಾಡಿರುವಂತಹದ್ದು ನಮ್ಮೆಲ್ಲರ ಹಕ್ಕಿಗೆ ಒಂದು ಚ್ಯುತಿ ತಂದಿದೆ ಎನ್ನುವಂತಹದ್ದು ನನ್ನ ಭಾವನೆ ಇದೆ. ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರ ವೇಳೆ ಎಂದರೆ, ವಿಶೇಷವಾಗಿ ನೂತನವಾಗಿ ಆಯ್ಕೆಯಾಗಿ ಬರುವಂತಹ ಶಾಸಕರಿಗೆ..

**ಸಭಾಪತಿಯವರು:-** ಮಾನ್ಯ ಸದಸ್ಯರೇ, ತಾವು ಅಷ್ಟು ಹೇಳಿದರೆ ಸಾಕು. ನಾನು ಅದನ್ನು ಹೇಳಿಬಿಡುತ್ತೇನೆ.

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಹೇಳಿ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಅದು ಏನೆಂದರೆ, ಅದೇ ವಿಷಯವೇ ಅಥವಾ ಬೇರೆ ವಿಷಯವೇ?

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅದಕ್ಕೆ ಸಂಬಂಧಪಟ್ಟಂತೆ, ನನಗೆ ಒಂದು ರೀತಿಯ ಮುಜುಗರ ಆಗುತ್ತದೆ. ನಾನು ನನ್ನ ಕಳೆದ ಆರು ವರ್ಷಗಳ ಅವಧಿಯಲ್ಲಿ ಪ್ರಶ್ನೋತ್ತರ ವೇಳೆ ಇಲ್ಲದಂತಹ ಅಧಿವೇಶನವನ್ನು ಒಂದು ದಿವಸವು ಸಹ ನೋಡಿಲ್ಲ. ಸರ್ಕಾರ ರಚನೆಯಾಗಿದೆ. ನಾನು ಸರ್ಕಾರದ ಬಗ್ಗೆ ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ನಮಗೆ ಟೀಕೆ ಮಾಡುವುದಕ್ಕೆ ಇನ್ನೂ ಸಮಯ ಇದೆ. ಏಕೆಂದರೆ, ಸರ್ಕಾರ ಇನ್ನೂ takeoff ಆಗಿಲ್ಲ. ನಾವು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈಗಲೇ ಏನಾದರೂ ಮಾತನಾಡಿದರೆ ಕಪೋಲ ಕಲ್ಪಿತವಾಗಿ ವಿರೋಧಪಕ್ಷದವರು ಮಾತನಾಡುತ್ತಿದ್ದಾರೆಂಬ ಮಾತು ಬರುತ್ತದೆ. ಆದರೆ,.

**ಶ್ರೀ ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಟೀಕೆ ಮಾಡುವುದಿಲ್ಲವೆಂದು ಹೇಳಿದ ಮೇಲೆ, you should stick on to your words.

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ಸಂತೋಷ.

(ಗೊಂದಲ)

**ಶ್ರೀ ಎಂ.ಕೆ.ಪ್ರಾಣೇಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಟೀಕೆ ಮಾಡುವುದಿಲ್ಲವೆಂದು ಹೇಳಿದ ಮೇಲೆ ಮಾನ್ಯ ಸದಸ್ಯರಾದ ಭೋಜೇಗೌಡ ರವರು ಏಕೆ ಆ ರೀತಿ ಹೇಳುತ್ತಿದ್ದಾರೆ.

(ಗೊಂದಲ)

**ಸಭಾಪತಿಯವರು:-** ಮಾನ್ಯ ಭೋಜೇಗೌಡರೇ, ದಯವಿಟ್ಟು ಒಂದು ನಿಮಿಷ ನನಗೆ ಮಾತನಾಡುವುದಕ್ಕೆ ಬಿಡಿ.

(ಗೊಂದಲ)

**ಸಭಾಪತಿಯವರು:-** ಮಾನ್ಯ ಭೋಜೇಗೌಡರೇ, ಒಂದು ನಿಮಿಷ ನನ್ನ ಮಾತು ಕೇಳಿ.

(ಗೊಂದಲ)

**ಸಭಾಪತಿಯವರು:-** ಮಾನ್ಯ ಸದಸ್ಯರೆಲ್ಲರೂ ದಯವಿಟ್ಟು ಕುಳಿತುಕೊಳ್ಳಿ. ಒಂದು ನಿಮಿಷ ನನಗೆ ಮಾತನಾಡುವುದಕ್ಕೆ ಬಿಡಿ.

(ಗೊಂದಲ)

**ಶ್ರೀ ಎಂ.ಕೆ.ಪ್ರಾಣೇಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಉಪದೇಶ ನಮಗೆ ಅವಶ್ಯಕತೆ ಇಲ್ಲ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಭೋಜೇಗೌಡರೇ, ತಾವು ಏನಾದರೂ ಮಾತನಾಡುವುದಿದ್ದರೆ, ಸಭಾಪತಿಯವರ ಅನುಮತಿಯನ್ನು ಪಡೆದುಕೊಂಡು ಮಾತನಾಡಬೇಕು.

(ಮುಂದು..)

(005):03.07.2018-10.50-ಎಂವಿ-ಬಿಎನ್ಎಸ್

(ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು (ಮುಂದು):-**

ಇದು ವಿಧಾನ ಪರಿಷತ್ತು ದಯಮಾಡಿ ನಾನು ಎಲ್ಲಾ ಸದಸ್ಯರಿಗೂ ಹೇಳುತ್ತೇನೆ, ಯಾರಾದರೂ ಎದ್ದು ಅದು-ಇದು ಎಂದು ಮಾತನಾಡಿದರೆ ನಾನು ಅದಕ್ಕೆ ಅವಕಾಶ ಕೊಡುವುದಿಲ್ಲ. ನಾನು ಸ್ಪಷ್ಟವಾಗಿ ಹೇಳುತ್ತೇನೆ, ತಾವುಗಳು ಏನಾದರೂ ಮಾತನಾಡಬೇಕಾದರೆ ನನ್ನ ಅನುಮತಿಯನ್ನು ತೆಗೆದುಕೊಂಡು ಮಾತನಾಡಬೇಕು. ತಾವು ವಿಧಾನ ಪರಿಷತ್ತಿನ ಘನತೆ ಮತ್ತು ಗೌರವವನ್ನು ಕಾಪಾಡಬೇಕು. ದಯಮಾಡಿ ಎಲ್ಲಾ ಸದಸ್ಯರಿಗೂ ಹೇಳುತ್ತೇನೆ. ಹೊಸದಾಗಿ ಬಂದಿರುವಂತಹ ಎಲ್ಲಾ ಸದಸ್ಯರು ನಿಯಮಗಳನ್ನು ಕುಳಿತುಕೊಂಡು ಕೇಳಿ ಮತ್ತು ನೋಡಿ ಆಮೇಲೆ ತಾವುಗಳು ಮಾತನಾಡಿ. ಈಗ ನಾನು ಹೇಳುವುದೇನೆಂದರೆ, ತಾವುಗಳು ಬೇಕಾದ ಹಾಗೆ ಮನಸ್ಸಿಗೆ ಬಂದಂತೆ ಎದ್ದು ಮಾತನಾಡಿದರೆ ಅದಕ್ಕೆ ನಾನು ಅವಕಾಶ ಕೊಡುವುದಿಲ್ಲ.

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಆಡಳಿತ ಪಕ್ಷದ ಸದಸ್ಯರು ಮಾತನಾಡುವಂತಹ ಕಾರ್ಯವೈಖರಿಯನ್ನು ನೋಡಿದರೆ, ವಿರೋಧ ಪಕ್ಷದವರನ್ನು ಮಾತನಾಡುವುದಕ್ಕೆ ಅವಕಾಶ ಕೊಡಬಾರದು ಎಂಬುವಂತಹ ಮಾನಸಿಕವಾಗಿ ತಯಾರಾಗಿ ಬಂದಿದ್ದಾರೆಂದು ಅನಿಸುತ್ತದೆ.

**ಸಭಾಪತಿಯವರು:-** ನೀವು ಪ್ರಶ್ನೋತ್ತರದ ಬಗ್ಗೆ ಸ್ವಲ್ಪ ಹೇಳಿ.

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ಚುಕ್ಕೆ ಗುರುತಿನ ಪ್ರಶ್ನೆ ಮತ್ತು ಚುಕ್ಕೆ ರಹಿತ ಪ್ರಶ್ನೆಗಳ ಮುಖಾಂತರವಾಗಿ ರಾಜ್ಯದಲ್ಲಿ ನಡೆಯುತ್ತಿರುವಂತಹ ಮಾಹಿತಿಗಳು, ಅದು ಅಭಿವೃದ್ಧಿ ಇರಬಹುದು, ಸಮಸ್ಯೆಗಳು ಇರಬಹುದು ಅದು ಯಾವುದೇ ಇರಬಹುದು. ಅದರ ಮಾಹಿತಿ ಪಡೆಯುವಂತಹ ಸರಳ ಮತ್ತು ಏಕೈಕ ಮಾರ್ಗವೆಂದರೆ ನಮಗೆ ಅಧಿಕೃತವಾಗಿ ಮಾಹಿತಿಯನ್ನು ಪಡೆಯುವುದಕ್ಕೆ ಇರುವುದು ಪ್ರಶ್ನೋತ್ತರ ವೇಳೆ. ಆದರೆ, ನನಗೆ ಇದು ಅರ್ಥವಾಗುತ್ತಿಲ್ಲ, ಈ ಸದನವನ್ನು ಮತ್ತು ಈ ಕಾರ್ಯಕಲಾಪವನ್ನು ನೆಪಮಾತ್ರಕ್ಕೆ ಕರೆದಿದ್ದಾರೆಯೆ? ಕಾಟಚಾರಕ್ಕೆ ಕರೆದಿದ್ದಾರೆಯೆ? ಪ್ರಶ್ನೋತ್ತರ ಇಲ್ಲದೇ ಇರುವಂತಹ ಸದನವನ್ನು ನಾನು ನೋಡಿಲ್ಲ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, ತಾವು ಬಹಳ ಹಿರಿಯರು, ನನಗೆ ಅನಿಸುತ್ತದೆ, ಇದು ಈ ಸದನದ ಸದಸ್ಯರ ಹಕ್ಕುಚ್ಯುತಿ ಆಗುವುದಿಲ್ಲವೆ? ತಾವು ಅಪ್ಪಣೆ ಕೊಟ್ಟರೆ, ನಾನು ನಮ್ಮ ಸದಸ್ಯರ ಹಕ್ಕುಚ್ಯುತಿಯನ್ನು ಮಂಡನೆ ಏಕೆ ಮಾಡಬಾರದು? ತಮ್ಮ ಅಪ್ಪಣೆ ಮೇರೆಗೆ ಎನ್ನುವಂತಹ ಮಾತನ್ನು ನಾನು ಕೇಳುವುದಕ್ಕೆ ಬಯಸುತ್ತಿದ್ದೇನೆ. ನನಗೆ ಅನಿಸುತ್ತದೆ, ಈ ಪ್ರಶ್ನೆ ಆಡಳಿತರೂಢ ಪಕ್ಷದ ಸದಸ್ಯರಿಗೂ ಕೂಡ ಇದೆ. ಆದರೆ, ಅವರು ಏನು ಹೇಳದೆ ಸುಮ್ಮನೆ ಕುಳಿತಿದ್ದಾರೆ. ನಾನು ಈ ಸದನದ ಎಲ್ಲಾ ಸದಸ್ಯರ ಪರವಾಗಿ ಈ ಮಾತನ್ನು ಹೇಳುತ್ತಿದ್ದೇನೆ. ಈ ತರಹ ಪ್ರಶ್ನೋತ್ತರ ವೇಳೆ ಇಲ್ಲದಂತಹ ಸದನ, ಇದು ಸದನವೇ ಅಲ್ಲವೆಂದು ನಾನು ಭಾವಿಸುತ್ತಿದ್ದೇನೆ. ಹಾಗಾಗಿ ಪ್ರಶ್ನೋತ್ತರ ಅವಧಿಯನ್ನು ನಡೆಸಿಕೊಡಬೇಕೆಂಬ ವಿನಂತಿಯನ್ನು ನಾನು ಮಾಡುತ್ತೇನೆ.

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಒಂದು ನಿಮಿಷ ಮಾತನಾಡುತ್ತೇನೆ.

**ಸಭಾಪತಿಯವರು:-** ಈಗ ಅದರ ಬಗ್ಗೆ ಚರ್ಚೆ ಬೇಡ. ಸರ್ಕಾರದವರು ಏನಾದರೂ ಹೇಳುತ್ತಾರೆ, ಅದನ್ನು ಮೊದಲು ಕೇಳಿ.

**ಡಾ:ಜಯಮಾಲ ರಾಮಚಂದ್ರ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ರಾಜ್ಯಪಾಲರ ಭಾಷಣದ ಮೇಲೆ ಎಲ್ಲಾ ಸದಸ್ಯರಿಗೂ ಮಾತನಾಡುವುದಕ್ಕೆ ಅವಕಾಶ ನೀಡಬೇಕು.

**ಸಭಾಪತಿಯವರು:-** ಮಾನ್ಯ ಸಭಾನಾಯಕರೆ ತಾವು ಕುಳಿತುಕೊಳ್ಳಿ, ನಾನು ಹೇಳುತ್ತೇನೆ ಕೇಳಿ, ನಮಗೆ ಜೂನ್ 26ನೇ ತಾರೀಖಿಗೆ ನೋಟಿಸ್ ಬಂದಿದೆ. ನಮಗೆ ಕನಿಷ್ಠ ಏಳು ದಿವಸ ಬೇಕು. ಸರ್ಕಾರ ದಿಢೀರನೆ ಎಂದರೆ, ಈ ಹೊಸ ಸರ್ಕಾರ ಬಂದ ನಂತರ ರಾಜ್ಯಪಾಲರು ಜಂಟಿ ಅಧಿವೇಶನವನ್ನು ಕರೆಯಬೇಕಾಗಿತ್ತು. ಜಂಟಿ ಅಧಿವೇಶನವನ್ನು ಕರೆದಾಗ ದಿವಸಗಳು ಬಹಳ ಕಡಿಮೆ ಇದ್ದುದ್ದರಿಂದ, ಪ್ರಶ್ನೆ ಮತ್ತು ಉತ್ತರವನ್ನು ಮುಟ್ಟುವುದಕ್ಕೆ ಮತ್ತು ತರುವುದಕ್ಕೆ ಆಗಲಿಲ್ಲ. ಈ ಹಿನ್ನೆಲೆಯಲ್ಲಿ ತಕ್ಷಣ ಆಗುವುದಿಲ್ಲ. ಶನಿವಾರ ಮತ್ತು ಭಾನುವಾರ ಬಂದಿರುವುದರಿಂದ ನಾನು ಎಲ್ಲವನ್ನೂ ಸಹ ಚರ್ಚೆ ಮಾಡಿದ್ದೇನೆ. ಚರ್ಚೆ ಮಾಡಿದ ನಂತರ ಅನಿವಾರ್ಯವಾಗಿ ಕೊನೆಗೆ 9ನೇ ತಾರೀಖಿನಿಂದ ನಾಲ್ಕು ದಿವಸ, ನಾವು ಬಹಳ ಕಷ್ಟಪಟ್ಟು ಅದನ್ನು ತಂದು ಹಾಕಬೇಕೆಂದು ತೀರ್ಮಾನಿಸಿದ್ದೇನೆ. ಅದಕ್ಕೆ ನಿಮಗೆ ಈಗ ನಿಯಮ 330(ಎ)ಗೆ..., Calling Attentionಗೆ ಎರಡು-ಮೂರು ಅಷ್ಟೆ ಬಂದಿವೆ. ನಿಯಮ 330 ರಡಿ ಬಂದಿಲ್ಲ. ನಿಮಗೆ ತಿಳಿಸುವುದಕ್ಕೂ ಸಮಯವಿಲ್ಲದೆ ಇದ್ದುದ್ದರಿಂದ, short time ಇದ್ದುದರಿಂದ ಇದು ಒಂದು ಬಾರಿ ಆಗಿದೆ. ಬರುವಂತಹ ದಿನಗಳಲ್ಲಿ ಈ ತರಹದ ಪರಿಸ್ಥಿತಿ ನಿರ್ಮಾಣವಾಗದ ರೀತಿಯಲ್ಲಿ ನೋಡಿಕೊಳ್ಳುತ್ತೇನೆಂದು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾನು ಸದನಕ್ಕೆ guarantee ಕೊಡುತ್ತೇನೆ. ಅದನ್ನು ನೋಡುವಂತಹ ಕೆಲಸವನ್ನು ಮಾಡುತ್ತೇವೆ. ಒಂದೊಂದು ಬಾರಿ ಅನಿವಾರ್ಯವಾದ ಪ್ರಸಂಗ ಬರುತ್ತದೆ. ನಾನು ನಿಮಗೆ ಹೇಳುತ್ತೇನೆ, ಅಧ್ಯಯ 7 ರಲ್ಲಿ ರೂಲ್ 35 ನೋಡಿ. ಸೂಚನಾ ಪತ್ರದ ಅವಧಿ: 'ಸಭಾಪತಿಯವರು ಅನ್ಯಥಾ ನಿರ್ದೇಶಿಸದ ಹೊರತು, ಒಂದು ಪ್ರಶ್ನೆಯ ಬಗ್ಗೆ, ಸೂಚನಾ ಪತ್ರವನ್ನು 10 ಪೂರ್ತಿ ದಿನಗಳಿಗೆ ಕಡಿಮೆ ಇಲ್ಲದಂತೆ ಮತ್ತು 30 ಪೂರ್ತಿ ದಿನಗಳಿಗೆ ಹೆಚ್ಚಿಲ್ಲದಂತೆ ಕೊಡತಕ್ಕಂಥದ್ದು'. ಆದುದರಿಂದ ನಮಗೆ 10 ದಿನಗಳು ಸಿಕ್ಕಿಲ್ಲ, ಇದು ಒಂದು ಬಾರಿ ಆಗಿದೆ, ನಾನು ಅದನ್ನು ಮೊಟಕುಗೊಳಿಸುವುದಿಲ್ಲ. ಯಾವುದೇ ರೀತಿಯಿಂದ ನಿಮ್ಮ ಹಕ್ಕನ್ನು ಮೊಟಕುಗೊಳಿಸುವುದಾಗಲಿ, ಮತ್ತೊಂದನ್ನು ಮಾಡುವುದಿಲ್ಲ, ಅದಕ್ಕೆ ನೀವು ಸಹಕಾರ ಮಾಡಬೇಕು, ಮುಂದಿನ ಬಾರಿ ಸರಿಪಡಿಸುವಂತಹ ಕೆಲಸವನ್ನು ಮಾಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಈಗ ಇಲ್ಲಿರುವಂತಹ ಪ್ರಶ್ನೆ, ನಾವು ವಿರೋಧಪಕ್ಷದವರು ಏನನ್ನು ಕೇಳುತ್ತಿದ್ದೇವೆಂದರೆ, ಈಗ 11 ದಿನವಸಗಳ ಕಾಲ ಅಧಿವೇಶನ ನಡೆಯುತ್ತದೆ ಮತ್ತು 9 ದಿವಸಗಳ ಕಾಲ ಕಾರ್ಯಕಲಾಪಗಳಿವೆ, 4 ದಿವಸಗಳ ಕಾಲ ಮಾತ್ರ ಪ್ರಶ್ನೋತರಕ್ಕೆ ಅವಕಾಶ ಕೊಟ್ಟು, 5 ದಿವಸಗಳ ಕಾಲ ಪ್ರಶ್ನೋತ್ತರಕ್ಕೆ ಅವಕಾಶ ಕೊಟ್ಟಿಲ್ಲ. ನಾವು 75 ಸದಸ್ಯರು ಐದೈದು ಪ್ರಶ್ನೆಗಳನ್ನು ಕೇಳಿದರೆ, ತಾವು ಹಿರಿಯರಿದ್ದೀರಿ ಮಾನ್ಯ ರಮೇಶ್ ಕುಮಾರ್‌ರವರು ಒಂದು ಮಾತು ಹೇಳಿರುವುದನ್ನು ನಾನು ನೆನಪು ಮಾಡುತ್ತೇನೆ. ರಾಜ್ಯದಲ್ಲಿರುವಂತಹ ಆರೂವರೆ ಕೋಟಿ ಜನರು ಬಂದು ತಮ್ಮ ಅಹವಾಲುಗಳನ್ನು ಸರ್ಕಾರದ ಜೊತೆಯಲ್ಲಿ ಹೇಳಿಕೊಳ್ಳುವುದಕ್ಕೆ ಸದನದಲ್ಲಿ ಅವಕಾಶವಿಲ್ಲ. ಅದಕ್ಕೋಸ್ಕರ ನಾವು 300 ಜನ ಮೇಲ್ಮನೆ ಮತ್ತು ಕೆಳಮನೆಯವರು ಪ್ರತಿನಿಧಿಗಳಾಗಿ ಅವರ ಪರವಾಗಿ ಕೆಲಸಗಳನ್ನು ಮಾಡಬೇಕು, ಅವರ ಧ್ವನಿಯಾಗಿ ಕೆಲಸಗಳನ್ನು ಮಾಡಬೇಕೆಂದು ಶ್ರೀ ರಮೇಶ್ ಕುಮಾರ್ ರವರು ಹೇಳಿರುವುದನ್ನು ನೆನಪು ಮಾಡಿದ್ದೇನೆ. ಆದರೆ, ಸದಸ್ಯರ ಹಕ್ಕುಗಳನ್ನೆ ಕಡಿತಗೊಳಿಸಿಬಿಟ್ಟರೆ ಹೇಗೆ? ನೀವು ಹೇಳಿರುವುದು ಸರಿಯಿದೆ. ಅಂದರೆ ನೀವು ಹೇಳಿದ್ದು ಏನು? ನಮಗೆ ತೊಂದರೆಯಾಯಿತು ಆದುದರಿಂದ ಸೂಚನಾ ಪತ್ರ ಕಳುಹಿಸುವುದಕ್ಕೆ ಆಗಲಿಲ್ಲವೆಂದು ಹೇಳಿದ್ದು, ಸರಿಯಿದೆ. ಆದರೆ, ಸರ್ಕಾರ ಏನು ಮಾಡುತ್ತಿದೆ? ಸರ್ಕಾರ ಶಾಸನದ ಆಧಾರದ ಮೇಲೆ ನಡೆಯಬೇಕೆ ಹೊರತು, ಗಳಿಗೆಯ ಆಧಾರದ ಮೇಲೆ ನಡೆಯುತ್ತದೆಯೆ? ಬಜೆಟ್ ಮಂಡನೆಗೆ ಒಂದು ಗಳಿಗೆ, ರಾಜ್ಯಪಾಲರ ಭಾಷಣಕ್ಕೆ ಒಂದು ಗಳಿಗೆ, ಶಾಸನದ ಆಧಾರದ ಮೇಲೆ ನಡೆಯಬೇಕಾದಂತಹ ಸರ್ಕಾರ ಪೂರ್ವ ಸಿದ್ಧತೆ ಮಾಡಕೊಳ್ಳಬೇಕೋ ಬೇಡವೋ? ಈ ಪ್ರಶ್ನೆ ಕೇಳಿದಾಗ, ವಿರೋಧ ಪಕ್ಷದವರು ಏನಾದರೂ ಟೀಕೆಗಳನ್ನು ಮಾಡಬೇಕಾದರೆ, ಆಡಳಿತ ಪಕ್ಷದವರ ಅನುಮತಿ ಬೇಕೆ? ದಯವಿಟ್ಟು ನಮ್ಮ ರಕ್ಷಣೆಗೆ ಬರಬೇಕು.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ವಿರೋಧಪಕ್ಷದ ನಾಯಕರೆ ಈಗ ನಾನು ಹೇಳುತ್ತೇನೆ ಅದನ್ನು ಕೇಳಿ, ಪರಿಸ್ಥಿತಿಗೆ ಅನುಗುಣವಾಗಿ ನಮಗೆ ಸಮಯ ಕಡಿಮೆ ಇದ್ದುದ್ದರಿಂದ ನಮಗೆ ಯಾರಿಗೂ ಏನು ಮಾಡುವುದಕ್ಕೆ ಆಗಲಿಲ್ಲ, ನಮ್ಮ ಸಿಬ್ಬಂದಿಯವರಿಗೂ ಮಾಡುವುದಕ್ಕೆ ಆಗಲಿಲ್ಲ, ಸರ್ಕಾರಕ್ಕೂ ಮಾಡುವುದಕ್ಕೆ ಆಗಲಿಲ್ಲ, ಇದು ಅನಿವಾರ್ಯ. ಕಡಿಮೆ ದಿನಗಳು ಆದರೂ ಸಹಿತ 9ನೇ ತಾರೀಖಿಗೆ ಪ್ರಶ್ನೋತ್ತರವನ್ನು ಮಾಡಿದ್ದೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಿಮ್ಮ ಅಸಹಾಯಕತೆ ನಮಗೆ ಅರ್ಥವಾಗುತ್ತದೆ. ಸರ್ಕಾರ ಇದನ್ನು ಮಂಡಿಸಬೇಕು, ಸರ್ಕಾರ ವಿಳಂಬ ಮಾಡಿದೆ, ಸರ್ಕಾರ ಜವಾಬ್ದಾರಿಯಿಂದ ಕೆಲಸಗಳನ್ನು ಮಾಡಿಲ್ಲ ಎನ್ನುವುದಕ್ಕೋಸ್ಕರ ನಮ್ಮ ಹಕ್ಕುಚ್ಯುತಿಯಾಗಿದೆ ಎಂದು ಹೇಳಿದೆ.

**ಸಭಾಪತಿಯವರು:-** ಆಯಿತು ಮಾನ್ಯ ವಿರೋಧಪಕ್ಷದ ನಾಯಕರು ಕುಳಿತುಕೊಳ್ಳಿ.

**ಶ್ರೀ ಯು.ಟಿ.ಖಾದರ್ (ವಸತಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಮಾತು ನನಗೆ ಅರ್ಥವಾಗುತ್ತದೆ. ಇದು ಹೊಸ ಸರ್ಕಾರದ ಪ್ರಥಮ ಅಧಿವೇಶನ. ಬಹುಶಃ ತಾವೆಲ್ಲರೂ ಕೂಡ ಬಹಳ ಆಸಕ್ತಿಯಿಂದ ಜನಸಾಮನ್ಯರ ಬಗ್ಗೆ ಪ್ರಶ್ನೆ ಕೇಳಬೇಕೆಂದು ಆಲೋಚನೆ ಇದೆ ಅದನ್ನು ನಾನು ಕೂಡ ಒಪ್ಪುತ್ತೇನೆ. ಬಹುಶಃ ಇವತ್ತಿನ ಪ್ರಥಮ ಅಧಿವೇಶನದಲ್ಲಿ ರಾಜ್ಯಪಾಲರ ಭಾಷಣ ಆಗಿದೆ. ತದನಂತರ ಅದರಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಇದೆ. ಏನೆಲ್ಲಾ ನೀವು ಪ್ರಶ್ನೆಯನ್ನು ಕೇಳಬೇಕು. ಜನಸಾಮಾನ್ಯರ ವಿಚಾರದಲ್ಲಿ ನೀವು ಮಾತನಾಡಬೇಕು ಮತ್ತು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಂತಹ ಸಂದರ್ಭದಲ್ಲಿ ಎಲ್ಲರಿಗೂ ಕೂಡ ಹಕ್ಕು ಇದೆ. ಆದರೂ ಕೂಡ ತಾವು ಏನು ಪ್ರಸ್ತಾಪ ಮಾಡಿದ್ದೀರಾ ನಮಗೆ ಎಲ್ಲಾ ಸಂದರ್ಭದಲ್ಲೂ ಕೂಡ ಪ್ರಶ್ನೋತ್ತರ ವೇಳೆ ಬೇಕೆಂದು ಕೇಳಿದ್ದೀರಿ. ಅದಕ್ಕೆ ಈಗಾಗಲೇ ಸಭಾಧ್ಯಕ್ಷರು ಅದರ ಬಗ್ಗೆ ಹೇಳಿದ್ದಾರೆ ಮತ್ತು ಮುಂದೆ ಅದನ್ನು ಸರಿಪಡಿಸಿಕೊಂಡು ಹೋಗಬಹುದು ಎಂದು. ಎಲ್ಲರೊಂದಿಗೆ ಸಹಕಾರ ಇರಬೇಕೆಂದು ಹೇಳುವುದಕ್ಕೆ ಇಚ್ಚಿಸುತ್ತೇನೆ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಯು.ಟಿ.ಖಾದರ್ ರವರು ನಮಗೆ ಗೊತ್ತಿರುವವರು. ಅವರು ಈ ರೀತಿ ಸಮಜಾಯಿಸಿ ಕೊಡುವುದು, ಇಲ್ಲಿ ಸರ್ಕಾರದಿಂದ ತಪ್ಪು ನಡೆದಿದೆ ಎಂದು ಅನಿಸುವುದಿಲ್ಲವೆ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಸಭಾಪತಿಯವರು**:- ಮಾನ್ಯ ಪೂಜಾರಿಯವರೇ.

**ಶ್ರೀ ಯು.ಟಿ.ಖಾದರ್**:- ಮಾನ್ಯ ಸಭಾಪತಿಯವರೇ, ಇದು ತಪ್ಪು ಎಂದು ಹೇಳುವುದಕ್ಕೆ ಆಗುವುದಿಲ್ಲ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಮಂತ್ರಿಗಳು ಸಮರ್ಥಿಸಿದ್ದಾರೆ ಅದನ್ನು ಕೇಳುತ್ತೇವೆ.

**ಶ್ರೀ ಯು.ಟಿ.ಖಾದರ್**:- ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರ ವೇಳೆ ಕೊಡಲಿಲ್ಲವೆಂದರೆ, ಅದು ತಪ್ಪು ಎಂದಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೇ, ಹಾಗಾದರೆ ತಪ್ಪಲ್ಲವೆಂದರೆ ಸರಿ ಹೇಗೆ?

**ಶ್ರೀ ಯು.ಟಿ.ಖಾದರ್**:- ಮಾನ್ಯ ಸಭಾಪತಿಯವರೇ, ಜನರ ಬಗ್ಗೆ ಕಾಳಜಿ ಇದ್ದರೆ, ಈ ರಾಜಕೀಯ ಬಿಟ್ಟು, ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೇ, ನಮಗೆಲ್ಲಾ ಒಂದು ಶಾಸನಬದ್ಧವಾದ ಒಂದು ಅಧಿಕಾರವನ್ನು ಕೊಟ್ಟಿದ್ದೀರಿ. ಅಂದರೆ ಪ್ರಶ್ನೋತ್ತರ ಎಂದು ಕೊಟ್ಟಿದ್ದೀರಿ. ನೀವು ಕೊಟ್ಟಿದ್ದೀರಿ ತಾನೆ? ಆ ಪ್ರಶ್ನೆಗಳನ್ನು ಕೇಳುವುದಕ್ಕೆ ಅವಕಾಶಗಳಿಲ್ಲದೆ, ರಾಜ್ಯಪಾಲರ ಭಾಷಣದಲ್ಲಿ ನಾನು ಕೇಳುತ್ತಿರುವುದು...

(ಗೊಂದಲ)

**ಸಭಾಪತಿಯವರು**:- ಮಾನ್ಯ ವಿರೋಧಪಕ್ಷದ ನಾಯಕರಾದ ಪೂಜಾರಿಯವರೆ ಇಲ್ಲಿ ಕೇಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೇ, ತಾವು ಇದನ್ನು ಗಮನಿಸಬೇಕು. ತಾವು ಹೇಳಿದಂತಹ ಎಲ್ಲಾ ವಿಚಾರಗಳನ್ನು ನಾವು ಅರ್ಥ ಮಾಡಿಕೊಂಡಿದ್ದೇವೆ.

**ಸಭಾಪತಿಯವರು**:- ಮಾನ್ಯ ವಿರೋಧಪಕ್ಷದ ನಾಯಕರೆ, ಕಾರಣ ಇದ್ದುದ್ದರಿಂದ ಅದನ್ನು ನಾನು ಒಪ್ಪಿಕೊಂಡಿದ್ದೇನೆ. ಇಲ್ಲವೆಂದರೆ ಒಪ್ಪಿಕೊಳ್ಳುತ್ತಿರಲಿಲ್ಲ. ಕಾರಣ ಸರಿ ಇದ್ದುದ್ದರಿಂದ ಎಲ್ಲರೂ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರ ಮತ್ತು ಎಲ್ಲಾ ಅಧಿಕಾರಿಗಳು ಸಹಿತ ಇದರಲ್ಲಿ ನಿಸ್ಸಹಾಯಕರಾಗಿದ್ದಾರೆ. ಏಕೆಂದರೆ, ಇದನ್ನು ಮಾಡುವುದಕ್ಕೆ ಆಗುವುದಿಲ್ಲ ನಮಗೆ ಹತ್ತು ದಿವಸ ಸಿಕ್ಕಿಲ್ಲ, ಇದರ ಬಗ್ಗೆ ಚರ್ಚೆ ಬೇಡ.

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ, ನಾನು ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ, ನನಗೆ ನೀವು ಕುಳಿತುಕೊಳ್ಳುವುದಕ್ಕೆ ಹೇಳಿದ್ದೀರಿ ಅದಕ್ಕೆ ನಾನು ಕುಳಿತುಕೊಂಡಿದ್ದೇನೆ.

**ಸಭಾಪತಿಯವರು:-** ಒಂದು ನಿಮಿಷ ಈಗ ನಾನು ಆಗಿರುವಂತಹ lapse ಅನ್ನು ಹೇಳಿದ್ದೇನೆ. ಪದೇ ಪದೇ ಅದರ ಬಗ್ಗೆ ಮಾತನಾಡಿದರೆ, ನಾನು ಅದಕ್ಕೆ ಅವಕಾಶ ಕೊಡುವುದಿಲ್ಲ. ನಾನು ಆಗಲೇ ಹೇಳಿದ್ದೇನೆ ನೀವು ಎಷ್ಟು ಮಂದಿ ಹೇಳುತ್ತೀರಿ.

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ, ನಾನು ವಿಷಯವನ್ನು ಪ್ರಸ್ತಾಪ ಮಾಡುವಾಗ ತಾವು ಏನು ಹೇಳಿದ್ದೀರಿ ಎಂದರೆ, ನೀವು ಕುಳಿತುಕೊಳ್ಳಿ ನಾನು ಹೇಳುತ್ತೇನೆ ಎಂದು ಹೇಳಿದ್ದೀರಿ. ಆದುದರಿಂದ ನನಗೆ ಒಂದು ನಿಮಿಷ ಮಾತನಾಡುವುದಕ್ಕೆ ಅವಕಾಶ ನೀಡಿ. ಈಗ ನಾಲ್ಕು ದಿನಗಳು ಇರಬೇಕಾದರೆ ತಮಗೆ ಸೂಚನೆ ಬರುತ್ತದೆ ಎಂದು ಹೇಳಿದರೆ, ನಾವು ಖಂಡಿತವಾಗಿ ಪೀಠದ ಕಡೆಗೆ ನಮಗೆ ನೀವು ಏನು ಒಂದು ಮುತುವರ್ಜಿ ವಹಿಸಿ ಈ ಸದನವನ್ನು ನಡೆಸುವಂತಹ ಆಸಕ್ತಿ ತೋರಿಸಿದ್ದೀರಿ, ತಾವು ಹಾಗೂ ತಮ್ಮ ಸಿಬ್ಬಂದಿಯ ಬಗ್ಗೆ ನಮಗೆ ಖಂಡಿತವಾಗಿ ಅದರ ಅರಿವು ಇದೆ. ಆದರೆ, ಇದೇ ಬದ್ಧತೆ ಸರ್ಕಾರಕ್ಕೆ ಇದೆಯೇ ಎಂಬುದು ನಮ್ಮ ಪ್ರಶ್ನೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಖಂಡಿತ ಬದ್ಧತೆ ಇದೆ.

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೇ, ಈ ಸದನ ನಡೆಸಬೇಕೆಂದು ತೀರ್ಮಾನ ಮಾಡಿದ ಮೇಲೆ ನಾಲ್ಕು ದಿನ ಇರಬೇಕಾದರೆ ನಮಗೆ ಸೂಚನೆ ಕೊಟ್ಟರೆ, ನಾವು ಪ್ರಶ್ನೆಗಳನ್ನು ತಯಾರು ಮಾಡಬೇಕು, ನಾವು ನಿಯಮ 330 ತಯಾರು ಮಾಡಬೇಕು, ಯಾರಿಗೂ ಮಾಡುವುದಕ್ಕೆ ಅವಕಾಶ ಸಿಗಲಿಲ್ಲವೆಂದರೆ, ಈ ರೀತಿ ಸದನ ನಡೆಸುವುದರಿಂದ ಏನು ಪ್ರಯೋಜನ?

**ಸಭಾಪತಿಯವರು:-** ಶ್ರೀ ಅರುಣ ಶಹಾಪುರ ರವರೆ ಇಲ್ಲಿ ಕೇಳಿ, ಒಂದೊಂದು ಬಾರಿ ಅನಿವಾರ್ಯತೆ ಬಂದಾಗ ಸಹಕಾರ ಮಾಡಬೇಕು.

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೇ, ನಮಗೆ ಬೇಕಾಗಿರುವುದು, ಆ ಅನಿವಾರ್ಯತೆ ಏನಾಗಿತ್ತು ಎಂದು. ಹಾಗಾದರೆ ಇಷ್ಟು ತರಾತುರಿಯಲ್ಲಿ ಸದನವನ್ನು ನಡೆಸುವಂತಹ ಅನಿವಾರ್ಯತೆ ಏನಾಗಿತ್ತು? People want to know about it.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಯು.ಟಿ.ಖಾದರ್:-** ಈ ಹಿಂದೆ ಬೇರೆ ಬೇರೆ ಸರ್ಕಾರ ಇದ್ದಾಗ ಏನ್ನೆಲ್ಲಾ ಆಗಿತ್ತು ಎಂದು ನೋಡಬೇಕು.

(ಗೊಂದಲ)

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಸಭೆಗಳನ್ನು ನಡೆಸಿಲ್ಲ.

(ಗೊಂದಲ)

**ಶ್ರೀ ಯು.ಟಿ.ಖಾದರ್:-** ವಿಧಾನಸಭೆಯಲ್ಲಿ ಏನಾಗಿತ್ತು, ಅದನ್ನೆಲ್ಲಾ ಅಲೋಚನೆ ಮಾಡಿ.

**ಸಭಾಪತಿಯವರು:-** ಮಾನ್ಯ ಶರವಣರವರೆ ಕುಳಿತುಕೊಳ್ಳಿ, ಮಾನ್ಯ ವಿರೋಧಪಕ್ಷದ ನಾಯಕರು ಸ್ವಲ್ಪ ಅರ್ಥ ಮಾಡಿಕೊಳ್ಳಿ. ಅದನ್ನು ಒಂದು ಬಾರಿ ಹೇಳಿದ್ದೀರಿ, ಹೇಳಿದ ನಂತರ ಅದನ್ನು ಅಲ್ಲಿಗೆ ಬಿಡಬೇಕು. ಸಾಕು, ನಿಮಗೆ ಅಧಿಕಾರ ಇದೆ, ನೀವು ಏನು ಪತ್ರ ಕಳುಹಿಸುತ್ತೀರಿ ದಯವಿಟ್ಟು ಅದನ್ನು ಕಳುಹಿಸಿ, ಅದನ್ನು ನಾನು ಪರಿಶೀಲನೆ ಮಾಡುತ್ತೇನೆ. ಈಗ ಮಾನ್ಯ ಶ್ರೀಕಂಠೇಗೌಡರು ನಿಯಮ 330(ಎ) ರಡಿಯಲ್ಲಿ ನಿಮ್ಮ ವಿಷಯವನ್ನು ಪ್ರಸ್ತಾಪ ಮಾಡಿ.

**(ಮುಂದು...)**

**(006) 03.07.2018 11.00 ವೈಎಲ್-ಬಿಎನ್ಎಸ್ (ಸಭಾಪತಿಯವರ ಉಪಸ್ಥಿತಿ)**

**<u>ಡಿ. ವಿಶೇಷ ಪ್ರಸ್ತಾವಗಳು</u>**

**ಅ) ಕೈಲಾಸ ಮಾನಸ ಸರೋವರ ಯಾತ್ರೆಗೆ ತೆರಳಿರುವ ಕರ್ನಾಟಕ ರಾಜ್ಯದ ಯಾತ್ರಾರ್ಥಿಗಳು ಪ್ರಕೃತಿ ವಿಕೋಪದಿಂದ ಸುರಿಯುತ್ತಿರುವ ಬಾರಿ ಮಳೆಯ ಮಧ್ಯೆ ಸಿಲುಕಿದ್ದು ಅವರುಗಳನ್ನು ರಕ್ಷಣೆ ಮಾಡುವ ಕುರಿತು.**

\- - -

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಿಯಮ 330ಎ ಅಡಿಯಲ್ಲಿ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿರುವುದಕ್ಕೆ ಧನ್ಯವಾದಗಳು. ನೇಪಾಳದ ಕೈಲಾಸ ಮಾನಸ ಸರೋವರ ಯಾತ್ರೆಗೆ ತೆರಳಿರುವ ಕರ್ನಾಟಕ ರಾಜ್ಯದ 290 ಯಾತ್ರಾರ್ಥಿಗಳು ನೇಪಾಳದ ಸಿಮಿಕೋಟ್ ಎಂಬಲ್ಲಿ ಪ್ರಕೃತಿ ವಿಕೋಪದಿಂದ ಸುರಿಯುತ್ತಿರುವ ಬಾರಿ ಮಳೆಯ ಮಧ್ಯೆ ಸಿಲುಕಿಕೊಂಡಿದ್ದಾರೆ, ಈ ಯಾತ್ರಾರ್ಥಿಗಳು ಸಿಮಿಕೋಟ್‌ನಿಂದ ನೇಪಾಳದ ಗಂಜ್‌ಗೆ ಬರಬೇಕಿದ್ದು, ಪ್ರತಿಕೂಲದ ಹವಾಮಾನದ ಹಿನ್ನೆಲೆಯಲ್ಲಿ ಹೆಲಿಕ್ಯಾಪ್ಟರ್ ಹಾರಾಟವು ಸ್ಥಗಿತಗೊಂಡಿರುವುದರಿಂದ ಈ ಎಲ್ಲಾ ಯಾತ್ರಾರ್ಥಿಗಳನ್ನು ಕರೆತರುವ ಪ್ರಕ್ರಿಯೆ ವಿಳಂಬವಾಗಿರುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ ಅಪಾಯದಲ್ಲಿ ಸಿಲುಕಿಕೊಂಡಿರುವವರ ಪೈಕಿ ಮೈಸೂರಿನವರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆಂದು ವರದಿ ಕೂಡ ಆಗಿದೆ. ಆತಂಕಗೊಂಡ ಈ ಯಾತ್ರಾರ್ಥಿಗಳಲ್ಲಿ ಹಲವರು ಅಸ್ವಸ್ಥತಗೊಂಡಿದ್ದಾರೆ. ಇವರಿಗೆ ಸೂಕ್ತ ವೈದ್ಯಕೀಯ ಚಿಕಿತ್ಸೆಯೂ ಸಹ ಲಭ್ಯವಾಗಿಲ್ಲ. ಅಲ್ಲದೆ ಆಹಾರದ ಕೊರತೆಯು ಸಹ ಉಂಟಾಗಿರುತ್ತದೆ ಎಂದು ಈ ದಿನದ ಪ್ರಜಾವಾಣಿ, ಕನ್ನಡ ಪ್ರಭಾ, ವಿಜಯವಾಣಿ ಪತ್ರಿಕೆಗಳಲ್ಲಿ ವರದಿಯಾಗಿರುತ್ತದೆ. ಆದ್ದರಿಂದ ಈ ಬಗ್ಗೆ ಸರ್ಕಾರ ಸೂಕ್ತವಾದ ಗಮನಹರಿಸಿ ನೇಪಾಳ ಸರ್ಕಾರವನ್ನು ಸಂಪರ್ಕಿಸಿ ಈ ಎಲ್ಲಾ ಯಾತ್ರಾರ್ಥಿಗಳನ್ನು ರಾಜ್ಯಕ್ಕೆ ಸುರಕ್ಷಿತವಾಗಿ ಕರೆತರುವ ಬಗ್ಗೆ ಅಗತ್ಯ ಕ್ರಮವನ್ನು ಕೈಗೊಳ್ಳಬೇಕಾಗಿ ಈ ಮೂಲಕ ಮಾನ್ಯ ಕಂದಾಯ ಸಚಿವರನ್ನು ಹಾಗೂ ಮುಖ್ಯಮಂತ್ರಿಗಳನ್ನು ಒತ್ತಾಯಿಸುತ್ತೇನೆ.

**ಡಾ|| ಜಯಮಾಲ ರಾಮಚಂದ್ರ(ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರವನ್ನು ತರಿಸಿಕೊಡಿಸುತ್ತೇನೆ.

**ಆ) ದಕ್ಷಿಣ ಕನ್ನಡ ಜಿಲ್ಲೆ 2018ನೇ ಸಾಲಿನಲ್ಲಿ ಮುಂಗಾರು ಮಳೆಯಿಂದ ಹಾನಿಯಾದ ಬಗ್ಗೆ ಉನ್ನತ ಮಟ್ಟದ ಅಧಿಕಾರಿಗಳ ಸಮಿತಿ ರಚಿಸುವ ಕುರಿತು..**

*****

**ಶ್ರೀ ಐವನ್ ಡಿ'ಸೋಜಾ(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮುಂಗಾರು ಮಳೆಗೆ ಮುಳೂರುಪಟ್ನ ಲೋಕೋಪಯೋಗಿ ರಸ್ತೆ ಸೇತುವೆ ಕುಸಿತ ಎನ್.ಹೆಚ್.169 ಗುರುಪುರ ಸೇತುವೆ ಕುಸಿತಗೊಳ್ಳುವ ಭೀತಿ, 8 ಮಾನವ ಜೀವ ಹಾನಿಯಾಗಿದೆ. 186 ತೋಟಗಾರಿಕೆ ಬೆಳೆಗಳ ಹಾನಿ ಪ್ರಕರಣಗಳು ನಡೆದಿದೆ. 876 ವಾಸದ ಮನೆಗಳಿಗೆ ಹಾನಿಯಾಗಿದೆ. ಅಪಾರ ಸ್ವತ್ತುಗಳ ನಾಶವಾಗಿದೆ. ಜನಜೀವನದಲ್ಲಿ ಅಸ್ತವ್ಯಸ್ತ ಉಂಟಾಗಿದೆ. ಕೋಟ್ಯಂತರ ರೂಪಾಯಿಗಳು ನಷ್ಟವಾಗಿದ್ದು ಕೂಡಲೇ ಪರಿಹಾರ ನೀಡುವಂತೆ ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಸಾಲಿನಲ್ಲಿ ಮೇ ತಿಂಗಳಿನಿಂದಲೇ ಮಳೆ ಬೀಳಲು ಪ್ರಾರಂಭವಾಗಿದ್ದು, ಜೂನ್ ತಿಂಗಳಲ್ಲಿ ಅತ್ಯಂತ ಹೆಚ್ಚು ಅಂದರೆ ವಾಡಿಕೆ ಮಳೆಗಿಂತಲೂ 900 ಮಿಲಿ ಮೀಟರ್ ಹೆಚ್ಚು ಮಳೆ ಬಿದ್ದಿದ್ದು, ಅಪಾರವಾದ ಕೃಷಿ ಬೆಳೆಹಾನಿಗೊಂಡಿದೆ. ವಾಸ್ತವ್ಯದ ಮನೆ ಹಾನಿ ಉಂಟಾಗಿದೆ. ಆದರೆ ಪರಿಹಾರ ನೀಡುವ ಸಂದರ್ಭದಲ್ಲಿ ಹಳೆ ಪದ್ಧತಿಯ ಅನ್ವಯ ಪರಿಹಾರವನ್ನು ನೀಡಿದ್ದು, ಮನೆ ಸಂಪೂರ್ಣ ನಾಶಗೊಂಡವರಿಗೆ 99,000 ರೂಪಾಯಿಗಳು, ಭಾಗಶಃ ಮನೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಾನಿಯಾಗಿದ್ದರೆ 5000 ರೂಪಾಯಿಗಳನ್ನು ನೀಡಿ, ಮನೆ ಕಳೆದುಕೊಂಡ ಸಂತ್ರಸ್ತರು ಈ ಬಗ್ಗೆ ಅತೃಪ್ತಿ ವ್ಯಕ್ತಪಡಿಸಿದ್ದಾರೆ.

ಕೃತಕ ನೆರೆಯಿಂದ ಮನೆಯೊಳಗೆ ನೀರು ನುಗ್ಗಿ ಸಾವಿರಾರು ವಾಹನಗಳು, ಮನೆಯೊಳಗಿನ ಟಿ.ವಿ ಮತ್ತು ಫ್ರಿಜ್, ಬಟ್ಟೆ, ಮನೆಯೊಳಗಿದ ಎಲ್ಲಾ ಸ್ವತ್ತುಗಳು ನಾಶಗೊಂಡಿದ್ದು, ಅಂತವರಿಗೆ ಕಾನೂನು ಅಡಿಯಲ್ಲಿ ಯಾವುದೇ ಪರಿಹಾರ ನೀಡಲು ಆಗುವುದಿಲ್ಲ ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ ಮತ್ತು ಕಂದಾಯ ಸಚಿವರ ಗಮನ ಸೆಳೆದಾಗ ಕಂದಾಯ ಸಚಿವರು ಈ ಬಗ್ಗೆ ಹೆಚ್ಚುವರಿ ಹಣವನ್ನು ನೀಡಲು ಕಾನೂನಿನಲ್ಲಿ ಅವಕಾಶವಿಲ್ಲದೇ ಇರುವುದರಿಂದ ನಾನು ಈ ಬಗ್ಗೆ ಸೂಕ್ತವಾದ ಕ್ರಮತೆಗೆದುಕೊಳ್ಳುತ್ತೇನೆ ಎಂದು ಭರವಸೆ ನೀಡಿದ್ದಾರೆ. ಜಿಲ್ಲೆಯಲ್ಲಿ ಸುಮಾರು ರೂ.50 ಕೋಟಿ ಅಧಿಕ ಮೌಲ್ಯದ ಸ್ವತ್ತುಗಳು ಮತ್ತು ಮನೆಗಳು ಕೃಷಿ ನಾಶಗೊಂಡಿದ್ದು ಪರಿಹಾರ ಮಾತ್ರ ಹಳೆ ಮಾರ್ಗಸೂಚಿಯಂತೆ ನೀಡಲಾಗಿದೆ.

ಅನೇಕ ರಸ್ತೆಗಳು ಅತಿಯಾದ ಮಳೆಯಿಂದ ಸಂಪೂರ್ಣ ಹೊಂಡಮಯವಾಗಿದ್ದು, ಸೇತುವೆಗಳು ಕಳಚಿ ಬಿದ್ದಿದೆ. ಮಳೆಯ ಪ್ರಮಾಣ ಅಂದಾಜಿಸಬಹುದಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮುಂಗಾರು ಮಳೆಯಿಂದ ಉಂಟಾದ ಹಾನಿ ಸಾರ್ವಜನಿಕ ಸ್ವತ್ತುಗಳು ಕಾರ್ಯಕ್ಕೆ ಅನುದಾನವನ್ನು ಬಿಡುಗಡೆ ಮಾಡಿಕೊಡಲು ರಾಜ್ಯಮಟ್ಟದಲ್ಲಿ ಉನ್ನತ ಮಟ್ಟದ ಅಧಿಕಾರಿಗಳನ್ನು ಒಳಗೊಂಡ ಸಮಿತಿ ರಚಿಸಿ ಕೂಡಲೇ ಜಿಲ್ಲೆಗೆ ಭೇಟಿ ನೀಡಿ, ನಷ್ಟವನ್ನು ಅಂದಾಜಿಸಿ, ಯಾರು ನಷ್ಟವನ್ನು ಹೊಂದಿದ್ದಾರೆ ಅವರಿಗೆ ನಷ್ಟವನ್ನು ತುಂಬಿ ಕೊಡುವಂತೆ ತಮ್ಮ ಮೂಲಕ ಕಂದಾಯ ಸಚಿವರಿಗೆ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):- ಮಾನ್ಯ ಸಭಾಪತಿಯವರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವ್ಯಾಪಕ ಮಳೆಯಿಂದ ಆಸ್ತಿ-ಪಾಸ್ತಿ ಹಾನಿಯಾಗಿದೆ ಎಂದು ಹೇಳುತ್ತಿದ್ದಾರೆ.

ಸಭಾಪತಿಯವರು:- ಈ ನಿಯಮದಡಿಯಲ್ಲಿ ಪ್ರಸ್ತಾಪ ಮಾಡಿದ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ.

ಶ್ರೀ ಕೋಟ ಶ್ರೀನಿವಾಸ ಪೂಜಾರಿ:- ಮಾನ್ಯ ಸಭಾಪತಿಯವರೇ, ನಮ್ಮ ಜಿಲ್ಲೆಯಲ್ಲಿಯೂ ಮಳೆಯಿಂದ ಹಾನಿಯಾಗಿದೆ. ದಯವಿಟ್ಟು ಕಂದಾಯ ಸಚಿವರು ಇದಕ್ಕೆ ಗಮನಕೊಡದೇ ಇದ್ದರೆ ಹೇಗೆ?

ಸಭಾಪತಿಯವರು:- ಒಂದು ನಿಮಿಷ ನಾನು ಹೇಳುವುದನ್ನು ಕೇಳಿ. ತಾವು ವಿರೋಧ ಪಕ್ಷದ ನಾಯಕರುರಾಗಿರುತ್ತೀರಿ ವಿಚಾರ ಮಾಡಿ. ನಾನು ಹೇಳುವುದೇನೆಂದರೆ, ಇದರಲ್ಲಿ ಯಾವುದೇ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೀತಿಯ ಚರ್ಚೆಗೆ ಆಸ್ಪದವಿರುವುದಿಲ್ಲ. ಚರ್ಚೆ ಮಾಡುವ ಹಾಗೆಯೂ ಇಲ್ಲ. ನೀವು ಬೇರೆ ನಿಯಮದಡಿಯಲ್ಲಿ ಮನವಿಯನ್ನು ಕಳುಹಿಸಿ ಕೊಡಿ ಆಗ ಚರ್ಚೆಗೆ ಅವಕಾಶ ಇರುತ್ತದೆ. ಸಭಾನಾಯಕರು ಇದರ ಬಗ್ಗೆ ಉತ್ತರವನ್ನು ಹೇಳಬೇಕು.

ಡಾ|| ಜಯಮಾಲ ರಾಮಚಂದ್ರ:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಎರಡೂ ಜಿಲ್ಲೆಯಲ್ಲಿಯೂ ಇದರ ಬಗ್ಗೆ review ಮಾಡಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಸಚಿವರಿಂದ ಉತ್ತರವನ್ನು ತರಿಸಿಕೊಡುತ್ತೇನೆ.

ಶ್ರೀ ಕೋಟ ಶ್ರೀನಿವಾಸ ಪೂಜಾರಿ:- ಮಳೆಯಿಂದ ಹಾನಿಯಾಗಿದ್ದರೆ ಸರ್ಕಾರ ಪರಿಹಾರ ರೂಪದಲ್ಲಿ 500 ರೂಪಾಯಿ, 1000 ರೂಪಾಯಿ ಕೊಡುತ್ತೇವೆ ಎಂದು ಹೇಳುತ್ತಾರೆ.

(ಗೊಂದಲ)

**ಸಭಾಪತಿಯವರು**:- ಒಂದು ನಿಮಿಷ. ಮಾನ್ಯ ಸಭಾನಾಯಕರೆ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದಂತಹ ವಿಷಯಗಳಿಗೆ ನೀವಾಗಿಯೇ ನೀವು ಏನು ಉತ್ತರವನ್ನು ಕೊಡುವುದಕ್ಕೆ ಹೋಗಬೇಡಿ. ನಾನು ಹೇಳಿದಾಗ ಸಂಬಂಧಪಟ್ಟ ಸಚಿವರಿಂದ ಉತ್ತರ ತರಿಸಿಕೊಡುತ್ತೇನೆ ಎಂದು ಹೇಳಿ. ನೀವಾಗಿಯೇ ನೀವು ಏನು ಹೇಳುವುದಕ್ಕೆ ಹೋಗಬೇಡಿ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ಪ್ರಕಾರ ಸಭಾನಾಯಕರು ಸಂಬಂಧಪಟ್ಟ ಸಚಿವರಿಂದ ಉತ್ತರ ತರಿಸಿಕೊಡುವ ಜವಾಬ್ದಾರಿ ಇರುತ್ತದೆ. ದಯಮಾಡಿ ಕುಳಿತುಕೊಳ್ಳಿ.

**ಇ) ಪಿಯು ಉಪನ್ಯಾಸಕರ ನೇಮಕ ಯಾವಾಗ' ಎಂಬ ವಿಷಯವನ್ನು ಪ್ರಸ್ತಾಪಿಸಲು ಅನುಮತಿಸುವ ಕುರಿತು.**

*****

**ಶ್ರೀ ಎಸ್.ವ್ಹಿ.ಸಂಕನೂರ(ಪದವೀಧರರ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ವಿಜಯವಾಣಿ ಪತ್ರಿಕೆಯ ಮುಖಪುಟದಲ್ಲಿ ದಿನಾಂಕ 22.06.2018 ಹಾಗೂ 24.06.2018 ರಂದು ಪ್ರಕಟವಾದ "ಪಿಯುಸಿ ಉಪನ್ಯಾಸಕರ ನೇಮಕ ಯಾವಾಗ?" ಹಾಗೂ "2 ವರ್ಷ ಬಿಇಡಿ ಪದವೀಧರರಿಗೆ ಪಿಯುಸಿ ಉಪನ್ಯಾಸಕರ ನೇಮಕಾತಿಗೆ ಅವಕಾಶವಿಲ್ಲ' ಎಂಬ ತಲೆಬರಹದಡಿಯಲ್ಲಿ ಗಂಭೀರವಾದ ವಿಷಯವು ಪ್ರಕಟವಾಗಿರುವುದು. ಪಿಯು ಉಪನ್ಯಾಸಕರ ಹುದ್ದೆಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ತುಂಬಿಕೊಳ್ಳಲು ದಿನಾಂಕ 8.06.2015 ರಂದು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿತ್ತು. ಆದರೆ ಇದನ್ನು ಕೆಲವೇ ದಿನಗಳಲ್ಲಿ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಯಿತು. ತದನಂತರ 2016ರಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

2ನೇ ಪ್ರಕಟಣೆ ನೀಡಿ, 2015ರಲ್ಲಿ ಅರ್ಜಿ ಸಲ್ಲಿಸಿ ಫೀಸ್ ತುಂಬದೇ ಇರುವವರಿಗೆ ಅವಕಾಶ ಕಲ್ಪಿಸಿಕೊಡಲಾಯಿತು. ಪುನಃ ದಿನಾಂಕ 28.02.2017ರಲ್ಲಿ 3ನೇ ಪ್ರಕಟಣೆ ನೀಡಿ ಹುದ್ದೆಗಳ ಸಂಖ್ಯೆಯನ್ನು 1130 ಯಿಂದ 1203ಕ್ಕೆ ಹೆಚ್ಚಿಸಿ ಮತ್ತೆ ಅರ್ಜಿ ಆಹ್ವಾನಿಸಲಾಯಿತು.

3 ವರ್ಷಗಳ ನಂತರ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಫೆಬ್ರವರಿ 23, 24, 25, 26ರಂದು ಪರೀಕ್ಷೆ ನಡೆಸಲು ತೀರ್ಮಾನಿಸಲಾಯಿತು. ಆದರೆ ಈ ನಿಗದಿತ ಪರೀಕ್ಷೆಯನ್ನು ಇದ್ದಕ್ಕಿದ್ದಂತೆ ಮುಂದೂಡಿ ಮುಂದಿನ ದಿನಗಳಲ್ಲಿ ಪರೀಕ್ಷೆ ನಡೆಸುವ ದಿನಾಂಕವನ್ನು ಪ್ರಕಟಿಸುವುದಾಗಿ ಹೇಳಿಕೆ ನೀಡಿತ್ತು. ಈ ಹಿನ್ನೆಲೆಯಲ್ಲಿ ನೇಮಕಾತಿಗೆ 3 ಬಾರಿ ಪ್ರಕಟಣೆ ನೀಡಿ ಹಾಗೂ ನಿಗದಿಪಡಿಸಿ ಪರೀಕ್ಷೆಯನ್ನು ಮುಂದೂಡಲು ಕಾರಣಗಳೇನು? ಎಂಬುದನ್ನು ಸ್ಪಷ್ಟಪಡಿಸಬೇಕು. ಇದಲ್ಲದೇ ಇದಕ್ಕೆ ಯಾರು ಹೊಣೆ ಎಂಬುದನ್ನು ಕೂಡಾ ತಿಳಿಸಬೇಕು.

ಒಟ್ಟಾರೆ ಪಿಯು ಉಪನ್ಯಾಸಕರ ನೇಮಕಾತಿಯು ಕಳೆದ 3 ವರ್ಷಗಳಿಂದ ಗೊಂದಲ ಹಾಗೂ ನೆನೆಗುದಿಗೆ ಬಿದ್ದಿದ್ದು ಉದ್ಯೋಗ ಆಕಾಂಕ್ಷಿಗಳು ವಯೋಮಿತಿ ಮೀರುವ ಆತಂಕಕ್ಕೆ ಒಳಗಾಗಿ ಬೇಗ ಪರೀಕ್ಷೆ ನಡೆಸುವಂತೆ ಕೋರಿರುವರು. ಈ ಮಧ್ಯೆ 2 ವರ್ಷಗಳ ಅವಧಿಯ ಬಿಇಡಿ ಕೋರ್ಸಿನ ಮೊದಲ ಬ್ಯಾಚ್‌ನ ವಿದ್ಯಾರ್ಥಿಗಳ ಪರೀಕ್ಷೆ ಫಲಿತಾಂಶ ಕೂಡಾ ಇದೇ ಜನವರಿ 2018ರಂದು ಪ್ರಕಟವಾಗಿರುವುದು. ಈ ಪರೀಕ್ಷೆಯಲ್ಲಿ ಒಟ್ಟು ಸುಮಾರು 5000 ಅಭ್ಯರ್ಥಿಗಳು ತೇರ್ಗಡೆ ಹೊಂದಿರುವರು. ಹೀಗೆ ಎಂ.ಎಸ್ಸಿ ಹಾಗೂ ಎಂ.ಎ ಪದವಿ ಪಡೆದು 2 ವರ್ಷಗಳ ಬಿಇಡಿ ಕೋರ್ಸ್ ಮುಗಿಸಿದ ವಿದ್ಯಾರ್ಥಿಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಉಪನ್ಯಾಸಕರ ಹುದ್ದೆಗೆ ಅರ್ಜಿ ಸಲ್ಲಿಕೆಯ ಅವಕಾಶದಿಂದ ವಂಚಿತರಾಗಿದ್ದೇವೆ ಮತ್ತು ಹೋರಾಟ ಮಾಡುತ್ತೇವೆ ಎಂದು ಸರಕಾರಕ್ಕೆ ಎಚ್ಚರಿಕೆ ನೀಡಿರುವರು.

ಆದ್ದರಿಂದ ಈ ಎಲ್ಲಾ ಸಮಸ್ಯೆಗಳನ್ನು ಕೂಡಲೇ ಬಗೆಹರಿಸಿ ನೇಮಕಾತಿ ಪ್ರಕ್ರಿಯೆಯನ್ನು ಯಾವಾಗ ಪೂರ್ಣಗೊಳಿಸುತ್ತೀರಿ ಎಂಬುದನ್ನು ಸರಕಾರ ಸ್ಪಷ್ಟಪಡಿಸಬೇಕು.

ಡಾ|| ಜಯಮಾಲ ರಾಮಚಂದ್ರ (ಸಭಾನಾಯಕರು):- ಮಾನ್ಯ ಸಭಾಪತಿಯವರೇ, ಸರ್ಕಾರದ ಗಮನಕ್ಕೆ ಈ ವಿಷಯ ತಿಳಿದಿದೆ ಮತ್ತು ಸಚಿವರು ಸಹ ಇದಕ್ಕೆ ಸಂಬಂಧಿಸಿದಂತೆ ಕ್ರಮವಹಿಸುತ್ತಿದ್ದಾರೆ. ತಕ್ಷಣ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಿಂದ ಉತ್ತರ ತರಿಸಿಕೊಡುತ್ತೇನೆ.

ಈ) ರಾಜ್ಯದಲ್ಲಿ ಹಿಂದುಳಿದ ಮತ್ತು ಸಮಾಜ ಕಲ್ಯಾಣ ಇಲಾಖೆಯ ಮೂಲಕ ನಡೆಸುತ್ತಿರುವ ಬಾಲಕ ಬಾಲಕಿಯರ ಹಾಸ್ಟೆಲ್‌ಗಳಲ್ಲಿ ಹೊರಗುತ್ತಿಗೆ ಆಧಾರದಮೇಲೆ ಕೆಲಸ ಮಾಡುತ್ತಿದ್ದ ನೌಕರರನ್ನು ಕೆಲಸದಿಂದ ತೆಗೆದುಹಾಕಿರುವ ಬಗ್ಗೆ.

*****

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎನ್.ರವಿಕುಮಾರ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಹಿಂದುಳಿದ ಮತ್ತು ಸಮಾಜಕಲ್ಯಾಣ ಇಲಾಖೆಯ ಮೂಲಕ ನಡೆಸುತ್ತಿರುವ ಬಾಲಕ ಬಾಲಕಿಯರ ಹಾಸ್ಟೆಲ್‌ಗಳಲ್ಲಿ ಕಳೆದ 8-10 ವರ್ಷಗಳಿಂದ ಹೊರಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದ ನೌಕರರನ್ನು ಕಾರಣವಿಲ್ಲದೆ ಕೆಲಸದಿಂದ ತೆಗೆದು ಅವರನ್ನು ಸರ್ಕಾರ ನಡು ಬೀದಿಗೆ ತಳ್ಳಿದೆ. 10 ವರ್ಷಗಳಿಂದಲೂ ಅಲ್ಲೇ ವೇತನ ನೀಡಿ ಆ ಬಡ ಸಿಬ್ಬಂದಿಗಳಿಗೆ ಕೆಲಸ ಮಾಡಿಸಿಕೊಂಡು ಈದೀಗ ಕಾರಣವಿಲ್ಲದೆ ತೆಗೆದು ಹಾಕುವ ಮೂಲಕ ಸರ್ಕಾರ ಸಿಬ್ಬಂದಿಗಳಿಗೆ ಅನ್ಯಾಯ ಮಾಡಿದೆ. ಅವರೆಲ್ಲಾ ಸ್ವತಂತ್ರ ಉದ್ಯಾನದಲ್ಲಿ ಅನಿರ್ಧಿಷ್ಟಾವದಿ ಧರಣಿ ನಡೆಸುತ್ತಿದ್ದು ಈ ಧರಣಿ 5 ದಿನ ಮುಟ್ಟಿದೆ. ಈ ಹಿಂದೆ ಇದೇ ಸದನದಲ್ಲಿ ಅಡುಗೆಯವರನ್ನು ಕೆಲಸದಿಂದ ತೆಗೆದುಹಾಕಬಾರದು ಎಂದು ಆಗ್ರಹಿಸಿದಾಗ ಅಂದಿನ ಸರ್ಕಾರದ ಸಮಾಜಕಲ್ಯಾಣ ಮಂತ್ರಿಯಾದ ಆಂಜನೇಯನವರು ಕೈಬಿಡುವುದಿಲ್ಲವೆಂದು ಭರವಸೆ ನೀಡಿದ ಮಾಹಿತಿ ಇದೆ.

ಈ ಹಿಂದೆ ಸದನದಲ್ಲಿ ಕೊಟ್ಟ ಭರವಸೆಯನ್ನು ನಿರ್ಲಕ್ಷಿಸಿ ಸರ್ಕಾರ ಅವರನ್ನು ಕೆಲಸದಿಂದ ಕೈ ಬಿಡುತ್ತದೆ. ಈ ಹಿನ್ನೆಲೆಯಲ್ಲಿ ಸುಮಾರು 10 ವರ್ಷಗಳಿಂದ ಬಡ ಸಿಬ್ಬಂದಿಗಳಿಂದ ಹಾಸ್ಟೆಲ್ ಅಡುಗೆ ಕೆಲಸ ಮಾಡಿಸಿಕೊಂಡು ಇದೀಗ ಬಡವರ ಬದುಕು ಸಂಕಷ್ಟದಲ್ಲಿದೆ ಅವರಿಗಾದ ಅನ್ಯಾಯವನ್ನು ಪರಿಗಣಿಸಿ ಮತ್ತು ಸರ್ಕಾರ ಸದನದಲ್ಲಿಕೊಟ್ಟ ಭರವಸೆಯನ್ನು ಗಮನದಲ್ಲಿಟ್ಟುಕೊಂಡು ತಕ್ಷಣ ಸಂತ್ರಸ್ತ ಸಿಬ್ಬಂದಿಯನ್ನು ತೆಗೆದುಕೊಳ್ಳಬೇಕೆಂದು ಈ ಮೂಲಕ ತಮ್ಮಲ್ಲಿ ಆಗ್ರಹಿಸುತ್ತೇನೆ.

**ಶ್ರೀ ಸಿ.ಪುಟ್ಟರಂಗ ಶೆಟ್ಟಿ(ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಅಡುಗೆಯವರು, ಅಡುಗೆ ಸಹಾಯಕರು ಮತ್ತು ಕಾವಲುಗಾರರು ಒಟ್ಟು 10548 ಹುದ್ದೆಗಳಿವೆ. ಅದರಲ್ಲಿ ಈಗಾಗಲೇ ಕಳೆದ ಒಂದು ತಿಂಗಳಲ್ಲಿ ಜಿಲ್ಲಾಧಿಕಾರಿಗಳು ನೇರವಾಗಿ ಸುಮಾರು 5965 ಹುದ್ದೆಗಳನ್ನು ನೇಮಕ ಮಾಡಿಕೊಂಡಿದ್ದಾರೆ.

(ಮುಂದು). . .

(007)/03.07.2018/11.10/ಎಸ್‌ಕೆ-ಕೆಎಸ್

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಸಿ. ಪುಟ್ಟರಂಗ ಶೆಟ್ಟಿ (ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ಉಳಿದಂತೆ ಸುಮಾರು 4,583 ಹುದ್ದೆಗಳನ್ನು NGO (Non-

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Governmental Organization) ಮತ್ತು ಇತರ agency ಗಳ ಮೂಲಕ ಹೊರ ಗುತ್ತಿಗೆಯ ಆಧಾರದ ಮೇಲೆ ತೆಗೆದುಕೊಂಡು, ಅವರ ಮುಖಾಂತರ ಅವರಿಗೆ ಸಂಭಾವನೆಯನ್ನು ಕೊಡುವಂಥದ್ದು ಎಲ್ಲಾ ಇಲಾಖೆಯೊಂದರಲ್ಲಿಯೇ ಅಲ್ಲ. ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಇಲಾಖೆಯ ಒಂದರಲ್ಲಿಯೇ ಇಲ್ಲ. ಇದು ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಅವರು ಕೇಳುರುವಂತಹದ್ದು, ನಮ್ಮನ್ನೆಲ್ಲಾ ಖಾಯಂ ಮಾಡಿ ಮತ್ತು ನಮಗೆಲ್ಲಾ ಕೊಡುವಂತಹ ಮಾನ್ಯತೆಯನ್ನು ಕೊಡಿ ಎಂದು ಕೇಳುವುದರಲ್ಲಿ ಅರ್ಥವಿಲ್ಲ. ಅವರು ಧರಣಿ ಹೂಡಿದ ಮೊದಲನೇ ದಿನದಲ್ಲಿಯೇ ನಾನು ಭೇಟಿ ಮಾಡಿ ವಿಷಯವನ್ನೆಲ್ಲಾ ಹೇಳಿದ್ದೇನೆ. ಸುಮಾರು 4,583 ಹುದ್ದೆಗಳನ್ನು N.G.O. ಮುಖಾಂತರ ನೇಮಕ ಮಾಡಿಕೊಂಡು, ಅವರನ್ನು ಅಲ್ಲಿ ಅಡಿಗೆ, ಸಹಾಯಕ ಮತ್ತು ಕಾವಲುಗಾರರನ್ನಾಗಿ ನೇಮಿಸುವಂತಹ ಕೆಲಸವನ್ನು ಮಾಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ತಾವು ಗಂಬೀರವಾಗಿ ಗಮನಿಸಬೇಕು.

**ಸಭಾಪತಿಯವರು:-** ಒಂದು ನಿಮಿಷ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಸುಮಾರು ನಾಲ್ಕೈದು ದಿವಸಗಳಿಂದ ಹೊರ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವವರು ಹಗಲು-ರಾತ್ರಿ ಧರಣಿ ಮಾಡುತ್ತಿದ್ದಾರೆ. ಈ ಹಿಂದೆ ಇದೇ ಸದನದಲ್ಲಿ ಈ ವಿಷಯದ ಬಗ್ಗೆ ಚರ್ಚೆಯಾಯಿತು. ಗಮನ ಸೆಳೆಯುವ ಸೂಚನೆಯಲ್ಲಿ ಶ್ರೀಮತಿ ಮೋಟಮ್ಮನವರು ಪ್ರಶ್ನೆಯನ್ನು ಕೇಳಿದರು. ನೀವು ಈ ಬಡವರನ್ನೆಲ್ಲಾ ತೆಗೆದು ಹಾಕುತ್ತಿದ್ದೀರಿ. ಈಗ ಅವರುಗಳ ಶೈಕ್ಷಣಿಕ ವಿದ್ಯಾರ್ಹತೆಯ ಆಧಾರದ ಮೇಲೆ ತೆಗೆದುಕೊಳ್ಳುತ್ತಿದ್ದೀರಿ. ದಯವಿಟ್ಟು, ಅವರಿಗೆ ನ್ಯಾಯ ಕೊಡಿ ಎಂದು ಕೇಳಿದಾಗ, ಈ ಹಿಂದೆ ಇದ್ದಂತಹ ಮಾನ್ಯ ಸಚಿವರಾದ ಶ್ರೀ ಆಂಜನೇಯರವರು ಕೊಟ್ಟ ಉತ್ತರ ತೃಪ್ತಿಯಾಗಿಲ್ಲ ಎಂದು ನಾವೆಲ್ಲಾ ಹೋಗಿ ಧರಣಿ ಕುಳಿತೆವು. ಅದರ ಬಗ್ಗೆ ಶ್ರೀ ಆಂಜನೇಯರವರು ಏನು ಹೇಳಿದರು ಎಂದರೆ ಎಂಟು-ಹತ್ತು ವರ್ಷಗಳಿಂದ ಆಡುಗೆ ಕೆಲಸ ಮಾಡುತ್ತಿರುವುದು ಸತ್ಯ. ಆದರೆ ನಾವು ಅವರನ್ನು ತೆಗೆದುಹಾಕಿದ್ದೇವೆ. ನಾವು ಅವರನ್ನು ಕೆಲಸದಿಂದ ಕೈಬಿಡುವುದಿಲ್ಲ ಮತ್ತು ಅವರನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳುತ್ತೇವೆಂಬ ಮಾತನ್ನು ಹೇಳಿದರು. ಎಂಟು-ಹತ್ತು ವರ್ಷಗಳಿಂದ ಅವರ ಹತ್ತಿರ ಅಡುಗೆ ಮಾಡಿಸಿಕೊಂಡಿದ್ದೀರಿ. ಅವರನ್ನು ಈಗ ಕೆಲಸದಿಂದ ತೆಗೆದು, ಬೀದಿಯಲ್ಲಿ ಕೈ ಬಿಟ್ಟರೆ, ನಾಳೆಯಿಂದ ಕೆಲಸಕ್ಕೆ ಬರಬೇಡ ಎಂದು ಹೇಳಿದರೆ, ಸರ್ಕಾರಕ್ಕೆ ಏನಾದರೂ ಮಾನವೀಯತೆ ಇದೆಯೇ? ಅವರು ಇದೇ ಸದನದಲ್ಲಿ ಕೊಟ್ಟ ಉತ್ತರ ಇದು.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿ. ಪುಟ್ಟರಂಗ ಶೆಟ್ಟಿ (ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)**:-ಮಾನ್ಯ ಸಭಾಪತಿಯವರೇ, ಹಾಸ್ಟೆಲ್‌ಗಳಲ್ಲಿ ಖಾಯಂ ಹುದ್ದೆಗಳಿಲ್ಲದೇ ಅವ್ಯವಹಾರಗಳು ನಡೆಯುತ್ತಿದೆ. ಮಾನವೀಯತೆ ಇರುವುದರಿಂದ ಅವುಗಳನ್ನು ಸರಿಪಡಿಸುವುದಕ್ಕೋಸ್ಕರ ಸುಮಾರು ಐದು ಸಾವಿರ ಹುದ್ದೆಗಳನ್ನು ಖಾಯಂ ಆಗಿ ತೆಗೆದುಕೊಳ್ಳುತ್ತಿದ್ದೇವೆ....

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೇ, ಖಾಯಂ ಆಗಿ ತೆಗೆದುಕೊಳ್ಳುವಾಗ, ಅವರನ್ನು ತೆಗೆದುಕೊಂಡರೆ ನಿಮಗೆ ಏನು ತೊಂದರೆಯಾಗುತ್ತಿತ್ತು. ಈ ಹಿಂದೆ ಸದನದಲ್ಲಿ ಏಕೆ ಉತ್ತರವನ್ನು ಕೊಟ್ಟಿದ್ದೀರಿ ಮತ್ತು ಸದನದಲ್ಲಿ ಏಕೆ ಭರವಸೆಯನ್ನು ಕೊಟ್ಟಿದ್ದೀರಿ? ನೀವು ಹೊಸದಾಗಿ ಸಚಿವರಿದ್ದೀರಿ.

**ಶ್ರೀ ಸಿ. ಪುಟ್ಟರಂಗ ಶೆಟ್ಟಿ (ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)**:- ಮಾನ್ಯ ಸಭಾಪತಿಯವರೇ, ಮುಂದೆ ಏನು ಮಾಡಬೇಕೆಂಬುದರ ಬಗ್ಗೆ ನಾವು ಕ್ರಮ ಜರುಗಿಸುತ್ತೇವೆ.

**ಸಭಾಪತಿಯವರು**:- ಮಾನ್ಯ ಸಚಿವರು ಹೊಸದಾಗಿ ಬಂದಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೊಸದಾಗಿ ಬಂದಿದ್ದಾರೆ. ಅವರಲ್ಲಿ ಗೌರವದಿಂದ ನಾನು ವಿನಂತಿಸುತ್ತೇನೆ. ದಯವಿಟ್ಟು ನಿಯಮ 330 ರಡಿಯಲ್ಲಿ ಉತ್ತರ ಕೊಡುವಾಗ, ಆ ಬಡವರಿಗಾದಂತಹ ಅನ್ಯಾಯವನ್ನು ಸರಿಪಡಿಸುತ್ತೇವೆಂದು ತಾವು ಹೇಳಬೇಕು. ಇದರಲ್ಲಿ ಯಾವ ರಾಜಕಾರಣವೂ ಮತ್ತು ಗೊಂದಲವೂ ಇಲ್ಲ. ಸುಮಾರು ಎಂಟು-ಹತ್ತು ವರ್ಷಗಳಿಂದ ಕೆಲಸ ಮಾಡಿಕೊಂಡಿದ್ದವರನ್ನು ನಡು ಬೀದಿಯಲ್ಲಿ ಕೈಬಿಟ್ಟಿರುವುದು ಸರಿಯಲ್ಲ. ಆಯಿತು ತಾವು ಹೇಳಿ.

**ಶ್ರೀ ಪ್ರಿಯಾಂಕ ಖರ್ಗೆ (ಸಮಾಜ ಕಲ್ಯಾಣ ಸಚಿವರು)**:- ಮಾನ್ಯ ಸಭಾಪತಿಯವರೇ, ಮೊನ್ನೆ ಅವರು ಫ್ರೀಡಂ ಪಾರ್ಕ್‌ನಲ್ಲಿ ಧರಣಿ ಕುಳಿತಿದ್ದಂತಹ ಸಂದರ್ಭದಲ್ಲಿ ನಾನು ಹೋಗಿದ್ದೆ. ಅಲ್ಲಿ ಸಾವಿರ ಜನ ನಮ್ಮ ಇಲಾಖೆಯವರು ಮತ್ತು ಮೂರುವರೆ ಸಾವಿರ ಜನರು ಹಿಂದುಳಿದ ವರ್ಗಗಳ ಇಲಾಖೆಯವರು ಇದ್ದಾರೆ. ಅವರು ಹೇಳಿರುವ ಹಾಗೆ ಮಾನವೀಯತೆಯ ದೃಷ್ಟಿಯಿಂದ consider ಮಾಡುತ್ತೇವೆ. ಅವರಿಗೆ ನಾನು ಎರಡು ದಿವಸಗಳ ಕಾಲಾವಕಾಶವನ್ನು ಕೇಳಿದ್ದೇನೆ. ಇವತ್ತು ಮಧ್ಯಾಹ್ನ ಒಂದು ಗಂಟೆಗೆ ಸಾಹೇಬರ ಕಛೇರಿಯಲ್ಲಿ ಒಂದು ಮೀಟಿಂಗ್ ಮಾಡಿ, ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ ಮತ್ತು ಸಾಹೇಬರ ಗಮನಕ್ಕೂ ತೆಗೆದುಕೊಂಡು ಬರುತ್ತೇವೆ. ಯಾರಿಗೂ ಕೈಬಿಡುವ ಪ್ರಶ್ನೆಯಿಲ್ಲ. ಅದನ್ನು ಯಾವ್ಯಾವ ರೀತಿ ಮಾಡಬೇಕು ಮತ್ತು ಮಾನವೀಯತೆಯ ದೃಷ್ಟಿಯಿಂದ ನಾವು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವರಿಗೆ ಯಾವ ರೀತಿ ಪದೋನ್ನತಿ ಮಾಡಬೇಕು ಅಥವಾ ಬೇರೆ ರೀತಿಯಲ್ಲಿ ಅವರಿಗೆ ನಾವು accommodate ಮಾಡಬೇಕೆಂಬುದನ್ನು ನೋಡಿಕೊಂಡು ಮಾಡುತ್ತೇವೆ.

**ಸಭಾಪತಿಯವರು:–** ಮಾನ್ಯ ರವಿಕುಮಾರ್‌ರವರು

**ಶ್ರೀ ಎನ್. ರವಿಕುಮಾರ್ (ವಿಧಾನ ಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಾದ ಪ್ರಿಯಾಂಕ ಖರ್ಗೆಯವರು ಶಹಾಬಾದ್‌ನ ಒಂದು ಹಾಸ್ಟೆಲ್‌ಗೆ ಭೇಟಿ ಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ನಾನು ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ರಾಜ್ಯದಲ್ಲಿರುವ ಹಲವು ಹಾಸ್ಟೆಲ್‌ಗಳು ನರಕ ಸದೃಶ್ಯವಾಗಿವೆ.

**ಸಭಾಪತಿಯವರು:–** ಖಾಯಂ ಮಾಡುವ ವಿಷಯದ ಬಗ್ಗೆ ಮಾತನಾಡಿ. ಆ ವಿಷಯ ಬೇಡ.

**ಶ್ರೀ ಎನ್. ರವಿಕುಮಾರ್ :–** ಮಾನ್ಯ ಸಭಾಪತಿಯವರೇ, ಆ ವಿಷಯದ ಬಗ್ಗೆಯೇ ಮಾತನಾಡುತ್ತೇನೆ. ಹತ್ತು ವರ್ಷಗಳಿಂದ ಕೆಲಸ ಮಾಡುವಂತಹ ಸಿಬ್ಬಂದಿಯನ್ನು ತೆಗೆದು ಹಾಕಿರುವುದರಿಂದ, ಮುಂದಿನ ಜೀವನ ಪರಿಸ್ಥಿತಿ ಏನೆಂಬ ವಿಷಯದ ಬಗ್ಗೆ ಮತ್ತು ನನ್ನ ಪ್ರಕಾರ ಯಾರ್‍ಯಾರನ್ನು ತೆಗೆದು ಹಾಕಿದ್ದಾರೆ ಅವರನ್ನೆಲ್ಲಾ ತೆಗೆದುಕೊಳ್ಳಬೇಕು. ಇಲ್ಲವಾದರೆ ಅವರ ಜೀವನ footpath ಗೆ ಬರುತ್ತದೆ.

**ಸಭಾಪತಿಯವರು:–** ಆಯಿತು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ,

**ಸಭಾಪತಿಯವರು:–** ಮಾನ್ಯ ಪೂಜಾರಿಯವರೇ, ಒಂದು ನಿಮಿಷ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಈ ಭರವಸೆಯೂ ಕೂಡ ವ್ಯರ್ಥವಾಗಬಾರದು. ದಯವಿಟ್ಟು, ಪುನಃ ಇವರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕು ಎಂದು ವಿನಂತಿ ಮಾಡುತ್ತೇನೆ.

**ಸಭಾಪತಿಯವರು:–** ಆಯಿತು ಹೇಳುತ್ತೇನೆ. ಮಾನ್ಯ ಸಚಿವರು ತಾವು ಸಭೆ ಮಾಡಿ, ಇದೊಂದು ಗಾಂಭೀರ್ಯವಾದಂತಹ ವಿಷಯ ಎಂಬುದು ನನಗೂ ಕೂಡ ಅನಿಸುತ್ತದೆ. ದಯವಿಟ್ಟು, ನೀವು ಇದನ್ನು ಚರ್ಚೆ ಮಾಡಿ, ಒಂದು ಹಂತಕ್ಕೆ ಬಂದು ಮತ್ತು ಸ್ಪಷ್ಟವಾದಂತಹ ಉತ್ತರವನ್ನು ನಾಳೆ ಸದನದಲ್ಲಿ ಹೇಳಬೇಕು. ಈಗ ಮಾನ್ಯ ಕಾರ್ಯದರ್ಶಿಗಳು...

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 4. ಸಭೆಯ ಮುಂದಿಡಲಾದ ಕಾಗದಪತ್ರಗಳು

**ಕಾರ್ಯದರ್ಶಿಗಳು, ಕರ್ನಾಟಕ ವಿಧಾನ ಪರಿಷತ್ತು**:-ಮಾನ್ಯ ಸಭಾಪತಿಯವರೇ, ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಷ್ಟ್ರಪತಿಯವರಿಂದ ಹಾಗೂ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

## 5. ಪ್ರಕಟಣೆ

**ಸಭಾಪತಿಯವರು**:- ಕಾರ್ಯಕಲಾಪಗಳ ಸಲಹಾ ಸಮಿತಿಯನ್ನು ಹೊಸದಾಗಿ ರಚನೆಯನ್ನು ಮಾಡಲಾಗಿದೆ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆಯ ನಿಯಮ 222ರ ಮೇರೆಗೆ 135ನೇ ಅಧಿವೇಶನದಲ್ಲಿ ಕಾರ್ಯಕಲಾಪಗಳ ಸಲಹಾ ಸಮಿತಿಯನ್ನು ಈ ಮುಂದಿನಂತೆ ರಚಿಸಲಾಗಿರುತ್ತದೆ. ಡಾ. ಜಯಮಾಲ ರಾಮಚಂದ್ರ, ಮಾನ್ಯ ಸಭಾನಾಯಕರು ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಹಿರಿಯ ನಾಗರೀಕರು ಹಾಗೂ ವಿಕಲಚೇತನರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು, ಶ್ರೀ ಕೋಟ ಶ್ರೀನಿವಾಸ ಪೂಜಾರಿ, ವಿಧಾನ ಪರಿಷತ್ತಿನ ಮಾನ್ಯ ವಿರೋಧ ಪಕ್ಷದ ನಾಯಕರು, ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ, ವಿಧಾನ ಪರಿಷತ್ತಿನ ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು, ಶ್ರೀ ಎಸ್.ಆರ್. ಪಾಟೀಲ್, ವಿಧಾನ ಪರಿಷತ್ತಿನ ಸದಸ್ಯರು, ಶ್ರೀ ಕೆ.ಬಿ. ಶಾಣಪ್ಪ, ವಿಧಾನ ಪರಿಷತ್ತಿನ ಸದಸ್ಯರು, ಶ್ರೀ ಕೆ.ಟಿ. ಶ್ರೀಕಂಠೇಗೌಡ, ವಿಧಾನ ಪರಿಷತ್ತಿನ ಸದಸ್ಯರು ಮತ್ತು ವಿಶೇಷ ಆಹ್ವಾನಿತರಾಗಿ ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಕಾನೂನು ಸಂಸದೀಯ ವ್ಯವಹಾರಗಳ ಸಚಿವರು ಕಾರ್ಯಕಲಾಪಗಳ ಸಲಹಾ ಸಮಿತಿಯ ಅಧ್ಯಕ್ಷರಾಗಿರುತ್ತಾರೆ. ಈಗ ಶ್ರೀ ಐವನ್ ಡಿ'ಸೋಜಾರವರು ವಂದನಾ ನಿರ್ಣಯವನ್ನು ಸೂಚಿಸುವುದು.

**ಶ್ರೀ ಐವನ್ ಡಿ'ಸೋಜಾ (ನಾಮ ನಿರ್ದೇಶಿತರು)**:- ಮಾನ್ಯ ಸಭಾಪತಿಯವರೇ, 2018 ನೇ ಜುಲೈ 2 ರಂದು ಘನತೆವೆತ್ತ ರಾಜ್ಯಪಾಲರು ವಿಧಾನ ಮಂಡಲದ ಸದಸ್ಯರುಗಳನ್ನುದ್ದೇಶಿಸಿ, ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಪರಿಷತ್ತಿನ ಸದಸ್ಯರಾದ ನಾವು ಮಾನ್ಯ ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆಂದು ನಾನು ಸೂಚಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಶ್ರೀಕಂಠೇಗೌಡರು, ಅನುಮೋದಿಸುವುದು.

**ಶ್ರೀ ಕೆ.ಟಿ. ಶ್ರೀಕಂಠೇಗೌಡರು (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ರಾಜ್ಯದ ಘನತೆವೆತ್ತ ರಾಜ್ಯಪಾಲರು ನಿನ್ನೆ ಮಂಡನೆ ಮಾಡಿದಂತಹ ಭಾಷಣದ ಬಗ್ಗೆ ಚರ್ಚೆಯನ್ನು ಕೈಗೆತ್ತಿಕೊಳ್ಳುವುದಕ್ಕೆ ಗೌರವಾನ್ವಿತರಾದ ಶ್ರೀ ಐವನ್ ಡಿ'ಸೋಜಾರವರು ಸೂಚನೆ ಮಾಡಿದ್ದಾರೆ. ಅವರ ಸೂಚನೆಯನ್ನು ನಾನು ಅತ್ಯಂತ ಪ್ರೀತಿ ಪೂರ್ವಕವಾಗಿ ಅನುಮೋದಿಸುತ್ತೇನೆ.

**ಸಭಾಪತಿಯವರು:-** ಒಂದು ನಿಮಿಷ ಪ್ರಕಟಣೆ ಇದೆ.

## ಪ್ರಕಟಣೆ

**ಸಭಾಪತಿಯವರು:-** ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಹಣಮಂತ ರುದ್ರಪ್ಪ ನಿರಾಣಿ ಅವರು ಪೂರ್ವನಿಯೋಜಿತ ಕಾರ್ಯಕ್ರಮದ ನಿಮಿತ್ತ ವಿದೇಶ ಪ್ರವಾಸ ಕೈಗೊಳ್ಳಲಿರುವುದರಿಂದ ದಿನಾಂಕ: 03.07.2018 ರಿಂದ 12.07.2018 ರವರೆಗೆ ಸದನದ ಉಪವೇಶನಗಳಿಗೆ ಗೈರು ಹಾಜರಾಗಲು ಅನುಮತಿಯನ್ನು ಕೋರಿರುತ್ತಾರೆ.

ಸದರಿಯವರ ಗೈರು ಹಾಜರಿಗೆ ಸದನದ ಸಹಮತಿ ಇದೆಯೆಂದು ಭಾವಿಸುತ್ತೇನೆ.

ಈಗ ಮಾನ್ಯ ಐವನ್ ಡಿ'ಸೋಜಾರವರು

**ಶ್ರೀ ಐವನ್ ಡಿ'ಸೋಜಾ (ನಾಮ ನಿರ್ದೇಶಿತರು):-** ಚರ್ಚೆ ಮಧ್ಯೆ ನಿಯಮ 330 ರನ್ನು ತೆಗೆದುಕೊಳ್ಳೋಣ. ನಾವಿಬ್ಬರು ಇಲ್ಲಿಯೇ ಇದ್ದೇವೆ. ಸಚಿವರು ಇದ್ದಾರೆ ನಿಯಮ 330 ತೆಗೆದುಕೊಂಡು ಮಧ್ಯಾಹ್ನದ ಮೇಲೆ ಅದನ್ನು ತೆಗೆದುಕೊಳ್ಳಬಹುದು.

**ಸಭಾಪತಿಯವರು:-**ಇನ್ನೂ ಟೈಮ್ ಆಗಿಲ್ಲ. ಮಧ್ಯಾಹ್ನದ ಮೇಲೆ ತೆಗೆದುಕೊಳ್ಳೋಣ.

**ಶ್ರೀ ಐವನ್ ಡಿ'ಸೋಜಾ :-** ನಾವು ಮಧ್ಯಾಹ್ನದ ಮೇಲೆ ಮಾತನಾಡುತ್ತೇವೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡರು:-** ಮಾನ್ಯ ಸಭಾಪತಿಯವರೇ, ಹೊಸದಾಗಿ ...

**ಶ್ರೀ ಐವನ್ ಡಿ'ಸೋಜಾ (ನಾಮ ನಿರ್ದೇಶಿತರು):-** ಸಣ್ಣ ನೀರಾವರಿ ಸಚಿವರು ...

**ಶ್ರೀ ಕೆ.ಟಿ. ಶ್ರೀಕಂಠೇಗೌಡರು (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಹೊಸದಾಗಿ ...

**ಸಭಾಪತಿಯವರು:-** ಇಲ್ಲ ನೀವು ಮಾತನಾಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ. ಶ್ರೀಕಂಠೇಗೌಡರು (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಶ್ರೀಮತಿ ತಾರಾ ಅನುರಾಧರವರದ್ದು ಮತ್ತು ನನ್ನದು ಗಮನ ಸೆಳೆಯುವ ಸೂಚನೆ ಇದೆ. ಅದನ್ನು ಮುಗಿಸಿಬಿಡೋಣ.

**ಸಭಾಪತಿಯವರು;–** ಮುಗಿಸಿದ ನಂತರ ಇದನ್ನು ತೆಗೆದುಕೊಳ್ಳಬೇಕು. ಮತ್ತೆ ಮುಂದೆ ಹೋಗುವ ಹಾಗೇ ಇಲ್ಲ. ಈಗ ಗಮನ ಸೆಳೆಯುವ ಸೂಚನೆ. ಶ್ರೀಮತಿ ತಾರಾ ಅನುರಾಧರವರದು.

## 6. ಗಮನ ಸೆಳೆಯುವ ಸೂಚನೆ

**ವಿಷಯ:** ಕನ್ನಡ ಚಲನ ಚಿತ್ರೋದ್ಯಮದ ಸಮಗ್ರ ಅಭಿವೃದ್ಧಿಗಾಗಿ ಸರ್ಕಾರವು ಸಹಕಾರ ನೀಡುವ ಬಗ್ಗೆ

**ಶ್ರೀಮತಿ ತಾರಾ ಅನುರಾಧ (ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಕನ್ನಡ ಚಲನಚಿತ್ರೋದ್ಯಮದ ಸಮಗ್ರ ಅಭಿವೃದ್ಧಿಗಾಗಿ ಸರ್ಕಾರವು ಸಹಕಾರ ನೀಡುವ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

**ಸಭಾಪತಿಯವರು:–** ಈಗಾಗಲೇ ಶ್ರೀಮತಿ ತಾರಾ ಅನುರಾಧರವರು ಸರ್ಕಾರದ ಗಮನ ಸೆಳೆದಿದ್ದಾರೆ. ಇವರಿಗೆ ಉತ್ತರವನ್ನು ಯಾರು ಹೇಳುತ್ತೀರಿ?

**ಡಾ. ಜಯಮಾಲ ರಾಮಚಂದ್ರ, (ಸಭಾನಾಯಕರು ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಹಿರಿಯ ನಾಗರೀಕರು ಹಾಗೂ ವಿಕಲಚೇತನರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):–** ನಾನೇ ಉತ್ತರವನ್ನು ಹೇಳುತ್ತೇನೆ.

**ಶ್ರೀಮತಿ ತಾರಾ ಅನುರಾಧ (ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ತಮ್ಮ ಅನುಮತಿಯನ್ನು ಪಡೆದು ...

**ಸಭಾಪತಿಯವರು:–** ಅಲ್ಲ ನಿಮ್ಮ ಉತ್ತರ ಇದೆಯೇ ಇಲ್ಲವೇ

**ಶ್ರೀಮತಿ ತಾರಾ ಅನುರಾಧ (ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ನನ್ನ ಮಾತಿನ ಬಗ್ಗೆ ಅವರು ಉತ್ತರ ಕೊಡುವುದಕ್ಕೆ ರೆಡಿಯಿದ್ದಾರೆ. ಏಕೆಂದರೆ, ಅವರು ..

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು**:- ಒಂದು ನಿಮಿಷ. ನಿಯಮಗಳು ಏನು ಹೇಳುತ್ತದೆ ಎಂದರೆ ಗಮನ ಸೆಳೆಯುವ ಸೂಚನೆಗೆ ಉತ್ತರವನ್ನು ಸರ್ಕಾರದ ಮಂತ್ರಿಗಳು ಓದಬೇಕು. ಆಮೇಲೆ ಸದಸ್ಯರು clarification ಕೇಳಬೇಕು.

**ಡಾ. ಜಯಮಾಲ ರಾಮಚಂದ್ರ, (ಸಭಾನಾಯಕರು)**:- ನಾನು ಮಾನ್ಯ ಮುಖ್ಯ ಮಂತ್ರಿಗಳಿಂದ ನಾಳೆ ಉತ್ತರವನ್ನು ತರಿಸಿಕೊಡುತ್ತೇನೆ.

**ಸಭಾಪತಿಯವರು**:- ಹಾಗಾಗುವುದಿಲ್ಲ. ಮಾನ್ಯ ಸದಸ್ಯರೇ ಏನು ಹೇಳಿ.

**ಶ್ರೀಮತಿ ತಾರಾ ಅನುರಾಧ (ನಾಮ ನಿರ್ದೇಶಿತರು)**:- ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳನ್ನು ಹೇಳುತ್ತಾ, ಈ ಚಿತ್ರರಂಗದ ಬಗ್ಗೆ ನಾನು ಒಬ್ಬ ಸದಸ್ಯಳಾಗಿ ಮಾತನಾಡುವುದಕ್ಕೆ ಹೆಮ್ಮೆ ಪಡುತ್ತೇನೆ. ಸಿನಿಮಾ ಎಲ್ಲರಿಗೂ ಗೊತ್ತಿರುವ ಹಾಗೆ ಒಂದು ಮಾಯಾಲೋಕ. ಅರ್ಥವಾಗದಿರುವವರಿಗೂ ಅರ್ಥ ಮಾಡಿಸುವಂತಹ ಶಕ್ತಿ ನಮ್ಮ ಸಿನಿಮಾಗಳಿಗೆ ಇವೆ. ಸಿನಿಮಾ ಒಂದು ಕಲೆಯ ಭಾಗ. ನಮ್ಮ ದೇಶದಲ್ಲಿ ಹಾಡುಗಾರಿಕೆ, ಸಂಗೀತ, ನೃತ್ಯ, ನಾಟಕ, ಸಾಹಿತ್ಯ ಇತರ ಹಲವಾರು ಪ್ರಾಕಾರಗಳಲ್ಲಿ ಕಲೆಗಳು ಇದ್ದು, ಎಲ್ಲಾ ಪ್ರಾಕಾರಗಳಲ್ಲಿ ಒಳಗೊಂಡ ಒಂದು ಕಲೆಯಂತಿದ್ದರೆ ಅದು ಸಿನಿಮಾ ಎಂದು ನಾನು ಗರ್ವ ಪಡುತ್ತೇನೆ. ಸಿನಿಮಾ  ಇದು ನೇರವಾಗಿ ನೋಡುಗನ ಹೃದಯಕ್ಕೆ ಮುಟ್ಟುತ್ತದೆ. ಅದಕ್ಕೆ ಜಾತಿ, ಧರ್ಮ, ಮತ, ವಿದ್ಯೆಯೂ ಕೂಡ ಬೇಕಾಗಿರುವುದಿಲ್ಲ. ಸಿನಿಮಾ ಎಷ್ಟೇ ಬಣ್ಣಗಳಿಂದ ಕೂಡಿದ್ದರೂ ಅದು ಕೇವಲ ಮನೋರಂಜನೆ ಕಲೆಯಂತಾಗಿದ್ದರೂ ಕೂಡ, ಸಿನಿಮಾ ಹಲವರಿಗೆ ಬದುಕು ಆಗಿದೆ. ಎಷ್ಟೋ ಮಂದಿಗೆ ಮಾರ್ಗದರ್ಶನ, ಪ್ರೇರಣೆ, ಪಾಠ ಹೇಳಿಕೊಟ್ಟಿದೆ ಎಂದು ಹೇಳಿ ದೊಡ್ಡವರು ಮಾತನಾಡುವ ಭಾಷಣಗಳಲ್ಲಿ ನಾವು ನೋಡಿದ್ದೇವೆ. ಸಿನಿಮಾ ನಂಬಿ ಎಷ್ಟೋ ಕುಟುಂಬಗಳು ಇವತ್ತು ಬದುಕುತ್ತಿವೆ. ಇದು ಉದ್ಯೋಗವಾಗಿ ಒಂದು ಉದ್ಯಮವಾಗಿ, ಕೂಡ ಬೆಳೆದಿದೆ. ಪ್ರೇಕ್ಷಕ ಸಿನಿಮಾವನ್ನು ಬರೀ ನೋಡುವುದಲ್ಲ, ಅದನ್ನು ಮನೆಗೆ ತೆಗೆದುಕೊಂಡು ಹೋಗುತ್ತಾನೆ, ಅದನ್ನು ಜೀರ್ಣಿಸಿಕೊಳ್ಳುತ್ತಾನೆ ಮತ್ತು ಅದನ್ನು ಬದುಕಾಗಿ ರೂಪಿಸಿಕೊಳ್ಳುತ್ತಾನೆ. ಏನು ತೆಗೆದುಕೊಳ್ಳಬೇಕೋ, ಏನು ತೆಗೆದುಕೊಳ್ಳಬಾರದೋ ಎಂಬ ನಿರ್ಣಯವನ್ನು ಮಾಡುವಂತಹದ್ದು ಯಾವುದಾದರೂ ಇದ್ದರೆ, ಅದು ಸಿನಿಮಾ ಮಾತ್ರ. ಈ ದಿನ ಭಾರತೀಯ ಚಲನಚಿತ್ರರಂಗ ಪ್ರಪಂಚದಲ್ಲಿಯೇ ದೊಡ್ಡ ಉದ್ಯಮವಾಗಿ ಬೆಳೆದಿದೆ.

(ಮುಂದು...)

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

08/03.02.2018/11.20/ಎಂಎಂ-ಕೆಎಸ್

(ಸಭಾಪತಿಯವರ ಉಪಸ್ಥಿತಿ)

**ಶ್ರೀಮತಿ ತಾರಾ ಅನೂರಾಧ (ಮುಂದು)**

ಉದಾಹರಣೆಗೆ ಹೇಳುವುದಾದರೆ 2016-17ರಲ್ಲಿ ಬೇರೆ ಬೇರೆ ಭಾಷೆಗಳಲ್ಲಿ ಸುಮಾರು 1,600 ಚಿತ್ರಗಳು ಬಿಡುಗಡೆಯಾಗಿವೆ. ಇದರಲ್ಲಿ ಸುಮಾರು 330 ರಿಂದ 340 ಹಿಂದಿ ಸಿನಿಮಾಗಳಾದರೆ, 04 ದಕ್ಷಿಣ ಭಾರತದ ಭಾಷೆಯ ಸುಮಾರು 950 ಸಿನಿಮಾಗಳು ಬಿಡುಗಡೆಯಾಗಿವೆ. ಬಂಗಾಳಿ, ಮರಾಠಿ ಭಾಷೆಯ 309 ಸಿನಿಮಾಗಳು ಬಿಡುಗಡೆಯಾದರೆ, ಇತರೆ ಭಾಷೆಗಳ 320 ಸಿನಿಮಾಗಳು ಬಿಡುಗಡೆಯಾಗಿವೆ. ಅದರಲ್ಲಿ ವಾರ್ಷಿಕವಾಗಿ ಸುಮಾರು 125 ರಿಂದ 175ವರೆಗೂ ಕನ್ನಡ ಸಿನಿಮಾಗಳು ಬಿಡುಗಡೆಯಾಗುತ್ತವೆ. ಈ ವರ್ಷ ಕೇವಲ ಆರು ತಿಂಗಳನಲ್ಲಿ ಸುಮಾರು 100ಕ್ಕೂ ಹೆಚ್ಚು ಸಿನಿಮಾಗಳು ಬಿಡುಗಡೆಯಾಗಿವೆ ಎಂಬ ಒಂದು ವರದಿ ಇದೆ. ಆದರೆ ಅದರಲ್ಲಿ ಎಷ್ಟು ಸಿನಿಮಾಗಳು ದುಡ್ಡು ಮಾಡಿವೆ ಎಂದರೆ, ಬೆರಳೆಣಿಕೆಯಷ್ಟು ಸಿನಿಮಾಗಳು ಮಾತ್ರ ಹಣ ಗಳಿಸಿವೆ. ಸತ್ಯವೇನೆಂದರೆ, ಇದು 'ಡಿಜಿಟಲ್ ಯುಗ' ವಾಗಿದೆ. ಅಂದರೆ ನಾವು ಈಗ ವಿದ್ಯುನ್ಮಾನ ಯುಗಕ್ಕೆ ಬಂದಿದ್ದೇವೆ. ಇದರಿಂದ ಇಡೀ ಉದ್ಯಮದಲ್ಲಿಯೇ ದೊಡ್ಡ ಬದಲಾವಣೆಗಳಾಗಿವೆ. ಸಿನಿಮಾ ವ್ಯಾಪಾರಗಳಲ್ಲಿ (Film business), ಚಿತ್ರ ನಿರ್ಮಾಣದಲ್ಲಿ (Film making), ಹಂಚಿಕೆಯಲ್ಲಿ (Distribution) ಮತ್ತು ಪ್ರದರ್ಶನ (Exhibition) ಮಾಡುವುದರಲ್ಲಿ ದೊಡ್ಡ ಬದಲಾವಣೆಗಳಾಗಿವೆ. ಇದು ನಮ್ಮ ಊಹೆಗೆ ಮೀರಿದ್ದಾಗಿದೆ. ಇಂದು ಒಂದೆರಡು ವಾರಗಳಲ್ಲಿ ಹಿಂದಿ ಸಿನಿಮಾಗಳು ಅದರಲ್ಲಿಯೂ ಸೂಪರ್ ಸ್ಟಾರ್‌ಗಳು ನಟಿಸಿದ್ದರೆ ಒಂದೆರಡು ವಾರದಲ್ಲಿಯೇ ಭಾರತ ದೇಶ ಹಾಗೂ ಹೊರ ದೇಶಗಳ multiplex theatre ಗಳಲ್ಲಿ ಪ್ರದರ್ಶನವಾಗುತ್ತದೆ ಎಂಬುದು ನಿಮಗೆಲ್ಲರಿಗೂ ಗೊತ್ತಿದೆ. ಅದು ಸುಮಾರು 100 ರಿಂದ 200 ಕೋಟಿ ರೂಪಾಯಿಗಳ ಗಳಿಕೆಯನ್ನು ಪಡೆದುಕೊಳ್ಳುತ್ತದೆ. ಇಂತಹ ಅನುಕೂಲವಿರುವುದು ಕೇವಲ ಹಿಂದಿ ಸಿನಿಮಾಗಳಿಗೆ ಹಾಗೂ ಕೆಲವು ಸೂಪರ್ ಸ್ಟಾರ್‌ಗಳು ನಟಿಸಿರುವ ಚಿತ್ರಗಳಿಗೆ ಮಾತ್ರ. ಅವರು ಹೂಡಿದ ಹಣ ಎರಡು ಮೂರು ವಾರದಲ್ಲಿ ವಾಪಸ್ಸು ಬರಬಹುದು. ಆದರೆ ನಮ್ಮ ಕನ್ನಡ ಚಿತ್ರಗಳು ಎಲ್ಲಾ ರೀತಿಯಲ್ಲಿಯೂ ಸೊರಗಿ ಹೋಗುತ್ತಿವೆ. ಇದು ಒಂದು ರೀತಿಯಲ್ಲಿ ನಿಜ. ನಾವು ತಂತ್ರಜ್ಞಾನದಲ್ಲಿ ಬೆಳೆದಿದ್ದೇವೆ, ನಮ್ಮಲ್ಲಿ ಗಟ್ಟಿಯಾದ ಪ್ರತಿಭಾವಂತರಿದ್ದಾರೆ. ಒಂದೊಂದು ಬಾರಿ ಹೂಡಿಕೆಯಲ್ಲಿಯೂ ಬೇರೆ ರಾಜ್ಯಗಳಿಗೆ ಸ್ಪರ್ಧೆ ಕೊಡಬಹುದಾದಂತಹ ಚಿತ್ರಗಳು ನಮ್ಮಲ್ಲಿ ಬರುತ್ತಿವೆ. ಆದರೆ ಗಳಿಕೆಯಲ್ಲಿ ಬಂದಾಗ ಎಷ್ಟು ಚಿತ್ರಗಳು ಹೂಡಿಕೆಯನ್ನು ವಾಪಸ್ ಗಳಿಸಿವೆ? ಇಲ್ಲಿ ಕೂಡ ಗಳಿಕೆಯಲ್ಲಿ ಬೆರಳೆಣಿಕೆಯಷ್ಟು ಚಿತ್ರಗಳು ಮಾತ್ರ ಹಣ ಮಾಡಿವೆ. ಚಿತ್ರ ನಿರ್ಮಾಪಕರು ಎಂದರೆ ಅನ್ನದಾತರಿದ್ದ ಹಾಗೆ. ಸಿನಿಮಾದವರಿಗೆಲ್ಲಾ ನಿರ್ಮಾಪಕರೆಂದರೆ, ದೇವರ ಸಮಾನ, ಅನ್ನದಾತರು,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉದ್ಯೋಗ ಕೊಡುವವರು, ಹಣವನ್ನು ಕೊಡುವವರಾಗಿದ್ದಾರೆ. ನಿರ್ಮಾಪಕರಿಲ್ಲದಿದ್ದರೆ ಚಿತ್ರಗಳೇ ಇಲ್ಲ, ಒಂದು ರೀತಿಯಲ್ಲಿ ಚಿತ್ರರಂಗವು ಬೆಳೆಯುವುದಕ್ಕೆ ಸಾಧ್ಯವೇ ಇಲ್ಲ. ಅಂತಹ ನಿರ್ಮಾಪಕರು ಇಂದು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಉದಾಹರಣೆಗೆ ಹೇಳುವುದಾದರೆ, ತಂತ್ರಜ್ಞಾನ ಬೆಳೆದ ಮೇಲೆ UFO Moviez India Limited, Qube Cinema Technologies and Scrabble Entertainment Limited ಸಂಸ್ಥೆಗಳ ಒಡನಾಟ; ಇಂದಿನ ಪರಿಸ್ಥಿತಿಯಲ್ಲಿ print ಇಲ್ಲ, ಮೊದಲಾದರೆ ರೀಲ್‌ಗಳನ್ನು raw stock ತಂದು ಪ್ರಿಂಟ್ ಸಿನಿಮಾಗಳನ್ನು ಒಂದು ಥಿಯೇಟರ್‌ನಿಂದ ಮತ್ತೊಂದು ಥಿಯೇಟರ್‌ಗಳಿಗೆ ತೆಗೆದುಕೊಂಡು ಹೋಗುತ್ತಿದ್ದರು. ಈಗ software ಮೂಲಕ upload ಮಾಡಿ satellite ಮೂಲಕ ಚಿತ್ರಮಂದಿರಗಳಲ್ಲಿ ಸಿನಿಮಾ ಪ್ರದರ್ಶನಗೊಳ್ಳುತ್ತಿದೆ. ಅದರಲ್ಲಿ UFO Moviez India Limited, Qube Cinema Technologies and Scrabble Entertainment Limited ಎಂಬ ಸಂಸ್ಥೆಗಳು ಈಗಾಗಲೇ ಕೆಲಸ ಮಾಡುತ್ತಿವೆ. ಈ ಸಂಸ್ಥೆಗಳು ತೆಗೆದುಕೊಳ್ಳುತ್ತಿರುವ ಬಾಡಿಗೆ ದರದ ಬಗ್ಗೆ ಹೇಳುವುದಾದರೆ, satellite ಗೆ ಕೊಡುವ ಬಾಡಿಗೆ ದರ 100 ಪಟ್ಟು ಹೆಚ್ಚಾಗಿದೆ. ಅದನ್ನು ದಯಮಾಡಿ ಶೇ.50ರಷ್ಟು ಇಳಸಬೇಕು. ಸರ್ಕಾರವು ಇದಕ್ಕೆ ಗಟ್ಟಿಯಾಗಿ ಒಂದು ಚರ್ಚೆಯನ್ನು ಮಾಡಬೇಕು. ಚಿತ್ರ ಬಿಡುಗಡೆಯಾಗುವ ಮೊದಲು ಪದ್ಧತಿಯಂತೆ censor ಆಗಬೇಕಾಗಿತ್ತು. ಆದರೆ ಈಗಿರುವ ಪದ್ಧತಿಯಲ್ಲಿ ಸಿನಿಮಾಗಳು satelliteನ ಮೂಲಕ ಬಿಡುಗಡೆಯಾಗುತ್ತಿರುವುದರಿಂದ software ಮೂಲಕ satellite ಗೆ ಸಿನಿಮಾದ ಪ್ರಥಮ ಪ್ರತಿಯನ್ನು upload ಮಾಡಬೇಕಾದರೆ ಚೆನ್ನೈಗೆ ಅಥವಾ ಮುಂಬೈಗೆ ಹೋಗಬೇಕು, ಅದು ತಮಗೂ ಗೊತ್ತಿದೆ. ಪ್ರತಿ ಬಾರಿ ನಿರ್ಮಾಪಕರು ಚಿತ್ರ ನಿರ್ಮಾಣ, censor ಮಾಡಿಸುವುದಲ್ಲದೇ ಆ ಪ್ರಿಂಟ್ ಅನ್ನು upload ಮಾಡುವುದಕ್ಕೆ ಚೆನ್ನೈಗೆ ಹೋಗಬೇಕು ಅಥವಾ ಮುಂಬೈಗೆ ಹೋಗಬೇಕು. ಆ upload ಮಾಡುವ ಪದ್ಧತಿ ಬೆಂಗಳೂರಿನಲ್ಲಿಯೇ ಆಗುವ ರೀತಿ ಏನಾದರೂ ಕೆಲಸವನ್ನು ಮಾಡಬೇಕು. ನಿರ್ಮಾಪಕರು ಚಲನಚಿತ್ರ ಮಂದಿರಗಳಿಗೆ ಬಾಡಿಗೆ ಕೊಡುತ್ತಿದ್ದು, ಆ ಬಾಡಿಗೆಯನ್ನು ಮೊದಲು ಶೇಕಡಾವಾರು ಪ್ರಮಾಣದಲ್ಲಿ ಕಟ್ಟುವ ಹಾಗೆ ಮಾಡಬೇಕಾಗಿದೆ. ಈಗ ಬಾಡಿಗೆಯನ್ನು ಪೂರ್ತಿ ಕಟ್ಟಬೇಕಾಗಿದೆ. ಚಿತ್ರಮಂದಿರಗಳಿಗೆ ಒಂದು ವಾರಕ್ಕೆ ಸುಮಾರು 4.5 ರಿಂದ 5 ಲಕ್ಷ ರೂಪಾಯಿಗಳು ಬಾಡಿಗೆ ದರ ಇದೆ. ಮೆಜೆಸ್ಟಿಕ್ ಚಿತ್ರಮಂದಿರದಲ್ಲಿ ಒಂದು ಸಿನಿಮಾಗೆ ಒಂದು ವಾರಕ್ಕೆ ಸುಮಾರು 4.5 ಲಕ್ಷದಿಂದ 5 ಲಕ್ಷದವರೆಗೆ ಬಾಡಿಗೆ ದರ ಇದೆ. ಕೆಲವು ಚಿತ್ರಮಂದಿರಗಳು ಒಂದು ಸಿನಿಮಾಗೆ ಆರು ಲಕ್ಷ ರೂಪಾಯಿಗಳನ್ನು ತೆಗೆದುಕೊಳ್ಳುತ್ತವೆ. ಆ ಬಾಡಿಗೆಯನ್ನು ಬಿಟ್ಟು ಶೇಕಡಾವಾರು ದರವನ್ನು ತರಬೇಕು. ಹಿಂದೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಚಿತ್ರಮಂದಿರದ ಮಾಲೀಕರು ಒಂದು ಸಿನಿಮಾ ನಿರ್ಮಾಣವಾಗುತ್ತಿದೆ ಎಂದರೆ ಚಿತ್ರ ನಿರ್ಮಾಪಕನಿಗೆ ಮುಂಗಡ ಹಣವನ್ನು ಕೊಟ್ಟು ಆ ಸಿನಿಮಾವನ್ನು ನಮ್ಮ ಥಿಯೇಟರಿನಲ್ಲಿ ಬಿಡುಗಡೆ ಮಾಡಿ ಎಂದು ಕೇಳುತ್ತಿದ್ದರು. ಆದರೆ ಈಗ ಏನಾಗಿದೆ ಎಂದರೆ ನಿರ್ಮಾಪಕರೇ ಚಿತ್ರಮಂದಿರಗಳಿಗೆ ಮುಂಗಡ ಹಣವನ್ನು ಕಟ್ಟಬೇಕಾಗಿದೆ. ಮುಂಗಡ ಹಣವನ್ನು ಕೊಟ್ಟು ತಮ್ಮ ಸಿನಿಮಾ ಬಿಡುಗಡೆ ಮಾಡಲು ಚಿತ್ರಮಂದಿರವನ್ನು ಕೊಡಿ ಎಂದು ಕೇಳುವ ದುಸ್ಥಿತಿ ಬಂದಿದೆ. ಹಿಂದೆ ಪ್ರಿಂಟ್ (ರೀಲ್) ಪದ್ಧತಿಗಳಿದ್ದಾಗ ನಿರ್ಮಾಪಕರುಗಳು ಚಿತ್ರ ಮಂದಿರಗಳಿಗೆ ಬಾಡಿಗೆ ಹಣ ಕಟ್ಟುವುದನ್ನು ಬಿಟ್ಟರೆ ಬೇರೆ ಯಾವುದೇ ಹಣವನ್ನು ಕಟ್ಟುವ ಹಾಗೆ ಇರಲಿಲ್ಲ. ಹಿಂದೆ ಬಾಡಿಗೆ ಕಟ್ಟಿದರೆ ಚಿತ್ರಗಳನ್ನು ಸಿನಿಮಾ ಮಂದಿರದಲ್ಲಿ ಪ್ರದರ್ಶನ ಮಾಡುತ್ತಿದ್ದರು. ಆದರೆ ಈಗ ಏನಾಗಿದೆ ಎಂದರೆ, ನಿರ್ಮಾಪಕರು ಬಾಡಿಗೆಯನ್ನು ಕೊಡುವುದರ ಜೊತೆಗೆ UFO Moviez India Limited, Qube Cinema Technologies and Scrabble Entertainment Limited ಸಂಸ್ಥೆಗಳ ಬಾಡಿಗೆಯನ್ನು ಕೂಡ ಇವರೇ ಕಟ್ಟಬೇಕು. ಮಾನ್ಯ ಮುಖ್ಯಮಂತ್ರಿಯವರು ಚಿತ್ರರಂಗದ ಹಿನ್ನೆಲೆಯಿಂದಲೇ ಬಂದಿರುವುದರಿಂದ, ಅವರಿಗೂ ಚಿತ್ರರಂಗಕ್ಕೆ ಸಂಬಂಧ ಇರುವುದರಿಂದ ಅವರು ಇಂತಹ ಸಮಸ್ಯೆಗಳಿಗೆ ಸ್ಪಂದಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಈಗ Animal Board ನವರು ಚಲನಚಿತ್ರಗಳಲ್ಲಿ ಪ್ರಾಣಿಗಳನ್ನು ಕಥೆಗೆ ಪೂರಕವಾಗಿ ಬಳಸಿದ್ದರೆ ಅದಕ್ಕೂ ಕೂಡ Censor Board ನ ಅನುಮತಿ ಪಡೆಯಬೇಕು. ಒಂದು ಹಳ್ಳಿಯಲ್ಲಿ ಸಿನಿಮಾ ಚಿತ್ರೀಕರಣ ಮಾಡಬೇಕಾದರೆ, ಆ ದಾರಿಯಲ್ಲಿ ಯಾವುದೇ ಒಂದು ಕೋಳಿ, ಎತ್ತು, ಕುರಿ ಅಥವಾ ಎಮ್ಮೆಗಳು ಹೋಗಿದ್ದು ಕಾಣಿಸಿದರೆ ಅದಕ್ಕೆ ಅನುಮತಿ ಪಡೆಯಬೇಕಾಗುತ್ತದೆ. ನಿರ್ಮಾಪಕರು ಆ ಪ್ರಾಣಿಗಳಿಗೆ insurance ಮಾಡಿಸಬೇಕಾಗಿದೆ, ಅದಕ್ಕೆ medical certificate ಅನ್ನು ಪಡೆದುಕೊಳ್ಳಬೇಕಾಗಿದೆ. ಆ ರೀತಿಯ ಅನುಮತಿಯನ್ನು ಪಡೆದುಕೊಳ್ಳಲು ನಿರ್ಮಾಪಕರು ಚೆನ್ನೈಗೆ ಹೋಗಬೇಕಾಗಿದೆ. ಆ ರೀತಿಯ Censor Board ಬೆಂಗಳೂರಿನಲ್ಲಿಯೇ ಏಕೆ ಸ್ಥಾಪನೆ ಮಾಡಬಾರದು? ಈ ನೀತಿಯನ್ನು ಸ್ವಲ್ಪ ಸಡಿಲಿಸಬೇಕು, ಅದರ ಬಗ್ಗೆ ಚರ್ಚೆ ಮಾಡುವ ಅಗತ್ಯವಿದೆಯೆಂದು ಭಾವಿಸುತ್ತೇನೆ.

ಇನ್ನು ಚಿತ್ರೀಕರಣ ಮಾಡುವಾಗ ಪಡೆದುಕೊಳ್ಳಬೇಕಾದ 'ಅನುಮತಿ'ಯ ಬಗ್ಗೆ ಮಾತನಾಡುವುದಾದರೆ, ನಮ್ಮಲ್ಲಿ ಶೂಟಿಂಗ್ ಮಾಡಬೇಕಾದರೆ ಹತ್ತು ಇಲಾಖೆಗಳಿಂದ ಅನುಮತಿ ಪಡೆಯಬೇಕು. ಮೊದಲು ವಾರ್ತಾ ಇಲಾಖೆಯ ಅನುಮತಿ ಪಡೆದುಕೊಳ್ಳಬೇಕು. ನಂತರ ಪೋಲೀಸ್ ಇಲಾಖೆಯಿಂದ ಅನುಮತಿ ಪಡೆಯಬೇಕು ಮತ್ತು ಇನ್ನಾವುದೋ ಸಂಬಂಧಪಟ್ಟ ಇಲಾಖೆಯ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅನುಮತಿಯನ್ನು ಪಡೆದುಕೊಳ್ಳಬೇಕು. ಆದರೆ single window permission ಕೊಡಿ ಎಂದು ಶ್ರೀಮತಿ ಜಯಮಾಲರವರು ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷರಾಗಿದ್ದಾಗಲೂ ಹೇಳುತ್ತಿದ್ದರು. ಪಕ್ಕದ ಗೋವಾ ರಾಜ್ಯದಲ್ಲಿ ಶೂಟಿಂಗ್ ಮಾಡಬೇಕಾದರೆ, ಅಲ್ಲಿನ ವಾರ್ತಾ ಇಲಾಖೆಗೆ ಹೋಗಿ ಅನುಮತಿ ಪಡೆದುಕೊಂಡರೆ, ಇಡೀ ಗೋವಾ ರಾಜ್ಯದಲ್ಲಿ ಎಲ್ಲಿ ಬೇಕಾದರೂ ಹೋಗಿ ಶೂಟಿಂಗ್ ಮಾಡಬಹುದು. ಅಲ್ಲಿ single window system ನಲ್ಲಿ ಅನುಮತಿ ಮತ್ತು ಅದಕ್ಕೆ ಬೇಕಾದ ಶುಲ್ಕವನ್ನು ಕಟ್ಟಿದರೆ ಇಡೀ ರಾಜ್ಯದಲ್ಲಿ ಎಲ್ಲಿ ಬೇಕಾದರೂ ಶೂಟಿಂಗ್ ಮಾಡಬಹುದು. ಆ ರೀತಿಯ ಒಂದು single window permission ಕನ್ನಡ ಚಿತ್ರರಂಗಕ್ಕೆ ನಿಜವಾಗಲೂ ಅಗತ್ಯವಿದೆ.

ಇನ್ನು 'ಚಿತ್ರನಗರಿ' ಸ್ಥಾಪನೆಯ ಬಗ್ಗೆ ಮಾತನಾಡುವುದಾದರೆ, ನಮಗೆ ಗೊತ್ತಿರುವ ಹಾಗೆ ದಿ: ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯವರಾಗಿದ್ದಾಗ ಹೆಸರಘಟ್ಟದಲ್ಲಿ 'Film City' ಮಾಡುತ್ತೇವೆ ಎಂದು ಆಯವ್ಯಯದಲ್ಲಿ ಕೂಡ ಹೇಳಿದ್ದರು. ಹೆಸರಘಟ್ಟದಲ್ಲಿ 'Film City' ಮಾಡುವ ಉದ್ದೇಶ ನಾನಾ ಕಾರಣಗಳಿಂದ ಬಿಟ್ಟು ಹೋಯಿತು. ಆನಂತರ ಹಿಂದಿನ ಮುಖ್ಯಮಂತ್ರಿಯವರು ಮೈಸೂರಿನ ಬಳಿ ಚಿತ್ರನಗರಿಯನ್ನು ಸ್ಥಾಪನೆ ಮಾಡಿಯೇ ತೀರುತ್ತೇವೆಂದು ದೊಡ್ಡದಾಗಿ ಘೋಷಣೆ ಮಾಡಿದರು. ಅದರ ಬಗ್ಗೆ ಇಂದಿಗೂ ಗೊತ್ತಾಗಿಲ್ಲ. ಮೊನ್ನೆಯಷ್ಟೇ ಈಗಿನ ಮುಖ್ಯಮಂತ್ರಿಯವರು ರಾಮನಗರದಲ್ಲಿ ಚಿತ್ರನಗರಿಯನ್ನು ನಿರ್ಮಾಣ ಮಾಡಬೇಕೆನ್ನುವ ಆಲೋಚನೆ ಇದೆಯೆಂದು ಹೇಳಿಕೆ ಕೊಟ್ಟಿದ್ದಾರೆ. ಅದು ಎಲ್ಲಿಗೆ ಬರುವುದೋ ಗೊತ್ತಿಲ್ಲ. ಚಿತ್ರನಗರಿಯನ್ನು ರಾಮನಗರದಲ್ಲಿ ಮಾಡುವಿರೋ, ಮೈಸೂರಿನಲ್ಲಿ ಮಾಡುವಿರೋ ಅಥವಾ ಹೆಸರಘಟ್ಟದಲ್ಲಿ ಮಾಡುತ್ತೀರೋ ಮಾಡಿ. ಚಿತ್ರನಗರಿಯನ್ನು ಮಾಡುತ್ತೇವೆಂದು ಸಿನಿಮಾ ತೋರಿಸುವ ರೀತಿಯಲ್ಲಿಯೇ ಬಜೆಟ್‌ಗಳಲ್ಲಿ ಸಿನಿಮಾ ತೋರಿಸುತ್ತಿದ್ದಾರೆ. ಆದರೆ ಚಿತ್ರನಗರಿ ಇವತ್ತಿನವರೆಗೂ ಆಗಲಿಲ್ಲ. ಪಕ್ಕದ ರಾಜ್ಯಗಳಲ್ಲೆಲ್ಲಾ ಚಿತ್ರನಗರಿಗಳು ಇವೆ. ಆದರೆ ನಮ್ಮ ರಾಜ್ಯದಲ್ಲಿ ಇವತ್ತಿನವರೆಗೂ ಆಗಿಲ್ಲ. ಆ ನಿಟ್ಟಿನಲ್ಲಿ ಬಹಳ ದೃಢವಾದ ನಿರ್ಧಾರಗಳನ್ನು ಮಾನ್ಯ ಮುಖ್ಯಮಂತ್ರಿಯವರು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಹಿಂದೆ ಸಿನಿಮಾ ಪ್ರದರ್ಶನದ ಬಗ್ಗೆ ಪ್ರಚಾರ ಮಾಡಬೇಕಾದರೆ, ಪೋಸ್ಟರ್‌ಗಳನ್ನು ಗೋಡೆಗಳಿಗೆ ಅಂಟಿಸಲಾಗುತ್ತಿತ್ತು. ಈಗಲೂ ಪೋಸ್ಟರ್‌ಗಳನ್ನು ಗೋಡೆಗಳಿಗೆ ಅಂಟಿಸಲಾಗುತ್ತದೆ. ಸ್ವಚ್ಛ ಭಾರತ ಯೋಜನೆ ಅಡಿಯಲ್ಲಿ ಈಗ ಎಲ್ಲಿಯೂ ಪೋಸ್ಟರ್‌ಗಳನ್ನು ಅಂಟಿಸುವ ಹಾಗಿಲ್ಲ. ಪ್ರಚಾರ ಮಾಡುವ ಹಾಗಿಲ್ಲ, ಕೇವಲ ದೂರದರ್ಶನ, ಪತ್ರಿಕಾ ಮಾಧ್ಯಮಗಳ ಮೂಲಕ ಪ್ರಚಾರ ಮಾಡಬೇಕಾಗಿದೆ. ಬಹಳಷ್ಟು ನಿರ್ಮಾಪಕರುಗಳಿಗೆ ಪತ್ರಿಕೆಗಳಲ್ಲಿ ಮತ್ತು ದೂರದರ್ಶನಗಳಲ್ಲಿ ಪ್ರಚಾರ ಮಾಡಲು ಬಹಳ ಕಷ್ಟವಾಗುತ್ತಿದೆ. ಆದ್ದರಿಂದ ನಗರಗಳಲ್ಲಿ B.B.M.P. (Bruhat Bengaluru

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Mahanagara Palike) ಮತ್ತು ಜಿಲ್ಲಾ ಕೇಂದ್ರಗಳಲ್ಲಿ Municipality Board ಗಳು ದಯಮಾಡಿ ಸಿನಿಮಾಗಳ ಪೋಸ್ಟರ್‌ಗಳನ್ನು ಹಾಗೂ vinyl banners ಹಾಕುವುದಕ್ಕೆ ಜಾಗವನ್ನು ಕೊಡಬೇಕು. ಇಲ್ಲದಿದ್ದರೆ ಸಿನಿಮಾಗಳನ್ನು ಹೇಗೆ ಪ್ರಚಾರ ಮಾಡುವುದಕ್ಕಾಗುತ್ತದೆ? ಸಿನಿಮಾ ಎಂದರೆ ಪ್ರಚಾರ, ಅದನ್ನು ಎಲ್ಲಿ ಮಾಡಬೇಕು? ದಯವಿಟ್ಟು ಆ ಅನುಮತಿಯನ್ನು ಖಂಡಿತವಾಗಿಯೂ ಕೊಡುವ ಹಾಗೆ ಮಾಡಬೇಕು.

(ಮುಂವ...

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(9) 03-07-2018/11-30/ಕೆಹೆಚ್/ಜಿಆರ್

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ತಾರಾಅನೂರಾಧ (ಮುಂದು):-** ಇನ್ನು ಕೌಶಲ್ಯ ಅಭಿವೃದ್ಧಿ ಸಂಸ್ಥೆಯ ಬಗ್ಗೆ ಹೇಳುತ್ತಿದ್ದಾರೆ. ಇದರಲ್ಲಿ ಹಲವಾರು ಇಲಾಖೆಗೆ ಸಂಬಂಧಪಟ್ಟ ಹಾಗೆ ಕೆಲವು ತರಬೇತಿಗಳು ನಡೆಯುತ್ತವೆ. ಎಲ್ಲೆಲ್ಲಿ ಅಭಿವೃದ್ಧಿ ಕೆಲಸಗಳು ಮಾಡಲಾಗುತ್ತದೆ. ಸಾಲ ಎಲ್ಲಿ ಸಿಗುತ್ತದೆ. ಅಭಿವೃದ್ಧಿ ಕೆಲಸವನ್ನು ಎಲ್ಲಿ ಮಾಡಬಹುದು. ಬೇರೆ ಬೇರೆ ಇಲಾಖೆಗಳಿಗೆ ಸಂಬಂಧಪಟ್ಟ ಹಾಗೆ ಕೌಶಲ್ಯ ಅಭಿವೃದ್ಧಿ ಸಂಸ್ಥೆಯಡಿಯಲ್ಲಿ ಒಂದು ವಿಭಾಗ ಇದೆ. ಇದು ಕೇಂದ್ರ ಸರ್ಕಾರದ ಒಂದು ದೊಡ್ಡ ಕನಸು. ಈಗಿನ ಮಾನ್ಯ ಮುಖ್ಯಮಂತ್ರಿಯವರು ಅವರ ಕನಸನ್ನು ಹೆಚ್ಚು ಮಾಡಿಕೊಂಡು ಒಂದು ಕೋಟಿ ಉದ್ಯೋಗವನ್ನು ಕೌಶಲ್ಯ ಅಭಿವೃದ್ಧಿ ತರಬೇತಿಯಲ್ಲಿ ತರುತ್ತೇವೆ ಎಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಈ ಕೌಶಲ್ಯ ಅಭಿವೃದ್ಧಿ ಸಂಸ್ಥೆಯಲ್ಲಿ ಸಿನಿಮಾ ರಂಗವನ್ನು ಸೇರಿಸಿಕೊಳ್ಳಬೇಕು. ಇದರಲ್ಲಿ ಹಲವಾರು ತಂತ್ರಜ್ಞರು, ಯುವಕರು, ಈಗ ತಾಂತ್ರಿಕತೆಯು ತುಂಬಾ ಮುಂದುವರೆದಿರುವುದರಿಂದ ತಾಂತ್ರಿಕ ತರಬೇತಿಯನ್ನೂ ಸಹಾ ಕೌಶಲ್ಯ ಅಭಿವೃದ್ಧಿ ಸಂಸ್ಥೆಯಿಂದ ತರಬೇತಿ ಕೊಡಬಹುದು. ಮೊದಲು ನಿರ್ಮಾಪಕರಿಗೆ ಬ್ಯಾಂಕುಗಳಿಂದ ಸಾಲವನ್ನು ಕೊಡಲಾಗುತ್ತಿತ್ತು. ಆದರೆ ಈಗ ಬ್ಯಾಂಕುಗಳಿಂದ ಸಾಲವನ್ನು ಕೊಡುತ್ತಿಲ್ಲ. ಆದ್ದರಿಂದ ಕೌಶಲ್ಯ ಅಭಿವೃದ್ಧಿಯಲ್ಲಿ ಬಂದರೆ ಅಲ್ಲಿನ ಇಲಾಖೆಗಳಲ್ಲಿ ನಿರ್ಮಾಪಕರು ಯಾವುದರಲ್ಲಿ ಸಾಲವನ್ನು ತೆಗೆದುಕೊಳ್ಳಬಹುದು, ಹೇಗೆ ಸಾಲವನ್ನು ತೀರಿಸಬಹುದು. ಈ ನಿಟ್ಟಿನಲ್ಲಿ ಕೌಶಲ್ಯ ಅಭಿವೃದ್ಧಿ ಸಂಸ್ಥೆಯಲ್ಲಿ ಇದನ್ನು ಮಾಡಬಹುದು. ಆದ್ದರಿಂದ ಖಂಡಿತವಾಗಿಯೂ ಇದರ ಬಗ್ಗೆ ನಾವು ಚರ್ಚೆ ಮಾಡಬೇಕು.

ಇನ್ನು Single Screen Theatre ಗಳ ಮಾಲೀಕರು ನಿಜವಾಗಿಯೂ ಬಹಳ ಸಂಕಷ್ಟದಲ್ಲಿದ್ದಾರೆ. ಅವರ ಬಗ್ಗೆ ಕೂಡ ಈ ಸದನದಲ್ಲಿ ಪ್ರಸ್ತಾಪ ಮಾಡಬೇಕಾಗಿದೆ. ಏಕೆಂದರೆ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Multiplex Theatres ಪ್ರಾರಂಭವಾದ ಮೇಲೆ Single Screen Theatre ಗಳಿಗೆ subsidy ದರದಲ್ಲಿ ವಿದ್ಯುತ್‌ನ್ನು ಸರ್ಕಾರದವರು ಕೊಡುತ್ತಿದ್ದರೂ ಕೂಡ ಅವರುಗಳಿಗೆ ಸಮಯಕ್ಕೆ ಸರಿಯಾಗಿ ನಾವು ಚಲನಚಿತ್ರವನ್ನು ಬಿಡುಗಡೆ ಮಾಡುವುದಕ್ಕೆ ಕೊಡುತ್ತಿಲ್ಲ. ಆದ್ದರಿಂದ ಈಗ Single Screen Theatre ಗಳನ್ನು ನಡೆಸುವುದಕ್ಕೆ ಬಹಳ ಕಷ್ಟವಾಗುತ್ತಿದೆ. ಆ Single Screen Theatre ಗಳನ್ನು ಹೊಡೆದು ಹಾಕಿ, ಈಗ ಮಳಿಗೆಗಳನ್ನು ಅಥವಾ ಶಾಪಿಂಗ್ ಕಾಂಪ್ಲೆಕ್ಸ್‌ಗಳನ್ನು ಮಾಡುತ್ತಿದ್ದಾರೆ. ಶಾಪಿಂಗ್ ಕಾಂಪ್ಲೆಕ್ಸ್‌ಗಳನ್ನು ಕಟ್ಟಿಸುವುದಕ್ಕೆ ಆ ಮಾಲೀಕನಿಗೆ ಎಷ್ಟು ಕಷ್ಟವಿದೆಯೋ ಎಂಬುದು ನಮಗೆ ಗೊತ್ತಿಲ್ಲ. ಶಾಪಿಂಗ್ ಕಾಂಪ್ಲೆಕ್ಸ್‌ಗಳನ್ನು ಕಟ್ಟಿಸಲಿ, ಆದರೆ ಶಾಪಿಂಗ್ ಕಾಂಪ್ಲೆಕ್ಸ್‌ಗಳನ್ನು ಮಾಡುವಾಗ ಅದರಲ್ಲಿ ಚಿತ್ರಮಂದಿರಗಳು ಕೂಡ ಕಡ್ಡಾಯ. ಸುಮಾರು 150 ರಿಂದ 200 ಸೀಟುಗಳು ಇರುವ ಚಿತ್ರಮಂದಿರಗಳು ಆ ಮಳಿಗೆಗಳಲ್ಲಿ ಬರಲೇಬೇಕು ಎಂದು ಅನುಮತಿಯನ್ನು ಕೊಡುವಾಗ ಸರ್ಕಾರವು ಈ ರೀತಿಯ ನಿಯಮವನ್ನು ತರಬೇಕು.

ಮಾನ್ಯ ಸಭಾಪತಿಯವರೇ, ಇನ್ನು ಆಕಾಡೆಮಿ ಪ್ರಾರಂಭವಾಗಿದೆ. ಈ ಹಿಂದೆ ನಾನು ಕೂಡ ಆಕಾಡೆಮಿಯಲ್ಲಿ ಅಧ್ಯಕ್ಷಳಾಗಿ ಕೆಲಸ ಮಾಡುವ ಅವಕಾಶವನ್ನು ನಮ್ಮ ಪಕ್ಷ ನನಗೆ ಒದಗಿಸಿಕೊಟ್ಟಿತ್ತು. ಆ ಆಕಾಡೆಮಿಯಲ್ಲಿ ಮೊದಲು ಎರಡು ಕೋಟಿ ರೂಪಾಯಿಗಳ ಮೊತ್ತದಲ್ಲಿ ಅಂತರರಾಷ್ಟ್ರೀಯ ಚಲನಚಿತ್ರೋತ್ಸವವನ್ನು ಮಾಡುತ್ತಿದ್ದೇವು. ಈಗ ಇದನ್ನು ಹತ್ತು ಕೋಟಿ ರೂಪಾಯಿಗಳಿಗೆ ಹೆಚ್ಚಿಸಿದ್ದಾರೆ. ಅದು ತುಂಬಾ ಒಳ್ಳೆಯ ವಿಷಯ. ಹತ್ತು ಕೋಟಿ ರೂಪಾಯಿಗಳಿಗೆ ಹೆಚ್ಚಿಸುವಾಗ ಬೇರೆ ವಿಷಯಗಳನ್ನು ತಿಳಿದುಕೊಳ್ಳಬೇಕಾಗುತ್ತದೆ. ಬೇರೆ ಆಕಾಡೆಮಿಗಳು ಅಂದರೆ ಸಾಹಿತ್ಯ ಆಕಾಡೆಮಿ, ನಾಟಕ ಆಕಾಡೆಮಿ ಇವರೆಲ್ಲರೂ ಅವರ ಆಕಾಡೆಮಿಗಳ ಮೂಲಕ ಕಲಾವಿದರಿಗೆ, ನಾಟಕ ತಂತ್ರಜ್ಞರುಗಳಿಗೆ, ಸಾಹಿತಿಗಳಿಗೆ ಮಾಶಾಸನವನ್ನು ಕೊಡಲಾಗುತ್ತದೆ. ಹತ್ತು ಕೋಟಿ ರೂಪಾಯಿಗಳನ್ನು 'Film Festival' ಗೆ ಒದಗಿಸುವ ಬದಲು, ಐದು ಕೋಟಿ ರೂಪಾಯಿಗಳನ್ನು 'Film Festival' ಗಳಿಗೆ ಒದಗಿಸಿ, ಇನ್ನು ಐದು ಕೋಟಿ ರೂಪಾಯಿಗಳನ್ನು ವರ್ಷಾನುವರ್ಷ deposit ನಲ್ಲಿ ಇಟ್ಟರೆ ಸರ್ಕಾರವು ಕಲಾವಿದರಿಗೆ, ತಂತ್ರಜ್ಞರಿಗೆ, ಕೆಲವು ಸಹಾಯಕ ನಿರ್ದೇಶಕರುಗಳಿಗೆ, ಈಗ ನಿರ್ಮಾಪಕರು ಕೂಡ ಮಾಶಾಸನಗಳಿಗೆ ಕೈಹೊಡ್ಡುವ ಸ್ಥಿತಿಯಲ್ಲಿದ್ದಾರೆ. ಅವರುಗಳಿಗೆ ಮಾಶಾಸನವನ್ನು ಕೊಡುವುದನ್ನು ಆಕಾಡೆಮಿಯಿಂದಲೇ ಪ್ರಾರಂಭ ಮಾಡಬಹುದು. ಈಗಾಗಲೇ ಸಿನಿಮಾ ಆಕಾಡೆಮಿ ಕೆಲಸ ಮಾಡುತ್ತಿದೆ. ಆಕಾಡೆಮಿಗೆ ನಾನು ಅಧ್ಯಕ್ಷಳಾದಾಗ 5ನೇ ಅಂತರಾಷ್ಟ್ರೀಯ ಚಲನಚಿತ್ರೋತ್ಸವವನ್ನು ಮಾಡಿದಾಗ, ಅದಕ್ಕೆ ಡಾ|| ಜಯಮಾಲರವರು ಕೂಡ ಭಾಗವಹಿಸಿದ್ದರು. ಆ ಚಲನಚಿತ್ರೋತ್ಸವವನ್ನು ಒಂದು ಮುಕ್ಕಾಲು ಕೋಟಿಯಲ್ಲಿ ಮುಗಿಸಿ, ಇನ್ನೂಳಿದ ಕಾಲು ಕೋಟಿಯನ್ನು ಸರ್ಕಾರಕ್ಕೆ ವಾಪಸ್ಸು ಕೊಟ್ಟಿದ್ದೇವೆ. ಈ ಹತ್ತು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೋಟಿ ರೂಪಾಯಿಯನ್ನು ಒದಗಿಸಿ ಚಲನಚಿತ್ರೋತ್ಸವವನ್ನು ಏನು ವಿಜೃಂಭಣೆಯಿಂದ ಮಾಡುತ್ತಿದ್ದಾರೋ, ಈ ಹಣವು ಎಲ್ಲಿ ಏನಾಗುತ್ತಿದೆಯೋ ಎಂಬುದು ನಮಗೆ ಗೊತ್ತಾಗುತ್ತಿಲ್ಲ. ಆದ್ದರಿಂದ ಆಕಾಡೆಮಿಯ ಮೂಲಕ ಕಲಾವಿದರು, ನಿರಾಶ್ರಿತರು, ಚಿತ್ರರಂಗದವರು, ಕಾರ್ಮಿಕರು, ನಿರ್ಮಾಪಕರು, ಸಹ ನಿರ್ದೇಶಕರುಗಳಿಗೆ ಮಾಶಾಸನವನ್ನು ಕೊಡುವ ಬಗ್ಗೆ ಸರ್ಕಾರವು ಆಲೋಚನೆಯನ್ನು ಮಾಡಬೇಕು. ಆಕಾಡೆಮಿಗೆ ವಾರ್ಷಿಕ ಅನುದಾನ ಬಹಳ ಕಡಿಮೆ ಇದೆ. ಈ ವಾರ್ಷಿಕ ಅನುದಾನವನ್ನು ಹೆಚ್ಚು ಮಾಡಿದರೆ ಇನ್ನು ಹಲವಾರು ಒಳ್ಳೆಯ ಕೆಲಸಗಳನ್ನು ಆಕಾಡೆಮಿ ಮೂಲಕ ನಿರೀಕ್ಷೆ ಮಾಡಬಹುದು.

ಮಾನ್ಯ ಸಭಾಪತಿಯವರೇ, ಇನ್ನು ಕಲ್ಯಾಣ ನಿಧಿಯನ್ನು ಸ್ಥಾಪಸಿದ್ದಾರೆ. ಅದರಲ್ಲೂ ಕೂಡ ಡಾ॥ ಜಯಮಾಲರವರ ಹೆಸರನ್ನು ತೆಗೆದುಕೊಳ್ಳಲೇ ಬೇಕು. ಡಾ॥ ಜಯಮಾಲರವರು ಕಲ್ಯಾಣ ನಿಧಿಯನ್ನು ಸ್ಥಾಪನೆ ಮಾಡುವುದಕ್ಕೆ ಮುಖ್ಯ ಕಾರಣರಾದವರು. ಅವರು Karnataka Film Chamber of Commerce (KFCC) ಗೆ ಅಧ್ಯಕ್ಷರಾದಾಗ ಆ ಸಮಯದಲ್ಲಿ ಕಲ್ಯಾಣ ನಿಧಿಯನ್ನು ಮಾಡಿದ್ದರು. ನಮ್ಮ ಸಿನಿಮಾದವರಿಗೋಸ್ಕರ ಈ ಕಲ್ಯಾಣ ನಿಧಿಗೆ ಸರ್ಕಾರದಿಂದಲೂ  ಒಂದಿಷ್ಟು ಹಣವನ್ನು ಕೊಡಲಾಗುತ್ತದೆ. ಕಲ್ಯಾಣ ನಿಧಿಯಿಂದ ಒಂದು ರೂಪಾಯಿಯೂ ಕೂಡ ಯಾರಿಗೂ ಸಹಾಯವಾಗಿಲ್ಲವೆಂಬ ಮಾತನ್ನು ಈಗಲೂ ಕೂಡ ಹೇಳುತ್ತೇನೆ. ಇದರ ಬಗ್ಗೆ ಎಷ್ಟೆಷ್ಟೋ ಸಂದೇಹಗಳು ಇವೆ. ಯಾರಿಗೆ ಕೊಡಬೇಕು, ಯಾರಿಗೆ ಬಿಡಬೇಕು. ಇದರ ಸಭೆಗಳು ಏನಾಗಿದೆ, ಕಲ್ಯಾಣ ನಿಧಿಯ ಬಗ್ಗೆ ಏನಾಗುತ್ತಿದೆ, ಇದುವರೆಗೂ ಏನಾಗಿದೆ, ಅದರ ಬಡ್ಡಿಯೇನಾದರೂ ಬಂದಿದೆಯೇ ಅಥವಾ ವಾಪಸ್ಸು ಹೋಗಿದೆಯೇ? ಅದರ ಸ್ಥಿತಿಗತಿಗಳ ಬಗ್ಗೆ ನಮಗೆ ಏನು ಗೊತ್ತಿಲ್ಲ. ದಯಮಾಡಿ ಇದರ ಬಗ್ಗೆ ಆಲೋಚನೆ ಮಾಡಬೇಕು.

ಇನ್ನು ಪ್ರತಿ ವರ್ಷ ಸಿನಿಮಾಗಳಿಗೆ ಸಬ್ಸಿಡಿ ಎಂದು ಕೊಡಲಾಗುತ್ತದೆ. ಯಾವುದೇ ಸರ್ಕಾರವು ಅಧಿಕಾರಕ್ಕೆ ಬಂದರೂ ಚಿತ್ರರಂಗದವರನ್ನು ಕೈಬಿಟ್ಟಿಲ್ಲ. ಎಲ್ಲಾ ಸರ್ಕಾರಗಳು ಕೂಡ ಸಬ್ಸಿಡಿಯನ್ನು ಚೆನ್ನಾಗಿಯೇ ಕೊಡುತ್ತಿದೆ. ಮೊದಲು 50 ಚಿತ್ರಗಳಿಗೆ ಸಬ್ಸಿಡಿಯನ್ನು ಕೊಡುತ್ತಿದ್ದರು.  ಈಗ 125 ಚಿತ್ರಗಳಿಗೆ ಹತ್ತು ಲಕ್ಷ ರೂಪಾಯಿಗಳೆಂದು ಸಬ್ಸಿಡಿ ಮೊತ್ತವನ್ನು ಕೊಡುತ್ತಿದ್ದಾರೆ. ಒಳ್ಳೆಯ ಗುಣಮಟ್ಟದ ಚಿತ್ರಗಳಿಗೆ ಸಬ್ಸಿಡಿಯನ್ನು ಕೊಡಬೇಕೆಂದು ಸಬ್ಸಿಡಿಯನ್ನು ಪ್ರಾರಂಭ ಮಾಡಲಾಗಿತ್ತು.  ಈಗ 125 ಚಿತ್ರಗಳಿಗೆ ಸಬ್ಸಿಡಿಯನ್ನು ಕೊಡುತ್ತಿರುವುದು ಬಹಳ ಸಂತೋಷವಾದ ವಿಷಯವಾಗಿದೆ. ಇದರಲ್ಲಿ ಕೆಲವು ಸಣ್ಣ ಸಂದೇಹಗಳೇನೆಂದರೆ, ಕೆಲವು ಚಲನಚಿತ್ರಗಳು ಬಿಡುಗಡೆಯಾಗಿರುವುದಿಲ್ಲ. ಚಲನಚಿತ್ರಗಳು ಚಿತ್ರಮಂದಿರಕ್ಕೆ ಬಂದಿರುವುದಿಲ್ಲ. ಅಂತಹ ಚಲನಚಿತ್ರಗಳಗೂ ಸಬ್ಸಿಡಿಗಳು ಸಿಗುತ್ತದೆ. ಅವರ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಚಲನಚಿತ್ರಗಳಿಗೆ ಸಬ್ಸಿಡಿ ಹೇಗೆ ಸಿಗುತ್ತಿದೆ? ನಾನು ಹೇಳುವುದೇನೆಂದರೆ, censor ಮಾಡಿದಕ್ಷಣ ಸಬ್ಸಿಡಿಗೆ ಹೋಗುವಂತಹವರು ಕೆಲವರು ಇರುತ್ತಾರೆ. ಈಗ still camera ಗಳನ್ನು ಉಪಯೋಗ ಮಾಡಿ 5D ಸಿನಿಮಾವನ್ನು ಮಾಡುತ್ತಿದ್ದಾರೆ. 25 ಲಕ್ಷ ರೂಪಾಯಿಗಳು ಮತ್ತು 50 ಲಕ್ಷ ರೂಪಾಯಿಗಳಿಗೆಲ್ಲಾ ಸಿನಿಮಾವನ್ನು ಮಾಡಿ, ನಂತರ 10 ಲಕ್ಷ ರೂಪಾಯಿಗಳಿಗೆ ಸಬ್ಸಿಡಿಗೆ ಹೋಗುವಂತಹವರು ಕೂಡ ಇದ್ದಾರೆ. ಆದರೆ ಕೋಟ್ಯಂತರ ರೂಪಾಯಿಗಳನ್ನು ಖರ್ಚು ಮಾಡಿ, ಸಿನಿಮಾವನ್ನು ತೆಗೆದು ಅವರಿಗೆ ಸಬ್ಸಿಡಿಯಲ್ಲಿ ಎಲ್ಲೋ ಒಂದು ಕಡೆ ಮೋಸವಾಗುತ್ತಿದೆ. ದಯವಿಟ್ಟು ಆ ನಿಟ್ಟಿನಲ್ಲಿ ಸಬ್ಸಿಡಿಯಲ್ಲಿ ಆಗುವ ತಾರತಮ್ಯವನ್ನು ಹೋಗಲಾಡಿಸಬೇಕು. ಹಾಗೆಯೇ category ಯನ್ನು ಮಾಡಿಕೊಳ್ಳುವ ಬಗ್ಗೆ ಒಂದು ಕನಸು ಇತ್ತು. ಮರಾಠಿ ಚಿತ್ರರಂಗದಲ್ಲಿ ಒಳ್ಳೆಯ ಮರಾಠಿ ಚಿತ್ರಗಳನ್ನು ಪ್ರೋತ್ಸಾಹಿಸುವುದಕ್ಕೋಸ್ಕರ ಮಹಾರಾಷ್ಟ್ರದಲ್ಲಿ ಸಬ್ಸಿಡಿಯನ್ನು ಪ್ರಾರಂಭ ಮಾಡಿದರು. ಯಾವ ರೀತಿಯಲ್ಲಿ ಸಬ್ಸಿಡಿಯನ್ನು ಪ್ರಾರಂಭ ಮಾಡಿದರೇಂದರೆ A, B and C ಎಂದು ಸಿನಿಮಾಗಳನ್ನು categorize ಮಾಡಿದರು. ಎ ವರ್ಗದಲ್ಲಿ ಬಂದಿರುವಂತಹ . . . .

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಮಾನ್ಯ ಸದಸ್ಯರೇ, ತಮಗೆ ಪೂರಕವಾಗಿ ನಾನು ಮಾತನಾಡುತ್ತೇನೆ.

**ಸಭಾಪತಿಯವರು:-** ಶ್ರೀ ಐವನ್ ಡಿ'ಸೋಜಾ ರವರೇ ಮಾತನಾಡಿ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ನಮ್ಮ ಜಿಲ್ಲೆಯಲ್ಲಿ ತುಳು ಚಿತ್ರರಂಗ ಬಹಳ ವಿಸ್ತೃತವಾಗಿ ಬೆಳೆಯುತ್ತಿದೆ. ಹಿಂದೆ ಯಾರು ನಾಟಕಗಳನ್ನು ಮಾಡುತ್ತಿದ್ದರು. ಇವತ್ತಿನ ದಿವಸ ಅವರೆಲ್ಲರೂ ಚಲನಚಿತ್ರಗಳನ್ನು ತೆಗೆಯುತ್ತಾರೆ. ಒಂದು ವರ್ಷಕ್ಕೆ 50ಕ್ಕೂ ಹೆಚ್ಚು ಸಿನಿಮಾಗಳು ಬಂದಿವೆ. ಮಾನ್ಯ ಸದಸ್ಯರು ಹೇಳಿದ ಹಾಗೆ hand-held camera ವನ್ನು ಇಟ್ಟುಕೊಂಡು ಸಿನಿಮಾಗಳನ್ನು ಮಾಡಿ ಸಬ್ಸಿಡಿಯನ್ನು ತೆಗೆದುಕೊಳ್ಳುತ್ತಾರೆ ಎಂದು ಹೇಳುತ್ತಿದ್ದಾರೆ. ಮೊನ್ನೆಯ ದಿವಸ ಒಂದು ಕಾರ್ಯಕ್ರಮಕ್ಕೆ ಹೋದಾಗ ಅವರು ಏನು ಹೇಳುತ್ತಿದ್ದೇನೆಂದರೆ, ಹಿಂದೆ ಎಷ್ಟು ಚಲನಚಿತ್ರಗಳನ್ನು ತೆಗೆದರೂ ಸಬ್ಸಿಡಿಯನ್ನು ಕೊಡುತ್ತಿದ್ದರು. ಈಗ ಅದನ್ನು ನಿಲ್ಲಿಸಿ, ಕೇವಲ 3 ಚಲನಚಿತ್ರಗಳಿಗೆ ಸಬ್ಸಿಡಿಯನ್ನು ಕೊಡುತ್ತಾರೆ ಎಂಬ ಮಾತನ್ನು ನಾನು ಕೇಳಿದ್ದೇನೆ. ಇದರ ಬಗ್ಗೆ ನನಗೆ ಸ್ಪಷ್ಟತೆ ಬೇಕು. 3 regional language ಚಲನಚಿತ್ರಗಳಿಗೆ ಮಾತ್ರ ಸಬ್ಸಿಡಿಯನ್ನು ಕೊಡುತ್ತಾರೆ, ನಾವು regional ಚಲನಚಿತ್ರಗಳು ಜಾಸ್ತಿ ಬರಬೇಕು ಎಂದು ಮಾತನಾಡಿಕೊಳ್ಳುವಂತಹವರು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಕನ್ನಡ ಚಲನಚಿತ್ರಗಳು ಕೂಡ regional language ಚಲನಚಿತ್ರಗಳೇ. ತುಳು ಮತ್ತು ಕೊಂಕಣಿ ಚಲನಚಿತ್ರಗಳು ಕೂಡ regional language ಚಲನಚಿತ್ರಗಳಾಗಿವೆ.

**ಸಭಾಪತಿಯವರು:-** ಶ್ರೀ ಐವನ್ ಡಿ'ಸೋಜಾ ರವರು ಮಾತನಾಡಲಿ. ಒಬ್ಬ ಸದಸ್ಯರು ಮಾತನಾಡುವಾಗ ಇನ್ನೊಬ್ಬರು ಮಾತನಾಡಬಾರದು.

**ಡಾ|| ಜಯಮಾಲ ರಾಮಚಂದ್ರ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, 5 ಪ್ರಾದೇಶಿಕ ಭಾಷೆಗಳಿವೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ನಮ್ಮ ಜಿಲ್ಲೆಗೆ ಹೆಚ್ಚು ತುಳು ಚಲನಚಿತ್ರಗಳು ಬರಬೇಕಾದರೆ ನಾವು ಏಕೆ encourage ಮಾಡಬಾರದು? ಡಾ|| ಜಯಮಾಲರವರು ಕೂಡ ತುಳು ಚಲನಚಿತ್ರಗಳ ಮೂಲಕ ಚಿತ್ರರಂಗಕ್ಕೆ ಬಂದಿರುವಂತಹವರು. ಈಗ regional language ಗಳಲ್ಲಿ ತುಳು ಚಿತ್ರಗಳು ಬರುವುದಕ್ಕೆ ಪ್ರಾರಂಭ ಮಾಡುತ್ತಾರೆ. ಒಂದು-ಎರಡು ಸಿನಿಮಾಗಳನ್ನು ತೆಗೆದು ನಷ್ಟಕ್ಕೆ ಸಿಲುಕುತ್ತಿದ್ದರು. ಆದರೆ ಇವತ್ತಿನ ದಿವಸ ಎಲ್ಲರೂ ತುಳು ಸಿನಿಮಾಗಳನ್ನು ನೋಡುವುದಕ್ಕೆ ಚಿತ್ರಮಂದಿರಗಳಿಗೆ ಹೋಗಿ 100 ದಿನಗಳು, 150 ದಿನಗಳು ದಾಟುತ್ತಿದೆ. ಮಂಗಳೂರಿನಲ್ಲಿ ತುಳು ಸಿನಿಮಾಗಳು, regional language ಸಿನಿಮಾಗಳು ನಡೆಯುವಾಗ ಅದಕ್ಕೆ ಪ್ರೋತ್ಸಾಹವನ್ನು ಕೊಡುವುದಕ್ಕೆ ಎಷ್ಟು ಸಿನಿಮಾಗಳನ್ನು ತೆಗೆಯುತ್ತೀರೋ, ಆ ಎಲ್ಲಾ ಸಿನಿಮಾಗಳಿಗೂ ಕೂಡ ಸಬ್ಸಿಡಿಯನ್ನು ಕೊಡಿ, ಅದರಲ್ಲಿ ಏನು ನಷ್ಟವಾಗುತ್ತದೆ? ಒಟ್ಟಾರೆಯಾಗಿ ಸಿನಿಮಾಗಳಲ್ಲಿ quality maintain ಮಾಡಬೇಕು ಎಂಬುದು ಮಾತ್ರ ನಮ್ಮ ಉದ್ದೇಶವಾಗಿದೆ ಎಂಬ ಮಾತನ್ನು ತಮ್ಮ ಗಮನಕ್ಕೆ ತರುತ್ತೇನೆ.

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ಕನ್ನಡ ಚಿತ್ರಗಳು ಎಂದಾಕ್ಷಣ ತುಳು, ಕೊಂಕಣಿ ಚಿತ್ರಗಳು ಎಲ್ಲವೂ ಸಹ ಸೇರಿಕೊಳ್ಳುತ್ತವೆ. ಎಲ್ಲವೂ ಸಹ ನಮ್ಮ ರಾಜ್ಯದ ಚಲನಚಿತ್ರಗಳಾಗಿವೆ. ಆದ್ದರಿಂದ 125 ಚಲನಚಿತ್ರಗಳಿಗೆ ಸಬ್ಸಿಡಿ ಕೊಡಬೇಕೆಂದು ಆಗಿರುವುದು. ನಾನು ಹೇಳುತ್ತಿರುವುದೇನೆಂದರೆ ಎ, ಬಿ ಮತ್ತು ಸಿ, ಎಂದು ವರ್ಗವನ್ನು ಮಾಡಿದ್ದಾರೆ. ಏಕೆಂದರೆ, ಎ ವರ್ಗದಲ್ಲಿ National or International Award ಪಡೆದಿರುವಂತಹ ಚಿತ್ರಗಳಿಗೆ, ಬಿ ವರ್ಗದಲ್ಲಿ State Awards ಮತ್ತು ಇನ್ನಿತರ Award ಬಂದಿರುವಂತಹ ಚಿತ್ರಗಳಿಗೆ, ಸಿ ವರ್ಗದಲ್ಲಿ ಬೇರೆ International Film Festival ಗೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಹೋಗಿ, ಅಲ್ಲಿಯೂ ಕೂಡ ಪ್ರಶಸ್ತಿಗಳನ್ನು ಮತ್ತು ಮಾನ್ಯತೆಯನ್ನು ಪಡೆದ ಚಿತ್ರಗಳಿಗೆ, ಆಕಸ್ಮಾತ್ ನಮ್ಮ ಅದೃಷ್ಟಕ್ಕೆ ಕನ್ನಡ, ತುಳು, ಕೊಂಕಣಿ ಚಿತ್ರಗಳು ‘Oscar Award’ ಗೆ nominate ಆದರೆ ಅಂತಹ ಚಿತ್ರಗಳಿಗೆ ಹೆಚ್ಚು ಪ್ರೋತ್ಸಾಹ ಧನವನ್ನು ಕೊಡುವುದರಿಂದ ಒಳ್ಳೆಯ ಗುಣಮಟ್ಟದ ಚಿತ್ರಗಳು ಬರುವುದಕ್ಕೆ ಸಾಧ್ಯವಾಗುತ್ತದೆ ಎಂಬ ನಂಬಿಕೆ ನನಗಿದೆ. ಈಗಾಗಲೇ ಚಿತ್ರ ನಗರಿಗಳ ಬಗ್ಗೆ ಹೇಳಿದ್ದೇನೆ. ಚಿತ್ರ ನಗರಿಗಳು ಈಗ ಅಂದುಕೊಂಡರೂ ಕೂಡ ಕನಿಷ್ಠ ಪಕ್ಷ ಅದು ಬರುವುದಕ್ಕೆ ಮೂರರಿಂದ ಐದು ವರ್ಷಗಳ ಕಾಲ ಸಮಯಾವಕಾಶ ಬೇಕಾಗುತ್ತದೆ. ನಮ್ಮ ಬೆಂಗಳೂರಿನಲ್ಲಿ ಎರಡು ಅಥವಾ ಮೂರು ಸ್ಟುಡಿಯೋಗಳಿವೆ. ಆ ಎಲ್ಲಾ ಸ್ಟುಡಿಯೋಗಳು ದೂರದರ್ಶನದಲ್ಲಿ ಬರುವ ಬೇರೆ ಬೇರೆ ಶೋ ಗಳಿಗೆ book ಆಗಿವೆ. ನಮಗೆ ಯಾವುದೇ floor ಗಳು ಖಾಲಿ ಇರುವುದಿಲ್ಲ. ಆದ್ದರಿಂದ ಈಗ ಬೆಂಗಳೂರಿನ ಯಶವಂತಪುರ ಬಳಿಯಿರುವ ‘ಮೈಸೂರು ಲ್ಯಾಂಪ್ ಕಾರ್ಖಾನೆ’ ಯನ್ನು ಮುಚ್ಚಿ ಬಹಳ ವರ್ಷಗಳೇ ಆಯಿತು. ಆಗಾಗ ಅಲ್ಲಿ shooting ಗಳನ್ನು ಮಾಡುತ್ತಾರೆ. ಅಲ್ಲಿ ಕೆಲವು shed ಗಳು ಇವೆ. ದಯವಿಟ್ಟು ಅದನ್ನು studio floor ಆಗಿ ಅಂದಾಜು ಈಗ 125 ಚಿತ್ರಗಳು ಚಿತ್ರೀಕರಣ ನಡೆಯುತ್ತಿವೆಂದರೆ ಚಿತ್ರನಗರಿಯನ್ನು ಪ್ರಾರಂಭವಾಗುವ ತನಕ ಅಲ್ಲಿಯೇ ಚಿತ್ರೀಕರಣವನ್ನು ಮುಂದುವರಿಸುವುದಕ್ಕೋಸ್ಕರ ಆ ಜಾಗವನ್ನು ಚಲನಚಿತ್ರದವರಿಗೆ ಸರ್ಕಾರದವರು ಬಿಟ್ಟುಕೊಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ಅಷ್ಟೇ ಅಲ್ಲದೆ ಮಿನರ್ವ ಮಿಲ್ಸ್‌ನಲ್ಲೂ ಕೂಡ ಹಲವಾರು ಚಿತ್ರಗಳನ್ನು ಚಿತ್ರೀಕರಣ ಮಾಡಿದ್ದೇವೆ. ಇವೆರಡರಲ್ಲಿ ಯಾವುದಾದರೊಂದನ್ನು ದಯವಿಟ್ಟು ನಮ್ಮ ಸಿನಿಮಾ floor ಗಳಾಗಿ ಮಾಡಿಕೊಂಡು, ಅಲ್ಲಿ ಯಾವುದೇ ರೀತಿಯ ಚಟುವಟಿಕೆಗಳು ಇಲ್ಲದೇ ಇರುವುದರಿಂದ ಮತ್ತು ಅಲ್ಲಿ ಚಟುವಟಿಕೆಗಳು ಇದ್ದರೆ ಖಂಡಿತವಾಗಿಯೂ ಸಿನಿಮಾದವರು ಯಾವುದೇ ರೀತಿಯಲ್ಲಿ ಭಾದಿಸುವುದಿಲ್ಲ. ಆದರೆ ಆ ಸ್ಥಳಗಳಲ್ಲಿ ಯಾವುದೇ ರೀತಿಯ ಚಟುವಟಿಕೆಗಳು ನಡೆಯದಿರುವುದರಿಂದ ಆ floor ಗಳನ್ನು ಚಲನಚಿತ್ರಗಳಿಗೋಸ್ಕರ ಬಳಸಿಕೊಳ್ಳಲು ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಷಯವನ್ನು ತಮ್ಮ ಮುಂದೆ ಪ್ರಸ್ತಾಪ ಮಾಡಲೇಬೇಕು. ಚಲನಚಿತ್ರ ವಹಿವಾಟಿನಲ್ಲಿ ಮನೋರಂಜನಾ ತೆರಿಗೆ, Lab tax, ವಿತರಣಾ ತೆರಿಗೆ, ಸೇವಾ ತೆರಿಗೆ, ಇನ್ನೊಂದು G.S.T. (Goods and Service Tax). ಈ ಎಲ್ಲಾ ತೆರಿಗೆಗಳನ್ನು ಹಾಕಲಾಗುತ್ತಿದೆ.

(ಮುಂದು)

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(10)03/07/2018/ಎಸ್‌ಪಿಆರ್/ಜಿ.ಆರ್./11:40**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀಮತಿ ತಾರಾ ಅನೂರಾಧ (ಮುಂದು):-**
ಈ ರೀತಿಯ ಎಲ್ಲಾ ತೆರಿಗೆಗಳು ಒಂದರ ಮೇಲೆ ಒಂದರಂತೆ ನಿರ್ಮಾಪಕರೇ ಕಟ್ಟುತ್ತಾ ಹೋಗಬೇಕಾಗುತ್ತದೆ. ಚಿತ್ರರಂಗಕ್ಕೆ ಸಂಬಂಧಪಟ್ಟಂತೆ ಇರುವ ಈ ರೀತಿಯ ವಿವಿಧ ತೆರಿಗೆಗಳ ಬಗ್ಗೆ ನಾವು ಕೇಂದ್ರ ಸರ್ಕಾರದ ಜೊತೆಗೆ ಚರ್ಚೆಯನ್ನು ಮಾಡಬೇಕಾಗುತ್ತದೆ. ತಲಾ ಶೇಕಡಾ 9 ರಷ್ಟು ಜಿ.ಎಸ್.ಟಿ.ಯನ್ನು ರಾಜ್ಯ ಸರ್ಕಾರಕ್ಕೆ ಹಾಗೂ ಕೇಂದ್ರ ಸರ್ಕಾರಕ್ಕೆ ಪಾವತಿಸಬೇಕಾಗುತ್ತದೆ. ಒಟ್ಟಾರೆಯಾಗಿ ಶೇಕಡಾ 18 ರಷ್ಟು ತೆರಿಗೆಯನ್ನು ಪಾವತಿಸಬೇಕಾಗುತ್ತದೆ. ಇಂತಹ ತೆರಿಗೆಯಲ್ಲಿ ರಾಜ್ಯ ಸರ್ಕಾರದವರಾಗಲೀ ಅಥವಾ ಕೇಂದ್ರ ಸರ್ಕಾರದವರಾಗಲೀ ಅಥವಾ ಇಬ್ಬರೂ ಸೇರಿಕೊಂಡು ಚಲನಚಿತ್ರಗಳಿಗೆ ವಿನಾಯಿತಿಯನ್ನು ಕೊಡುವುದರ ಬಗ್ಗೆ ನಿಜವಾಗಿಯೂ ಸಹ ಚರ್ಚೆಯನ್ನು ಮಾಡಬೇಕು. ಸೇವಾ ತೆರಿಗೆ ಎಂಬ ಒಂದು ವಿಧವಾದ ತೆರಿಗೆ ಇದೆ. ಸೇವಾ ತೆರಿಗೆ ಎಂಬ ಶೀರ್ಷಿಕೆಯಡಿ ಚಿತ್ರಮಂದಿರದ ಮಾಲೀಕರೇ ಪ್ರತಿ ಚಲನಚಿತ್ರದ ಟಿಕೆಟ್ ಮೇಲೆ ಹೆಚ್ಚುವರಿಯಾಗಿ ಎರಡು ರೂಪಾಯಿಗಳನ್ನು ಪ್ರೇಕ್ಷಕರಿಂದ ವಸೂಲಿ ಮಾಡುತ್ತಾರೆ. ಈ ರೀತಿಯಾಗಿ ಹೆಚ್ಚುವರಿಯಾದ ತೆರಿಗೆಯನ್ನು cleaning of toilets and maintaining the theatre ಎಂಬ ಕಾರಣಗಳಿಗಾಗಿ ವಸೂಲಿ ಮಾಡುತ್ತಾರೆ. ಈ ವಿಚಾರದಲ್ಲಿ ನಾನು ನಿಜವಾಗಿಯೂ ಹೇಳುವುದೇನೆಂದರೆ, ಬೆಂಗಳೂರಿನ ಬಿ.ಬಿ.ಎಂ.ಪಿ., ಯ ಅಥವಾ ಇತರೆ ಸ್ಥಳಗಳ ಪುರಸಭೆಯ ಯಾರಾದರೂ ಅಧಿಕಾರಿಗಳು ಚಿತ್ರಮಂದಿರಗಳಿಗೆ ಭೇಟಿ ನೀಡಿ ಅಲ್ಲಿನ ಶೌಚಾಲಯಗಳು ಯಾವ ಸ್ಥಿತಿಯಲ್ಲಿವೆ, ಅವುಗಳ ನಿರ್ವಹಣೆ ಹೇಗಿದೆ, ಚಿತ್ರಮಂದಿರದಲ್ಲಿ sound ವ್ಯವಸ್ಥೆ ಹೇಗೆ ಇದೆ ಎಂಬಿತ್ಯಾದಿಗಳ ಹಾಗೂ ಹೆಚ್ಚುವರಿಯಾಗಿ ವಸೂಲಿ ಮಾಡಲಾಗುವ ಎರಡು ರೂಪಾಯಿಗಳ ನಿರ್ವಹಣಾ ವೆಚ್ಚದ ಬಗ್ಗೆ ವಿಚಾರ ಮಾಡಿದ್ದಾರೆಯೇ? ಖಂಡಿತವಾಗಿಯೂ ಸಹ ಇಂತಹ ಅಂಶಗಳ ಬಗ್ಗೆ ವಿಚಾರ ಮಾಡಿಲ್ಲ. ಚಿತ್ರಮಂದಿರಗಳ ವ್ಯವಸ್ಥೆ ಅಧೋಗತಿಯಾಗಿದೆ. ಅಲ್ಲಿನ ಶೌಚಾಲಯಗಳು ಉಪಯೋಗಿಸುವುದಕ್ಕೆ ಅನರ್ಹವಾಗಿವೆ. ಇಂತಹ ಪರಿಸ್ಥಿತಿಯಲ್ಲಿ ಇವತ್ತಿನ ದಿವಸ ಚಿತ್ರಮಂದಿರಗಳು ನಡೆಯುತ್ತಿವೆ. ಸೇವಾ ತೆರಿಗೆಯನ್ನು ಚಿತ್ರಮಂದಿರದ ಮಾಲೀಕರುಗಳೇ ಪಡೆದುಕೊಳ್ಳುತ್ತಾರೆ, ಇದರ ಪೈಕಿ ಯಾವ ಮೊತ್ತವೂ ಸಹ ಚಿತ್ರದ ನಿರ್ಮಾಪಕರಿಗೆ ಸಂದಾಯವಾಗುತ್ತಿಲ್ಲ. ಈ ಅಂಶದ ಬಗ್ಗೆಯೂ ಸಹ ಆಲೋಚನೆಯನ್ನು ಮಾಡಬೇಕಾಗುತ್ತದೆ.

ಇತ್ತೀಚಿನ ದಿನಗಳಲ್ಲಿ ತಂತ್ರಜ್ಞಾನ, ಡಿಜಿಟಲ್ ಸಿಸ್ಟಮ್, ಕನ್ನಡ ಚಲನಚಿತ್ರಗಳ ಯೂನಿಟ್, ಉಪಕರಣಗಳು, ಹಳೆಯ ಲೈಟ್‌ಗಳು ಇತ್ಯಾದಿ ಬಹಳ ಅನುಪಯುಕ್ತ ವಸ್ತುಗಳೇನಿವೆ, ಅವುಗಳು ಯಾವ ಉಪಯೋಗಕ್ಕೂ ಸಹ ಬರುತ್ತಿಲ್ಲ. ಚಲನಚಿತ್ರದ ಯೂನಿಟ್ ಮಾಲೀಕರುಗಳು ಯಾರಾದರೂ

ಹೊಸ ಉಪಕರಣಗಳನ್ನು ಖರೀದಿ ಮಾಡಲು ಸರ್ಕಾರವು ಸಬ್ಸಿಡಿ ರೂಪದಲ್ಲಿ ಸಹಾಯವನ್ನು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ತಂತ್ರಜ್ಞಾನ ಹಾಗೂ ಆಧುನಿಕತೆ ಹೆಚ್ಚಾದಂತೆ ನಾವು ಮಲ್ಟಿಪ್ಲೆಕ್ಸ್‌ಗಳ ಬಗ್ಗೆ ಮಾತನಾಡಬೇಕಾಗುತ್ತದೆ. ಮಲ್ಟಿಪ್ಲೆಕ್ಸ್‌ಗಳು ಅನೇಕ ರೀತಿಯಾಗಿ ಅನಾಹುತಗಳನ್ನು ಉಂಟು ಮಾಡುತ್ತಿವೆ. ಅವರಿಗೆ ನಮ್ಮ ರಾಜ್ಯದ ನೀರು, ವಿದ್ಯುತ್ ಹಾಗೂ ಸ್ಥಳ ಬೇಕು. ಆದರೆ ಅಲ್ಲಿ ನಮ್ಮ ಭಾಷೆಯ ಚಿತ್ರಗಳನ್ನು ಮಲ್ಟಿಪ್ಲೆಕ್ಸ್‌ಗಳಲ್ಲಿ ಬಿಡುಗಡೆ ಮಾಡಬೇಕೆಂದರೆ ಅಲ್ಲಿ ಚಿತ್ರಮಂದಿರಗಳು ಇರುವುದಿಲ್ಲ. ಈ ವಿಚಾರಕ್ಕೆ ಸಂಬಂಧಪಟ್ಟಂತೆ ನಮ್ಮ ರಾಜ್ಯದ ನೆರೆಯ ರಾಜ್ಯಗಳಾದ ಕೇರಳ, ತಮಿಳುನಾಡು ಹಾಗೂ ಮಹಾರಾಷ್ಟ್ರಗಳಲ್ಲಿ ಯಾವ ರೀತಿಯಾಗಿ ನಿಯಮಾವಳಿಗಳನ್ನು ಜಾರಿಗೆ ತಂದಿದ್ದಾರೆ ಎಂಬ ಬಗ್ಗೆ ನಾನು ಹೇಳುತ್ತೇನೆ. ಸದರಿ ರಾಜ್ಯಗಳಲ್ಲಿ 10 ಸ್ಕ್ರೀನ್‌ವುಳ್ಳ ಚಿತ್ರಮಂದಿರಗಳು ಮಲ್ಟಿಪ್ಲೆಕ್ಸ್‌ನಲ್ಲಿದ್ದರೆ, ಎರಡು ಸ್ಕ್ರೀನ್‌ಗಳನ್ನು ಪ್ರಾದೇಶಿಕ ಭಾಷೆಗಳಿಗೆ ಮೀಸಲಿಡಬೇಕು. ಕಡ್ಡಾಯವಾಗಿ ಪ್ರಾದೇಶಿಕ ಭಾಷೆಯ ಚಲನಚಿತ್ರಗಳು ಪ್ರದರ್ಶನಗೊಳ್ಳಲೇಬೇಕು ಎಂಬುದಾಗಿ ನಿಯಮವಿದೆ. ಆದರೆ ನಮ್ಮ ರಾಜ್ಯದಲ್ಲಿ ಈ ರೀತಿಯಾದ ನಿಯಮವಿಲ್ಲ. ಎಲ್ಲಾ ಸ್ಕ್ರೀನ್‌ಗಳಲ್ಲಿ ಎಲ್ಲಾ ಭಾಷೆಯ ಚಿತ್ರಗಳು ಪ್ರದರ್ಶನಗೊಳ್ಳುತ್ತವೆ. ನಮ್ಮ ರಾಜ್ಯದಲ್ಲಿ ಉಪಯೋಗಿಸದೇ ಇರುವ ಭಾಷೆಗಳ ಚಿತ್ರಗಳೂ ಸಹ ಪ್ರದರ್ಶನಗೊಳ್ಳುತ್ತವೆ. ನಮ್ಮ ಭಾಷೆಯ ಚಿತ್ರಗಳನ್ನು ಪ್ರದರ್ಶನ ಮಾಡಬೇಕೆಂದರೆ, ನಮಗೆ ಅವೇಳೆಯಲ್ಲಿ ಸಮಯಾವಕಾಶವನ್ನು ನೀಡುತ್ತಾರೆ. ಪ್ರೇಕ್ಷಕರು ಯಾರೂ ಸಹ ಹೋಗದೇ ಇರುವಂತಹ ಬೆಳಗಿನ 10.00 ಗಂಟೆಗೆ ಅಥವಾ ಮಧ್ಯರಾತ್ರಿಯ ಅವಕಾಶವನ್ನು ಕನ್ನಡ ಸಿನೆಮಾಗಳಿಗೆ ನೀಡುತ್ತಾರೆ. ಯಾವ ಸಮಯದಲ್ಲಿ ಹೆಚ್ಚು ಜನ ಚಿತ್ರಮಂದಿರಗಳಿಗೆ ಹೋಗುವ ಸಾಧ್ಯತೆಗಳಿವೆಯೋ ಅಂತಹ ಸಂದರ್ಭದಲ್ಲಿ ನಮ್ಮ ಭಾಷೆಗೆ ಚಿತ್ರಮಂದಿರಗಳು ಸಿಗುವುದಿಲ್ಲ. ಖಂಡಿತವಾಗಿಯೂ ಈ ನಿಟ್ಟಿನಲ್ಲಿ ಸರ್ಕಾರವು ಬಹಳ ದೊಡ್ಡದಾಗಿ ಆಲೋಚನೆಯನ್ನು ಮಾಡಬೇಕು. ಈ ಹಿಂದಿನ ಮುಖ್ಯಮಂತ್ರಿಗಳು ಒಂದು ಬಾರಿ ಎಲ್ಲಾ ಮಲ್ಟಿಪ್ಲೆಕ್ಸ್‌ಗಳ ಮಾಲೀಕರುಗಳನ್ನು ಕರೆಸಿ ಮಾತನಾಡಿ, ಅವರುಗಳಿಗೆ ಎಚ್ಚರಿಕೆಯನ್ನೂ ಸಹ ನೀಡಿದ್ದರು. ಆದರೆ ಈ ವಿಚಾರದಲ್ಲಿ ಯಾವುದೇ ರೀತಿಯ ಬದಲಾವಣೆಗಳಾಗಲಿಲ್ಲ. ಹಿಂದಿನ ಕ್ರಮವೇ ಮುಂದುವರೆದುಕೊಂಡು ಹೋಗಿದೆ.

ಮಲ್ಟಿಪ್ಲೆಕ್ಸ್‌ಗಳ ದರಗಳ ಬಗ್ಗೆ ಹೇಳುವುದಾದರೆ, ವಾರದ ದಿನಗಳ ಬಗ್ಗೆ ಒಂದು ರೀತಿಯಾದ ದರಗಳನ್ನು ವಿಧಿಸಿದರೆ, ವಾರಾಂತ್ಯದ ದಿನಗಳಂದು ಮತ್ತೊಂದು ರೀತಿಯಾದ ದರಗಳನ್ನು ವಿಧಿಸುತ್ತಾರೆ. ಶುಕ್ರವಾರ, ಶನಿವಾರ ಹಾಗೂ ಭಾನುವಾರಗಳಂದು ಒಂದು ಟಿಕೆಟ್‌ಗೆ ನಿಗದಿತ ದರಕ್ಕಿಂತ ಹತ್ತರಷ್ಟು ದರಗಳನ್ನು ಹೆಚ್ಚಿಸುತ್ತಾರೆ. ಈ ಸಂಗತಿಯು ಎಲ್ಲರಿಗೂ ಸಹ ತಿಳಿದ

ವಿಚಾರವಾಗಿದೆ. ಒಂದು ಟಿಕೆಟ್‌ಗೆ ಒಂದು ಸಾವಿರ ರೂಪಾಯಿಯಿಂದ ಎರಡು ಸಾವಿರ ರೂಪಾಯಿಗಳವರೆಗೆ ಪಾವತಿಸಿ ಪ್ರೇಕ್ಷಕರು ಟಿಕೆಟ್‌ನ್ನು ಖರೀದಿ ಮಾಡುತ್ತಾರೆ. ಇಂತಹ ಸಂಗತಿಗಳನ್ನು ಪ್ರಶ್ನಿಸುವವರು ಯಾರು? ಈ ಬಗ್ಗೆ ಯಾರು ಏಕೆ ಧ್ವನಿಯನ್ನು ಎತ್ತುತ್ತಿಲ್ಲ? ಮಲ್ಟಿಪ್ಲೆಕ್ಸ್‌ಗಳು ಇರುವುದು ನಮ್ಮ ಜಾಗದಲ್ಲಿ. ಅಲ್ಲಿ ಸಂಗ್ರಹಣೆಯಾಗುತ್ತಿರುವುದು ನಮ್ಮ ತೆರಿಗೆ, ನಮ್ಮ ಜನ ಅಲ್ಲಿನ ಟಿಕೆಟ್‌ಗಳಿಗೆ ಹಣವನ್ನು ಪಾವತಿಸುತ್ತಿದ್ದಾರೆ. ಈ ಬಗ್ಗೆ ನಾವು ಏಕೆ ಪ್ರಶ್ನಿಸುತ್ತಿಲ್ಲ? ಟಿಕೆಟ್ ದರ ಹಾಗೂ ಮಲ್ಟಿಪ್ಲೆಕ್ಸ್ ವಿಚಾರಗಳಲ್ಲಿ ಸರ್ಕಾರವು ಏಕೆ ಮೌನವನ್ನು ವಹಿಸಿದೆ? ಇದು ಬಹಳ ದೊಡ್ಡ ಆಶ್ಚರ್ಯಕರವಾದ ಸಂಗತಿಯಾಗಿದೆ. ನಮ್ಮ ನೆರೆಯ ರಾಜ್ಯವಾದ ತಮಿಳುನಾಡಿನಲ್ಲಿ ಎಲ್ಲಾ ಮಲ್ಟಿಪ್ಲೆಕ್ಸ್‌ಗಳಲ್ಲಿ ಟಿಕೆಟ್ ಒಂದಕ್ಕೆ 120 ರೂಪಾಯಿಗಳ ದರವನ್ನು ನಿಗದಿಪಡಿಸಿದ್ದಾರೆ. ಈ ದರವು ವಾರದ ಎಲ್ಲಾ ದಿನಗಳಿಗೂ ಸಹ ಅನ್ವಯಿಸುತ್ತದೆ. ಆದರೆ ಈ ರೀತಿಯ ಕ್ರಮಗಳನ್ನು ನಮ್ಮಿಂದ ಏಕೆ ತೆಗೆದುಕೊಳ್ಳಲು ಆಗುತ್ತಿಲ್ಲ? ಶುಕ್ರವಾರ, ಶನಿವಾರ ಹಾಗೂ ಭಾನುವಾರಗಳಂದು ಒಂದು ಟಿಕೆಟ್ ದರ ಒಂದು ಸಾವಿರ ರೂಪಾಯಿಯಿಂದ ಎರಡು ಸಾವಿರ ರೂಪಾಯಿಗಳವರೆಗೆ ಏರಿಕೆಯಾಗುತ್ತದೆ ಹಾಗೂ ಗೋಲ್ಡ್ ಕ್ಲಾಸ್‌ಗೆ ಹೋಗುವುದಕ್ಕೆ ಆಗುವುದೇ ಇಲ್ಲ. ವಾರಾಂತ್ಯದ ದಿನಗಳಲ್ಲಿ ಸಿನಿಮಾ ನೋಡಲು ಗೋಲ್ಡ್ ಕ್ಲಾಸ್‌ಗೆ ಹೋಗಬೇಡಿ ಎಂಬ ಸಲಹೆ ನೀಡುವುದು ಸುಲಭ. ಆದರೆ ಈ ರೀತಿಯ ವಾರಾಂತ್ಯದ ದರ ಹೆಚ್ಚಳದ ನಿಯಂತ್ರಣವನ್ನು ಏಕೆ ಮಾಡುತ್ತಿಲ್ಲ ಎಂಬುದು ಪ್ರಶ್ನೆಯಾಗಿದೆ. ನಾವು ಹಲವಾರು ರಾಜ್ಯಗಳ ಉದಾಹರಣೆಗಳನ್ನು ಕೊಡಬಹುದು. ನಮ್ಮ ನೆರೆಯ ರಾಜ್ಯಗಳಾದ ಕೇರಳ, ಆಂಧ್ರಪ್ರದೇಶ, ತಮಿಳುನಾಡು ಹಾಗೂ ಮಹಾರಾಷ್ಟ್ರಗಳಲ್ಲಿ ಹೇಗೆ ಪ್ರಾದೇಶಿಕ ಚಿತ್ರಗಳನ್ನು ಪ್ರದರ್ಶನ ಮಾಡಲು ಸ್ಕ್ರೀನ್‌ಗಳನ್ನು ಮೀಸಲಿಟ್ಟಿರುತ್ತಾರೆಯೋ ಅದೇ ರೀತಿಯಾಗಿ ನಮ್ಮ ರಾಜ್ಯದಲ್ಲಿನ ಮಲ್ಟಿಪ್ಲೆಕ್ಸ್‌ಗಳಲ್ಲಿ ನಮ್ಮ ಪ್ರಾದೇಶಿಕ ಚಿತ್ರಗಳನ್ನು ಪ್ರದರ್ಶನ ಮಾಡಲು ಸ್ಕ್ರೀನ್‌ಗಳನ್ನು ಮೀಸಲಿಡಲೇ ಬೇಕಾಗುತ್ತದೆ ಹಾಗೂ ಅದೇ ರೀತಿಯಾಗಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲೇಬೇಕಾಗುತ್ತದೆ ಎಂಬುದಾಗಿ ನಾನು ಹೇಳುತ್ತೇನೆ.

ಇತ್ತೀಚಿನ ದಿನಗಳಲ್ಲಿ ಬೆಂಗಳೂರು ನಗರದ ಕಬ್ಬನ್ ಉದ್ಯಾನವನ ಹಾಗೂ ಲಾಲ್‌ಬಾಗ್‌ನಲ್ಲಿ ಹಾಗೂ ಮೈಸೂರಿನ ಸರ್ಕಾರಿ ಗೃಹಗಳಲ್ಲಿ ಚಿತ್ರೀಕರಣವನ್ನು ಮಾಡುವಂತಿಲ್ಲ. ಇವುಗಳಿಗೆ ಅನುಮತಿಯನ್ನು ನೀಡುವುದಿಲ್ಲ. ಯಾವ ಕಾರಣಕ್ಕಾಗಿ ಅನುಮತಿಯನ್ನು ನೀಡಲಾಗುತ್ತಿಲ್ಲ ಎಂಬ ಅಂಶವು ನನಗೆ ಇನ್ನೂ ಅರ್ಥವಾಗುತ್ತಿಲ್ಲ. ಚಿತ್ರೀಕರಣದಿಂದಾಗಿ ಯಾವುದಾದರೂ ರೀತಿಯಾದ ತೊಂದರೆಗಳಾಗುತ್ತಿದ್ದರೆ ಅಥವಾ ಸರ್ಕಾರಿ ಸ್ವತ್ತುಗಳಿಗೆ ಹಾನಿ, ನಷ್ಟವುಂಟಾಗುತ್ತಿದ್ದರೆ ಇದಕ್ಕೆ ಸಂಬಂಧಪಟ್ಟಂತೆ ಮೊದಲೇ ಹಣವನ್ನು ಪಡೆದುಕೊಳ್ಳಿ. ಈ ರೀತಿಯಾಗಿ ಮೊದಲು ಮಾಡುತ್ತಿದ್ದರು.

**ಶ್ರೀ ಭೋಜೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ಸದನದ ಎಲ್ಲಾ ಸದಸ್ಯರುಗಳಿಗೆ ಕನ್ನಡ ಭಾಷೆಯ ಚಲನಚಿತ್ರಗಳ ಬಗ್ಗೆ ಬಹಳ ಅಭಿಮಾನವಿದೆ. ಶ್ರೀಮತಿ ತಾರಾ ಅನೂರಾಧ ರವರು ಬಹಳಷ್ಟು ವಿಷಯಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಣೆ ಮಾಡಿ ಇಲ್ಲಿ ಬಹಳ ಚೆನ್ನಾಗಿ ಪ್ರಸ್ತಾಪ ಮಾಡುತ್ತಿದ್ದಾರೆ. ಈ ಬಗ್ಗೆ ನಮಗೆ ಬಹಳ ಗೌರವವಿದೆ. ಬಹಳ ಮುಖ್ಯವಾಗಿರುವ ವಿಚಾರವೇನೆಂದರೆ, ಇತ್ತೀಚಿನ ದಿನಗಳಲ್ಲಿ ಕನ್ನಡ ಭಾಷೆಯಲ್ಲಿ ಕೆಲವಾರು ವರ್ಷಗಳಿಂದ ಉತ್ತಮ ಗುಣಮಟ್ಟದ ಚಿತ್ರಗಳು ತೆರೆಕಾಣುತ್ತಿಲ್ಲ. ಉತ್ತಮ ಗುಣಮಟ್ಟದ ಚಿತ್ರಗಳು ತೆರೆಕಂಡಲ್ಲಿ ನಮ್ಮ ಜನರೂ ಸಹ ಎಲ್ಲಾ ಚಿತ್ರಮಂದಿರಗಳಲ್ಲಿ ನೂಕು ನುಗ್ಗಲಾಗಿ ಹೋಗಿ ಚಿತ್ರಗಳನ್ನು ನೋಡುತ್ತಾರೆ. ಯಾವುದೇ ರೀತಿಯಾದ ಚಿತ್ರಮಂದಿರವಾಗಿರಲಿ, ಅಲ್ಲಿ ಯಾವುದೇ ರೀತಿಯಾದ ಶೌಚಾಲಯ ಅಥವಾ ಸರಿಯಾದ ಆಸನ ವ್ಯವಸ್ಥೆಗಳಿಲ್ಲದಿದ್ದರೂ ಸಹ ಚಿತ್ರಗಳನ್ನು ನೋಡುವಂತಹ ಆಸಕ್ತಿ ನಮ್ಮ ಎಲ್ಲಾ ಕನ್ನಡಾಭಿಮಾನಿಗಳಲ್ಲಿ ಇದೆ. ಮಾನ್ಯ ಸಭಾನಾಯಕರಾದ ಡಾ|| ಜೈಮಾಲ ರಾಮಚಂದ್ರ ಹಾಗೂ ಶ್ರೀಮತಿ ತಾರಾ ಅನೂರಾಧರವರುಗಳೂ ಸಹ ನಮ್ಮ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷರಾಗಿ ಕೆಲಸವನ್ನು ನಿರ್ವಹಿಸಿದ್ದಾರೆ. ಆದರೆ ಉತ್ತಮ ಗುಣಮಟ್ಟದ ಚಿತ್ರಗಳು ಬಿಡುಗಡೆಯಾಗುವಂತಹ ವಿಚಾರದಲ್ಲಿ ಅಡಿಪಾಯದಲ್ಲಿಂದ ಸರಿಯಾದ ಕೆಲಸಗಳಾಗಬೇಕು. ಕೆಳಹಂತದಿಂದ ಸರಿಯಾದ ಕೆಲಸಗಳಾದಾಗ ಮಾತ್ರ ನಾವೂ ಸಹ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಚಿತ್ರಮಂದಿರಗಳ ವಿಚಾರವಾಗಿಯೂ ಸಹ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಚಿತ್ರಮಂದಿರ ಮಾಲೀಕರ ಸಂಕಷ್ಟವನ್ನೂ ಸಹ ನಾವು ನೋಡಬೇಕಾಗುತ್ತದೆ. ಇವತ್ತಿನ ದಿವಸ ಚಿತ್ರಮಂದಿರಗಳು ನೂರಕ್ಕೆ ನೂರರಷ್ಟು ಲಾಭದಾಯಕವಾಗಿಲ್ಲ. ಆದರೆ ಚಿತ್ರಮಂದಿರಗಳನ್ನು ಮುಚ್ಚಿದರೆ ಎಲ್ಲಿ ದೊಡ್ಡ ಮಟ್ಟದಲ್ಲಿ ಗಲಾಟೆಗಳಾಗುತ್ತವೆ ಎಂಬ ಭೀತಿಯಿಂದ ಅನಿವಾರ್ಯವಾಗಿ ಅವುಗಳನ್ನು ನಡೆಸುತ್ತಿದ್ದಾರೆ. ಅವರ ತಾತ, ತಂದೆ ಇವರುಗಳು ಮಾಡಿದ ಆಸ್ತಿ ಎಂಬುದಾಗಿ ಅವುಗಳನ್ನು ಮಾರಲೂ ಆಗದೇ, ಇಟ್ಟುಕೊಳ್ಳಲೂ ಆಗದೇ ಚಿತ್ರಮಂದಿರಗಳನ್ನು ನಡೆಸಿಕೊಂಡು ಅದರ ಮಾಲೀಕರುಗಳು ಜೀವನ ಸಾಗಿಸುತ್ತಿದ್ದಾರೆ. ಚಿತ್ರಮಂದಿಗಳ ವಿಚಾರದಲ್ಲಿಯೂ ಸಹ ಅದರದ್ದೇ ಆದ ಸಮಸ್ಯೆಗಳಿವೆ. ಚಿತ್ರಮಂದಿರಗಳಲ್ಲಿ ಕನ್ನಡ ಭಾಷೆಯ ಚಿತ್ರಗಳಿಗೆ ಪ್ರದರ್ಶನಕ್ಕೆ ಅವಕಾಶ ಸಿಗುತ್ತಿಲ್ಲ ಎಂಬುದಾಗಿ ಹೇಳುತ್ತಿದ್ದಾರೆ. ಆದರೆ ಮಲ್ಟಿಪ್ಲೆಕ್ಸ್‌ಗಳ ವಿಚಾರಕ್ಕೆ ಸಂಬಂಧಪಟ್ಟಂತೆ ನಮ್ಮ ಎಲ್ಲಾ ಸದಸ್ಯರುಗಳ ಬೆಂಬಲವಿದೆ. ಗಂಟೆಗೊಮ್ಮೆ ವಿಮಾನಯಾನದ ದರಗಳು ಬದಲಾವಣೆಯಾದಂತೆ ಮಲ್ಟಿಪ್ಲೆಕ್ಸ್‌ಗಳಲ್ಲಿ ಗಂಟೆಗೊಮ್ಮೆ ಚಿತ್ರಗಳ ಟಿಕೆಟ್ ದರಗಳು ಬದಲಾವಣೆಯಾಗುತ್ತವೆ. ಈ ವಿಚಾರದಲ್ಲಿ ಗಂಭೀರವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು. ಈ ವಿಚಾರದ ಬಗ್ಗೆ ಹಿಂದೆ ದಿನಪತ್ರಿಕೆಗಳಲ್ಲಿ ಪ್ರಕಟವಾಗಿತ್ತು ಹಾಗೂ ಈ ಸದನದಲ್ಲಿ ಚರ್ಚೆಯೂ ಸಹ ಆಗಿತ್ತು. ಆದರೆ ಈ ವಿಚಾರದಲ್ಲಿ ಯಾವುದೇ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಲಾಗಲಿಲ್ಲ. ಮತ್ತೊಂದು ವಿಚಾರವೇನೆಂದರೆ, ಕೆಲವೊಂದು ಸ್ಥಳಗಳಲ್ಲಿ ಚಿತ್ರೀಕರಣಕ್ಕೆ

ಅನುಮತಿ ನೀಡುತ್ತಿಲ್ಲ, ತೊಂದರೆ ಮಾಡುತ್ತಿದ್ದಾರೆ ಎಂಬ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ನಾನು ಮಲೆನಾಡು ಪ್ರದೇಶದಿಂದ ಬಂದವನಾಗಿದ್ದೇನೆ. ನಿರ್ಮಾಪಕರು ಯಾರೇ ಇರಬಹುದು, ದಯಮಾಡಿ ಕ್ಷಮಿಸಬೇಕು. ಚಿತ್ರೀಕರಣ ಮುಗಿದ ನಂತರ ಪರಿಸರಕ್ಕೆ ತುಂಬಾ ಹಾನಿಯನ್ನುಂಟು ಮಾಡಿದ್ದಾರೆ. ಇಂತಹ ಸಂದರ್ಭದಲ್ಲಿ ಈ ಬಗ್ಗೆ ಯಾರಾದರೂ ಪ್ರಶ್ನೆ ಮಾಡಲು ಹೋದರೆ, ಹಲವಾರು ಬಾರಿ ಚಿತ್ರೀಕರಣ ಸ್ಥಳಗಳಲ್ಲಿ ದೊಡ್ಡ ಮಟ್ಟದಲ್ಲಿ ಗಲಾಟೆ, ಹೊಡೆದಾಟಗಳಾಗಿವೆ. ವಿಚಾರಗಳು ಪೊಲೀಸ್ ಠಾಣೆವರೆಗೂ ಸಹ ಹೋಗಿವೆ. ಅಂತ್ಯದಲ್ಲಿ ಪೋಲೀಸರು ಚಿತ್ರ ತಂಡಕ್ಕೆ ಬೆಂಬಲಿಸಿ, ಸ್ಥಳೀಯರನ್ನು ಜೈಲಿಗೆ ಹಾಕಿರುವಂತಹ ಸಂದರ್ಭಗಳಾಗಿವೆ. ಚಿತ್ರೀಕರಣ ಸ್ಥಳಗಳಲ್ಲಿ ಮರಗಳನ್ನು ಕಡಿಯುತ್ತಾರೆ. ಹೀಗಾಗಿ ಕಬ್ಬನ್ ಉದ್ಯಾನವನ ಹಾಗೂ ಲಾಲ್‌ಬಾಗ್‌ಗಳಂತಹ ಪ್ರದೇಶಗಳಲ್ಲಿ ಚಿತ್ರೀಕರಣಕ್ಕೆ ಅನುಮತಿಯನ್ನು ನೀಡುತ್ತಿಲ್ಲ. ಇವತ್ತಿನ ದಿವಸ ಒಂದು ಸಸಿಯನ್ನು ಬೆಳೆಸಬೇಕಾದರೆ ಎಷ್ಟು ಕಷ್ಟವಿದೆ ಎನ್ನುವುದು ನಮಗೆಲ್ಲಾ ಗೊತ್ತಿದೆ.

**ಸಭಾಪತಿಯವರು**:- ಮಾನ್ಯ ಭೋಜೇಗೌಡರೇ, ಸಚಿವರು ನೀಡುವಂತಹ ಉತ್ತರವನ್ನು ನೀವು ನೀಡುತ್ತಿದ್ದೀರಿ.

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ**:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಸಚಿವರಾಗಿ ಮಾತನಾಡುತ್ತಿದ್ದಾರೆಯೇ ಎಂಬ ಅನುಮಾನ ನಮಗೆ ಬರುತ್ತಿದೆ.

**ಶ್ರೀ ಭೋಜೇಗೌಡ**:- ಮಾನ್ಯ ಸಭಾಪತಿಯವರೇ, ದಯಮಾಡಿ ಕ್ಷಮಿಸಬೇಕು. ನಾನು ನನ್ನ ಚೊಚ್ಚಲ ಸಭೆಯಲ್ಲಿ ಭಾಗವಹಿಸಿದ್ದೇನೆ. ನನಗೆ ಅನುಭವವಿಲ್ಲ.

**ಸಭಾಪತಿಯವರು**:- ತಮಗೆ ಅನುಭವವಿಲ್ಲ ಎಂಬ ಕಾರಣಕ್ಕಾಗಿಯೇ ತಾವು ಮಾತನಾಡಲು ಪ್ರಾರಂಭಿಸಿದಾಗ ಯಾರೂ ಸಹ ತಮಗೆ ಅಡ್ಡಿಯನ್ನುಂಟು ಮಾಡಬಾರದು ಎಂಬುದಾಗಿ ಸಲಹೆಯನ್ನು ನೀಡಿದ್ದೇನೆ. ತಾರಾ ಅನೂರಾಧರವರೇ ತಾವು ಚರ್ಚೆಯನ್ನು ಮುಂದುವರೆಸಿ.

**ಶ್ರೀಮತಿ ತಾರಾ ಅನೂರಾಧ(ನಾಮನಿರ್ದೇಶಿತರು)**:- ಮಾನ್ಯ ಸಭಾಪತಿಯವರೇ, ಮಾನ್ಯ ಹೊಸ ಸದಸ್ಯರ . . .

**ಶ್ರೀ ಆಯನೂರು ಮಂಜುನಾಥ್(ಪದವೀಧರರ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ನಾನು ಈ ಸದನಕ್ಕೆ ಹೊಸ ಸದಸ್ಯನಾಗಿದ್ದೇನೆ. ಅಕಾಡೆಮಿಕ್ ಆಸಕ್ತಿಯಿಂದ ಹಾಗೂ ಮಾಹಿತಿಗೋಸ್ಕರ ನನಗೆ ಕೊಟ್ಟಂತಹ ನಿಯಮಾವಳಿಗಳ ಪುಸ್ತಕದಲ್ಲಿ ಗಮನ ಸೆಳೆಯುವ ಸೂಚನೆ ಅರ್ಧ ಗಂಟೆ ಎಂಬುದಾಗಿದೆ.

ಆದರೆ ಈ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರವನ್ನೇ ನೀಡಿಲ್ಲ. ಪರಿಸ್ಥಿತಿ ಹೀಗಿರುವಾಗ, ನಾವು ಯಾವ ರೀತಿಯಾಗಿ ಚರ್ಚೆಯನ್ನು ಮಾಡಬೇಕು?

**ಸಭಾಪತಿಯವರು:-** ಮಾನ್ಯ ಮಂತ್ರಿಗಳು ಉತ್ತರವನ್ನು ನೀಡಿದ್ದಾರೆ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಉತ್ತರವನ್ನು ನೀಡಿದ ನಂತರ ನಮಗೆ ಪುನಃ ಚರ್ಚೆಗೆ ಅವಕಾಶವನ್ನು ನೀಡಬೇಕು. ಆದರೆ ಮಂತ್ರಿಗಳು ಉತ್ತರವನ್ನೇ ಕೊಡದೇ ಚರ್ಚೆ ಮಾಡಲಾಗುವುದಿಲ್ಲ. ನಾವು ಸದಸ್ಯರು ಗಮನ ಸೆಳೆಯುವ ಸೂಚನೆಯನ್ನು ಕೊಡುತ್ತೇವೆ. ಅದಕ್ಕೆ ಪ್ರತಿಯಾಗಿ ಸರ್ಕಾರವು ಉತ್ತರವನ್ನು ನೀಡಬೇಕು. ಸರ್ಕಾರವು ನೀಡಿರುವ ಉತ್ತರವು ಸಮಂಜಸವಾಗಿದ್ದರೆ ನಾವು ಚರ್ಚೆ ಮಾಡದೇ ಹಾಗೆಯೇ ಕುಳಿತುಕೊಳ್ಳುತ್ತೇವೆ ಇಲ್ಲವೆಂದಾದಲ್ಲಿ ನಾವು ಚರ್ಚೆಯನ್ನು ಮಾಡುತ್ತೇವೆ. ಹೀಗಾಗಿ ಎಲ್ಲಾ ವಿಚಾರಗಳಲ್ಲಿಯೂ ಸಹ ತಾವು ಸರ್ಕಾರದಿಂದ ಉತ್ತರವನ್ನು ಕೊಡಿಸಬೇಕಾಗುತ್ತದೆ. ಮಾನ್ಯ ಸಭಾನಾಯಕರು ಹೇಳಿರುವ ಅಂಶವನ್ನು ನಾನು ಕೇಳಿದ್ದೇನೆ. ಸಂಬಂಧಪಟ್ಟ ಎಲ್ಲಾ ಮಂತ್ರಿಗಳಿಂದ ಉತ್ತರವನ್ನು ತರಿಸಿ ಕೊಡುತ್ತೇನೆ ಎಂಬುದಾಗಿ ಹೇಳಿದ್ದಾರೆ. ಹೀಗೆ ಎಲ್ಲಾ ಮಂತ್ರಿಗಳಿಂದ ಉತ್ತರವನ್ನು ತರಿಸಿ ಕೊಡುವುದಾದರೆ ಪ್ರಸ್ತುತ 10 ದಿನಗಳ ಅಧಿವೇಶನದ ಅವಧಿಯನ್ನು ಮತ್ತೂ ಇನ್ನೂ 10 ದಿನಗಳವರೆಗೆ ವಿಸ್ತರಿಸಬೇಕಾಗುತ್ತದೆ. ನಾವು ಸದನಕ್ಕೆ ಬಂದಿದ್ದೇವೆ. ಮಾನ್ಯ ಮಂತ್ರಿಗಳು ಅವತ್ತಿನ ವಿಚಾರಗಳಿಗೆ ಸಂಬಂಧಪಟ್ಟಂತೆ ತಯಾರಾಗಿ ಬರಬೇಕು. ಅದನ್ನು ಬಿಟ್ಟು ಹುಡುಗಾಟದಲ್ಲಿ ನಾವು ಮಾತನಾಡುತ್ತಾ ಹೋಗುವುದು, ಅದನ್ನು ಅವರುಗಳು ಕೇಳುತ್ತಾ ಹೋಗುವುದು ಅಂತಹ ಪ್ರಸಂಗಗಳು ಆಗುವುದಿಲ್ಲ. ಮಾನ್ಯ ಮಂತ್ರಿಗಳು ಉತ್ತರವನ್ನು ನೀಡಲಿ ಅಥವಾ ಅವರ ಪರವಾಗಿ ಯಾರಾದರೂ ಸರಿ, ಮೊದಲು ಉತ್ತರವನ್ನು ನೀಡಲಿ. ಉತ್ತರವನ್ನು ನೀಡಿದ ನಂತರ ನಾವು ಚರ್ಚೆಯನ್ನು ಪ್ರಾರಂಭಿಸುತ್ತೇವೆ.

**ಸಭಾಪತಿಯವರು:-** ಮಾನ್ಯ ಮಂತ್ರಿಗಳು ಉತ್ತರವನ್ನು ನೀಡಿದ್ದಾರೆ. ಅದು ಮಾನ್ಯ ಸದಸ್ಯರಿಗೆ ತಲುಪಿದೆ. ಅದರ ಆಧಾರದ ಮೇಲೆಯೇ ಅವರು ಮಾತನಾಡುತ್ತಾರೆ ಹಾಗೂ ಸ್ಪಷ್ಟೀಕರಣವನ್ನು ಕೇಳುತ್ತಾರೆ. ಇದಕ್ಕೆ ಸಂಬಂಧಪಟ್ಟ ಉತ್ತರವನ್ನು ಮಂತ್ರಿಗಳು ನೀಡುತ್ತಾರೆ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳಿಂದ ಉತ್ತರ ಬಂದಿಲ್ಲ.

**ಸಭಾಪತಿಯವರು:-** ಇವತ್ತು ಅಧಿವೇಶನದ ಮೊದಲನೇ ದಿನ. ಮಾನ್ಯ ಮಂತ್ರಿಗಳಿಂದ ಉತ್ತರ ಬರುವುದು ತಡವಾಗಿದೆ. ಉತ್ತರ ಬಂದ ತಕ್ಷಣ ಅದನ್ನು ಮಾನ್ಯ ಸದಸ್ಯರಿಗೆ ನೀಡಲಾಗಿದೆ. ಇದರಲ್ಲಿ ಎರಡು ಸಂಗತಿಗಳಿವೆ. ಮೊದಲನೆಯದು ಉತ್ತರವನ್ನು ಓದಬೇಕು. ಇಲ್ಲವೆಂದಾದರೆ ಅದನ್ನು ಟೇಬಲ್ ಮೇಲೆ lay ಮಾಡಬೇಕು. ಅವರು ಉತ್ತರವನ್ನು lay ಮಾಡುವುದಕ್ಕೆ ನಾನು ಅನುಮತಿಯನ್ನು ನೀಡಿದ್ದೇನೆ. ಮಾನ್ಯ ಸದಸ್ಯರಿಗೆ ಉತ್ತರ ತಲುಪಿದೆ. ಹೀಗಾಗಿ ಮಾನ್ಯ ಸದಸ್ಯರು ಸ್ಪಷ್ಟೀಕರಣವನ್ನು ಕೇಳುತ್ತಾರೆ. ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಮಂತ್ರಿಗಳು ಉತ್ತರವನ್ನು ಹೇಳುತ್ತಾರೆ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ನಮ್ಮ ಸದಸ್ಯರು ಪ್ರಸ್ತಾಪ ಮಾಡುವಾಗ, ಆಡಳಿತ ಪಕ್ಷದ ಸದಸ್ಯರು ಮಧ್ಯ ಪ್ರವೇಶ ಮಾಡಬಾರದು. ಅವರು ಹೀಗೆ ಮಾಡಿದಲ್ಲಿ ನಮ್ಮ ಹಕ್ಕನ್ನು ತಾವು ರಕ್ಷಿಸಬೇಕು. ಮಾನ್ಯ ಸಭಾಪತಿಯವರು ಇಂತಹ ಪ್ರಸಂಗಗಳನ್ನು ಗಮನಿಸಬೇಕು. ಇದನ್ನು ತಾವು ಹೇಳದೇ ಇದ್ದರೆ ಸದನದಲ್ಲಿ ಅನವಶ್ಯಕವಾದ ಗೊಂದಲಗಳುಂಟಾಗುತ್ತವೆ.

**ಸಭಾಪತಿಯವರು:-** ನಾನು ಅನುಮತಿಯನ್ನು ನೀಡಿದಾಗ ಯಾರಾದರೂ ಮಾತನಾಡಬೇಕಾಗುತ್ತದೆ. ನಾನು ಅನುಮತಿಯನ್ನು ನೀಡಿದ್ದೇನೆ. ಹೀಗಾಗಿ ಅವರು ಮಾತನಾಡುತ್ತಿದ್ದಾರೆ. ಶ್ರೀಮತಿ ತಾರಾ ಅನೂರಾಧರವರೇ ತಾವು ಬೇಗ ತಮ್ಮ ಮಾತುಗಳನ್ನು ಮುಗಿಸಿ.

(ಮುಂದು)

(011) 11-7-2018 11.50 ಬಿಎಸ್‌ಡಿ/ಎಂಡಿ

**ಸಭಾಪತಿಯವರು :-** ತಾವು ನನ್ನ ಅನುಮತಿ ಪಡೆದು ಮಾತನಾಡಬೇಕು.

"ತಿದ್ದುಪಡಿಯಾಗದ ಪ್ರತಿ, ನಾ

**ಶ್ರೀಮತಿ ತಾರಾ ಅನೂರಾಧ :-** ಮಾನ್ಯ ಸಭಾಪತಿಯವರೇ, ಹೊಸ ಸದಸ್ಯರ ಕಾಳಜಿಯನ್ನು ನಾನು ಒಪ್ಪಿಕೊಳ್ಳುತ್ತೇನೆ. ಒಳ್ಳೆಯ ಗುಣಮಟ್ಟದ ಸಿನಿಮಾಗಳನ್ನು ಕೊಡುವ ಜವಾಬ್ದಾರಿ ಎಲ್ಲಾ ನಿರ್ಮಾಪಕರು ಹಾಗೂ ಚಿತ್ರೋದ್ಯಮದ ಮೇಲೆ ಇದೆ. ಆದರೆ ಒಳ್ಳೆಯ ಚಿತ್ರಗಳು ಬಿಡುಗಡೆಯಾದಾಗ ಎಷ್ಟು ಜನರು ನೋಡಿದ್ದಾರೆ ಎಂಬ ಸಂದೇಹವೂ ಇದೆ. ಮೊನ್ನೆ ಹೆಬ್ಬೆಟ್ ರಾಮಕ್ಕ ಚಿತ್ರವು ಬಿಡುಗಡೆಯಾದಾಗ ಮಾನ್ಯ ಸದಸ್ಯರು ಆ ಸಿನಿಮಾವನ್ನು ನೋಡಿದ್ದಾರೆಯೇ ಎಂದು ಕೇಳಬೇಕು.

ಆದ್ದರಿಂದ ಒಳ್ಳೆಯ ಚಿತ್ರಗಳನ್ನು ಎಷ್ಟು ಜನರು ನೋಡಿದ್ದಾರೆ ಎಂಬುದು ಬಹಳ ಮುಖ್ಯವಾಗುತ್ತದೆ. ಅದೇರೀತಿ ಚಿತ್ರೀಕರಣ ಮಾಡಲು ಅನುಮತಿ ನೀಡುವಾಗ ಬೇರೆ ಬೇರೆ ತೊಂದರೆಗಳಾಗುತ್ತವೆ ಎಂದು ಅನುಮತಿ ಕೊಡಲು ಸ್ವಲ್ಪ ಕಷ್ಟವಾಗುತ್ತದೆ ಎಂಬುದು ನಿಜ. ಅದಕ್ಕೆ ಘನವಾದ ಒಂದು ಕಾನೂನು ಇರಬೇಕು. ಆದ್ದರಿಂದ ಒಳ್ಳೆಯ ಕಾನೂನನ್ನು ಮಾಡಿ ಮುಂಗಡ ಹಣವನ್ನು ಪಡೆದುಕೊಳ್ಳಬೇಕು.

ಶ್ರೀ ಶ್ರೀ **ಟಿ.ಎ. ಶರವಣಃ–** ಮಾನ್ಯ ಸಭಾಪತಿಯವರೇ, ಹೆಬ್ಬೆಟ್ಟು ರಾಮಕ್ಕ ಚಿತ್ರ ಬಿಡುಗಡೆಯಾದಾಗ ಮಾನ್ಯ ತಾರಾರವರು ಸದಸ್ಯರೆಲ್ಲರನ್ನೂ ಕರೆಸಿ ಸಿನಿಮಾ ತೋರಿಸುತ್ತಾರೆ ಎಂದು ಅಂದುಕೊಂಡಿದ್ದೆವು.

**ಸಭಾಪತಿಯವರು :–** ಯಾರೂ ಬೇಕಾದ ರೀತಿ ಎದ್ದು ನಿಂತು ಮಾತನಾಡಬೇಡಿ, ನನ್ನ ಅನುಮತಿ ಪಡೆದು ಮಾತನಾಡಿ.

**ಶ್ರೀಮತಿ ತಾರಾ ಅನೂರಾಧ :–** ಮಾನ್ಯ ಸಭಾಪತಿಯವರೇ, ಚಿತ್ರೀಕರಣಕ್ಕೆ ಅನುಮತಿ ಕೊಡುವಾಗ ಮೊದಲೇ ನಿರ್ಬಂಧಗಳನ್ನು ಹಾಕಿ, ಅವರಿಂದ ಮುಂಗಡ ಹಣವನ್ನು ಪಡೆದು ಚಿತ್ರೀಕರಣ ಮಾಡಲು ಅನುಕೂಲ ಮಾಡಿಕೊಡಬಹುದು. ಮೊದಲು ಡಾ॥ ರಾಜ್‌ಕುಮಾರ್ ಸಿನಿಮಾಗಳೆಲ್ಲವೂ ಕೆಲವು ಜಾಗಗಳಲ್ಲಿ ಚಿತ್ರೀಕರಣ ಆಗಿದೆ.

ಇನ್ನು ಒಳ್ಳೆಯ ಚಿತ್ರಗಳಿಗೆ ಸರ್ಕಾರದಿಂದ ಅನುದಾನ ಕೊಡುವ ಬಗ್ಗೆ ಈ ಸದನದಲ್ಲಿ ನಾನು ಮಾತನಾಡಿದ ಸಂದರ್ಭದಲ್ಲಿ ಮಾನ್ಯ ದೇಶಪಾಂಡೆಯವರು ರೂ.2 ಲಕ್ಷಗಳ ಅನುದಾನ ಕೊಡುವ ಬಗ್ಗೆ ಮಾಡಿದರು. ನಂತರ ಮಾನ್ಯ ಪ್ರಿಯಾಂಕ ಖರ್ಗೆಯವರು ರೂ.5 ಲಕ್ಷಗಳಿಗೆ ಹೆಚ್ಚು ಮಾಡಿ ಅನುದಾನ ಕೊಡುತ್ತೇನೆ ಎಂದು ಹೇಳಿದರು. ಆದರೆ ನನಗೆ ಸಂದೇಹ ಇದೆ. ಇದುವರೆಗೂ ಎಷ್ಟು ಸಿನಿಮಾಗಳಿಗೆ ಪ್ರವಾಸೋದ್ಯಮ ಇಲಾಖೆ ಹಣವನ್ನು ಒದಗಿಸಿಕೊಟ್ಟಿದೆ ಎಂಬ ಬಗ್ಗೆ ಮಾನ್ಯ ಪ್ರಿಯಾಂಕ ಖರ್ಗೆಯವರು ಉತ್ತರಿಸುತ್ತಾರೆ ಎಂದು ಭಾವಿಸುತ್ತೇನೆ.

ಶ್ರೀ ಪ್ರಿಯಾಂಕ ಖರ್ಗೆ (ಸಮಾಜ ಕಲ್ಯಾಣ ಸಚಿವರು):– ಮಾನ್ಯ ಸಭಾಪತಿಯವರೇ,

**ಸಭಾಪತಿಯವರು :–** ಉತ್ತರ ಕೊಡುವಾಗ ಸ್ಪಷ್ಟೀಕರಣ ಕೊಟ್ಟರೆ ಒಳ್ಳೆಯದು.

ಶ್ರೀ ಪ್ರಿಯಾಂಕ ಖರ್ಗೆ :– ಮಾನ್ಯ ಸಭಾಪತಿಯವರೇ, ಒಂದೈದು ನಿಮಿಷದಲ್ಲಿ ಸ್ಪಷ್ಟೀಕರಣ ಕೊಡುತ್ತೇನೆ. ಮಾನ್ಯ ಸದಸ್ಯರು ಬಹಳಷ್ಟು ಅಂಶಗಳ ಮೇಲೆ ಬೆಳಕು ಚೆಲ್ಲಿದ್ದು, ಅವರು ಹೇಳಿದ ಅಂಶಗಳಲ್ಲಿ ಶೇಕಡ 70ರಿಂದ 75 ಅಂಶಗಳನ್ನು ಒಪ್ಪಿಕೊಳ್ಳುತ್ತೇನೆ. ಮೊದಲನೆಯದಾಗಿ ಅವರು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

'Single Window System' ಬಗ್ಗೆ ಹೇಳಿದರು ಮತ್ತು ಪ್ರವಾಸಿಗರಿಗೆ Landscape ಅಥವಾ Archaeological side ಗಳಲ್ಲಿ ಅನುಕೂಲ ಮಾಡಿಕೊಡಬೇಕು, ಚಿತ್ರೀಕರಣಕ್ಕೂ ಅವಕಾಶ ಮಾಡಿಕೊಡಬೇಕು ಎಂದೆಲ್ಲಾ ಹೇಳಿದರು. ಆದರೆ Archaeological side ಗಳಲ್ಲಿ ಅನುಮತಿ ಕೊಡುವುದನ್ನು ಕೇಂದ್ರ ಸರ್ಕಾರವು ನಿಲ್ಲಿಸಿದೆ. ಅದಕ್ಕೆ ನಾವು ಚಿತ್ರರಂಗಕ್ಕೆ ಸಂಬಂಧಪಟ್ಟ ಎಲ್ಲಾ ರಾಜಕಾರಣಿಗಳ ಸಮಿತಿ ಮಾಡಿ, 'Film Tourism Policy' ಮಾಡುವ ಪ್ರಯತ್ನ ಮಾಡಿದ್ದೇವೆ. ಅದರ draft ಕೂಡ public ನಲ್ಲಿದೆ. ಇದರಲ್ಲಿ ಮಾನ್ಯ ಸದಸ್ಯರು ಸಮಿತಿಯ ಸದಸ್ಯರಾಗಿದ್ದು, ಈ ವಿಷಯ ಅವರಿಗೂ ಗೊತ್ತಿದೆ. ಅವರು ಇದಕ್ಕೆ ಅಗತ್ಯವಿರುವ ಶಿಫಾರಸ್ಸುಗಳನ್ನು ಮಾಡಿದ್ದಾರೆ. ಅವರು ಹೇಳಿದಂತೆ 'Single Window System' ಮತ್ತು 'Slab Based Subsidy' ಪದ್ಧತಿ ಕೂಡ ಅದರಲ್ಲಿ ಇದೆ. ಆದರೆ ಎಲ್ಲ ಶಿಫಾರಸ್ಸುಗಳನ್ನು ಪ್ರವಾಸೋದ್ಯಮ ಇಲಾಖೆ ಮಾಡುವುದಕ್ಕೆ ಆಗುವುದಿಲ್ಲ ಎಂದು ಮಾನ್ಯ ಮುಖ್ಯಮಂತ್ರಿಗಳ ಕಛೇರಿಗೆ ತಿಳಿಸಿದ್ದೇವೆ. ಅದರಲ್ಲಿ ಮಾನ್ಯ ಸದಸ್ಯರು ಸಕ್ರೀಯವಾಗಿ ಪಾಲ್ಗೊಂಡರೆ ಅವರು ತಿಳಿಸಿರುವ ಸಲಹೆಗಳನ್ನು ಅಳವಡಿಸಿಕೊಳ್ಳಬಹುದು. ಮಾನ್ಯ ಸದಸ್ಯರು Film City ಬಗ್ಗೆ ಕೂಡ ಮಾತನಾಡಿದರು. First three years of the previous Government, ಅದು Information and Broadcasting Department ನ ಅಧೀನದಲ್ಲಿತ್ತು. ಅದಾದ ಮೇಲೆ ಒಂದೂವರೆ ವರ್ಷದ ಹಿಂದೆ ಪ್ರವಾಸೋದ್ಯಮ ಇಲಾಖೆಗೆ ಬಂದಿದ್ದು, ನಂತರ ಇಲಾಖೆಯ ವತಿಯಿಂದ ಕಾಂಪೌಂಡ್, ರಸ್ತೆ ಸೇರಿದಂತೆ ಇನ್ನಿತರ ಮೂಲಭೂತ ಸೌಕರ್ಯಗಳನ್ನು ಮಾಡಿ, 'ERNST YOUNG' ಎನ್ನುವ ಒಂದು Consultancy ಅನ್ನು hire ಮಾಡಿದ್ದೇವೆ. ಸುಮಾರು ರೂ.300ರಿಂದ 400 ಕೋಟಿಗಳ worth project ಇದೆ. ಅದನ್ನು PPP (Public-private partnership) model ನಲ್ಲಿ ಮಾಡಬೇಕಾಗಿದ್ದು, ಅದರ draft ಕೂಡ ತಯಾರಿದೆ. ನಾನು ಇದರ ಬಗ್ಗೆ ಪತ್ರಿಕೆಗಳಲ್ಲಿ ಓದಿದ್ದೇನೆ, ಆದರೆ ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಬಳಿ ಇದರ ಬಗ್ಗೆ ಮಾತನಾಡಿಲ್ಲ. Entire project of the Film City is ready. ನಾವು investors ಗಳಿಗೆ ಹುಡುಕುತ್ತಿದ್ದೇವೆ. ಮಾನ್ಯ ಸದಸ್ಯರು ನಿರ್ಮಾಪಕರಿಗೆ ಬಹಳಷ್ಟು ಲುಕ್ಸಾನು ಆಗುತ್ತಿದೆ ಎಂದು ತಿಳಿಸಿದ್ದು, ವಿಶೇಷವಾಗಿ ನಾನು Information and Technology Minister ಆಗಿದ್ದಾಗ, IT Act strengthen ಮಾಡಬೇಕು, ವಿಶೇಷವಾಗಿ Anti-piracy laws ನಮ್ಮ ರಾಜ್ಯ ಸರ್ಕಾರದ ಅಡಿಯಲ್ಲಿ ಬರುವುದಿಲ್ಲ. ಅದು ಕೇಂದ್ರ ಸರ್ಕಾರದ ಅಡಿಯಲ್ಲಿ ಬರುತ್ತದೆ. And I am sure that, the

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

Hon'ble members will recognize the impact of piracy on film production. ಇದರ ಬಗ್ಗೆ ನಾನು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು Piracy Act ಅನ್ನು strengthen ಮಾಡಬೇಕು ಎಂದು ತಿಳಿಸಿದ್ದೇನೆ. ಇದಲ್ಲದೇ digital access ರೀತಿ ಹೊಸ ಹೊಸ platform ಗಳು ಬಂದಿವೆ. Net-flix ಇರಬಹುದು, Amazon ಇರಬಹುದು. ನಾನು ಅವರನ್ನು ಕರೆಸಿ ಕರ್ನಾಟಕದ ಚಿತ್ರಗಳನ್ನು ಯಾವರೀತಿ ಅವರ platform ನಲ್ಲಿ ಹಾಕಬಹುದು ಎಂದು ಚರ್ಚೆ ಮಾಡಿದ್ದೇನೆ. ಆ ಸಂದರ್ಭದಲ್ಲಿ ಶ್ರೀ ರಾಜೇಂದ್ರಸಿಂಗ್ ಬಾಬುರವರು ಅಧ್ಯಕ್ಷರಾಗಿದ್ದರು. ನಾನು ಅವರೊಡನೆಯೂ ಸಮಾಲೋಚನೆ ಮಾಡಿ ಸಂಪರ್ಕವನ್ನು ಬೆಳೆಸಿಕೊಟ್ಟಿದ್ದೆನು. ವಿಶೇಷವಾಗಿ ಈಗ ಹೊಸ ತಂತ್ರಜ್ಞಾನ ಬರುತ್ತಿದ್ದು, ಕನ್ನಡದಲ್ಲಿ Animation, Gaming and VFX ಗಳು ಹೆಚ್ಚು ಬಳಕೆಯಾಗುತ್ತಿವೆ. ಇದಕ್ಕಾಗಿ ವಿಶೇಷವಾಗಿ Gaming, Animation and Visual Effects Summit ನ್ನು ಕೂಡ ಮಾಡಿದ್ದೆವು. ಅದರಲ್ಲಿ ಕನ್ನಡ ಚಿತ್ರರಂಗಕ್ಕೆ ಪ್ರತ್ಯೇಕವಾದ session ಕೊಟ್ಟು ಯಾವ ರೀತಿ ತರಬೇತಿ ಕೊಡಬಹುದು ಅಥವಾ employable based skill sets ಮಾಡಬಹುದು ಎಂಬುದನ್ನು ನಮ್ಮ ಇಲಾಖೆಯಿಂದ ಮಾಡಿದ್ದೇವೆ. ಇಡೀ ದೇಶದಲ್ಲಿ ಮೊಟ್ಟಮೊದಲ ಬಾರಿಗೆ Original Intellectual Property content ನ್ನು Animation ನಲ್ಲಿ develop ಮಾಡುವವರಿಗೆ Idea2POC (Idea to Proof of Concept), ನಲ್ಲಿ 25 Animation Companies ನವೋದ್ಯಮಗಳಿಗೆ..... ಮಂಗಳೂರಿನಲ್ಲಿ ಕಂಪನಿಯೊಂದು Cartoon Network ಆಧಾರಿತ "Andaphirki" ಎನ್ನುವ ಒಂದು ಧಾರಾವಾಹಿಯ ಮೂಲಕ ಕೋಟ್ಯಾಂತರ ರೂಪಾಯಿಗಳ ವ್ಯವಹಾರವನ್ನು ಮಾಡಿದ್ದಾರೆ. ಅವರಿಗೆ ನಮ್ಮ ರಾಜ್ಯ ಸರ್ಕಾರವು ಉತ್ತೇಜನ ನೀಡಿದೆ. ಮಾನ್ಯ ಸದಸ್ಯರು ಹೇಳಿದಂತೆ ಇನ್ನೂ ಸಾಕಷ್ಟು ಉತ್ತೇಜನ ನೀಡಬೇಕಾಗಿದೆ. ಅವರು ಹೇಳಿರುವ ಅಂಶಗಳನ್ನು ನಾನು ಒಪ್ಪುತ್ತೇನೆ. ಮಾನ್ಯ ಸದಸ್ಯರು ಸಮಿತಿಯ ಸದಸ್ಯರಾಗಿದ್ದು, ಈಗ ತಯಾರಾಗಿರುವ draft ನೋಡಿ before it is enacted ಏನೇನು ತಿದ್ದುಪಡಿ ಮಾಡಬೇಕೆಂದು ಕೊಟ್ಟರೆ ಆ ಕೆಲಸವನ್ನು ಮಾಡಬಹುದು.

**ಶ್ರೀಮತಿ ತಾರಾ ಅನೂರಾಧ :-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಧನ್ಯವಾದಗಳನ್ನು ಹೇಳುತ್ತೇನೆ. ಅವರು ಪ್ರವಾಸೋದ್ಯಮ ಇಲಾಖೆಯಿಂದ ಎಲ್ಲಾ ಅನುಕೂಲಗಳನ್ನು ಮಾಡಿಕೊಟ್ಟಿದ್ದರೂ ಎಷ್ಟು ಜಾರಿಯಲ್ಲಿದೆ ಎಂಬುದು ಗೊತ್ತಿಲ್ಲ. Single screen ಚಿತ್ರಮಂದಿರಗಳ ಮಾಲೀಕರ ಬಗ್ಗೆ ನಮಗೆ ನಿಜವಾಗಲು ಗೌರವ ಇದೆ. ಅವರಿಂದಲೇ ದೊಡ್ಡ ದೊಡ್ಡ ನಟರು ಬೆಳೆಯಲು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಾಧ್ಯವಾಗಿದೆ. ಆದ್ದರಿಂದ ಅವರು ಸಂಕಷ್ಟದಲ್ಲಿದ್ದಾರೆ ಎಂದು ವ್ಯಾಪಾರ ಮಳಿಗೆಗಳನ್ನು ಮಾಡುವ ಸಂದರ್ಭದಲ್ಲಿ ಸಣ್ಣ ಸಣ್ಣ ಸ್ಕ್ರೀನ್ ಇರುವ ಥಿಯೇಟರ್‌ಗಳನ್ನು ಮಾಡಬೇಕೆಂಬುದು ನನ್ನ ಸಲಹೆಗಳನ್ನು ನಾನು ಕೊಟ್ಟಿದ್ದೇನೆ. ಬಿಡಿಎ, ಮೂಡಾ ಮತ್ತಿತ್ತರ ಅಭಿವೃದ್ಧಿ ಪ್ರಾಧಿಕಾರಗಳು 100 ಎಕರೆಗಿಂತ ಹೆಚ್ಚು ಪ್ರದೇಶ ಒಳಗೊಂಡಿರುವ ಬಡಾವಣೆಗಳನ್ನು ಮಾಡುವ ಸಂದರ್ಭದಲ್ಲಿ ಅಥವಾ ಇತರರಿಗೆ ಅನುಮತಿ ಕೊಡುವಾಗ ಆಸ್ಪತ್ರೆಗಳು, ಶಾಲೆ ಮತ್ತಿತರ ಸೌಕರ್ಯಗಳೆಲ್ಲವೂ ಇರಬೇಕೆಂದು ಮಾಡುತ್ತಾರೆ. ಅದೇರೀತಿ ಚಿತ್ರಮಂದಿರವನ್ನು ಮಾಡಬೇಕು ಎಂಬ ಬಗ್ಗೆ ಸರ್ಕಾರವು ಯೋಚನೆ ಮಾಡಬೇಕು. ಏಕೆಂದರೆ ಎಲ್ಲಾ ಬಜೆಟ್ ಪುಸ್ತಕಗಳಲ್ಲಿ ಜನತಾ ಚಿತ್ರಮಂದಿರಗಳು ಇರಬೇಕು, ಅವುಗಳಿಗೆ ಅವಕಾಶ ಮಾಡಿಕೊಡುತ್ತೇವೆ ಎಂದು ಹೇಳಿಕೊಂಡೇ ಬರುತ್ತಿವೆ. ಆದರೆ ಈ ನಿಟ್ಟಿನಲ್ಲಿ ಕೆಲಸ ಆಗಿಲ್ಲ. ಆದ್ದರಿಂದ ಇದನ್ನು ಮಾಡಲೇಬೇಕು. ಇದಲ್ಲದೇ ಬಿಬಿಎಂಪಿ ವ್ಯಾಪ್ತಿಯ ಕೆಲವು ಮಾಲ್‌ಗಳಲ್ಲಿ ಸಿನಿಮಾ ಮಂದಿರಗಳು ಇಲ್ಲ. ಅಂತಹ ದೊಡ್ಡ ದೊಡ್ಡ ಮಾಲ್‌ಗಳು ಕಟ್ಟುವಾಗ ಸಿನಿಮಾ ಮಂದಿರಗಳು ಇರಲೇಬೇಕು.

ಇನ್ನು ಕಾರ್ಮಿಕರ ಬಗ್ಗೆ ಹೇಳುವುದಾದರೆ, ನಾನೂ ಕೂಡ ಒಬ್ಬ ಕಲಾವಿದೆಯಾಗಿದ್ದೇನೆ. 2008ರಲ್ಲಿ ಅಸಂಘಟಿತ ಕಾರ್ಮಿಕರ ಕಾಯ್ದೆಯಡಿ ಸಿನಿಮಾ ಕಾರ್ಮಿಕರು ಇದ್ದಾರೆ ಎಂದು ಒಂದು ಕಾಯ್ದೆಯನ್ನು ಕೇಂದ್ರ ಸರ್ಕಾರವು ಜಾರಿಗೆ ತಂದಿದೆ. ಇದು ಮಾನ್ಯ ಸಭಾನಾಯಕರಿಗೂ ಗೊತ್ತಿದೆ. ಆದರೆ ನಿಜ ಏನೆಂದರೆ, ಅಲ್ಲಿ ಅವರಿಗೆ ನೋಂದಣಿಯಾಗಲು ಬಿಡುತ್ತಿಲ್ಲ. ಈ ಬಗ್ಗೆ ನಾನು ಸದನದಲ್ಲಿ ಪ್ರಶ್ನೆ ಮಾಡಿದಾಗ 43 ಪ್ರಾಕಾರಗಳು ಸಿನಿಮಾ ಅಡಿಯಲ್ಲಿ ಬರುತ್ತವೆ ಎಂದು ಕಾರ್ಮಿಕ ಸಚಿವರು ಉತ್ತರ ಕೊಟ್ಟಿದ್ದಾರೆ. ಆದರೆ ಇವತ್ತಿನವರೆಗೂ ಅವರಿಗೆ ಸಿಗಬೇಕಾದ ಅನುಕೂಲಗಳು ಸಿಗುತ್ತಿಲ್ಲ. ಸಿನಿಮಾ ಕಾರ್ಮಿಕರು ದಿನಕ್ಕೆ ಇಷ್ಟು ಕೂಲಿ ಎಂದು ದಿನಗೂಲಿಗಳಾಗಿ ದುಡಿಯುತ್ತಾರೆ. ಬೇರೆ ಕಾರ್ಮಿಕರಿಂದ provident fund ಎಂದು ಸ್ವಲ್ಪ ಹಣವನ್ನು ಪಡೆದುಕೊಂಡು ಅವರಿಗೆ ಅನುಕೂಲ ಮಾಡಿಕೊಡುತ್ತಾರೆ. ಆದರೆ ಸಿನಿಮಾ ಕಾರ್ಮಿಕರ ಬಳಿಯೂ provident fund ಎಂದು ಹಣವನ್ನು ಪಡೆದು ಅನುಕೂಲಗಳನ್ನು ಮಾಡಿಕೊಡಲಿ.

(ಮುಂದು)

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

12/03.07.2018/12.00/ಹೆಚ್‌ವಿಃಎಂಡಿ

**ಶ್ರೀಮತಿ ತಾರಾಅನೂರಾಧ(ಮುಂದುವರೆದದ್ದು):-**

ಸನ್ಮಾನ್ಯ ಸಭಾಪತಿಯವರೇ, ಇತರೆ ಕಾರ್ಮಿಕ ಮಕ್ಕಳಿಗೆ ಶೈಕ್ಷಣಿಕ ಪ್ರೋತ್ಸಾಹಧನ ನೀಡಲಾಗುತ್ತಿದೆ. ಸಿನಿಮಾ ಕಾರ್ಮಿಕರ ಅವಲಂಬಿತರಿಗೆ ವೈದ್ಯಕೀಯ ನೆರವು, ಶಾಲೆಗಳಲ್ಲಿ ಗಣಕಯಂತ್ರ ತರಬೇತಿ,

ಅಂಗವಿಕಲ ಕಾರ್ಮಿಕರಿಗೆ ತ್ರಿಚಕ್ರ ವಾಹನವನ್ನು ನೀಡುವಿಕೆ ಮತ್ತು ಕಾರ್ಮಿಕರು ಅಪಘಾತಕ್ಕೀಡಾದರೆ ಧನ ಸಹಾಯ ನೀಡುವುದು, ಈ ರೀತಿಯ ಎಲ್ಲ ಸಹಾಯಗಳನ್ನು ಸಿನಿಮಾ ಕಾರ್ಮಿಕರಿಗೆ ನೀಡಬೇಕೆಂದು ನಿಯಮವಿದೆ. ಆದರೆ, ಇವತ್ತಿನವರೆಗೆ ಯಾವೊಬ್ಬ ಸಿನಿಮಾ ಕಾರ್ಮಿಕನಿಗೆ ಈ ಸೌಲಭ್ಯಗಳು ದೊರೆತಿಲ್ಲವೆನ್ನುವ ಅಂಶವನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಪಿ.ಎಸ್.ಐ. ಕೊಟ್ಟಿಲ್ಲ, ಇ.ಎಸ್.ಐ. ಕಾರ್ಡು ಕೊಟ್ಟಿಲ್ಲ ಮತ್ತು ಬೇರೆ ಯಾವ ಅನುಕೂಲತೆಗಳನ್ನು ಸರ್ಕಾರದಿಂದ ಒದಗಿಸಿಕೊಟ್ಟಿಲ್ಲ. ಇವತ್ತು ಸಿನಿಮಾ ಕಾರ್ಮಿಕ ಸಂಘದವರು ಕೋರ್ಟಿನಲ್ಲಿ ಕೇಸ್ ದಾಖಲು ಮಾಡಿ, 'ನಮ್ಮನ್ನು 2008ರಲ್ಲಿಯೇ ಅಸಂಘಟಿತ ಕಾರ್ಮಿಕರೆಂದು ಪರಿಗಣಿಸಿದ್ದೀರಿ. ಆದರೆ, ಯಾವುದೇ ಸೌಲಭ್ಯಗಳನ್ನು ನೀಡುತ್ತಿಲ್ಲ' ಎಂದು ಹೋರಾಟ ಮಾಡುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಸಭಾನಾಯಕರು ಸಿನಿಮಾ ರಂಗಕ್ಕೆ ಸಂಬಂಧಪಟ್ಟವರಾಗಿರುವುದರಿಂದ ಅವರ ಕಾಲದಲ್ಲಿ ಸಿನಿಮಾ ರಂಗಕ್ಕೆ ಅವಶ್ಯಕತೆಯಿರುವ ಅನುಕೂಲತೆಗಳನ್ನು ಕಲ್ಪಿಸಿಕೊಡದಿದ್ದರೆ ಹೇಗೆ? ಸೌಲಭ್ಯಗಳ ಕನಸುಗಳನ್ನು ಮಾನ್ಯ ರಾಮಕೃಷ್ಣ ಹೆಗಡೆಯವರ ಕಾಲದಿಂದಲೂ ಕಟ್ಟಿಕೊಂಡು ಬಂದಿದ್ದೇವೆ. ಸಿನಿಮಾ ಎಂದರೆ ಒಂದು ಕನಸು, ಸಿನಿಮಾ ಎಂದರೆ ಒಂದು ನನಸು, ಸರ್ಕಾರದವರು ಆ ಕನಸಿನ ಸಿನಿಮಾವನ್ನು ನಮಗೆ ತೋರಿಸದೇ, ಸೌಲಭ್ಯಗಳನ್ನು ಕಲ್ಪಿಸಿಕೊಡುವ ನಿಟ್ಟಿನಲ್ಲಿ ಕೆಲಸವನ್ನು ಮಾಡಬೇಕಾಗುತ್ತದೆ.

ಸಿನಿಮಾ ರಂಗದ ಎಲ್ಲ ನಿರ್ದೇಶಕರಿಗೆ, ನಿರ್ಮಾಪಕರಿಗೆ, ಕಾರ್ಮಿಕರಿಗೆ, ಕಲಾವಿದರಿಗೆ ಮತ್ತು ಇಡಿ ಚಿತ್ರರಂಗಕ್ಕೆ ನ್ಯಾಯವನ್ನು ಒದಗಿಸಿಕೊಡುತ್ತಾರೆ ಎನ್ನುವ ಆಶಯದ ಮೇಲೆ ಇಷ್ಟು ಮಾತನಾಡಲು ನನಗೆ ಅವಕಾಶವನ್ನು ನೀಡಿದ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

**ಡಾಃಜಯಮಾಲ ರಾಮಚಂದ್ರ(ಸಭಾ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಸದಸ್ಯರು ಮತ್ತು ನನ್ನ ಆತ್ಮೀಯ ಗೆಳತಿಯಾದ ಶ್ರೀಮತಿ ತಾರಾಅನೂರಾಧರವರು ಚಿತ್ರರಂಗದ ಬಗ್ಗೆ ಹೊಸ ದೃಷ್ಟಿಕೋನವನ್ನು ಹರಿಸಿದ್ದಾರೆ. ಸರ್ಕಾರಕ್ಕೂ ಒಂದು ಹೊಸ ಹೊಳಹನ್ನು ತೋರಿದ್ದಾರೆ. ಚಿತ್ರರಂಗದ ಬಗ್ಗೆ ಈ ಸದನದಲ್ಲಿ ಇಷ್ಟೊಂದು ದೊಡ್ಡ ಮಟ್ಟದಲ್ಲಿ ಚರ್ಚೆ ಆಗುವ ನಿಟ್ಟಿನಲ್ಲಿ ಸರ್ಕಾರದ ಗಮನವನ್ನು ಸೆಳೆದಿರುವುದಕ್ಕಾಗಿ ನಾನು ಮಾನ್ಯ ಸದಸ್ಯರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.

ಶ್ರೀಮತಿ ತಾರಾರವರು ಮಾತನಾಡುತ್ತಾ, ಚಿತ್ರರಂಗಕ್ಕೆ ಸಂಬಂಧಪಟ್ಟಂತೆ ಹಲವಾರು ವಿಷಯಗಳ ಬಗ್ಗೆ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಹಿಂದಿನ ಸರ್ಕಾರದ ಅಧಿಕಾರಾವಧಿಯಲ್ಲಿ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಸಿದ್ಧರಾಮಯ್ಯನವರು ಸಿನಿಮಾರಂಗಕ್ಕೆ ಸಮಗ್ರವಾಗಿ ಎಲ್ಲ ರೀತಿಯ ನೆರವನ್ನು ನೀಡುವಂತಹ ಕಾರ್ಯವನ್ನು ಮಾಡಿದ್ದಾರೆ. ಮಾನ್ಯ ಸದಸ್ಯರು ನೀಡಿರುವ ಕೆಲವೊಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಹಿತಿಗಳು ತಪ್ಪಾಗಿದ್ದು, ಅದು ಸದನದ ದಾಖಲೆಗೆ ಹೋಗಬಾರದು ಎನ್ನುವ ದೃಷ್ಟಿಯಿಂದ ನಾನು ಅವುಗಳನ್ನು ಸರಿಪಡಿಸುವಂತಹ ಪ್ರಯತ್ನವನ್ನು ಮಾಡುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಪ್ರತಿ ವರ್ಷ ಸುಮಾರು 250 ಚಲನಚಿತ್ರಗಳು ತಯಾರಾಗುತ್ತಿವೆ. ಈಗ 125 ಚಲನಚಿತ್ರಗಳಿಗೆ ಸರ್ಕಾರ ಸಬ್ಸಿಡಿ ಕೊಡುತ್ತಿದೆ. ಹಿಂದೆ 100 ಚಲನಚಿತ್ರಗಳಿಗೆ ಸರ್ಕಾರ ಸಬ್ಸಿಡಿಯನ್ನು ನೀಡುತ್ತಿತ್ತು. ಈಗ ಅದರ ಪ್ರಮಾಣವನ್ನು 125 ಚಿತ್ರಗಳಿಗೆ ಹೆಚ್ಚು ಮಾಡಿ, 10 ಲಕ್ಷ ರೂಪಾಯಿಗಳ ಸಬ್ಸಿಡಿಯನ್ನು ಕೊಡುತ್ತಿದೆ.

ಸನ್ಮಾನ್ಯ ಸಭಾಪತಿಯವರೇ, ಹಿಂದಿನ ಮುಖ್ಯಮಂತ್ರಿಗಳು ಇಡೀ ದೇಶದಲ್ಲಿರುವ ಎಲ್ಲ ಮಲ್ಟಿಪ್ಲೆಕ್ಸ್ ಸಿನಿಮಾ ಮಂದಿರಗಳ ಮಾಲೀಕರನ್ನು ಕರೆದು ಕನ್ನಡ ಚಲನಚಿತ್ರಗಳಿಗೆ ಪ್ರಥಮ ಆದ್ಯತೆಯನ್ನು ನೀಡಬೇಕೆನ್ನುವ ನಿಟ್ಟಿನಲ್ಲಿ ಸುದೀರ್ಘವಾಗಿ ಮೂರು ಬಾರಿ ಸಭೆಯನ್ನು ನಡೆಸಿದ್ದರು. ಮಲ್ಟಿಪ್ಲೆಕ್ಸ್ ಮಾಲೀಕರೂ ಸಹ ಅದನ್ನು ಒಪ್ಪಿಕೊಂಡು ಹೋಗಿದ್ದಾರೆ. ಮಲ್ಟಿಪ್ಲೆಕ್ಸ್ ಸಿನಿಮಾ ಮಂದಿರಗಳಲ್ಲಿ ಕನ್ನಡ ಚಲನಚಿತ್ರ ಪ್ರದರ್ಶನಕ್ಕೆ ಸಿನಿಮಾ ಮಂದಿರವನ್ನು ಕೊಡುತ್ತಿಲ್ಲ ಎನ್ನುವ ದೂರು ವಾಣಿಜ್ಯ ಮಂಡಲಿಗೆ ಬಂದರೆ, ಅಂತಹ ಮಲ್ಟಿಪ್ಲೆಕ್ಸ್ ಸಿನಿಮಾ ಮಂದಿರಗಳ ವಿರುದ್ಧ ಖಂಡಿತವಾಗಿಯೂ ಕ್ರಮ ತೆಗೆದುಕೊಳ್ಳಲಾಗುತ್ತದೆ. ಇಲ್ಲಿಯವರೆಗೆ ಅಂತಹ ಯಾವುದೇ ದೂರು ಅಥವಾ ವಿವಾದಗಳು ನನ್ನ ಗಮನಕ್ಕೆ ಬಂದಿಲ್ಲ. ಒಂದು ವೇಳೆ ಅಂತಹ ವಿವಾದಗಳು ಇದ್ದರೆ, ಸಿನಿಮೋದ್ಯಮದಲ್ಲಿ ಇರುವವರನ್ನು ಕರೆಯಿಸಿ, ಯಾರು ಕನ್ನಡ ಚಿತ್ರಗಳಿಗೆ ಸಿನಿಮಾ ಮಂದಿರಗಳನ್ನು ಕೊಡುತ್ತಿಲ್ಲ ಅವರ ಜೊತೆಗೆ ಮಾತನಾಡಬಹುದು.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು 'ಚಿತ್ರನಗರಿ'ಯ ಬಗ್ಗೆ ಗಮನವನ್ನು ಸೆಳೆದಿದ್ದಾರೆ. ಸುಮಾರು 20-30 ವರ್ಷಗಳ ಹಿಂದಿನಿಂದಲೂ 'ಚಿತ್ರನಗರಿ'ಯ ಬಗ್ಗೆ ಕನಸು ಕಟ್ಟಿಕೊಂಡು ಬಂದಿದ್ದೇವೆ. ಈ ಕನಸನ್ನು ನನಸು ಮಾಡಿಕೊಳ್ಳಲು ಹಿಂದಿನ ಮುಖ್ಯಮಂತ್ರಿಗಳು ಹಿಮ್ಮಾವಿನಲ್ಲಿ ಚಿತ್ರನಗರಿಯನ್ನು ನಿರ್ಮಾಣ ಮಾಡುವುದಕ್ಕೆ 116 ಎಕರೆ ಜಾಗವನ್ನು ನೀಡಿದ್ದಾರೆ. ಅಲ್ಲಿ ಎಲ್ಲ ರೀತಿಯ ವ್ಯವಸ್ಥೆಗಳಾಗಬೇಕೆನ್ನುವ ಉದ್ದೇಶವನ್ನು ಇಟ್ಟುಕೊಂಡಿತ್ತು. ಆದರೆ, ರಾಜ್ಯದಲ್ಲಿ ಚುನಾವಣೆ ಪ್ರಕ್ರಿಯೆ ಪ್ರಾರಂಭಗೊಂಡ ಕಾರಣ ಆ ಕೆಲಸ ಸ್ವಲ್ಪ ಸ್ಥಗಿತಗೊಂಡಿರಬಹುದು. ಈಗ ಆ ಕೆಲಸವನ್ನು ಪುನಃ ಪ್ರಾರಂಭಿಸುವ ನಿಟ್ಟಿನಲ್ಲಿ ಸರ್ಕಾರ ಕ್ರಮ ವಹಿಸುತ್ತದೆ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸದಸ್ಯರು ಮಾತನಾಡುತ್ತಾ, ಸಿನಿಮಾ ಚಿತ್ರೀಕರಣಕ್ಕಾಗಿ ಮೈಸೂರು ಲ್ಯಾಂಪ್ಸ್ ಇದ್ದಂತಹ ಜಾಗವನ್ನು ನೀಡುವ ಬಗ್ಗೆ ಮಾತನಾಡಿದ್ದಾರೆ. ನಾನು ಇದರ ಬಗ್ಗೆ ನಂತರ ಪ್ರತಿಕ್ರಿಯಿಸುತ್ತೇನೆ. ಸಿನಿಮಾಗಳ ಪ್ರಚಾರದಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸುವ ಪೋಸ್ಟರ್‌ಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದೊಂದು ಗಂಭೀರವಾಗಿರುವಂತಹ ವಿಚಾರವಾಗಿದೆ. ಗೋಡೆಗಳ ಮೇಲೆ ಪೋಸ್ಟಿಂಗ್‌ಗಳನ್ನು ಅಂಟಿಸುವುದಕ್ಕೆ ಬಿಡುವುದಿಲ್ಲ ಎನ್ನುವ ನಿಯಮದ ಬಗ್ಗೆ ಹಲವಾರು ಬಾರಿ ಸರ್ಕಾರದ ಮುಂದೆ ಪ್ರಸ್ತಾಪವನ್ನು ಮಂಡಿಸಲಾಗಿದ್ದು, ಸರ್ಕಾರವೂ ಸಹ ಒಪ್ಪಿಕೊಂಡಿದೆ. ಏಕೆಂದರೆ, ಪೋಸ್ಟಿಂಗ್‌ಗಳು ನಮ್ಮ ಜೀವಾಳವಾಗಿವೆ. ಸರ್ಕಾರ ಹೋಲ್ಡಿಂಗ್ಸ್‌ಗಳನ್ನು ಸಿನಿಮಾ ಪ್ರಚಾರಕ್ಕಾಗಿ ನೀಡಿದೆ. ಇನ್ನೂ ಹೆಚ್ಚಿನ ಸಂಖ್ಯೆಯ ಹೋಲ್ಡಿಂಗ್ಸ್‌ಗಳ ಅವಶ್ಯಕತೆ ಇದೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಾತನಾಡುತ್ತಾ, ಕೌಶಲ್ಯ ಅಭಿವೃದ್ಧಿ ಯೋಜನೆಯಡಿಯಲ್ಲಿ ಸಿನಿಮಾ ರಂಗವನ್ನು ಸಹ ತರಬೇಕು ಎನ್ನುವ ಸಲಹೆಯನ್ನು ನೀಡಿದ್ದಾರೆ. ಇದನ್ನು ನಾನು ಸ್ವಾಗತಿಸುತ್ತಿದ್ದೇನೆ. ಈ ವಿಚಾರವನ್ನು ನಾನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ. ವಿವಿಧ ದೇಶಗಳ ಸಿನಿಮಾರಂಗದವರು ಬೆಂಗಳೂರು ನಗರಕ್ಕೆ ಬಂದು ಅನಿಮೇಷನ್, ಗ್ರಾಫಿಕ್ಸ್ ಮತ್ತು ಇನ್ನಿತರ ಸೌಲಭ್ಯಗಳನ್ನು ಪಡೆದುಕೊಂಡು ದೊಡ್ಡ ಪ್ರಮಾಣದ ಚಿತ್ರಗಳನ್ನು ನೀಡುತ್ತಿದ್ದಾರೆ. ಆದ್ದರಿಂದ ಸಿನಿಮಾ ಕೌಶಲ್ಯ ತರಬೇತಿಯನ್ನು ನೀಡಿದರೆ ಮತ್ತಷ್ಟು ಹೊಸ ಪ್ರತಿಭೆಗಳು ಹೊರಬಂದು, ಉದ್ಯೋಗಾವಕಾಶಕ್ಕೆ ನೆರವಾಗುತ್ತದೆ ಎನ್ನುವ ಸಲಹೆ ನಿಜಕ್ಕೂ ಸ್ವಾಗತಾರ್ಹವಾಗಿದೆ.

ಸನ್ಮಾನ್ಯ ಸಭಾಪತಿಯವರೆ, Single screen theatres ಬಗ್ಗೆ ಮಾನ್ಯ ಸದಸ್ಯರು ಗಮನ ಸೆಳೆದಿದ್ದಾರೆ. ಮಲ್ಟಿ ಫ್ಲೆಕ್ಸ್ ಥಿಯೇಟರ್‌ಗಳು ಬಂದು Single screen theatreಗಳಿಗೆ ಯಾವುದೇ ರೀತಿಯ ತೊಂದರೆ ಕೊಟ್ಟಿಲ್ಲ. ಹಿಂದೆ 1200 ಸಿನಿಮಾ ಮಂದಿರಗಳಿದ್ದವು. ಅದರಲ್ಲಿ ಟೂರಿಂಗ್ ಟಾಕೀಸ್‌ಗಳು ಇದ್ದವು. ಈಗ ಅವು ತಮ್ಮ ಅಸ್ತಿತ್ವವನ್ನು ಕಳೆದುಕೊಂಡಿವೆ. ಈಗ 650 ಚಿತ್ರ ಮಂದಿರಗಳಿವೆ. ಪರ ಭಾಷೆಯ ಚಿತ್ರಗಳು ಮತ್ತು ನಮ್ಮ ಭಾಷೆಯ ಚಿತ್ರಗಳು ಬಿಡುಗಡೆಯಾಗುತ್ತಿರುವ ಸಂಖ್ಯೆಗೆ ಅನುಗುಣವಾಗಿ ಚಿತ್ರಮಂದಿರಗಳನ್ನು ಒದಗಿಸಿಕೊಡುವುದಕ್ಕೆ ಆಗುತ್ತಿಲ್ಲ. ಚಿತ್ರಮಂದಿರಗಳ ಕೊರತೆ ಇದೆ. ಈ ಕಾರಣದ ಹಿನ್ನೆಲೆಯಲ್ಲಿ ಹಿಂದಿನ ಮುಖ್ಯಮಂತ್ರಿಗಳು ಸುಮಾರು 300 ಜನತಾ ಚಿತ್ರಮಂದಿರಗಳನ್ನು ಕೊಟ್ಟಿದ್ದರು. ಇದಕ್ಕಾಗಿ 50 ಲಕ್ಷ ರೂಪಾಯಿಗಳನ್ನು ಪಡೆದುಕೊಳ್ಳಬಹುದಾಗಿದೆ. ಆದರೆ, ಪರವಾನಿಗಿ ನೀಡುವ ಸಂಬಂಧ ಸ್ವಲ್ಪ ತೊಡಕಿದೆ. ಇದು ಸರ್ಕಾರದ ಗಮನದಲ್ಲಿದೆ. ಇದಕ್ಕೆ ಏಕಗವಾಕ್ಷಿ ನೀತಿಯನ್ನು ತಂದು ಆಂಧ್ರಪ್ರದೇಶದಲ್ಲಿ ಅನುಸರಿಸುತ್ತಿರುವ ನೀತಿಯ ಪ್ರಕಾರ 21

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದಿನದೊಳಗಾಗಿ ಪರವಾನಿಗಿಯನ್ನು ಕೊಡುವಂತೆ ಮಾಡಬೇಕು ಮತ್ತು 300 ಜನತಾ ಚಿತ್ರಮಂದಿರಗಳು ಸ್ಥಾಪನೆಯಾದರೆ, Single screen theatreಗಳಿಗೆ ಅನುಕೂಲವಾಗುತ್ತದೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಾತನಾಡುತ್ತಾ 'ಚಲನ ಚಿತ್ರೋತ್ಸವ ಅಕಾಡೆಮಿ'ಯ ಬಗ್ಗೆ ಗಮನ ಸೆಳೆದಿದ್ದಾರೆ. ಸರ್ಕಾರ ಈ ಅಕಾಡೆಮಿಗೆ 10 ಕೋಟಿ ರೂಪಾಯಿಗಳನ್ನು ಕೊಡುತ್ತಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಅದು 10 ಕೋಟಿಯಲ್ಲ, 4 ಕೋಟಿ ರೂಪಾಯಿಗಳನ್ನು ಕೊಡುತ್ತಿದೆ. ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವವನ್ನು ಆಚರಣೆ ಮಾಡುವ ಸಂದರ್ಭದಲ್ಲಿ ಸುಮಾರು 250ಕ್ಕೂ ಹೆಚ್ಚು ಸಿನಿಮಾಗಳು ಇಲ್ಲಿ ಪ್ರದರ್ಶನಗೊಳ್ಳುತ್ತವೆ. ಇಡೀ ಪ್ರಪಂಚದ ಗಮನ ಬೆಂಗಳೂರು ನಗರದೆಡೆ ಕೇಂದ್ರೀಕೃತವಾಗುತ್ತದೆ. ಇದರಿಂದ ಪ್ರವಾಸೋದ್ಯಮ ಕೂಡ ಅಭಿವೃದ್ಧಿ ಹೊಂದುತ್ತದೆ ಮತ್ತು ಉದ್ಯೋಗಾವಕಾಶಗಳು ನಿರ್ಮಾಣವಾಗುತ್ತವೆ. ಇದೊಂದು ಬಹಳ ದೊಡ್ಡ ಸಾಧನೆಯಾಗಿದೆ. ಈ ಹಿನ್ನೆಲೆಯಲ್ಲಿ 'ಚಲನಚಿತ್ರೋತ್ಸವ ಅಕಾಡೆಮಿ'ಗೆ 4 ಕೋಟಿ ರೂಪಾಯಿಗಳನ್ನು ನೀಡುವುದು ಸಾಕಾಗುತ್ತಿಲ್ಲ. ಕರ್ನಾಟಕದ ಬೇರೆ ಬೇರೆ ಜಿಲ್ಲೆಗಳಲ್ಲಿ ಈ ಚಿತ್ರೋತ್ಸವವನ್ನು ಆಚರಣೆ ಮಾಡಬೇಕಾಗುತ್ತದೆ. ಆಗ ಇದಕ್ಕಾಗಿ ಮೀಸಲಾಗಿಟ್ಟಿರುವ 4 ಕೋಟಿ ರೂಪಾಯಿಗಳು ಕಡಿಮೆ ಬೀಳುತ್ತದೆ. ಆದ್ದರಿಂದ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಸರ್ಕಾರ ಧನಸಹಾಯ ಮಾಡಬೇಕೆಂದು ಹಲವಾರು ಗಣ್ಯರು ಮತ್ತು ಅಕಾಡೆಮಿ ಸದಸ್ಯರು ಮನವಿಯನ್ನು ಸಲ್ಲಿಸಿದ್ದಾರೆ. ಇದರ ಬಗ್ಗೆ ಸರ್ಕಾರ ಗಮನಹರಿಸುತ್ತದೆ.

(ಮುಂದುವರಿದಿದೆ)

(13) 3.7.2018 12.10 ಪಿಕೆ:ಎಕೆ

ಶ್ರೀಮತಿ ಜಯಮಾಲ(ಮುಂದುವರೆದಿದೆ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, ಇಡೀ ಭಾರತದ ಇತಿಹಾಸದಲ್ಲೇ ಇದಕ್ಕೆಂದು ರೂ. 10 ಕೋಟಿ ಕೊಟ್ಟಿರತಕ್ಕಂಥ ನಿದರ್ಶನ ಇಲ್ಲ. ಹಿಂದಿನ ಸರ್ಕಾರದ ಮಾಜಿ ಮುಖ್ಯಮಂತ್ರಿಗಳು ರೂ. 10 ಕೋಟಿಗಳನ್ನು ಕೊಟ್ಟು 'ಕಲ್ಯಾಣ ನಿಧಿ'ಯನ್ನು ಸ್ಥಾಪನೆ ಮಾಡಿದ್ದಾರೆ. ಈ ನಿಧಿಯಿಂದ ಸಾಕಷ್ಟು

ಜನರಿಗೆ ಸ್ಪಂದಿಸುವಂತಹ ಕೆಲಸ ಮಾಡಿದ್ದಾರೆ. ಈಗಲೂ ಈ ನಿಧಿಯಿಂದ ಸ್ಪಂದನೆ ಸಿಗುತ್ತಿದೆ ಎಂದು ನಾನು ಕೇಳಲ್ಪಟ್ಟಿದ್ದೇನೆ. ಆದರೆ ಇಟ್ಟಿರುವ ಈ ರೂ. 10 ಕೋಟಿ ಸಾಕಾಗುವುದಿಲ್ಲ ಎಂದು ಹೇಳಲಾಗುತ್ತಿದೆ. ಸುಮಾರು ರೂ. 30-40 ಸಾವಿರ ಜನರಿಗೆ ಆರೋಗ್ಯ ಅಥವಾ ಇನ್ನಿತರ ತೊಂದರೆಗಳು ಬಂದಾಗ ಅವರಿಗೆ ಅವಶ್ಯವಾದ ಮೊತ್ತವನ್ನು ಕೊಡುವುದಕ್ಕೆ ಆಗುತ್ತಿಲ್ಲ. ಏಕೆಂದರೆ ಈ ನಿಧಿಯಲ್ಲಿ ಇಟ್ಟಿರುವ ಹಣ ಏನಿದೆ, ಅದರ ಬಡ್ಡಿಯಿಂದ **ಬರುವ ಮೊತ್ತದಲ್ಲಿ** ಪರಿಹಾರ ಕೊಡಲಾಗುತ್ತಿದೆ. ನಾನು ಈ ಕುರಿತು ಸರ್ಕಾರದ ಜೊತೆ ಮಾತನಾಡಬೇಕಾಗುತ್ತದೆ.

ತುಳು ಚಿತ್ರಗಳಿಗೂ ಕೂಡ ಸಬ್ಸಿಡಿಯನ್ನು ಕೊಡಬೇಕು. ಒಂದೆರಡು ಚಿತ್ರಗಳಿಗೆ ಕೊಟ್ಟರೆ ಸಾಕಾಗುವುದಿಲ್ಲ ಎಂದು ಮಾನ್ಯ ಐವನ್ ಡಿ'ಸೋಜಾರವರು ಪ್ರಸ್ತಾಪ ಮಾಡಿದರು. ಇದು ನಿಜ. ಒಂದೆರಡು ಚಿತ್ರಗಳು ನಿರ್ಮಾಣವಾಗುತ್ತಿದ್ದ ಕಡೆ ಇವತ್ತು 50 ಚಿತ್ರಗಳ ನಿರ್ಮಾಣ ಆಗುತ್ತಿದೆ. ನಾವು ಪ್ರಾದೇಶಿಕ ಭಾಷೆಗಳಿಗೆ ಮಾನ್ಯತೆ ಕೊಡಬೇಕಾಗುತ್ತದೆ. ಬ್ಯಾರಿ ಚಿತ್ರಗಳು ಇವತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರದರ್ಶಿತವಾಗುತ್ತಿದೆ, 'ಸ್ವರ್ಣ ಕಮಲ' ಪ್ರಶಸ್ತಿಯನ್ನು ತಂದು ಕೊಡುತ್ತಿವೆ. ಸಣ್ಣ ಸಣ್ಣ ಭಾಷೆಗಳನ್ನು ಬೆಳೆಸುವ ನಿಟ್ಟಿನಲ್ಲಿ ಅವರಿಗೂ ಕೂಡ ಸಬ್ಸಿಡಿಯನ್ನು ಸಮವಾಗಿ ಕೊಡುವ ದಿನಗಳು ಬರಬೇಕು. ಈ ಕುರಿತು ಉದ್ಯಮದ ಎಲ್ಲಾ ಗಣ್ಯರನ್ನು ಕರೆದು ಚರ್ಚೆ ಮಾಡಬೇಕಾಗುತ್ತದೆ. ಹಿಂದಿನ ಸರ್ಕಾರ ಚರ್ಚೆಯ ಮುಖಾಂತರ ಸಮಗ್ರವಾದಂಥ ಚಲನಚಿತ್ರ ನೀತಿಯನ್ನು ತಯಾರು ಮಾಡಿತು. ಆದರೆ ಅದನ್ನು ಅನುಷ್ಠಾನಕ್ಕೆ ತರುವುದಕ್ಕಾಗಲಿಲ್ಲ. ನಿಮ್ಮೆಲ್ಲರ ಸಮಸ್ಯೆಗಳಿಗೂ, ಮಾನ್ಯ ಸದಸ್ಯರು ನೀಡಿದ ಎಲ್ಲಾ ಮಾಹಿತಿಗಳು ಏನಿವೆ ಅವುಗಳಿಗೆ ಸ್ಪಂದನೆ ಸಿಗಬೇಕೆಂದರೆ ಸಮಗ್ರ ಚಲನಚಿತ್ರ ನೀತಿ ಜಾರಿಗೆ ಬರಬೇಕು. ಇದು ಅನುಷ್ಠಾನಕ್ಕೆ ಬಂದರೆ ಎಲ್ಲಾ ಸಮಸ್ಯೆಗಳು ಪರಿಹಾರವಾಗುತ್ತದೆ.

ಮಾನ್ಯ ಸಭಾಪತಿಯವರೇ, ಹಿಂದಿನ ಸರ್ಕಾರ ಚಲನಚಿತ್ರ ರಂಗದ ಬಗ್ಗೆ ಮೃದು ಧೋರಣೆ ತಾಳಿ, ಪ್ರತಿಯೊಂದು ಹಂತದಲ್ಲೂ ಕೂಡ ಸಹಕರಿಸಿದೆ. ಈ ಸರ್ಕಾರ ಕೂಡ ಚಿತ್ರರಂಗಕ್ಕೆ ಸಮಗ್ರವಾಗಿ, ಅವರಿಗೆ ಏನು ಬೇಕು ಎನ್ನುವ ನಿಟ್ಟಿನಲ್ಲಿ ಸ್ಪಂದಿಸುತ್ತದೆ. ಮುಂದಿನ ದಿನಗಳಲ್ಲಿ ಉದ್ಯಮದ ಗಣ್ಯರನ್ನು ಕರೆಸಿ, ಮಾನ್ಯ ಸದಸ್ಯರನ್ನು ಕರೆಸಿ ಇದರ ಬಗ್ಗೆ ಚರ್ಚೆ ಮಾಡಿ ಇದಕ್ಕೊಂದು ಸಮಗ್ರ ಚಲನಚಿತ್ರ ನೀತಿಯನ್ನು ತಂದು ಅನುಷ್ಠಾನಗೊಳಿಸಲಾಗುತ್ತದೆ.

**ಡಾ॥ ತೇಜಸ್ವಿನಿ ಗೌಡ (ವಿಧಾನಸಭಾ ಕ್ಷೇತ್ರ) :-** ಮಾನ್ಯ ಸಭಾಪತಿಯವರೇ, ಇವತ್ತು ಅತ್ಯಂತ ಮಹತ್ವದ ವಿಚಾರವನ್ನು ಪ್ರತಿಪಕ್ಷದಲ್ಲಿರುವ ಮಾನ್ಯ ತಾರಾರವರು ಎತ್ತಿದ್ದಾರೆ. ರಾಜಕಾರಣವನ್ನು ಮರೆತು ಈ ವಿಚಾರವಾಗಿ ಮಾತನಾಡಬೇಕಾಗುತ್ತದೆ. ಶ್ರೀಮತಿ ಜಯಮಾಲರವರು ಗಿರಿಕನ್ಯೆಯಾಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾಡಿನ ಎಲ್ಲಾ ಸಿನಿಮಾ ಪ್ರೇಕ್ಷಕರನ್ನು ಸೆಳೆದಂಥವರು. ವರನಟ ಡಾ:ರಾಜಕುಮಾರ್‌ರವರ ಮತ್ತು ಇತರ ಕಲಾವಿದರ ಎಲ್ಲಾ ಸಿನಿಮಾಗಳಲ್ಲಿ ಪ್ರಕೃತಿ, ಸಾಹಿತ್ಯ, ಕಲಾವಿದರು ಹೀಗೆ ಪ್ರತಿಯೊಂದನ್ನು ಸಮ್ಮಿಳಿತಗೊಳಿಸುತ್ತಿದ್ದುದರಿಂದ ಇಂದಿನ ಪೀಳಿಗೆಯವರೂ ಕೂಡ ಆ ಸಿನಿಮಾಗಳನ್ನು ನೋಡುತ್ತಾರೆ. ಇವತ್ತಿನ ಪೀಳಿಗೆಯ ನಿರ್ದೇಶಕರೂ ಕೂಡ ಪ್ರಕೃತಿಯನ್ನು ಪರಿಣಾಮಕಾರಿಯಾಗಿ ಚಿತ್ರಿಸಿ ಜಗತ್ತಿಗೆ ತೋರಿಸಿದ್ದಾರೆ. ಇದಕ್ಕೆ 'ಮುಂಗಾರು ಮಳೆ' ಚಿತ್ರವನ್ನು ಉದಾಹರಣೆಯಾಗಿ ಕೊಡಬಹುದು. ಮಳೆ ಅಥವಾ ಪ್ರಕೃತಿಯ ಸುಂದರ ದೃಶ್ಯಗಳು ನಮಗೆ ಬೇಕೆಂದಾಗ ನೋಡಲು ಸಿಗುವುದಿಲ್ಲ. ಸಿನಿಮಾ ಎನ್ನುವುದು ಅತಿ ದೊಡ್ಡದಾದ ಒಂದು ದೃಶ್ಯ ಮಾಧ್ಯಮವಾಗಿದೆ. ಸಿನಿಮಾ ನಿರ್ಮಾಣದ ವೆಚ್ಚವನ್ನು ತಗ್ಗಿಸುವಂತಹ ಒಂದು ಭಾಗವಾಗಿ ಪ್ರಕೃತಿ ಬರುತ್ತದೆ. ಮಾನ್ಯ ಭೋಜೇಗೌಡರು, ಮಾನ್ಯ ಸಾ.ರ.ಮಹೇಶ್ ಮತ್ತು ಮಾನ್ಯ ಪುಟ್ಟರಾಜುರವರು ಈ ಭಾಗಗಳನ್ನು ಪ್ರತಿನಿಧಿಸುತ್ತಾರೆ. ಮಡಿಕೇರಿಯಂತಹ ಭಾಗಗಳಲ್ಲಿ ವನ್ಯ ಸಂಪತ್ತು ನಾಶವಾಗುತ್ತಿದೆ, ವನ್ಯಜೀವಿ ಸಂಪತ್ತು ನಾಶವಾಗುತ್ತಿದೆ ಮತ್ತು ಕಳ್ಳಕಾಕರ ಸಮಸ್ಯೆ ಕೂಡ ಇದೆ. ಕರಾವಳಿಯ ಭಾಗಗಳಲ್ಲಿ ಕಡಲ್ಕೊರೆತದಿಂದ ಅನಾಹುತಗಳು ಸಂಭವಿಸುತ್ತವೆ. ಪ್ರಕೃತಿಯ ವಿಕೋಪಗಳಿಂದ ರಸ್ತೆ ನಾಶವಾಗುತ್ತದೆ, ಮೂಲಭೂತ ಸೌಕರ್ಯಗಳು ನಾಶವಾಗುತ್ತವೆ. ಇವತ್ತು ಅತ್ಯುತ್ತಮವಾದ ರಸ್ತೆಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರ ನಿರ್ಮಾಣ ಮಾಡುತ್ತಿವೆ. ಒಂದು ಕಡೆ ಮನುಷ್ಯ ಎಲ್ಲಾ ರೀತಿಯ ನಾಗರೀಕ ಜಗತ್ತಿನ ಸವಲತ್ತನ್ನು ಪ್ರಕೃತಿಯಿಂದ ಬಯಸುತ್ತಿದ್ದಾನೆ. ಅದಕ್ಕೊಂದು ನಿಯಂತ್ರಣ ಹಾಕಬೇಕಾಗಿದೆ, ಅದಕ್ಕೆ ಒಂದು ಪಾಲಿಸಿ ಬೇಕಾಗಿದೆ. ಸಕಲೇಶಪುರದ ಭಾಗ ಇರಬಹುದು ಅಥವಾ ಮಡಿಕೇರಿಯ ಭಾಗಗಳಿರಬಹುದು, ಅಲ್ಲಿನ ಮುಖ್ಯ ರಸ್ತೆಗಳಿಗೆ ಉತ್ತಮ ಮಟ್ಟದ ಸಿಮೆಂಟ್ ರಸ್ತೆಯನ್ನು ಮಾಡಬೇಕಾಗುತ್ತದೆ. ಏಕೆಂದರೆ, ಸಕಲೇಶಪುರ ಮತ್ತು ಮಡಿಕೇರಿಯ ಭಾಗಗಳು ಸಿನಿಮಾ ರಂಗಕ್ಕೆ ಅತ್ಯವಶ್ಯಕವಾದುದಾಗಿದೆ. ಮಾನ್ಯ ಸಾ.ರ.ರಮೇಶ್‌ರವರು ಪ್ರವಾಸೋದ್ಯಮ ಸಚಿವರಾಗಿದ್ದಾರೆ. ಅವರು ಇಂತಹ ಪ್ರದೇಶಗಳಲ್ಲಿ ಸಿನಿಮಾ ರಂಗಕ್ಕೆ ಅನುಕೂಲವಾಗುಂತಹ ತಂಗುದಾಣಗಳನ್ನು ನಿರ್ಮಾಣ ಮಾಡಬೇಕು. ಕನ್ನಡ ಚಿತ್ರಗಳ ಮಾರುಕಟ್ಟೆ ಸೀಮಿತವಾಗಿದೆ. ಹಿಂದಿ ಸಿನಿಮಾ ಅಥವಾ ಅನ್ಯ ಭಾಷೆಗಳ ಸಿನಿಮಾ ವಿಶ್ವವ್ಯಾಪಿಯಾಗಿದೆ. ಕನ್ನಡ ಸಿನಿಮಾದ ವ್ಯಾಪ್ತಿಯನ್ನು ಹೆಚ್ಚು ಮಾಡಬೇಕಾದರೆ ಸಿನಿಮಾ ನಿರ್ಮಾಣದ ವೆಚ್ಚವನ್ನು ಕಡಿಮೆ ಮಾಡಬೇಕು. ಇದು ನಮ್ಮ ಕೈಯಲ್ಲಿ ಸಾಧ್ಯವಾಗುವಂಥದ್ದಾಗಿದೆ.

ವನ್ಯಜೀವಿಗಳ ವಿಷಯಕ್ಕೆ ಬಂದರೆ, 'ಹುಲಿಯ ಹಾಲಿನ ಮೇವು' ಇರಬಹುದು ಅಥವಾ 'ಗಂಧದ ಗುಡಿ' ಸಿನಿಮಾ ಇರಬಹುದು, ಇಲ್ಲಿ ವನ್ಯ ಜೀವಿಗಳದ್ದೇ ಪ್ರಮುಖ ಪಾತ್ರವಾಗಿದೆ. ಆದುದರಿಂದ ಇಂತಹ ಸಿನಿಮಾಗಳಲ್ಲಿ ನೈಜ ಜೀವಿಗಳನ್ನು ಬಳಸಿಕೊಳ್ಳಬೇಕಾಗುತ್ತದೆ. ಆದರೆ ಆವತ್ತಿಗೂ ಇವತ್ತಿಗೂ ಬಹಳ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವ್ಯತ್ಯಾಸ ಇದೆ. ನದಿಯನ್ನು, ಆಕಾಶವನ್ನು, ವೃಕ್ಷವನ್ನು ಹೀಗೆ ಪ್ರತಿಯೊಂದನ್ನೂ ಪೂಜೆ ಮಾಡುವಂತಹ ಒಂದು ಪರಂಪರೆ ನಮ್ಮಲ್ಲಿ ಇದೆ. ಇವತ್ತು ಇವುಗಳ ಬಗ್ಗೆ ನಮಗೆ ಕಾಳಜಿ ಕಡಿಮೆಯಾಗಿದೆ. ಇತ್ತೀಚಿನ ಯೋಗರಾಜ್ ಭಟ್‌ರವರ ಸಿನಿಮಾಗೆ ಸಂಬಂಧಪಟ್ಟ ಹಾಗೆ ಒಂದು ಅಂಕುಶ ಹಾಕಲಾಯಿತು. 'ಹುಲಿಯ ಹಾಲಿನ ಮೇವು' ಸಿನಿಮಾದ ಚಿತ್ರೀಕರಣದಲ್ಲಿ ಆನೆಯ ಸಮೂಹಕ್ಕೆ ತೊಂದರೆಯಾಯಿತು. ಈ ಕಾರಣಕ್ಕಾಗಿ ಕಾನೂನು ಮಾಡಿರುವಂತಹ ಉದ್ದೇಶ ಚೆನ್ನಾಗಿದೆ. ಆದರೆ ಎಲ್ಲಿ ವನ್ಯಜೀವಿಗಳಿಗೆ ಹೆಚ್ಚು ಅಪಾಯ ಇದೆ ಅಥವಾ ಅಪಾಯ ಇಲ್ಲವೋ ಅಂತಹ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ವಿನಾಶದ ಅಂಚಿನಲ್ಲಿರುವ ಪ್ರಾಣಿಗಳನ್ನು ಬಿಟ್ಟು, ಒಂದು ಕೋಳಿ ಅಥವಾ ದನ-ಕರುಗಳನ್ನು ಬಳಸುವ ಚಿತ್ರಗಳಿಗೆ ಸಂಬಂಧಪಟ್ಟ ಹಾಗೆ ಕಾನೂನನ್ನು ಸ್ವಲ್ಪ ಸಡಿಲ ಮಾಡಬೇಕು. ಈ ಅಂಶ ಸಹಕಾರಿ ಆಗಿರುತ್ತದೆ. ಹೊರಗಿನಿಂದ ಬರತಕ್ಕಂಥ, ಅತಿ ಹೆಚ್ಚು ಲಾಭಾಂಶ ಇರುವಂತಹ ಸಿನಿಮಾ ನಿರ್ಮಾಣಕ್ಕೆ ನಿರ್ದಿಷ್ಟವಾದ ತೆರಿಗೆಯನ್ನು ವಿಧಿಸಬೇಕು. ಕನ್ನಡ ಸಿನಿಮಾಗಳನ್ನು ತೆರಿಗೆ ವಿನಾಯಿತಿ ಕೊಟ್ಟು ನೋಡಿಸಬೇಕಾದಂತಹ ಪರಿಸ್ಥಿತಿ ಇರುವುದರಿಂದ ಹಾಗೂ ಸೋಶಿಯಲ್ ಮೀಡಿಯಾ ಅಥವಾ ಇತರೇ ಸವಾಲುಗಳು ಜಾಸ್ತಿ ಇರುವುದರಿಂದ ಮಾನ್ಯ ಸಚಿವರು ಮತ್ತು ಮಾನ್ಯ ಸದಸ್ಯರು ಹೇಳಿದ ಹಾಗೆ, ಕನ್ನಡ ಸಿನಿಮಾಗಳನ್ನು ಹೆಚ್ಚು ಹೆಚ್ಚು ನೋಡುವುದಕ್ಕೆ ಪ್ರೇರಣೆ ಆಗಬೇಕು. ಕನ್ನಡ ಸಿನಿಮಾಗಳನ್ನು ಕಡಿಮೆ ವೆಚ್ಚದಲ್ಲಿ ಸುಂದರವಾಗಿ ನಿರ್ಮಾಣ ಮಾಡುವುದಕ್ಕೆ ಪೂರಕವಾಗುವ ರೀತಿಯಲ್ಲಿ ಒಂದು ಸ್ಪಷ್ಟ ಪಾಲಿಸಿ ಮಾಡಬೇಕಾಗಿದೆ.

ಮಾನ್ಯ ಸಭಾಪತಿಯವರೇ, ಮೇಲುಕೋಟೆ ಪ್ರದೇಶದ ಸಿರಿವಂತಿಕೆಯನ್ನು ಅನೇಕ ಸಿನಿಮಾಗಳಲ್ಲಿ ತೋರಿಸಲಾಗಿದೆ. ನಮ್ಮ ಮಂಡ್ಯ ಜಿಲ್ಲೆಯ ಗ್ರಾಮ-ಗ್ರಾಮಗಳಲ್ಲಿ ಒಂದೊಂದು ಬಾವಿ ಕೂಡ ವಿನ್ಯಾಸಮಯವಾಗಿವೆ. ಒಂದೊಂದು ಸೇತುವೆ ಕೂಡ ವಿನ್ಯಾಸಮಯವಾಗಿದೆ. ಈ ಕುರಿತು ನಾನು ಮಾನ್ಯ ಲೋಕೋಪಯೋಗಿ ಸಚಿವರು ಬಂದಾಗ ಮಾತನಾಡುತ್ತೇನೆ. ಹಳೆಯ ಸೇತುವೆಗಳು ದೇವಾಲಯಗಳ ರೀತಿಯಲ್ಲಿ, ಸ್ಮಾರಕವಾಗುವ ರೀತಿಯಲ್ಲಿವೆ. ಇವತ್ತು ಇಷ್ಟೊಂದು ಟೆಕ್ನಾಲಜಿ ಮುಂದುವರೆದಿದ್ದರೂ ಇಂಥವುಗಳನ್ನು ಅಸಡ್ಡೆಯಿಂದ ನೋಡುತ್ತೇವೆ, ಕಡೆಗಣಿಸುತ್ತೇವೆ. ಆ ಹಳೆಯ ಸ್ಮಾರಕಗಳನ್ನು ಸಂರಕ್ಷಣೆ ಮಾಡಬೇಕು. ಆರ್ಕಿಯಾಲಜಿಯನ್ನು ನಿರ್ಲಕ್ಷ್ಯ ಮಾಡುವಂಥದ್ದಲ್ಲ. ಪ್ರತಿಯೊಂದನ್ನು ಜೀರ್ಣೋದ್ಧಾರ ಮಾಡಬೇಕು. ನಮ್ಮ ಪರಂಪರೆ, ಇತಿಹಾಸವನ್ನು ನೆನಪು ಮಾಡಿಕೊಳ್ಳುವಂಥದ್ದು ಈಗಿನ ಪೀಳಿಗೆಯವರಿಗೆ ಅತ್ಯಂತ ಅವಶ್ಯಕವಾದುದಾಗಿದೆ. ಕೇಂದ್ರದಿಂದ ಏನೇ ಅಡೆ-ತಡೆಗಳು ಬಂದರೂ ಕೂಡ ಈ ನಿಟ್ಟಿನಲ್ಲಿ, ನಮ್ಮ ಮಂತ್ರಿಗಳ ಹಾಗೂ ರಾಜ್ಯವನ್ನು ಪ್ರತಿನಿಧಿಸುತ್ತಿರುವವರ ಮೂಲಕ ನಾವು ಅಪೀಲ್ ಮಾಡಬೇಕು. ಪ್ರತಿ ಗ್ರಾಮಗಳಲ್ಲಿ ಇರುವಂತಹ ಸ್ಮಾರಕಗಳನ್ನು ಸುಸ್ಥಿತಿಯಲ್ಲಿಡಬೇಕು, ರಕ್ಷಣೆ ಮಾಡುವಂಥ ಕೆಲಸ ಮಾಡಬೇಕು. ಇದರಿಂದ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರವಾಸೋದ್ಯಮಕ್ಕೆ ಹೆಚ್ಚು ಲಾಭ ಬರುತ್ತದೆ. ಮಾನ್ಯ ಸಾ.ರ.ಮಹೇಶ್‌ರವರೂ ಕೂಡ ಈ ನಿಟ್ಟಿನಲ್ಲಿ ಹೆಚ್ಚು ಗಮನಹರಿಸುತ್ತಾರೆ ಎಂದು ಭಾವಿಸುತ್ತೇನೆ. ಇಲ್ಲೊಂದು ಉತ್ತಮವಾದ ವಿಷಯವನ್ನು ಚರ್ಚೆ ಮಾಡಿದ್ದೇವೆ ಎಂದು ಹೇಳಿ, ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀಮತಿ ತಾರಾ ಅನೂರಾಧ:**-ಮಾನ್ಯ ಸಭಾಪತಿಯವರೇ, ಈಗಾಗಲೇ ಸಭಾನಾಯಕರು ಮಾತನಾಡುತ್ತಾ, ಮಲ್ಟಿಪ್ಲೆಕ್ಸ್ ಥಿಯೇಟರ್‌ಗಳಿಂದ ನಮಗೆ ಯಾವುದೇ ರೀತಿಯ ದೂರು ಬಂದಿಲ್ಲ, ನಮಗೆ ಗೊತ್ತಾಗಲಿಲ್ಲ ಎಂಬ ಮಾತನ್ನು ಹೇಳಿದರು. ಪ್ರೈಮ್ ಟೈಮ್‌ನಲ್ಲಿ ಕನ್ನಡ ಚಿತ್ರಗಳ ಪ್ರದರ್ಶನ ಇವತ್ತಿಗೂ ಆಗುತ್ತಿಲ್ಲ ಎನ್ನುವ ಅಂಶವನ್ನು ತಮ್ಮ ಗಮನಕ್ಕೆ ತರಬಯಸುತ್ತಿದ್ದೇನೆ. 2 ಸ್ಕ್ರೀನ್‌ಗಳನ್ನು ಕನ್ನಡ ಚಿತ್ರಗಳಿಗೆ ಅಥವಾ ಪ್ರಾದೇಶಿಕ ಚಿತ್ರಗಳಿಗೆ ಅಂದರೆ, ತುಳು, ಕೊಂಕಣಿ ಅಥವಾ ಬ್ಯಾರಿ ಭಾಷೆಗಳ ಚಿತ್ರಗಳಿಗೆ ಕಡ್ಡಾಯವಾಗಿ ಮೀಸಲಿಡಬೇಕು. ಈ ರೀತಿಯ ನಿಯಮ ಇವತ್ತಿನವರೆಗೂ ಆಗಲಿಲ್ಲ.

(ಮುಂದು . . .)

(014) 3-7-2018 12.20 ಡಿಎಸ್-ಎಕೆ

**ಶ್ರೀಮತಿ ತಾರಾಅನೂರಾಧ(ಮುಂದು):-**

'Book My Show' ಎಂದು 'App' (Application) ಗಳಿವೆ. 'Book My Show' 'App' ನಲ್ಲಿ ಸಿನಿಮಾ ನೋಡುವುದಕ್ಕೆ ಆನ್‌ಲೈನ್ ಮುಖಾಂತರ ಸೀಟನ್ನು ಬುಕ್ ಮಾಡಿ ಕನ್ನಡ ಚಿತ್ರವನ್ನು ನೋಡುವುದಕ್ಕೆ ಹೋದರೆ ಚಿತ್ರಮಂದಿರ ತುಂಬಿ ಹೋಗಿದೆ, ಬೇರೆ ಸಿನಿಮಾಕ್ಕೆ ಹೋಗಿ, ತೆಲುಗು, ಹಿಂದಿ ಸಿನಿಮಾಕ್ಕೆ ಹೋಗಿ ಎಂದು ದಾರಿ ತಪ್ಪಿಸುವಂತಹ ಕೆಲಸಗಳನ್ನು ಮಲ್ಟಿಪ್ಲೆಕ್ಸ್‌ಗಳು ಮಾಡುತ್ತಿವೆ. ಅದರ ಬಗ್ಗೆ ದೊಡ್ಡ ಹೋರಾಟಗಳು ಕನ್ನಡ ಚಿತ್ರರಂಗದಲ್ಲಿ ಆಗಿದೆ. ಅದರ ಬಗ್ಗೆ ಸಭಾನಾಯಕರಿಗೆ ಗೊತ್ತಿದೆ ಎಂದು ನಾನು ಭಾವಿಸಿದ್ದೇನೆ. ಹಿಮ್ಮಾವುನಲ್ಲಿ ಚಿತ್ರನಗರಿ ಮಾಡುವುದು, ರಾಮನಗರದಲ್ಲಿ ಚಿತ್ರನಗರಿ ಮಾಡುವುದು ಈ ಎಲ್ಲಾ ವಿಚಾರಗಳನ್ನು ಈಗಾಗಲೇ ಹೇಳಿದ್ದಾರೆ. ಸಭಾನಾಯಕರು ಆ ಪಕ್ಷಕ್ಕೆ ಸೇರಿರುವುದರಿಂದ, ನಮ್ಮ ಹಿಂದಿನ ಮುಖ್ಯಮಂತ್ರಿಗಳು ಅವರು, ಇವರು ಹೇಳುತ್ತಲೇ ಇದ್ದಾರೆ. ಆದರೆ ನಾನು ಅದನ್ನು ತಪ್ಪು ಎಂದು ಹೇಳುವುದಿಲ್ಲ. ಆದರೆ ಪಕ್ಷಾತೀತವಾಗಿ ಯಾವುದೇ ಪಕ್ಷ ಬಂದರೂ ಕೂಡ ಚಿತ್ರರಂಗಕ್ಕೆ ಯಾರು ಮೋಸ ಮಾಡಲಿಲ್ಲ. ಎಲ್ಲರೂ ಚಿತ್ರರಂಗಕ್ಕೆ ಪ್ರೋತ್ಸಾಹವನ್ನು ಕೊಡುತ್ತಿದ್ದಾರೆ. ಕೆಲವು ಅಂಶಗಳು ಬಿಟ್ಟು ಹೋಗಿರುವುದರಿಂದ ಅದರ ಬಗ್ಗೆ ಮಾತ್ರ ನಾನು ಬೆಳಕು ಚೆಲ್ಲುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಈಗಾಗಲೇ ಜನತಾ ಚಿತ್ರಮಂದಿರಗಳಿಗೆ ಎಷ್ಟೋ ಲಕ್ಷ ಹಣವನ್ನು ಇಟ್ಟಿದ್ದಾರೆ. ಪ್ರದರ್ಶನ ಮಾಡುವುದಕ್ಕೆ ಕೆಲವು ನೀತಿಗಳು ಮಾತ್ರ ಬಾಕಿ ಇವೆ. ಮಾನ್ಯ ಸಭಾನಾಯಕರೇ, ಇದೇ ರೀತಿ ಮಾಡುತ್ತಿರುತ್ತಾರೆ. ಇನ್ನೂ ಹತ್ತು ವರ್ಷಗಳು ಕಳೆದರೂ ಕೂಡ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜನತಾ ಚಿತ್ರಮಂದಿರ ಬಗ್ಗೆ ಹೇಳಿದ್ದರು ಎಂದು ನಾವಿಬ್ಬರು ಮಾತನಾಡುತ್ತಿರುತ್ತೇವೆ. ಚಿತ್ರನಗರಿಯ ಬಗ್ಗೆ ಶ್ರೀ ರಾಮಕೃಷ್ಣ ಹೆಗ್ಗಡೆಯವರು ಇದ್ದ ಕಾಲದಿಂದಲೂ ನಾವು ಮಾತನಾಡುತ್ತಿದ್ದೇವೆ. ಹಾಗೇಯೇ ಜನತಾ ಚಿತ್ರಮಂದಿರಗಳ ಬಗ್ಗೆಯೂ ಮಾತನಾಡುತ್ತೇವೆಯೋ ಎಂದು ನನಗನಿಸುತ್ತಿದೆ. ಆ ಪರಿಸ್ಥಿತಿ ನಮಗೆ ಬರಬಾರದು ಎನ್ನುವ ದೃಷ್ಟಿಯಲ್ಲಿ ನಾನು ಹೇಳುತ್ತಿದ್ದೇನೆ. ಫಿಲಂ ಫೆಸ್ಟಿವಲ್‌ಗೆ 10 ಕೋಟಿ ರೂಪಾಯಿಗಳನ್ನು ಆಯವ್ಯಯದಲ್ಲಿ ಕೊಟ್ಟಿದ್ದೇವೆಂದು ಹೇಳುತ್ತಿದ್ದಾರೆ. ಆದರೆ 4 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆಂದು ಇವತ್ತು ಮಾನ್ಯ ಸಭಾನಾಯಕರು ಹೇಳುತ್ತಿದ್ದಾರೆ. ಅದು ನನಗೆ ಗೊತ್ತಿರಲಿಲ್ಲ. ತಪ್ಪಾಗಿದ್ದರೆ ಮಾನ್ಯ ಸಭಾನಾಯಕರು ಕ್ಷಮಿಸಬೇಕು. ಕಲ್ಯಾಣ ನಿಧಿಯನ್ನು ಕೊಟ್ಟಿದ್ದಾರೆ. ಯಾರ್‍ಯಾರಿಗೆ ಸಿಕ್ಕಿದೆ ಎನ್ನುವ ಪಟ್ಟಿಯನ್ನು ಮಾನ್ಯ ಸಭಾನಾಯಕರು ಒದಗಿಸಿ ಕೊಡಬೇಕು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ನಮ್ಮ ಮುಖ್ಯಮಂತ್ರಿಗಳು ಕೂಡ ಚಿತ್ರರಂಗದ ಹಿನ್ನೆಲೆಯಿಂದ ಬಂದವರಾಗಿದ್ದಾರೆ. ಶ್ರೀಮತಿ ತಾರಾರವರು ಏಕೆ ಇಷ್ಟು ಆತಂಕಪಡುತ್ತಿದ್ದಾರೆ? ಮಾನ್ಯ ಸಭಾನಾಯಕರು ಸಹ ಇದೇ ಹಿನ್ನೆಲೆಯುಳ್ಳವರು. ಅವರ ಆತಂಕಕ್ಕೆ ಅನುಮಾನವೇ ಬೇಡ.

**ಶ್ರೀ ಎನ್.ರವಿಕುಮಾರ್(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಒಂದು ವಿಚಾರದ ಬಗ್ಗೆ ಗಮನ ಸೆಳೆಯುತ್ತಿದ್ದೇನೆ. ಉದಾಹರಣೆಗೆ, ಶೂಟಿಂಗ್‌ಗಾಗಲಿ ಅಥವಾ ಚಲನಚಿತ್ರ ಬಿಡುಗಡೆಗಾಗಲಿ ಅಂದರೆ, ಶೂಟಿಂಗ್ ಆಗಿ ಬಿಡುಗಡೆಯಾಗುವವರೆಗೂ ಒಂದು ಸಲ ಸಿನಿಮಾ ಹೊರಗಡೆ ಬರಬೇಕಾದರೆ ಎಷ್ಟು ಸಲ ಅವರು ಅನುಮತಿ ತೆಗೆದುಕೊಳ್ಳುವುದಕೋಸ್ಕರ ಬೇರೆ ಬೇರೆ ಆಫೀಸ್‌ಗಳಿಗೆ ಹೋಗಬೇಕಾಗುತ್ತದೆ ಎನ್ನುವ ವಿಷಯವನ್ನು ಪ್ರಸ್ತಾಪ ಮಾಡಿದರು. ಇದರ ಬಗ್ಗೆ ಏಕ ಗವಾಕ್ಷಿ ವ್ಯವಸ್ಥೆ ಬರಬೇಕು. ಏಕ ಗವಾಕ್ಷಿ ವ್ಯವಸ್ಥೆಯನ್ನು ಮಾಡುವುದಕ್ಕೆ ಅಧಿವೇಶನದಲ್ಲಿ ಚರ್ಚೆಯಾಗಿದೆಯೋ ಏನೋ ನನಗೆ ಗೊತ್ತಿಲ್ಲ. ಏಕೆಂದರೆ, ನಾನು ಹೊಸಬನಾಗಿದ್ದೇನೆ. ಏಕ ಗವಾಕ್ಷಿ ವ್ಯವಸ್ಥೆ(Single Window System)ಯನ್ನು ತರುವುದರ ಬಗ್ಗೆ ಮಾನ್ಯ ಸಚಿವರು ಈ ಸಂದರ್ಭದಲ್ಲಿ ತಿಳಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಎರಡನೆಯದು, ಆಂಧ್ರಪ್ರದೇಶದ ಹೈದರಾಬಾದ್‌ನಲ್ಲಿರುವಂತಹ ರಾಮೋಜಿ ರಾವ್ ಫಿಲಂ ಸಿಟಿ ರೀತಿಯಲ್ಲಿ ಕರ್ನಾಟಕದಲ್ಲಾಗಬೇಕೆಂದು ಹೇಳುತ್ತಿರುವುದನ್ನು ನಾನು ಹತ್ತಾರು ವರ್ಷಗಳಿಂದ ಪತ್ರಿಕೆಗಳಲ್ಲಿ ಓದುತ್ತಿದ್ದೇನೆ. ಆ ರೀತಿ ಮಾಡುವುದಕ್ಕೆ ಏಕೆ ಆಗುತ್ತಿಲ್ಲ? ಮಾನ್ಯ ಕುಮಾರಸ್ವಾಮಿಯವರು ಎರಡನೇ ಬಾರಿ ಮುಖ್ಯಮಂತ್ರಿಗಳಾಗಿದ್ದಾರೆ. ಮೊದಲನೆಯ ಸಲ ಮುಖ್ಯಮಂತ್ರಿಯಾಗಿದ್ದಾಗಲೂ ಈ ವಿಷಯ ಪ್ರಸ್ತಾಪವಾಗಿತ್ತು. ಹಾಗಾಗಿ ಒಂದು ಒಳ್ಳೆಯ ಫಿಲಂ ಸಿಟಿ ಕೂಡ ಆಗಬೇಕು. ಮತ್ತೊಂದು ವಿಚಾರವನ್ನು ಹೇಳುವುದಕ್ಕೆ ಬಯಸುತ್ತೇನೆ. ಸಿನಿಮಾ ರೀತಿಯಲ್ಲಿ ಕಳ್ಳತನ, ಗೂಂಡಾಗಿರಿ ಮಾಡುವುದನ್ನು ನಾವು ಸಮಾಜದಲ್ಲಿ ನೋಡುತ್ತಿದ್ದೇವೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಾಗಾಗಿ ಒಳ್ಳೆಯ ಆದರ್ಶ ಸಿನಿಮಾಗಳು ಬರುವುದರ ಕಡೆಗೂ ಸರ್ಕಾರ ಮತ್ತು ಚಲನಚಿತ್ರ ವಾಣಿಜ್ಯ ಮಂಡಳಿ ಗಮನ ಹರಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

**ಡಾ:ಜೈಮಾಲ ರಾಮಚಂದ್ರ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಸದಸ್ಯರುಗಳು ಏಕ ಗವಾಕ್ಷಿ ವ್ಯವಸ್ಥೆಯ ಬಗ್ಗೆ ಹೇಳಿದ್ದಾರೆ. ಈ ಏಕ ಗವಾಕ್ಷಿ ವ್ಯವಸ್ಥೆ ಸೇರಿದಂತೆ ಸಮಗ್ರ ಚಲನಚಿತ್ರ ನೀತಿಯ ಮುಖಾಂತರ ಪರಿಹಾರ ಕಂಡುಕೊಳ್ಳಬೇಕಾಗಿದೆ. ಜನತಾ ಚಿತ್ರಮಂದಿರ ಇರಬಹುದು ಅಥವಾ ಚಿತ್ರೀಕರಣಕ್ಕೆ ಹೋದಾಗ ಇದು ಅರಣ್ಯ ಇಲಾಖೆಗೆ ಸಂಬಂಧಪಟ್ಟಿರುವುದು, ಇಲ್ಲಿ ಕ್ಯಾಮರಾ ಇಡಬಾರದು ಈ ಕಡೆ ಕ್ಯಾಮರಾ ಇಡಬಾರದು ಎಂದು ಹೇಳುತ್ತಾರೆ. ಇದು ಸಾರ್ವಜನಿಕರ ಸ್ವತ್ತು, ಇಲ್ಲಿ ನೀವು ನಿಲ್ಲಬೇಡಿ ಎಂದು ಹೇಳುತ್ತಾರೆ. ಇಂತಹ ಎಲ್ಲಾ ಸಮಸ್ಯೆಗಳಿಗೆ ಒಂದೇ ಸೂತ್ರ ಎಂದರೆ ಅದು ಸಮಗ್ರ ಚಲನಚಿತ್ರ ನೀತಿ ಒಳಗಡೆ ಬರುವುದರಿಂದ ಈಗಾಗಲೇ ಅದು ತಯಾರಾಗಿದೆ. ಅದನ್ನು ಕಾರ್ಯ ರೂಪಕ್ಕೆ ತರುವುದಕ್ಕೆ ಒಪ್ಪಿಗೆಯಾಗಿದೆ. ಅದನ್ನು ಕಾರ್ಯ ರೂಪಕ್ಕೆ ತರುತ್ತೇವೆ.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಸರ್ಕಾರ ಇದಕ್ಕೆ ಕಾಲ ಮಿತಿಯನ್ನು ನಿಗಧಿ ಮಾಡಬೇಕು.

**ಸಭಾಪತಿಯವರು:-** ಮಾನ್ಯ ಸಚಿವರೇ, ನೀವು ಯಾವುದಾದರು ಸಮಯದಲ್ಲಿ ಸಭೆಯನ್ನು ನಿಗದಿ ಮಾಡಿ. ಇದರಲ್ಲಿ ಯಾರ್ಯಾರು ಭಾಗವಹಿಸಿದ್ದಾರೆ ಅವರಿಗೆಲ್ಲಾ ತಿಳಿಸಿ. ಅಧಿಕಾರಿಗಳನ್ನು ಕರೆದು ಚರ್ಚೆ ಮಾಡಿ ತೀರ್ಮಾನವನ್ನು ತೆಗೆದುಕೊಳ್ಳಿ.

ಮಾನ್ಯ ಸಭಾನಾಯಕರೇ, ಹೊಸದಾಗಿ ಬಂದಿರುವ ಮಂತ್ರಿಗಳನ್ನು ಸದನಕ್ಕೆ ಪರಿಚಯ ಮಾಡಿಕೊಡಿ.

## ನೂತನ ಸಚಿವರ ಪರಿಚಯ

**ಡಾ:ಜೈಮಾಲ ರಾಮಚಂದ್ರ:-** ಮಾನ್ಯ ಸಭಾಪತಿಯವರೇ, ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರಾದ ಮಾನ್ಯ ಸಾ.ರಾ.ಮಹೇಶ್‌ರವರು ಹಾಗೂ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರಾದ ಮಾನ್ಯ ಆರ್.ಶಂಕರ್‌ರವರು ಈ ಸದನಕ್ಕೆ ಆಗಮಿಸಿದ್ದಾರೆ. ಇವರುಗಳನ್ನು ಸದನಕ್ಕೆ ಪರಿಚಯಿಸುತ್ತಿದ್ದೇನೆ.

**ಶ್ರೀ ಸಾ.ರಾ.ಮಹೇಶ್:-** ಮಾನ್ಯ ಸಭಾಪತಿಯವರೇ, ಎಲ್ಲರಿಗೂ ನಮಸ್ಕಾರ. ನನ್ನನ್ನು ಮೈಸೂರು ಜಿಲ್ಲೆಯ ಕೃಷ್ಣರಾಜನಗರ ತಾಲ್ಲೂಕಿನಿಂದ ಜನತೆ ಶಾಸಕರನ್ನಾಗಿ ಆಯ್ಕೆ ಮಾಡಿದ್ದಾರೆ. ಕರ್ನಾಟಕ ಸರ್ಕಾರ ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವನನ್ನಾಗಿ ನನ್ನನ್ನು ನೇಮಕ ಮಾಡಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಆ) ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿನ ಕೆರೆಗಳು ಒತ್ತುವರಿಯಾಗಿದ್ದು, ಸದರಿ ಕೆರೆಗಳನ್ನು ಸರ್ವೆ ಮಾಡಿ ಒತ್ತುವರಿಯನ್ನು ತೆರವುಗೊಳಿಸುವ ಬಗ್ಗೆ.**

---

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿನ ಕೆರೆಗಳು ಒತ್ತುವರಿಯಾಗಿದ್ದು, ಸದರಿ ಕೆರೆಗಳನ್ನು ಸರ್ವೆ ಮಾಡಿ ಒತ್ತುವರಿಯನ್ನು ತೆರವುಗೊಳಿಸುವ ಬಗ್ಗೆ ಮಾನ್ಯ ಸಣ್ಣ ನೀರವಾರಿ ಸಚಿವರ ಗಮನ ಸೆಳೆಯುತ್ತಿದ್ದೇನೆ.

**ಶ್ರೀ ಸಿ.ಎಸ್.ಪುಟ್ಟರಾಜು(ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ,

(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಉತ್ತರ ಕೊಟ್ಟಿರುವುದಕ್ಕೆ ಮಾನ್ಯ ಸಚಿವರಿಗೆ ಧನ್ಯವಾದಗಳು.

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಶ್ರೀಕಂಠೇಗೌಡರೇ, ತಾವು ವಿರೋಧ ಪಕ್ಷದಿಂದ ಆಡಳಿತ ಪಕ್ಷಕ್ಕೆ ಹೋಗಿದ್ದೀರಿ ತಮಗೆ ಏನು ಅನಿಸುತ್ತಿದೆ? How does he feel now?

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನನಗೆ ಎರಡೂ ಕಡೆ ಒಂದೇ ರೀತಿ ಅನಿಸುತ್ತಿದೆ. ಒಂದು ಸಮಾಧಾನ ಏನು ಎಂದರೆ ನಾನು ಮಾನ್ಯ ಉಗ್ರಪ್ಪನವರ ಜಾಗಕ್ಕೆ ಬಂದಿದ್ದೇನೆ.

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ, ಪ್ರೊಫೇಸರ್ ಮಾತನ್ನು ಕೇಳಬೇಕೆಂದು ನಾವೆಲ್ಲರೂ ಆಸೆ ಪಡುತ್ತಿದ್ದೆವು. ಇಲ್ಲಿ ಅವರು ಕುಳಿತ್ತಿದ್ದಾಗ ಬಹಳ ಚೆನ್ನಾಗಿ ಮಾತನಾಡುತ್ತಿದ್ದರು. ನಾವೆಲ್ಲಾ ಅವರ ಮಾತುಗಳನ್ನು ನಿಶಬ್ಧವಾಗಿ ಕೇಳುತ್ತಿದ್ದೆವು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ನಾನು ಈಗಲೂ ಅದೇ ರೀತಿ ಮಾತನಾಡುತ್ತೇನೆ.

**ಶ್ರೀ ಕೆ.ಬಿ.ಶಾಣಪ್ಪ:-** ಈಗ ಅದೆಲ್ಲಾ ಹೋಯಿತು. He has lost everything by sitting there.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಶ್ರೀಕಂಠೇಗೌಡರು ಪರಿಸ್ಥಿತಿಗೆ ಹೊಂದಿಕೊಳ್ಳುವುದಕ್ಕಾಗದೆ ಚಡಪಡಿಸುತ್ತಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಈಗ ನಿಮ್ಮ ಪರಿಸ್ಥಿತಿ ಹೇಗಿದೆಯೋ ಅದೇ ಪರಿಸ್ಥಿತಿ ಅವರಿಗಿದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಎಲ್ಲಾ ಗೌರವಾನ್ವಿತ ಸದಸ್ಯರುಗಳು ನನ್ನ ಬಗ್ಗೆ ಇಟ್ಟಿರುವ ಪ್ರೀತಿಗೆ ನಾನು ಅತ್ಯಂತ ಆಭಾರಿಯಾಗಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮೊದಲು ಪ್ರೀತಿ ಇದ್ದದ್ದು ಹೌದು, ಈಗ ಅದು ಅನುಕಂಪವಾಗಿ ಮಾರ್ಪಟ್ಟಿದೆ.

(ಮುಂದು)

015/03-07-2018/12-30/bkp-rn

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಶಿಕ್ಷಕರ ಕ್ಷೇತ್ರ):- ಮಾನ್ಯ ಸಭಾಪತಿಯವರೇ,** ಇವತ್ತು ಈ ನಾಡಿನ ಜ್ವಲಂತ ಸಮಸ್ಯೆಯ ಕುರಿತಾಗಿ ಸರ್ಕಾರದ ಗಮನಕ್ಕೆ ಸೆಳೆಯುವ ಪ್ರಯತ್ನದಲ್ಲಿ ಮುಂದಾಗಿದ್ದೇನೆ. ಮನುಷ್ಯ ಸೇರಿದಂತೆ ಸಕಲ ಜೀವ ರಾಶಿಗಳಿಗೆ ಗಾಳಿ, ನೀರು, ಬೆಳಕು, ಆಹಾರ ಬೇಕು. ಬಹಳ ಮುಖ್ಯವಾಗಿ ನೀರು ಬೇಕು. ನಾವು ಗಾಳಿಗಾಗಿ, ಅರಣ್ಯವನ್ನು, ಗಿಡ-ಮರಗಳನ್ನು ಬೆಳೆಸುತ್ತೇವೆ. ಆ ಮೂಲಕ ಆಮ್ಲಜನಕವನ್ನು ಉತ್ಪತ್ತಿ ಮಾಡುತ್ತೇವೆ. ಮತ್ತೆ, ನಾವು ಆಹಾರಕ್ಕಾಗಿ ಕೃಷಿ ಮೂಲಕ ಆಹಾರ-ಧಾನ್ಯಗಳನ್ನು ಬೆಳೆಯುತ್ತೇವೆ. ಆದರೆ, ನೀರಿಗಾಗಿ ಈ ರೀತಿ ಅವಕಾಶವಿರುವುದಿಲ್ಲ. ಇಡೀ ಜಗತ್ತಿನ ನೀರಿನ ಮೂಲ ಎಂದರೆ ಅದು ಮಳೆಯಿಂದ ಬರುವ ನೀರನ್ನು ಸಂಗ್ರಹಿಸಿಟ್ಟುಕೊಳ್ಳುವಂತಹ ಕೆಲಸವನ್ನು ನಮ್ಮ ಪೂರ್ವಿಕರು ಬಹಳ ವೈಜ್ಞಾನಿಕವಾಗಿ, ವ್ಯಾಪಕವಾಗಿ ಮಾಡುತ್ತಾ ಬಂದಿದ್ದರು. ಎಂತಹ ಅದ್ಭುತವಾದ ಕಲ್ಪನೆ ನಮ್ಮ ಹಿರಿಯರಲ್ಲಿ ಇತ್ತು ಎಂದರೆ ಒಂದು ಗ್ರಾಮವನ್ನು ನಿರ್ಮಾಣ ಮಾಡಬೇಕೆಂದರೆ, ಆ ಗ್ರಾಮದಲ್ಲಿ ಒಂದು ಕೆರೆ ಇರಬೇಕು, ಒಂದು ಕಟ್ಟೆ ಇರಬೇಕು, ಒಂದು ದೇವಾಲಯವಿರಬೇಕು, ಆ ದೇವಾಲಯದ ಮುಂದೆ ಒಂದು ಅಂಕಣವಿರುವಂತಹ ವ್ಯವಸ್ಥೆಯನ್ನು ಮಾಡಿದ್ದರು. ಆ ರೀತಿಯ ಒಂದು ವೈಜ್ಞಾನಿಕ ಕಲ್ಪನೆಯಲ್ಲಿ ಮತ್ತು ಎಲ್ಲಾ ಸಮಾಜಗಳು ಇರುವಂತಹ ಹಳ್ಳಿಗಳನ್ನು ನಿರ್ಮಾಣ ಮಾಡುತ್ತಾ ಬಂದಿದ್ದರು. ಅನಂತರ ನಮ್ಮನ್ನು ಆಳಿದ ರಾಜ-ಮಹಾರಾಜರುಗಳು ಅಂದರೆ, ಅದು ಗಂಗರಸರು ಇರಬಹುದು, ಚೋಳ ಅರಸರು ಇರಬಹುದು, ಹೊಯ್ಸಳ ಅರಸರು ಇರಬಹುದು, ವಿಜಯನಗರದ ಅರಸರು ಇರಬಹುದು, ಅದರಲ್ಲೂ ವಿಶೇಷವಾಗಿ ಮೈಸೂರಿನ ಅರಸರು ಮತ್ತು ನಾಡಪ್ರಭು ಕೆಂಪೇಗೌಡರವರನ್ನು ನಾವು ಮರೆಯುವಂತಿಲ್ಲ. ಮೈಸೂರಿನ

ಯದು ವಂಶದ ಅರಸರು 1600 ಕ್ಕೂ ಹೆಚ್ಚು ಕೆರೆಗಳನ್ನು ನಿರ್ಮಾಣ ಮಾಡಿದ್ದರು. ಬಹುಶಃ ಕರ್ನಾಟಕ ರಾಜ್ಯದ ಇತಿಹಾಸದಲ್ಲಿ, ಹಳೆ ಮೈಸೂರಿನ ಇತಿಹಾಸದಲ್ಲಿ ನೀರಾವರಿ ವಿಚಾರದಲ್ಲಿ ಮೈಸೂರಿನ ಅರಸರನ್ನು ನಾವು ಮರೆಯುವಂತಿಲ್ಲ. ಬೆಂಗಳೂರಿನ ನಿಮಾತೃ ನಾಡಪ್ರಭು ಕೆಂಪೇಗೌಡ ರವರು ಬೆಂಗಳೂರನ್ನು ಕಟ್ಟುವಂತಹ ಸಂದರ್ಭದಲ್ಲಿ ನೂರಾರು ಕೆರೆಗಳನ್ನು ನಿರ್ಮಾಣ ಮಾಡಿದ್ದರು.

**ಶ್ರೀ ಆಯನೂರು ಮಂಜುನಾಥ್(ವಿಧಾನಸಭೆಯಿಂದ ಆಯ್ಕೆಯಾದವರು):-** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ಆಗಿರುವಂತಹ ಕ್ರಿಯಾಲೋಪದ ಬಗ್ಗೆ ಪ್ರಸ್ತಾಪ ಮಾಡಲಿಕ್ಕೆ ಬಯಸುತ್ತೇನೆ. ಗಮನಸೆಳೆಯುವ ಸೂಚನೆಯಡಿಯಲ್ಲಿ ವಿಚಾರವನ್ನು ನಾವು ಗಮನ ಸೆಳೆದಾಗ ಅದಕ್ಕೆ ಮಂತ್ರಿಗಳು ಉತ್ತರವನ್ನು ಕೊಟ್ಟ ನಂತರ ಆ ನಿಯಮಾವಳಿಯಲ್ಲಿ ಚರ್ಚೆಗೆ ಅವಕಾಶ ಇದೆಯೋ ಅಥವಾ ಇಲ್ಲವೋ ಎನ್ನುವುದನ್ನು ತಿಳಿಸಬೇಕು.

**ಸಭಾಪತಿಯವರು:-** ಕ್ಲಾರಿಫಿಕೇಷನ್ ಕೇಳಲಿಕ್ಕೆ ಅವಕಾಶ ಇರುವುದರಿಂದ ಕ್ಲಾರಿಫಿಕೇಷನ್ ಕೇಳುತ್ತಿದ್ದಾರೆ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಇದು ಕ್ಲಾರಿಫಿಕೇಷನ್ ಆಗಿದೆಯೋ, ಭಾಷಣವಾಗಿದೆಯೋ ಎನ್ನುವುದು ಗೊತ್ತಾಗುತ್ತಿಲ್ಲ.

**ಸಭಾಪತಿಯವರು:-** ಶ್ರೀಯುತ ಆಯನೂರು ಮಂಜುನಾಥ್ ರವರು ಇಲ್ಲಿ ಗಮನಿಸಬೇಕು. ಎಲ್ಲಾ ವಿಚಾರವನ್ನು ಗೆರೆ ಎಳೆದಂತೆ ಸದನವನ್ನು ನಡೆಸಲಿಕ್ಕೆ ಆಗುವುದಿಲ್ಲ. ಒಂದೊಂದು ಭಾರಿ ಸ್ವಲ್ಪ ಹೆಚ್ಚು ಕಡಿಮೆ ಮಾಡಬೇಕಾಗುತ್ತದೆ. ಸಮಯಾವಕಾಶ ಇದ್ದಂತಹ ಸಂದರ್ಭದಲ್ಲಿ ಎಲ್ಲಾ ಸದಸ್ಯರು ಚರ್ಚೆ ಮಾಡಲಿಕ್ಕೆ ಅನುಮತಿಯನ್ನು ಕೊಡುತ್ತೇನೆ. ಮಾನ್ಯ ಸದಸ್ಯರು ಹೇಳುವಂತಹ ನಿಯಮವನ್ನೂ ಸಹ ನಾನು ಒಪ್ಪುತ್ತೇನೆ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ತಾವು ಕೊಡುತ್ತಿರುವುದು ಸಂತೋಷದ ವಿಚಾರ. ಆದರೆ, ಮುಂದಿನ ದಿನಗಳಲ್ಲಿ ಈ ರೀತಿಯ ಅವಕಾಶವನ್ನು ಉಪಯೋಗಿಸಿಕೊಳ್ಳಲಿಕ್ಕೆ ನಾವುಗಳು ಎದ್ದು ನಿಂತಾಗ ತಾವು ನಮ್ಮನ್ನು ಕುಳ್ಳಿರಿಸಬಾರದು ಎನ್ನುವ ಬಗ್ಗೆ ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ.

**ಸಭಾಪತಿಯವರು:-** ಈ ವಿಚಾರವನ್ನು ನಾನು ಗಮನದಲ್ಲಿಟ್ಟುಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀಯುತ ಆಯನೂರು ಮಂಜುನಾಥ್ ರವರ ಗಮನಕ್ಕೆ ಒಂದು ವಿಚಾರವನ್ನು ತರಬಯಸುತ್ತೇನೆ. ನಮ್ಮ ಈ ಸದನದಲ್ಲಿ, ವಿಧಾನ ಪರಿಷತ್ತಿನಲ್ಲಿ ಯಾವುದೇ ಒಂದು ವಿಚಾರವಾಗಿ ವಿಸ್ತೃತವಾಗಿ ಚರ್ಚೆಗಳು ನಡೆಯುವಂತಹ ಪರಂಪರೆ ಇದೆ. ಆದರೆ, ವಿಧಾನಸಭೆಯಲ್ಲಿ 4-5 ನಿಮಿಷಗಳಿಗೆ ಸಿಮೀತಗೊಳಿಸಿರುತ್ತಾರೆ.

**ಶ್ರೀ ಆರ್.ಧರ್ಮಸೇನ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇವತ್ತು ಪ್ರಶ್ನೋತ್ತರ ವೇಳೆ ಇಲ್ಲದೇ ಇರುವುದರಿಂದ ಈ ಚರ್ಚೆಗೆ ಅವಕಾಶ ಸಿಕ್ಕುತ್ತಿದೆ ಅಷ್ಟೆ. 4-5 ದಿವಸಗಳ ಮಟ್ಟಿಗೆ ಪ್ರಶ್ನೋತ್ತರ ಅವಧಿ ಇರುವುದಿಲ್ಲ.

(ಗೊಂದಲ)

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ತಾವು ಏನು ಹೇಳುತ್ತೀರಿ, ಅದು ಸದನದಲ್ಲಿ ರೂಲಿಂಗ್ ಆಗುತ್ತದೆ. ಅದನ್ನು ಮಾನ್ಯ ಸದಸ್ಯರುಗಳು ಪಾಲನೆ ಮಾಡಲಿಕ್ಕೆ ಅವಕಾಶವಾಗುತ್ತದೆ ಎನ್ನುವ ಕಾರಣಕ್ಕೋಸ್ಕರ ಕೇಳುತ್ತಿದ್ದೇನೆ ಹೊರತು, ಅವರಿಗೆ ಅಡಚಣೆ ಮಾಡಲಿಕ್ಕೆ ನಾನು ಕೇಳುತ್ತಿಲ್ಲ.

**ಸಭಾಪತಿಯವರು:-** ಮಾನ್ಯ ಸದಸ್ಯರು ನಿಯಮದ ವಿಚಾರವಾಗಿ ಮಾತನಾಡಿ, ಕ್ಲಾರಿಫಿಕೇಷನ್ ಮಾತ್ರ ಕೇಳಬೇಕೆಂದು ಹೇಳಿದ್ದು ನಿಜ. ಆದರೆ, ಒಂದೊಂದು ಬಾರಿ ಸದನದಲ್ಲಿ ಹೆಚ್ಚು ಕಡಿಮೆಯಾಗುತ್ತದೆ. ಅದನ್ನು ನಿಭಾಯಿಸಿಕೊಂಡು ಹೋಗಬೇಕಾಗುತ್ತದೆ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಒಂದೊಂದು ಬಾರಿ ಹೆಚ್ಚು ಕಡಿಮೆಯಾದರೂ ಕೂಡ ತಮಗೆ ಒಪ್ಪಿಗೆ ಇದ್ದರೆ ಅದರಂತೆ ನಾವು ನಡೆದುಕೊಂಡು ಹೋಗುತ್ತೇವೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ವಿಧಾನ ಪರಿಷತ್ತಿಗೆ ನೂತನ ಸದಸ್ಯರುಗಳಾಗಿ ಆಯ್ಕೆಯಾಗಿ ಬಂದಿರತಕ್ಕಂತಹ ನಮ್ಮ ಗೆಳೆಯರು ಚಲನಚಿತ್ರದ ವಿಷಯವಾಗಿ ಮಾತನಾಡುವಾಗ ತಾಳ್ಮೆಯಿಂದ ಇದ್ದರು.

**ಸಭಾಪತಿಯವರು:-** ಆ ವಿಷಯಕ್ಕೆ ಹೋಗಬೇಡಿ, ಈ ವಿಷಯಕ್ಕೆ ಬನ್ನಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಮನುಷ್ಯನ ಅವಶ್ಯಕತೆಗಳಲ್ಲಿ ಕುಡಿಯುವ ನೀರು ಒಂದಾಗಿದೆ. ಕುಡಿಯುವ ನೀರಿನ ಮೂಲ ಮಳೆ ಒಂದೇ ಆಗಿದೆ. ಆ ಮಳೆಯ ನೀರನ್ನು ಹಿಡಿದಿಟ್ಟುಕೊಳ್ಳುವ ದಿಸೆಯಲ್ಲಿ ನಮ್ಮ ಹಿರಿಯರು, ಪೂರ್ವಿಕರು ಮಾಡಿದಂತಹ ಸಾಹಸ, ಮತ್ತು ನಾವು ಈ ನಿಟ್ಟಿನಲ್ಲಿ ಸೋತಿದ್ದು, ಈ ಜವಾಬ್ದಾರಿಯ ಬಗ್ಗೆ ನಾವು ಗಂಭೀರವಾಗಿ ಚರ್ಚೆ ಮಾಡದೇ ಹೋದರೆ, ರಾಜ್ಯದಲ್ಲಿ ದೊಡ್ಡ ಲೋಪವಾಗುತ್ತದೆ. ಎಲ್ಲಾ ಕಾನೂನು-ಕಟ್ಟಳೆಗಳು, ನಡವಳಿಕೆಗಳು ಮಹತ್ವವಾದ ವಿಚಾರವನ್ನು ಚರ್ಚೆ ಮಾಡುವುದರ ಮೂಲಕ ಪರಿಹಾರವನ್ನು ಕಂಡುಕೊಳ್ಳುವುದಕ್ಕೆ ಇರುವುದಾಗಿದೆ. ಆ ಹಿನ್ನೆಲೆಯಲ್ಲಿ ಸಣ್ಣ ಕೆರೆಗಳನ್ನು ಉಳಿಸಿ, ಬೆಳಸಿ ಸಂರಕ್ಷಣೆ ಮಾಡಬೇಕಾದಂತಹ ಮಹತ್ತರ ಜವಾಬ್ದಾರಿ ನಮ್ಮೆಲ್ಲರ ಹೆಗಲ ಮೇಲಿದೆ. ಹೌದು. ಒಂದು ಕಾಲದಲ್ಲಿ ನಮ್ಮ ಪೂರ್ವಿಕರು ಅತ್ಯಂತ ಎಚ್ಚರಿಕೆಯಿಂದ, ವೈಜ್ಞಾನಿಕ ತಳಹದಿಯ ಮೇಲೆ ಗ್ರಾಮಗಳನ್ನು ಕಟ್ಟುತ್ತಿದ್ದರು, ಕೆರೆ-ಕುಂಟೆಗಳನ್ನು ಕಟ್ಟುತ್ತಾ ಬಂದಿದ್ದರು.

**ಸಭಾಪತಿಯವರು:-** ಶ್ರೀಯುತ ಶ್ರೀಕಂಠೇಗೌಡರವರೆ, ಈ ವಿಚಾರದಲ್ಲಿ ಸರ್ಕಾರ ಏನು ಮಾಡಬೇಕೆಂದು ಸಲಹೆ ಕೊಡಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ತಾವು ಹಿಂದಿನ ಗಮನ ಸೆಳೆಯುವ ಸೂಚನೆಯ ಚರ್ಚೆಗೆ ಬಹಳ ಸಮಯವನ್ನು ಕೊಟ್ಟಿದ್ದೀರಿ. ಶ್ರೀಮತಿ ತಾರಾಅನುರಾಧ ರವರು ಸುಮಾರು 1 ಗಂಟೆ 25 ನಿಮಿಷಗಳ ಕಾಲ ಅವರು ಮಾತನಾಡಿದ್ದಾರೆ. ತಾವೆಲ್ಲರೂಗಳು ಸುಮ್ಮನೆ ಕುಳಿತುಕೊಂಡಿದ್ದೀರಿ.

(ಗೊಂದಲ)

**ಸಭಾಪತಿಯವರು:-** ಎಲ್ಲರೂ ಒಟ್ಟಿಗೆ ಎದ್ದು ನಿಂತು ಮಾತನಾಡುವುದು ಬೇಡ. ಒಬ್ಬೊಬ್ಬರೆ ಎದ್ದು ನಿಂತು ಮಾತನಾಡಿ. ಎಲ್ಲರೂ ಎದ್ದು ಏತಕ್ಕೆ ವೀರಾವೇಶ ತಾಳುತ್ತೀರಿ? ನೀವೆಲ್ಲರೂ ಹಿರಿಯ ಸದಸ್ಯರಾಗಿದ್ದೀರಿ. ಮಾನ್ಯ ಸದಸ್ಯರು ಹೇಳುವುದನ್ನು ಸಮಧಾನವಾಗಿ ಕೇಳಿ.

**ಶ್ರೀ ಭೋಜೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವಿಚಾರವಾಗಿ ಚರ್ಚೆ ಮಾಡುವಾಗ ಇಷ್ಟೆಲ್ಲಾ ಜನರು ಎದ್ದು ನಿಂತು ಮಾತನಾಡುವುದು ಬೇಡ.

**ಸಭಾಪತಿಯವರು:-** ಶ್ರೀಯುತ ಭೋಜೇಗೌಡರವರೇ, ತಾವು ಇಂದು ಸದನಕ್ಕೆ ಬಂದಿದ್ದೀರಿ. ಇವತ್ತೇ ತಾವು ಈ ರೀತಿ ಮಾತನಾಡಲಿಕ್ಕೆ ಪ್ರಾರಂಭ ಮಾಡಿದರೆ ಹೇಗೆ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಮೈಸೂರಿನ ಮಹಾರಾಜರು 1400 ಕೆರೆ–ಕಟ್ಟೆಗಳನ್ನು ನಿರ್ಮಿಸಿದ್ದರು, ನಾಡಪ್ರಭು ಕೆಂಪೇಗೌಡರವರು ಬೆಂಗಳೂರು ನಗರ ಒಂದಕ್ಕೆ ನೂರಾರು ಕರೆಗಳನ್ನು ಕಟ್ಟಿಸಿಕೊಟ್ಟಿದ್ದರು. ಆದರೆ, ಇವತ್ತು ಏನಾಗಿದೆ ಎಂದರೆ ಈ ಕೆರೆಗಳನ್ನು ಕಟ್ಟಿಸುವ ವಿಚಾರದಲ್ಲಿ ಒಂದು ದೊಡ್ಡ ಆತಂಕಕ್ಕೆ ಒಳಗಾಗಿದ್ದೇವೆ.

(ಗೊಂದಲ)

**ಶ್ರೀ ಕೆ.ಬಿ.ಶಾಣಪ್ಪ(ನಾಮನಿರ್ದೇಶಿತರು):** ಮಾನ್ಯ ಸಭಾಪತಿಯವರೇ, ನಾನು ಸಹ ಈ ಸದನದ ಹಿರಿಯ ಸದಸ್ಯನಿದ್ದೇನೆ. Calling Attention has a time limit.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಈ ಮಾತನ್ನು ಶ್ರೀಮತಿ ತಾರಾಅನೂರಾಧ ರವರಿಗೆ ಏತಕ್ಕೆ ಹೇಳಲಿಲ್ಲ?

(ಗೊಂದಲ)

**ಸಭಾಪತಿಯವರು:–** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ನಿಮ್ಮ ಪ್ರಶ್ನೆ ಏನಿದೆ ಎಂದರೆ ಕರೆಗಳನ್ನು ಸರ್ವೆ ಮಾಡಿ, ಒತ್ತುವರಿಯನ್ನು ತೆರವುಗೊಳಿಸಬೇಕೆಂದು ಇದೆ. ನೀವು ಪುರಾಣವನ್ನೆಲ್ಲಾ ಹೇಳುವುದು ಬೇಡ. ಅದಕ್ಕೆ ಸರ್ಕಾರ ಏನು ಮಾಡಬೇಕೆಂದು ಅಷ್ಟೇ ಹೇಳಿ.

**ಶ್ರೀ ವೈ.ಎ.ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ,

**ಸಭಾಪತಿಯವರು:–** ಶ್ರೀಯುತ ನಾರಾಯಣಸ್ವಾಮಿಯವರೇ, ದಯವಿಟ್ಟು ಕುಳಿತುಕೊಳ್ಳಿ. ನಿಮ್ಮ ಪ್ರಶ್ನೆ ಏನಿದೆ, ಅದಕ್ಕೆ ಉತ್ತರ ಏನಿದೆ, ಅದರ ಬಗ್ಗೆ ಮಾತ್ರ ಮಾತನಾಡಿ. ಅದನ್ನು ಬಿಟ್ಟು ಅದರ ಬಗ್ಗೆ ಇತಿಹಾಸವನ್ನು ಹೇಳುವುದು ಬೇಡ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ತಮ್ಮಲ್ಲಿ ಕೈಮುಗಿದು ಪ್ರಾರ್ಥನೆ ಮಾಡುತ್ತೇನೆ. ಇದು ಜೀವ–ಜಲದ ಪ್ರಶ್ನೆಯಾಗಿದೆ. ಮನುಷ್ಯನ ಬದುಕಿನ ಪ್ರಶ್ನೆಯಾಗಿದೆ.

**ಸಭಾಪತಿಯವರು:–** ಈ ಬಗ್ಗೆ ನೀವು ಕ್ಲಾರಿಫಿಕೇಷನ್ ಕೇಳಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ನೀರನ್ನು ಸಂಗ್ರಹಿಸಿಟ್ಟುಕೊಳ್ಳುವ ಅನಿವಾರ್ಯತೆ ನಮ್ಮೆಲ್ಲರ ಮೇಲಿದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಶ್ರೀಯುತ ಶ್ರೀಕಂಠೇಗೌಡರವರೇ, ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ಕ್ಲಾರಿಫಿಕೇಷನ್ ಮಾತ್ರ ಕೇಳಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಈ ವಿಚಾರದ ಬಗ್ಗೆ ಸರ್ಕಾರದ ಗಮನಸೆಳೆಯುವ ಇಂದಿನ ಉದ್ದೇಶ ಇಷ್ಟೆ. ನಾವು ಬದಲಾದ ಕಾಲ ಘಟ್ಟದಲ್ಲಿ ಜನಸಂಖ್ಯೆ ತುಂಬಾ ಹೆಚ್ಚಳವಾಗಿದೆ. ನಾಗರೀಕತೆ ಬೆಳದಿದೆ. ಅಭಿವೃದ್ಧಿಯಾಗಿದೆ. ಆದರೆ, ಜನಸಂಖ್ಯೆ ತೀರಾ ಕಡಿಮೆ ಇದ್ದಂತಹ ಸಂದರ್ಭದಲ್ಲಿ ನಾವು ಸಾವಿರಾರು ಕೆರೆಗಳನ್ನು ನಿರ್ಮಾಣ ಮಾಡಿಕೊಂಡಿದ್ದೆವು. ತಾಯಿ ಮಗುವನ್ನು ಹಡೆದಾಗ ಅವಳು ತನ್ನ ಮಗುವಿನ ಕಿವಿಯಲ್ಲಿ ನೀನು ಕೆರೆಗಳನ್ನು ಕಟ್ಟಿಸು, ಸಾಲು ಮರಗಳನ್ನು ನಡೆಸು, ಛತ್ರಗಳನ್ನು ಕಟ್ಟಿಸು ಎಂದು ಹೇಳುತ್ತಿದ್ದಳು. ಆದರೆ, ಇವತ್ತು ಏನಾಗಿದೆ ಎಂದರೆ, ನೀನು ಕೆರೆಗಳನ್ನು ಒತ್ತುವರಿ ಮಾಡಿಸು, ಮರಗಳನ್ನು ಕತ್ತರಿಸು, ಛತ್ರಗಳನ್ನು ಬೀಳಿಸುವಂತಹ ಸ್ಥಿತಿಗೆ ಬಂದಿದ್ದೇವೆ. ಅಂದಿನ ಜನಸಂಖ್ಯೆ ಮತ್ತು ಇವತ್ತಿನ ಜನಸಂಖ್ಯೆಯನ್ನು ಹೋಲಿಕೆ ಮಾಡಿ ನೋಡಿದರೆ ಎಷ್ಟು ಪಟ್ಟು ಕೆರೆಗಳನ್ನು ನಾವು ನಿರ್ಮಾಣ ಮಾಡಬೇಕಾಗಿತ್ತು? ಅದರ ಬದಲಿಗೆ ನಾವು ದುರಂತವನ್ನು ಕಾಣುತ್ತಿದ್ದೇವೆಂದರೆ ನಾವು ಕೆರೆಗಳನ್ನು ಒತ್ತುವರಿ ಮಾಡುತ್ತಿದ್ದೇವೆ. ಕೆರೆಗಳನ್ನು ಪರಿವರ್ತನೆಯ ಮೂಲಕ, ನಗರೀಕರಣ ಮಾಡುವುದರ ಮೂಲಕ ಕೆರೆಗಳನ್ನು ಮುಚ್ಚುತ್ತಿದ್ದೇವೆ. ಈ ಬಗ್ಗೆ ನನ್ನ ಹತ್ತಿರ ಅದ್ಭುತವಾದಂತಹ ಮಾಹಿತಿ ಇದೆ. ನಮ್ಮ *Environment Management and Policy Research Institute* (EMPRI), ಎನ್ನುವಂತಹ ಭಾರತೀಯ ವಿಜ್ಞಾನ ಸಂಸ್ಥೆ ಒಂದು ದೊಡ್ಡ ಸರ್ವೆಯನ್ನು ಮೈಸೂರಿನ ಭಾಗದಲ್ಲಿ ಮಾಡಿದೆ. ಅದು ನಮ್ಮ ಮಾಜಿ ಮುಖ್ಯಮಂತ್ರಿಗಳಾದ ಶ್ರೀಮಾನ್ ಸಿದ್ದರಾಮಯ್ಯನವರು ಪ್ರತಿನಿಧಿಸುವಂತಹ ಕ್ಷೇತ್ರದ ಸುಮಾರು 72 ಕೆರೆಗಳನ್ನು ಮತ್ತು ನಂಜನಗೂಡಿನ ಸುಮಾರು 34 ಕೆರೆಗಳು ಸೇರಿದಂತೆ 106 ಕೆರೆಗಳ ಬಗ್ಗೆ Satellite ಮೂಲಕ ಒಂದು ಅಧ್ಯಯನವನ್ನು ಸಂಶೋಧನಾತ್ಮಕವಾಗಿ ಮಾಡಿದ್ದಾರೆ. ಆ 106 ಕೆರೆಗಳ ಪೈಕಿ ಇಂದು ಉಳಿದಿರುವುದು ಕೇವಲ 69 ಕೆರೆಗಳು ಮಾತ್ರ. ಇನ್ನುಳಿದ 37 ಕೆರೆಗಳ ಅಸ್ತಿತ್ವವೇ ಇಲ್ಲ. ಜೊತೆಗೆ ಶೇಕಡ 20 ರಷ್ಟು ಕೆರೆಗಳು ಅವಸಾನದ ಅಂಚಿನಲ್ಲಿವೆ. ಇದು ಕೇವಲ ಮೈಸೂರು–ನಂಜನಗೂಡಿನ ಚಿತ್ರಣ ಮಾತ್ರವಲ್ಲ. ಇದು ಇಡೀ ರಾಜ್ಯದ ಚಿತ್ರಣವಾಗಿದೆ. ಶೇಕಡ 20 ಭಾಗ ಕೃಷಿ ಭೂಮಿ ಇವತ್ತು ಕಡಿಮೆಯಾಗಿದೆ. ಬೀಳುವ ಮಳೆ ನೀರನ್ನು ನಾವು ಸಂಗ್ರಹಿಸಿಟ್ಟುಕೊಳ್ಳುವ ಹಿನ್ನೆಲೆಯಲ್ಲಿ ನಮ್ಮ ಪೂರ್ವಿಕರ ವೈಜ್ಞಾನಿಕವಾಗಿ ಮಾಡಿದ ಕೆರೆಗಳನ್ನು ಮುಚ್ಚುವಂತಹ ಪ್ರಯತ್ನ ನಿರಂತರವಾಗಿ ನಡೆಯುತ್ತಿದೆ. ಸರ್.ಎಂ. ವಿಶ್ವೇಶ್ವರಯ್ಯನವರು ಕನ್ನಂಬಾಡಿ ಅಣೆಕಟ್ಟನ್ನು ಕಟ್ಟುವಾಗ ಏನು ಹೇಳಿದ್ದರೆಂದರೆ, "ಕನ್ನಂಬಾಡಿ ಅಣೆಕಟ್ಟನ್ನು ಕಟ್ಟಿದ್ದೇವೆಂದು ಹೇಳಿ, ಕಟ್ಟೆಗಳ ಕೆಳಗಡೆ ಬರುವಂತಹ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೆರೆಗಳನ್ನೆಲ್ಲಾ ಮುಚ್ಚಬೇಡಿ" ಎನ್ನುವಂತಹ ಒಂದು ಮಾತನ್ನು ಹೇಳಿದ್ದರು. ಆದರೆ ಆ ಕೆರೆಗಳನ್ನು ನಾವು ಮುಚ್ಚಿ ದುರಂತವನ್ನು ನಾವು ಅನುಭವಿಸುತ್ತಿದ್ದೇವೆ. ಒತ್ತುವರಿಯನ್ನು ಮಾಡಿ ನಾವು ಇವತ್ತು ದುರಂತವನ್ನು ಅನುಭವಿಸುತ್ತಿದ್ದೇವೆ. ಹೀಗಾಗಿ, ಇವತ್ತು ಅಂತರ್‌ಜಲ ಎಲ್ಲಿ ಹೋಗಿ ನಿಂತಿದೆ, ಎಷ್ಟು ಸಾವಿರ ಅಡಿಗಳ ಆಳಕ್ಕೆ ಹೋಗಿ ನಿಂತಿದೆ ಎಂದು ನೋಡಬೇಕಾಗಿದೆ. ಒಂದು ಕಾಲದಲ್ಲಿ ನಾವು ಚಿಕ್ಕಮಕ್ಕಳಾಗಿದ್ದಾಗ ಕಿರೇಮಡಿ ಎನ್ನುವಂತಹ ನಮ್ಮ ಹಿತ್ತಲಿಗೆ ಹೋದರೆ 10-15 ಅಡಿ ಹೊಂಡ ತೆಗೆದರೆ ನೀರು ಬರುತ್ತಿತ್ತು. ಮತ್ತೆ 30-40 ಅಡಿ ಆಳ ಹೋದರೆ ಅದು ಬಾವಿಯಾಗುತ್ತಿತ್ತು. ಈಗ ಬೋರ್‌ವೆಲ್ ವಿಚಾರ ತೆಗೆದುಕೊಂಡರೆ ನಮ್ಮ ಕೋಲಾರದ ಕಡೆಗೆ ಹೋದರೆ 1000, 1200, 1800, 2000 ಮತ್ತು 3000 ಅಡಿ ಒಳಗಡೆ ಹೋದರೂ ಸಹ ನೀರು ಸಿಗುವುದಿಲ್ಲ. ಏಕೆಂದರೆ, ಬೀಳುವಂತಹ ನೀರನ್ನು ಸಂಗ್ರಹಿಸಿಟ್ಟುಕೊಳ್ಳುವ ಕೆಲಸವನ್ನು ನಾವು ಮಾಡುತ್ತಿಲ್ಲ.

ಮುಂದು. . .

**(016) 03.07.2018 12.40 ಎಸ್‌ವಿ-ಆರ್‌ಎನ್**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಮುಂದು):-**

ಹಾಗಾಗಿ ಅಂತರ್ಜಲವನ್ನು ಹೆಚ್ಚಿಸುವ ಮತ್ತು ಕುಡಿಯುವ ನೀರಿನ ಹಾಹಾಕಾರವನ್ನು ನೀಗಿಸಬೇಕಾಗಿದೆ. ಕೇವಲ ಮನುಷ್ಯ ಮಾತ್ರವಲ್ಲ, ಸಕಲ ಜೀವರಾಶಿಗಳಿಗೂ ನೀರು ಅವಶ್ಯಕವಾದ ವಸ್ತುವಾಗಿದೆ. ಅದಕ್ಕಾಗಿ ಕೆರೆಗಳು ಮನುಷ್ಯನ ಬದುಕಿನ ಭಾಗವಾಗಬೇಕು ಎನ್ನುವುದು ನಮ್ಮ ಪೂರ್ವಿಕರ ಭಾವನೆಯಾಗಿತ್ತು. ಅದು ನಮ್ಮ ಭಾವನೆಯೂ ಸಹ ಆಗಿದೆ. ಇಂದು ಈ ರಾಜ್ಯದಲ್ಲಿ ಬಹುಪಾಲು ಕೆರೆಗಳು ಒತ್ತುವರಿಯಾಗಿದ್ದು, ಮುಚ್ಚಿಹೋಗುವಂತಹ ಸ್ಥಿತಿಯನ್ನು ತಲುಪಿವೆ. ಹೊಸ ಕೆರೆಗಳ ನಿರ್ಮಾಣದ ಕನಸು ನಮ್ಮ ಮುಂದೆ ಇಲ್ಲ. ಇದು ಅತ್ಯಂತ ಗಂಭೀರವಾಗಿ ಚಿಂತನೆ ಮಾಡಬೇಕಾದಂತಹ ವಿಚಾರವಾಗಿರುವುದರಿಂದ ಈ ವಿಷಯದ ಬಗ್ಗೆ ನಾನು ಬಹಳ ತಯಾರಿಯನ್ನು ಮಾಡಿಕೊಂಡಿದ್ದೆನು. ಅದು ನಿಯಮ 330 ಆಗಿರಲಿ ಅಥವಾ ನಿಯಮ 62 ಆಗಿರಲಿ, ಯಾವುದೇ ಅಡಿಯಲ್ಲಿ ಪ್ರಸ್ತಾಪಗೊಂಡಿದ್ದರೂ ಅದನ್ನು ತಾಳ್ಮೆಯಿಂದ ಕೇಳುವಷ್ಟು ವ್ಯವಧಾನ ನಮ್ಮ ಮಾನ್ಯ ಸದಸ್ಯರಿಗೆ ಇರಲಿಲ್ಲ.

ಇಂದು ಸಣ್ಣ ಕೆರೆ-ಕಟ್ಟೆಗಳನ್ನು, ಕುಂಟೆಗಳನ್ನು ಉಳಿಸಿಕೊಳ್ಳದೆ ಹೋದರೆ ಮುಂಬರುವ ದಿನಗಳಲ್ಲಿ ನೀರಿಗೆ ಹಾಹಾಕಾರ ಉಂಟಾಗುತ್ತದೆ. ನೀರಿಗಾಗಿ ಈಗಾಗಲೇ ನಾವು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತಮಿಳುನಾಡಿನೊಂದಿಗೆ ಹೊಡೆದಾಡುತ್ತಿದ್ದೇವೆ. ಅದೇ ರೀತಿ ರಾಜ್ಯ – ರಾಜ್ಯಗಳಿಗೆ, ದೇಶ – ದೇಶಗಳಿಗೆ ನೀರಿಗಾಗಿ ಹೊಡೆದಾಟ ಪ್ರಾರಂಭವಾಗಿದೆ. ನಾನು ಈಗಾಗಲೇ ಹೇಳಿದಂತೆ ಇಡೀ ಜಗತ್ತಿನಲ್ಲಿ ನೀರಿನ ಮೂಲ ಮಳೆಯೇ ಆಗಿದೆ. ಅಂತಹ ಮಳೆಯನ್ನು ಹಿಡಿದಿಟ್ಟುಕೊಳ್ಳುವ ಸಲುವಾಗಿ ಈ ರೀತಿಯ ಸಣ್ಣ ಸಣ್ಣ ಕೆರೆಕಟ್ಟೆಗಳು ಹಾಗೂ ದೊಡ್ಡ ದೊಡ್ಡ ಕೆರೆಕಟ್ಟೆಗಳು ಬೇಕು. ಸಣ್ಣ ಸಣ್ಣ ಕೆರೆಗಳ ಬಗ್ಗೆ 'ಎಂಪ್ರಿ' ಎನ್ನುವ ಸಂಸ್ಥೆಯು ನಡೆಸಿದಂತಹ ಸಂಶೋಧನೆ ಹಾಗೂ ಅಧ್ಯಯನವು ರಾಜ್ಯದ ಎಲ್ಲಾ ಭಾಗಗಳ ಕೆರೆಗಳಿಗೆ ಅನ್ವಯ ಆಗಬೇಕು. ಸಂಶೋಧನಾತ್ಮಕ ನಿಲುವಿನಲ್ಲಿ ಕೆರೆಗಳು ಯಾವ ರೀತಿಯಲ್ಲಿ ಹಾಗೂ ಯಾವ ಕಾರಣಕ್ಕಾಗಿ ಅವಸಾನದಂಚಿಗೆ ತಲುಪಿವೆ? ಅವುಗಳನ್ನು ಹೇಗೆ ಮತ್ತು ಏಕೆ ಉಳಿಸಿಕೊಳ್ಳಬೇಕು? ಎನ್ನುವುದರ ಬಗ್ಗೆ ವಿವರಗಳನ್ನು ಎಂಪ್ರಿ ಸಂಸ್ಥೆಯು ಕೊಟ್ಟಿರುತ್ತದೆ.

ಕೆರೆಗಳನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಸಂಶೋಧನಾತ್ಮಕವಾದಂತಹ ಅಧ್ಯಯನವನ್ನು ನಡೆಸಿ ಸಾಕಷ್ಟು ಕೆಲಸ ಕಾರ್ಯಗಳನ್ನು ಮಾಡಬೇಕಾಗಿದೆ ಹಾಗೂ ಒತ್ತುವರಿಯನ್ನು ತೆರವುಗೊಳಿಸಬೇಕಾಗಿದೆ ಎಂಬುದನ್ನು ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ಮಂಜೂರಾದಂತಹ 51 ಹುದ್ದೆಗಳಲ್ಲಿ ಇಬ್ಬರು ಮಾತ್ರ ಸರ್ವೆಯರ್‌ಗಳಿದ್ದಾರೆ ಎಂದು ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ತಿಳಿಸಿರುತ್ತಾರೆ. ಉಳಿದ 49 ಜನ ಇರುವುದಿಲ್ಲ. ಇದಕ್ಕಾಗಿ ಕೂಡಲೇ ನೇಮಕಾತಿಯನ್ನು ಮಾಡಿಕೊಳ್ಳಬೇಕು. ಸರ್ವೆ ಮಾಡುವವರು ಯಾರು? ಫೆನ್ಸಿಂಗ್ ಹಾಕುವವರು ಯಾರು? ಬಂಡು ಹಾಕುವವರು ಯಾರು? ಅವುಗಳನ್ನು ರಕ್ಷಣೆ ಮಾಡುವವರು ಯಾರು? ಬಹುಶಃ ಆ ಕೆಲಸ ಆಗದೆ ಹೋದರೆ ಮುಂದಿನ ದಿನಗಳಲ್ಲಿ ಕೆರೆಗಳಿಗೆ ಉಳಿಗಾಲವಿಲ್ಲ. ಇಂದು ತ್ಯಾಜ್ಯವನ್ನು ಬಿಟ್ಟು, ಇನ್ನುಳಿದ ವಸ್ತುಗಳನ್ನು ಕೆರೆಗಳಿಗೆ ಹಾಕಿ ಮುಚ್ಚುವಂತಹ ಹಾಗೂ ಮಾಲಿನ್ಯಗೊಳಿಸುವ ಕೆಲಸವಾಗುತ್ತಿದೆ. ಅದು ನಿಲ್ಲಬೇಕು.

ಕೆರೆಗಳಿಗೆ ನೀರು ತುಂಬಿಸುವ ಕೆಲಸ ಬಹಳ ಮುಖ್ಯವಾಗಿ ಹಾಗೂ ಕ್ರಾಂತಿಕಾರಕವಾಗಿ ಆಗಬೇಕು. ಎಲ್ಲೆಲ್ಲಿ ಅಣೆಕಟ್ಟೆಗೆ ಹೊಂದಿಕೊಂಡಂತೆ ಅಣೆಕಟ್ಟೆಯ ಕೆಳಗೆ ಕೆರೆಗಳಿವೆಯೋ, ಅಂತಹ ಎಲ್ಲಾ ಕೆರೆಗಳಿಗೆ ನೀರು ತುಂಬಿಸುವಂತಹ ಕೆಲಸವಾಗಬೇಕು. ಇತ್ತೀಚೆಗೆ ಮಾನ್ಯ ದೇಶಪಾಂಡೆಯವರು ಪ್ರವಾಹಪೀಡಿತರ ಬಗ್ಗೆ ತಿಳಿದುಕೊಳ್ಳಲು ಮೈಸೂರಿಗೆ ಬಂದಿದ್ದರು. ಅವರ ಸಮ್ಮುಖದಲ್ಲಿ ಅಲ್ಲಿದ್ದಂತಹ ನೀರಾವರಿ ಇಲಾಖೆಯ ಅಧಿಕಾರಿಗಳಿಗೆ ನಾನು ಒಂದು ಪ್ರಶ್ನೆಯನ್ನು ಕೇಳಿದೆನು. ಇಂದು ಪ್ರವಾಹ ಬಂದು 30,000 ಕ್ಯುಸೆಕ್ಸ್ ನೀರು ತಮಿಳುನಾಡಿಗೆ ಹೋಗುತ್ತಿದೆ. ದುರಂತ ಎಂದರೆ, ನನಗಿದ್ದಂತಹ ಮಾಹಿತಿಯಲ್ಲಿ ಶೇ.98ರಷ್ಟು ಭಾಗ ಕೆರೆಗಳು ತುಂಬಿರಲಿಲ್ಲ. ಅಣೆಕಟ್ಟೆಯಲ್ಲಿದ್ದಂತಹ ನೀರನ್ನು ಕೆರೆಗಳಿಗೆ ಹಾಯಿಸುವ ಬದಲು ಇಂಜಿನಿಯರ್‌ಗಳು ತಮಿಳುನಾಡಿಗೆ 30–40 ಸಾವಿರ ಕ್ಯುಸೆಕ್ಸ್ ನೀರನ್ನು ಹಾಯಿಸುತ್ತಿದ್ದರು. ಕೆರೆಕಟ್ಟೆಗಳನ್ನು ತುಂಬಿಸುವಂತಹ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಲಿಲ್ಲ. ಮಾನ್ಯ ಮುಖ್ಯಮಂತ್ರಿಯವರು ರಾತ್ರೋರಾತ್ರಿ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ನಿರ್ಧಾರವನ್ನು ತೆಗೆದುಕೊಂಡು ನಾಲೆಗಳಿಂದ ನೀರನ್ನು ಹಾಯಿಸಿ ಕೆರೆಗಳನ್ನು ತುಂಬಿಸುವಂತಹ ಕೆಲಸವನ್ನು ಮಾಡಿದರು. ಒಂದೆಡೆ ಅಧ್ಯಯನ, ಸಂಶೋಧನೆ ಹಾಗೂ ರಕ್ಷಣೆಯ ಜೊತೆ ಜೊತೆಗೆ ಎಲ್ಲಿ ಅಣೆಕಟ್ಟುಗಳಿಂದ ಕೆರೆಗಳನ್ನು ತುಂಬಿಸುವಂತಹ ಕೆಲಸವಾಗಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ. ಆಗ ಇಡೀ ರಾಜ್ಯಾದ್ಯಂತ ಕೃಷಿಕರು ಬೇಸಾಯವನ್ನು ಪ್ರಾರಂಭಿಸುವಂತಹ ಕಾರ್ಯವಾಗುತ್ತದೆ. ಇರುವ ಕೆರೆಗಳನ್ನು ಉಳಿಸಿಕೊಳ್ಳುವುದರ ಜೊತೆಯಲ್ಲಿ ಹೊಸ ಕೆರೆಗಳ ನಿರ್ಮಾಣಕ್ಕೂ ಸರ್ಕಾರ ಮುಂದಾಗಬೇಕು. ಹೆಚ್ಚುತ್ತಿರುವ ಜನಸಂಖ್ಯೆಯ ಹಿನ್ನೆಲೆಯಲ್ಲಿ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ಹೊಸ ಕೆರೆಗಳ ನಿರ್ಮಾಣವಾಗಬೇಕು. ನಮ್ಮ ಪರಂಪರೆಯಲ್ಲಿ ಸೂಳೆಕೆರೆ ಎಂದು ಇದೆ. ತನ್ನ ಜೀವನದಲ್ಲಿ ಏನಾದರೂ ತ್ಯಾಗ, ದಾನ-ಧರ್ಮ ಮಾಡಬೇಕು ಎಂದು ನೂರಾರು ಕೆರೆಗಳನ್ನು ತಮ್ಮ ಹೆಸರಿನಲ್ಲಿ ನಿರ್ಮಾಣ ಮಾಡಿದ್ದಾರೆ. ಇಂದು ಕೆರೆಗಳ ನಿರ್ಮಾಣ ಅನಿವಾರ್ಯ ಹಾಗೂ ಅಗತ್ಯವಾಗಿದೆ. ಹಳೆಯ ಕೆರೆಗಳ ಉಳಿವಿನೊಂದಿಗೆ ಹೊಸ ಕೆರೆಗಳ ನಿರ್ಮಾಣವಾಗಬೇಕು. ಇಡೀ ಕೆರೆಗಳ ಅಭಿವೃದ್ಧಿಗಾಗಿ ವೈಜ್ಞಾನಿಕ ಸಂಶೋಧನಾ ಅಧ್ಯಯನವಾಗಿ ಸಮರ್ಪಕ ಪರಿಹಾರವನ್ನು ಕೊಡುವ ಮೂಲಕ ಮನುಕುಲವನ್ನು ಉಳಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೋರುತ್ತೇನೆ.

**ಸಭಾಪತಿಯವರು:-** ಮಾನ್ಯ ಸಚಿವರೆ, ತಾವು ಕೆರೆಗಳ ಒತ್ತುವರಿ ಬಗ್ಗೆ, ಭೂಮಾಪಕರ ಹುದ್ದೆ ಖಾಲಿ ಇರುವ ಬಗ್ಗೆ, ಸರ್ವೆ ಮಾಡಿಸುವ ಬಗ್ಗೆ ಹಾಗೂ ಕೆರೆ ಒತ್ತುವರಿಯನ್ನು ತೆರವುಗೊಳಿಸುವ ಬಗ್ಗೆ – ಈ ನಾಲ್ಕು ಅಂಶಗಳ ಬಗ್ಗೆ ತಮ್ಮ ನಿಲುವನ್ನು ಸ್ಪಷ್ಟ ಪಡಿಸಬೇಕು.

**ಶ್ರೀ ಸಿ.ಎಸ್.ಪುಟ್ಟರಾಜು (ಸಣ್ಣ ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಶ್ರೀಕಂಠೇಗೌಡರು ನನ್ನ ಇಲಾಖೆಗೆ ಸಂಬಂಧಪಟ್ಟಂತಹ ಹಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರ ನೇತೃತ್ವದಲ್ಲಿ ತಾವೂ ಸೇರಿದಂತೆ ಒಂದು ನಿಯೋಗವು ಇಸ್ರೇಲ್ ದೇಶಕ್ಕೆ ಅಂತರ್ಜಲ ಹೆಚ್ಚಿಸತಕ್ಕಂತಹ ಹಾಗೂ ರೈತರಿಗೆ ನೆರವಾಗುವ ನಿಟ್ಟಿನಲ್ಲಿ ಅಧ್ಯಯನ ಪ್ರವಾಸವನ್ನು ಕೈಗೊಂಡಿರುತ್ತೀರಿ. ಅಂತರ್ಜಲ ನಿರ್ವಹಣೆಯ ಕುರಿತು ಸಣ್ಣ ನೀರಾವರಿ ಇಲಾಖೆಗೆ ಜವಾಬ್ದಾರಿಯನ್ನು ನೀಡಲಾಗಿದೆ. ಮಾನ್ಯ ಶ್ರೀಕಂಠೇಗೌಡರು ಹೇಳಿದಂತಹ ಅಂಶಗಳನ್ನು ನಮ್ಮ ಇಲಾಖೆಯಲ್ಲಿ ನಿರ್ವಹಿಸಲು ಈಗಾಗಲೇ ನಮ್ಮ ಅಧಿಕಾರಿಗಳನ್ನು ಸಜ್ಜುಗೊಳಿಸಲಾಗಿದೆ. ಮೊದಲನೆಯದಾಗಿ ಅಂತರ್ಜಲ ಹೆಚ್ಚಿಸುವಂತಹದ್ದು, ಎರಡನೆಯದಾಗಿ ಸಣ್ಣ ನೀರಾವರಿ ಇಲಾಖೆಯಿಂದ ಕೆರೆಗಳನ್ನು ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಹಲವಾರು ಜನ ತಜ್ಞರು ಬಂದು ನನಗೆ ಮಾಹಿತಿಯನ್ನು ಕೊಟ್ಟಿರುತ್ತಾರೆ. ಕಳೆದ ಸರ್ಕಾರದಲ್ಲಿ ದಿನಾಂಕ 26.03.2018ರಂದು ಒಂದು ತಿದ್ದುಪಡಿ ವಿಧೇಯಕದಲ್ಲಿ 'ಕೆರೆ ಸಂರಕ್ಷಣಾ ಪ್ರಾಧಿಕಾರ' ಮತ್ತು 'ಕೆರೆ ಅಭಿವೃದ್ಧಿ ಪ್ರಾಧಿಕಾರ' ಎನ್ನತಕ್ಕಂತಹ ಎರಡು ಪ್ರಾಧಿಕಾರಗಳನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಚಿಸಿ, ಹೆಚ್ಚಿನ ಜವಾಬ್ದಾರಿಯನ್ನು ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಣ್ಣ ನೀರಾವರಿ ಸಚಿವನಾಗಿ ಇದರ ಉಪಾಧ್ಯಕ್ಷನಾಗಿ ನಾನು ಇಡೀ ರಾಜ್ಯದ ಕೆರೆಗಳನ್ನು ಸಂರಕ್ಷಣೆ ಮಾಡತಕ್ಕಂಥದ್ದು, ಅಭಿವೃದ್ಧಿ ಮಾಡುವ ನಿಟ್ಟಿನಲ್ಲಿ ಈಗಾಗಲೇ ನಾವು ಎಲ್ಲಾ ಸಜ್ಜಾಗಿದ್ದೇವೆ. ಮುಂದಿನ ದಿನಗಳಲ್ಲಿ ರಾಜ್ಯದ ಸರ್ವತೋಮುಖ ಅಭಿವೃದ್ಧಿಗಾಗಿ ನಮ್ಮ ಇಲಾಖೆಯು ಬಹಳ ಮಹತ್ತರವಾದಂತಹ ಜವಾಬ್ದಾರಿಯನ್ನು ರೈತರ ಪರವಾಗಿ ನಿರ್ವಹಿಸಬೇಕಾಗಿದೆ ಎಂಬುದನ್ನು ನಾವು ಅರ್ಥೈಸಿಕೊಂಡು ಕೆಲಸ ಮಾಡುತ್ತೇವೆ. ಬರುವ ದಿನಗಳಲ್ಲಿ ನಮ್ಮ ಇಲಾಖೆ ಕೆರೆ ಒತ್ತುವರಿ ಸೇರಿದ ಹಾಗೆ ಕೆರೆ ಅಭಿವೃದ್ಧಿ ಪಡಿಸುವ, ಅಂತರ್ಜಲವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುತ್ತೇವೆಂದು ತಮ್ಮ ಮುಖಾಂತರ ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

**ಸಭಾಪತಿಯವರು;–** ಸರ್ವೇಯರ್ ಇಲ್ಲ ಎಂದು ಹೇಳಿದ್ದಾರೆ. ಅದಕ್ಕೆ ತಮ್ಮ ಉತ್ತರವೇನು?

**ಶ್ರೀ ಸಿ.ಎಸ್.ಪುಟ್ಟರಾಜು:–** ಈ ವಿಷಯದ ಬಗ್ಗೆ ಕಂದಾಯ ಇಲಾಖೆಗೆ ಮನವಿಯನ್ನು ಸಲ್ಲಿಸಲಾಗಿದ್ದು, ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ಸಹ ತರಲಾಗಿದೆ. ಸಂಶೋಧನಾತ್ಮಕ ಅಧ್ಯಯನವನ್ನು ನಡೆಸುವ ನಿಟ್ಟಿನಲ್ಲಿ ಇಲಾಖೆಯ ಅಧಿಕಾರಿಗಳಿಗೆ ಈಗಾಗಲೇ ಸೂಚನೆಯನ್ನು ನೀಡಲಾಗಿದೆ ಎಂದು ಹೇಳಬಯಸುತ್ತೇನೆ.

**ಶ್ರೀ ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಬಹಳ ಪ್ರಾಮುಖ್ಯತೆಯುಳ್ಳಂತಹ ವಿಷಯವನ್ನು ಮಾನ್ಯ ಶ್ರೀಕಂಠೇಗೌಡರು ಪ್ರಸ್ತಾಪ ಮಾಡಿದ್ದಾರೆ. ಇದೇ ಸದನದಲ್ಲಿ ಕೆರೆ ಅಭಿವೃದ್ಧಿ ಪ್ರಾಧಿಕಾರದ ರಚನೆಯ ಬಗ್ಗೆ ಕಾನೂನನ್ನು ತಂದಿದ್ದೇವೆ. ಆದರೆ ಮಾನ್ಯ ಸಚಿವರ ಉತ್ತರವನ್ನು ಗಮನಿಸಿದಾಗ, ಇಲಾಖೆಯು ಒತ್ತುವರಿದಾರರ ಮೇಲೆ ಕ್ರಮ ಕೈಗೊಳ್ಳುವ ವಿಷಯವನ್ನು ಬಹಳ ಗಂಭೀರವಾಗಿ ಪರಿಗಣಿಸಿರುವುದಿಲ್ಲ ಎಂದು ತಿಳಿದು ಬರುತ್ತದೆ. ಮಾನ್ಯ ಸಚಿವರು ಹೊಸದಾಗಿ ಬಂದಿದ್ದಾರೆ. ಅವರನ್ನು ಇಕ್ಕಟ್ಟಿಗೆ ಸಿಲುಕಿಸುವುದಕ್ಕೆ ಹೋಗುವುದಿಲ್ಲ. ಆದರೆ ಅವರ ಗಮನಕ್ಕೆ ಒಂದು ವಿಚಾರವನ್ನು ತರಬಯಸುತ್ತೇನೆ. ಈ ಕೆರೆ ಅಭಿವೃದ್ಧಿ ಪ್ರಾಧಿಕಾರದ ರಚನೆ ಆಗಿದ್ದೇ ಕೆರೆಗಳ ಮತ್ತು ಮನುಷ್ಯರ ನಡುವಿನ ಅವಿನಾಭಾವ ಸಂಬಂಧವನ್ನು ಉಳಿಸಿಕೊಳ್ಳುವ ಸಲುವಾಗಿ. ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಮಾತ್ರವೇ 4223 ಕೆರೆಗಳಿವೆ. ಆ ಕೆರೆಗಳೇ ನಮ್ಮ ಜೀವಾಳ. 3695 ಕೆರೆಗಳು ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ಬರುತ್ತವೆ ಎಂದು ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಹೇಳಿರುತ್ತಾರೆ. ಆರ್.ಡಿ.ಪಿ.ಆರ್ ಇಲಾಖೆಯ ವ್ಯಾಪ್ತಿಗೆ ಬರುವ ಕೆರೆಗಳ ಕುರಿತು ಸಚಿವರ ಗಮನವನ್ನು ಸೆಳೆಯಬಯಸುವುದಿಲ್ಲ. 1351 ಕೆರೆಗಳ ಒತ್ತುವರಿಯನ್ನು ತೆರವುಗೊಳಿಸುವುದಕ್ಕೆ ಇನ್ನೂ ಪ್ರಯತ್ನವನ್ನು ಮಾಡಿರುವುದಿಲ್ಲ ಎಂಬುದು ಸಚಿವರ ಉತ್ತರದಿಂದ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಿಳಿದು ಬರುತ್ತದೆ. ಮಾನ್ಯ ಸಚಿವರು ಇದನ್ನು ಗಂಭೀರವಾಗಿ ಪರಿಗಣಿಸಿ, ಯಾರು ಒತ್ತುವರಿ ಮಾಡಿದ್ದಾರೆಯೋ ಅವರ ಮೇಲೆ ಕಟ್ಟುನಿಟ್ಟಾದ ನಿರ್ದಾಕ್ಷಿಣ್ಯವಾದ ಕ್ರಮ ಕೈಗೊಳ್ಳಬೇಕು. ಇದು ಕೇವಲ ಬೆಂಗಳೂರಿಗಷ್ಟೇ ಸೀಮಿತವಾದ ವಿಷಯವಾಗಿಲ್ಲ. ರಾಜ್ಯದ ಎಲ್ಲಾ ಭಾಗಗಳ ಕೆರೆಗಳಿಗೂ ಅನ್ವಯಿಸುವ ಕಾರಣ ಅವುಗಳ ರಕ್ಷಣೆಯ ಜವಾಬ್ದಾರಿ ನಮ್ಮೆಲ್ಲರ ಮೇಲಿದ್ದು, ಮಾನ್ಯ ಸಚಿವರು ಇದನ್ನು ಗಂಭೀರವಾಗಿ ಪರಿಗಣಿಸಬೇಕೆಂದು ಕೋರುತ್ತೇನೆ.

**ಡಾ. ತೇಜಸ್ವಿನಿ ಗೌಡ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕೆರೆ ಒತ್ತುವರಿ ಬಹಳ ಸಂಘರ್ಷಮಯವಾದಂತಹ ಒಂದು ಸನ್ನಿವೇಶ. ಒತ್ತುವರಿಯಾಗುವುದಕ್ಕೆ ಮುನ್ನವೇ ಅಲ್ಲಿರತಕ್ಕಂತಹ ಸಂಬಂಧಪಟ್ಟ ಅಧಿಕಾರಿಗಳು ಜವಾಬ್ದಾರಿಯನ್ನು ವಹಿಸಿದರೆ, ಗ್ರಾಮಗಳಲ್ಲಿ ಇದಾಗುವುದಿಲ್ಲ. ಮೂಲತಃ ಬೇಸಿಗೆ ಕಾಲದಲ್ಲಿ ಮಳೆ ನೀರು ಸಂಗ್ರಹ ಕಡಿಮೆ ಇರುವಂತಹ ಕಾಲದಲ್ಲಿ ಜಾಗ ಕಡಿಮೆ ಇರುತ್ತದೆ ಎನ್ನುವ ಕಾರಣದಿಂದ ರೈತರು ಉಳುಮೆ ಮಾಡಿಕೊಳ್ಳುವುದನ್ನು ನಾವು ಕಾಣುತ್ತೇವೆ. ಅದರಲ್ಲಿ ಮತ್ತೊಂದು ಸಮಸ್ಯೆ ಏನೆಂದರೆ ಗೋಮಾಳಗಳ ವಿಸ್ತೀರ್ಣ ಕಡಿಮೆಯಾಗುತ್ತಿರುವುದು ಹಾಗೂ ಗೋಮಾಳಗಳು ಮಾಯವಾಗುತ್ತಿರುವುದು.

(...ಮುಂದು)

(017)03.07.2018 12.50 ಕೆಜಿ.ವಿಕೆ

(ಸಭಾಪತಿಯವರ ಉಪಸ್ಥಿತಿ)

**ಡಾ||ತೇಜಸ್ವಿನಿ ಗೌಡ (ವಿಧಾನಸಭಾ ಕ್ಷೇತ್ರ) (ಮುಂದು..):-** ದನಕರುಗಳಿಗೆ ಇರತಕ್ಕಂತಹ ಕೃಷಿ ಜಮೀನು ಕಡಿಮೆಯಾಗಿದೆ. ಇದು ತಮ್ಮೆಲ್ಲರಿಗೂ ಗೊತ್ತಿದೆ. ಮಳೆ ನೀರಾವರಿ ಇಲ್ಲದಿರುವುದರಿಂದ ಹಸಿರು ಮೇವಿನ ಕೊರತೆಯಾಗಿದೆ. ಹೀಗಾಗಿ, ರೈತರು ದನಕರುಗಳಿಗೆ ಕೆರೆ ಅಂಗಳದಲ್ಲಿ ಮಾತ್ರ ಸ್ವಲ್ಪ ಮೇವಿಗಾಗಿ ಜೋಳವನ್ನು ಹಾಕಿಕೊಳ್ಳುತ್ತಾರೆ. ತದನಂತರದಲ್ಲಿ ಅದರ ಬಗ್ಗೆ ಅಧಿಕಾರಿಗಳು ಗಮನ ನೀಡದಿರುವುದರಿಂದ ಯಾರು ಕೇಳುತ್ತಿಲ್ಲವೆಂದು ರೈತರು ಹಾಗೆಯೇ ಅದನ್ನು ಉಳಿಮೆ ಮಾಡಿಕೊಂಡು ಬರುತ್ತಾರೆ. ಕೊನೆಗೆ ಒಂದು ದಿವಸ ಅಧಿಕಾರಿಗಳು ಅಲ್ಲಿಗೆ ಪೋಲೀಸರನ್ನು ಕರೆದುಕೊಂಡು ಹೋಗಿ ಆ ರೈತರನ್ನು ಆರೆಸ್ಟ್ ಮಾಡಿಸಿ ಒಂದು ರೀತಿಯ ದೊಡ್ಡ ಸಂಘರ್ಷಕ್ಕೆ ಕಾರಣವಾಗುತ್ತಿದೆ. ಆದ್ದರಿಂದ, ನಾನು ತಮ್ಮ ಮೂಲಕ ಮಾನ್ಯ ಸಚಿವರ ಗಮನಕ್ಕೆ ತರಬಯಸುವುದೇನೆಂದರೆ, ದಯಮಾಡಿ ಗ್ರಾಮ ಪಂಚಾಯಿತಿ, ತಾಲ್ಲೂಕ್ ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳ ಸದಸ್ಯರುಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಾಮರಸ್ಯದಿಂದ ಅವರಿಗೆ ತಿಳುವಳಿಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಟ್ಟರೆ, ಕೆರೆಗಳ ಸಂರಕ್ಷಣೆ ಆಗುತ್ತದೆ. ವಿಶೇಷವಾಗಿ ಯುವಕರ ಗುಂಪುಗಳಿಗೆ ಹೆಚ್ಚು ಆದ್ಯತೆ ಕೊಟ್ಟರೆ, ಅವರು ಕೆರೆಗಳನ್ನು ಸಂರಕ್ಷಣೆ ಮಾಡುವುದಲ್ಲದೇ, ಹೂಳು ಎತ್ತುವಂತಹ ವಿಚಾರದಲ್ಲಿ ನಮ್ಮ ಯೋಜನೆಗಳನ್ನು ಪರಿಣಾಮಕಾರಿಯಾಗಿ ಬಳಕೆ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಮೊದಲು ಕಾನೂನಿನ ಅಸ್ತ್ರವನ್ನು ರೈತರ ಮೇಲೆ ಪ್ರಯೋಗ ಮಾಡಬಾರದು. ಅದನ್ನು ಕೊನೆಯದಾಗಿ ಪರಿಗಣಿಸಬೇಕು ಎನ್ನುವಂಥದ್ದು ಒಂದು ಸಲಹೆ.

ಮಾನ್ಯ ಸಭಾಪತಿಯವರೇ, ಎರಡನೆಯದಾಗಿ, ಕೆರೆಗಳ ಸಂರಕ್ಷಣೆ ವಿಚಾರ ಬಂದಾಗ, ಕೆರೆಗಳ ನಿರ್ಮಾಣಕ್ಕೂ ಕೋಟಿ ಕೋಟಿ ಹಣವನ್ನು ಖರ್ಚು ಮಾಡಲಿಲ್ಲ. ನಾನು ಇವತ್ತು ಸಹ ಈ ಸದನದಲ್ಲಿ ಇದನ್ನು ಒಂದು ಸವಾಲಾಗಿ ಹೇಳುತ್ತೇನೆ. ಕೆರೆ ನಿರ್ಮಾಣ ಮಾಡುವುದಕ್ಕೆ ದೊಡ್ಡ ದೊಡ್ಡ ಇಂಜಿನಿಯರ್‌ಗಳು ಬೇಡ. ನಮ್ಮ ಹಳ್ಳಿಯಲ್ಲಿರುವಂತಹ ರೈತರ ಮಕ್ಕಳಿಗೆ ಹೇಳಿದರೆ ಸಾಕು ಅವರು ಎರಡು ಜೆಸಿಬಿಗಳನ್ನು ಹಾಗೂ ನಾಲ್ಕು ಟ್ರಾಕ್ಟರ್‌ಗಳನ್ನು ಇಟ್ಟುಕೊಂಡು ಒಂದು ಕೆರೆಯಲ್ಲಿರುವ ಹೂಳನ್ನು ಎತ್ತುತ್ತಾರೆ. ಇವತ್ತು ನಮ್ಮೆಲ್ಲರ ಕಣ್ಣಮುಂದೆ ಸಾರ್ವಜನಿಕರ ಕೋಟಿ ಕೋಟಿ ಹಣ ಲೂಟಿ ಆಗುತ್ತಿದೆ. ಇದಕ್ಕೆ ಗ್ರಾಮಗಳಲ್ಲಿನ ಯುವಕರಿಗೆ ಆದ್ಯತೆ ಕೊಡಬೇಕು. ಆ ಕೆರೆಗಳಲ್ಲಿನ ಮಣ್ಣನ್ನು ರೈತರಿಗೆ ತೆಗೆದುಕೊಂಡು ಹೋಗುವಂತೆ ಮಾಡಿದರೆ ಅನುಕೂಲವಾಗುತ್ತದೆ. ಈ ಕೆರೆಗಳನ್ನು ನಿರಂತರವಾಗಿ ಶುದ್ಧವಾಗಿ ಕಾಪಡಲು ಒಂದು ಗಂಡ ಹೆಂಡತಿ ಇರುವಂತಹ ಕುಟುಂಬಕ್ಕೆ ಒಂದು ತೆಪ್ಪವನ್ನು ಕೊಟ್ಟರೆ, ಅವರು ದಿವಸ ಪೂರ್ತಿ ಜನಪದ ಹಾಡು ಹಾಡಿಕೊಂಡು ಕೆರೆಯಲ್ಲಿರುವ ಸತ್ತೆ (ಕಳೆ) ಕೀಳುತ್ತಾರೆ. ಇದನ್ನು ಬಿಟ್ಟು, ಕೋಟಿ ಕೋಟಿ ರೂಪಾಯಿಗಳನ್ನು ಕೆರೆಗಳ ಶುದ್ಧೀಕರಣಕ್ಕೆ ಖರ್ಚು ಮಾಡುವುದನ್ನು ನೋಡಿದರೆ ನಮಗೆ ಬಹಳ ದುಃಖವಾಗುತ್ತದೆ. ಇಂತಹ ಸಣ್ಣ ಸಣ್ಣ ಬದಲಾವಣೆಗಳ ಮೂಲಕ ಒಂದು ದೊಡ್ಡ ಪರಿವರ್ತನೆಯನ್ನು ತರಬಹುದು,

ಮಾನ್ಯ ಸಭಾಪತಿಯವರೇ, ಅಂತರ್ಜಲದ ವಿಚಾರ ಬಂದಾಗ, ಅಕ್ರಮ ಗಣಿಗಾರಿಕೆ ಮತ್ತು ಅವೈಜ್ಞಾನಿಕ ಗಣಿಗಾರಿಕೆಯ ಬಗ್ಗೆ ಒಂದು ಅಂಶವನ್ನು ಹೇಳಬಯಸುತ್ತೇನೆ. ಇವತ್ತು ಪ್ರಕೃತಿ ಸಂಪತ್ತಾದ ರಾಮನಗರದ ಏಕಶಿಲಾ ಬೆಟ್ಟಗಳು ಇರಬಹುದು, ನಂದಿಬೆಟ್ಟ ಇರಬಹುದು, ಇತ್ತೀಚಿನ ದಿವಸಗಳಲ್ಲಿ ನಗರ ಪ್ರದೇಶಗಳಲ್ಲಿ ಹಸಿರು ಇಲ್ಲ. ವನ್ಯಜೀವಿ ಸಂಪತ್ತು ಇಲ್ಲ. ದೊಡ್ಡ ದೊಡ್ಡ ಬೆಟ್ಟಗಳಲ್ಲಿ ಗಣಿಗಾರಿಕೆಗಳನ್ನು ಪ್ರಾರಂಭ ಮಾಡುತ್ತಿದ್ದಾರೆ. ಅವು ಬರೀ ಬೆಟ್ಟಗಳಲ್ಲ. ಅವುಗಳ ಹಿಂದೆ ಒಂದು ಇತಿಹಾಸದ ಪರಂಪರೆ ಇದೆ. ಅವು ಈ ಪ್ರಕೃತಿಯ ಸೊಬಗಿಗೆ ಹೊಂದಿಕೊಂಡಿವೆ. ಆದ್ದರಿಂದ, ಇಂತಹ ಗಣಿಗಾರಿಕೆಗೆ ಅವಕಾಶ ಮಾಡಿಕೊಡಬಾರದು. ಗಣಿಗಾರಿಕೆ ಮಾಡುವುದರಿಂದ ನಮಗೆ ದುಪ್ಪಟ್ಟು ಲಾಭ ತರಬೇಕು. ಪುಟ್ಟ ಪುಟ್ಟ ಗುಡ್ಡಗಳನ್ನು ಏನಾದರೊಂದು ಕಾರ್ಯಚಾರಣೆಗೆ ಬಳಸುವುದಕ್ಕೆ ಸಾಧ್ಯವಾಗಬೇಕು. ಅವೈಜ್ಞಾನಿಕ ಗಣಿಗಾರಿಗೆ ಎಂದರೆ, ಎಷ್ಟು ಪ್ರಮಾಣದ ಸ್ಫೋಟಕಗಳನ್ನು ಬಳಸಿದರೆ

"ತಿದ್ದುಪಡಿಯಾಗದ ಪ್ರತಿ. ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಷ್ಟು ಭೂಕಂಪನ ಉಂಟಾಗುತ್ತದೆ ಎಂಬುದು ತಿಳಿಯಬೇಕು. ಏಕೆಂದರೆ, ಆ ಕಂಪನದ ಪರಿಣಾಮ ಕೆರೆಗಳ ನೀರಿನ ಸೆಲೆಗಳಿಗೆ ಹೋಗುವುದರಿಂದಲೇ ಮಾನ್ಯ ಸದಸ್ಯರಾದ ವೈ.ಎ.ನಾರಾಯಣಸ್ವಾಮಿಯವರು ಹೇಳಿದಂತೆ 1700 ಅಡಿಗಳಷ್ಟು ಬೋರ್‌ವೆಲ್ ಕೊರೆದರು ಸಹ ನೀರು ಬರುತ್ತಿಲ್ಲ. ವೈಜ್ಞಾನಿಕವಾಗಿ 400 ಅಡಿಗಳಿಗಿಂತ ಕೆಳಗಿನ ಮಟ್ಟದ ನೀರನ್ನು ಯಾವುದೇ ರೀತಿಯಲ್ಲೂ ಬಳಸಿದರು ಅಪಾಯಕಾರಿಯಾಗಿರುತ್ತದೆ. ಆದ್ದರಿಂದ ನಾವು ಪ್ರಾಕೃತಿಕವಾಗಿ ಮಳೆ ನೀರನ್ನು ಬಳಸುವುದೇ ಶಾಶ್ವತ ಮತ್ತು ಒಳ್ಳೆಯ ಪರಿಹಾರವಾಗುತ್ತದೆಂದು ನಾನು ಹೇಳಬಯಸುತ್ತೇನೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅಂತರ್ಜಲದ ಚರ್ಚೆ ಬಹಳ ಮಹತ್ವಪೂರ್ಣವಾದಂತಹ ಚರ್ಚೆ ಆಗಿದೆ. ಸಣ್ಣ ನೀರಾವರಿ ಇಲಾಖೆಯ ವತಿಯಿಂದ ಈ ಅಂತರ್ಜಲ ಅಭಿವೃದ್ಧಿ ಮಾಡುವಂತಹ ವಿಚಾರದಲ್ಲಿ ಕೆರೆಗಳ ಸಂರಕ್ಷಣೆಯ ಬಗ್ಗೆ ಸರ್ಕಾರ ತೆಗೆದುಕೊಂಡಿರುವಂತಹ ಕ್ರಮಗಳನ್ನು ನಾನು ಓದಿದ್ದೇನೆ. ಇಲ್ಲಿ ಒಂದು ವಿಷಯವನ್ನು ತಮ್ಮ ಮುಖಾಂತರ ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ಬೆಳಗಾಂ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ 'ಸದಲಗ' ಪಟ್ಟಣದಲ್ಲಿರುವಂತಹ ಒಂದು ಕೆರೆ. ಈಗ ಅದು ನಗರ ಪ್ರದೇಶವಾಗಿದೆ. ಈ ಮೊದಲು ಅದೊಂದು ಗ್ರಾಮೀಣ ಪ್ರದೇಶವಾಗಿತ್ತು. ಆದರೆ, ಇವತ್ತು ಆ ಕೆರೆ ಸಂಪೂರ್ಣವಾಗಿ ಮಾಯವಾಗಿದೆ ಎನ್ನುವಂತಹ ವಿಷಯವನ್ನು ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ಈ ಕೆರೆ ಬೆಳಗಾಂ ಜಿಲ್ಲೆ, ಚಿಕ್ಕೋಡಿ ತಾಲ್ಲೂಕಿನ ಸದಲಗ ಪಟ್ಟಣ ಪಂಚಾಯಿತಿಯ ವ್ಯಾಪ್ತಿಯಲ್ಲಿದೆ. ಇವತ್ತು ಆ ಕೆರೆಯ ಒಟ್ಟು ವ್ಯಾಪ್ತಿಯಲ್ಲಿ ಅನೇಕ ಜನ ಖಾಸಗೀಯವರು ಕಟ್ಟಡಗಳನ್ನು ಕಟ್ಟಿದ್ದಾರೆ. ಅನೇಕ ಜನರು ಅತಿಕ್ರಮಣ ಮಾಡಿದ್ದಾರೆ. ಈ ರೀತಿ ಆಗಬಾರದು. ಏಕೆಂದರೆ, ಆ ಗ್ರಾಮದ ಅಂತರ್ಜಲವನ್ನು ಹೆಚ್ಚು ಮಾಡುವುದಕ್ಕೆ ಮತ್ತು ಕುಡಿಯುವ ನೀರಿಗೆ ಮಾಡಿರುವಂತಹ ಕೆರೆ ಆಗಿದೆ. ಆದರೆ, ಅದನ್ನು ಸಂಪೂರ್ಣವಾಗಿ ಒತ್ತುವರಿ ಮಾಡಿದ್ದಾರೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಅದರ ವಿವರದ ಬಗ್ಗೆ ಒಂದು ಪತ್ರವನ್ನು ಕೊಡಿ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ಅದನ್ನು ಸರಿ ಮಾಡಬೇಕು ಎನ್ನುವುದನ್ನು ತಮ್ಮ ಮೂಲಕ ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ಇದರ ಸಂಪೂರ್ಣ ವಿವರವನ್ನು ಪತ್ರದ ಮೂಲಕ ತಮಗೆ ಕಳುಹಿಸಿ ಕೊಡುತ್ತೇನೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕೆರೆಗಳ ಒತ್ತುವರಿಯ ವಿಚಾರದ ಬಗ್ಗೆ ಸಣ್ಣ ನೀರಾವರಿ ಇಲಾಖೆಯವರು ಉತ್ತರ ಕೊಟ್ಟಿದ್ದಾರೆ. ಬಹುಶಃ ಈ ಪ್ರಶ್ನೆಯನ್ನು ಸಣ್ಣ ನೀರಾವರಿ ಇಲಾಖೆಗೆ ಕೇಳಿರಬಹುದು. ಕೆರೆಗಳ ನಿಯಂತ್ರಣ ಮತ್ತು ಕೆರೆಗಳ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಕ್ಷಣೆಯ ಬಗ್ಗೆ ಸಣ್ಣ ನೀರಾವರಿ ಇಲಾಖೆ ಮಾತ್ರವಲ್ಲ. ಪಂಚಾಯತ್ ರಾಜ್ ವ್ಯವಸ್ಥೆಗಳ ಅಡಿಗಳಲ್ಲೂ ಸಹ ಈ ಕೆರೆಗಳು ಬರುತ್ತವೆ. ಬಹುಶಃ ಸಣ್ಣ ನೀರಾವರಿ ಇಲಾಖೆಯವರು ತಾಲ್ಲೂಕಿಗೆ ಒಂದು ಅಥವಾ ಎರಡು ಕೆರೆಗಳನ್ನು ಮಾತ್ರ ಗುರುತಿಸಿದ್ದಾರೆ. ಉಳಿದ ಸಾವಿರಾರು ಕೆರೆಗಳು ಪಂಚಾಯತ್ ರಾಜ್ ವ್ಯವಸ್ಥೆ ಅಡಿಯಲ್ಲಿ ಇರುತ್ತವೆ. ಆದರೆ, ಪಂಚಾಯಿತಿಗಳಿಗೆ ತಮ್ಮ ವ್ಯಾಪ್ತಿಯಲ್ಲಿ ಎಷ್ಟು ಕೆರೆಗಳು ಇವೆ ಎಂದು ಅವರಿಗೆ ಗೊತ್ತಿರುವುದಿಲ್ಲ. ಈ ಬಗ್ಗೆ ತಾಲ್ಲೂಕ್ ಪಂಚಾಯಿತಿಗಳಲ್ಲಿ ಸಹ ಮಾಹಿತಿ ಸಿಗುವುದಿಲ್ಲ. ಹಾಗಾದರೆ, ಅವರು ಕೆರೆಗಳ ಒತ್ತುವರಿ ನಿಯಂತ್ರಣವನ್ನು ಹೇಗೆ ಮಾಡುತ್ತಾರೆ? ಬಹುಶಃ ಇದೊಂದು ಕಾಟಚಾರದ ಪ್ರಯತ್ನವಾಗುತ್ತದೆಯೇ ಹೊರತು, ಪ್ರಮಾಣಿಕವಾದಂತಹ ಪ್ರಯತ್ನ ಆಗುವುದಿಲ್ಲವೆಂದು ನನ್ನ ಭಾವನೆ. ನಮ್ಮಲ್ಲಿ 'ಮದಗ' ಎಂದು ಹೇಳುತ್ತಾರೆ. 'ಮದಗ' ಎಂದರೆ, ಮಳೆಗಾಲದಲ್ಲಿ ನೀರು ಶೇಖರಣೆಯಾಗಿ ಸಾಧಾರಣವಾಗಿ ಎರಡನೆ ಫಸಲಿಗೆ ಆ ನೀರನ್ನು ಬಳಸುವುದಕ್ಕೆ ಅವಕಾಶ ಆಗುವುದನ್ನು ನಾವು ಈ ಹಿಂದೆ ಕಂಡಿದ್ದೇವೆ. ಇವತ್ತು ಆ ಪರಿಸ್ಥಿತಿ ಇಲ್ಲ. ಇವತ್ತು ಎಲ್ಲಿ ಬೋರ್‌ವೆಲ್ ಹಾಕಿಸಿದರೂ ನೀರು ಸಿಗುತ್ತಿಲ್ಲ. ಆದ್ದರಿಂದ, ಕೆರೆಗಳ ಮಧ್ಯಭಾಗದಲ್ಲಿ ಅಂತರ್ಜಲದ ಮಟ್ಟ ಇರಬಹುದೆಂದು ಇವತ್ತಿನ ದಿವಸ ಕೆರೆಗಳ ಮಧ್ಯಭಾಗದಲ್ಲಿ ಬೋರ್‌ವೆಲ್‌ನ್ನು ಹಾಕಿಸುತ್ತಿದ್ದೇವೆ. ಕೆರೆಗಳನ್ನು ಒಂದು ರೀತಿಯಲ್ಲಿ ಸದುದ್ದೇಶಕ್ಕೆ ಬಳಕೆ ಮಾಡಿಕೊಂಡರೆ, ಇನ್ನೊಂದು ರೀತಿಯಲ್ಲಿ ಕೆರೆಗಳನ್ನು ಅತಿಕ್ರಮಣ ಮಾಡಿ ಮನೆಗಳನ್ನು ಕಟ್ಟಿರುವಂಥದ್ದನ್ನು ಅಥವಾ ಬೇರೆ ಬೇರೆ ಉದ್ದೇಶಗಳಿಗೆ ಬಳಕೆ ಮಾಡಿಕೊಂಡಿರುವುದನ್ನು ನಾವು ಕಂಡಿದ್ದೇವೆ. 94(ಸಿ)ಕಾಯ್ದೆಯಡಿಯಲ್ಲಿ ಕೆರೆಯ ಭಾಗದಲ್ಲಿ ಮನೆಗಳನ್ನು ಕಟ್ಟಿಕೊಂಡಿರುವವರಿಗೆ ಹಕ್ಕುಪತ್ರ ಕೊಡಬಾರದು ಎಂದು ಇದ್ದರೂ ಸಹ, ಅವರಿಗೆ ಬದಲಿ ವ್ಯವಸ್ಥೆಯನ್ನು ಕಲ್ಪಿಸಲು ಸಾಧ್ಯವಾಗದಿದ್ದ ಹಿನ್ನೆಲೆಯಲ್ಲಿ, ಇದೊಂದು ಪರಿಣಾಮಕಾರಿಯಾಗಿ ಅನುಷ್ಠಾನ ಆಗುತ್ತಿಲ್ಲ. ಆದರೆ, ನಾನು ಪ್ರಥಮವಾಗಿ ಮಾತನಾಡುವುದೇನೆಂದರೆ, ಕೆರೆಗಳ ಒತ್ತುವರಿಯನ್ನು ನಿಯಂತ್ರಣ ಮಾಡುವುದಕ್ಕೆ ಮಾಡಿರುವಂತಹ ಶಾಸನವು ಎಲ್ಲಾ ಇಲಾಖೆಗಳಿಗೂ ಸಂಬಂಧಪಟ್ಟಿರಬೇಕು ಮತ್ತು ಅದು accountability ಇರಬೇಕು.

**ಶ್ರೀ ಸಿ.ಎಸ್.ಪುಟ್ಟರಾಜು (ಸಣ್ಣ ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಗೌರವಾನ್ವಿತ ಎಲ್ಲಾ ಸದಸ್ಯರೂ ಮತ್ತು ಅದರಲ್ಲೂ ಮಾತನಾಡಿದಂತಹ ಮಾನ್ಯ ವೈ.ಎ.ನಾರಾಯಣಸ್ವಾಮಿಯವರು ಕೆರೆಗಳ ಸಂರಕ್ಷಣೆಯ ಬಗ್ಗೆ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ನಾನು ಈಗಾಗಲೇ ಹೇಳಿದ ರೀತಿ ದಿನಾಂಕ 26.03.2018 ರಲ್ಲಿ ತಿದ್ದುಪಡಿ ವಿಧೇಯಕ ಆಗಿರುತ್ತದೆ. ಈಗ ಹೊಸದಾಗಿ ಕೆರೆ ಸಂರಕ್ಷಣಾ ಪ್ರಾಧಿಕಾರ ಮತ್ತು ಕೆರೆ ಅಭಿವೃದ್ಧಿ ಪ್ರಾಧಿಕಾರ ಆಗಿದೆ. ಅದಕ್ಕೆ rules frame ಮಾಡುವಂತಹ ನಿಟ್ಟಿನಲ್ಲಿ ನಾವು ಕಾನೂನಿನ ಇಲಾಖೆಯಿಂದ ಮಾಹಿತಿಯನ್ನು ಪಡೆಯುತ್ತಿದ್ದೇವೆ. ಹೊಸ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ನಾವು ಈಗಾಗಲೇ ಇದಕ್ಕೆ

ಸಂಬಂಧಪಟ್ಟಂತೆ ಮೂರು ಅಥವಾ ನಾಲ್ಕು ಸಭೆಗಳನ್ನು ಮಾಡಿದ್ದೇವೆ. ಈ ರಾಜ್ಯದ ಎಲ್ಲಾ ಇಲಾಖೆಯ ವ್ಯಾಪ್ತಿಯಲ್ಲಿರುವಂತಹ ಕೆರೆಗಳನ್ನು ಸಂರಕ್ಷಣೆ ಮಾಡುವಂಥದ್ದು ಒಂದು ಕಡೆಯಾದರೆ, ಕೆರೆ ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ಈ ರಾಜ್ಯದ ಬಿ.ಬಿ.ಎಂ.ಪಿ., ಸೇರಿದ ಹಾಗೆ ಒಟ್ಟು 29,623 ಕೆರೆಗಳು ಈ ವ್ಯಾಪ್ತಿಗೆ ಬರುವಂತಹ ನಿಟ್ಟಿನಲ್ಲಿ ಒಂದು ವಿಧೇಯಕ ತಿದ್ದುಪಡಿಯಾಗಿದೆ. ಈ ನಿಟ್ಟಿನಲ್ಲಿ ಅದಕ್ಕೆ ಸಂಬಂಧಪಟ್ಟ ರಾಜ್ಯಮಟ್ಟದ ಅಧಿಕಾರಿಗಳನ್ನು ನೇಮಿಸುವುದರ ಮೂಲಕ ಕಟ್ಟುನಿಟ್ಟಾಗಿ, ನಮ್ಮ ಹಿರಿಯ ಸದಸ್ಯರಾದ ಮಾನ್ಯ ಕೆ.ಪ್ರತಾಪಚಂದ್ರಶೆಟ್ಟಿಯವರು ಹೇಳಿದಂತೆ, ಅದು ಗ್ರಾಮಪಂಚಾಯಿತಿ ಇರಬಹುದು, ತಾಲ್ಲೂಕು ಪಂಚಾಯಿತಿ ಇರಬಹುದು, ಜಿಲ್ಲಾ ಪಂಚಾಯಿತಿ ಇರಬಹುದು, ಯಾವುದೇ ನಗರಸಭೆ ಮತ್ತು ಬಿ.ಬಿ.ಎಂ.ಪಿ.,ಯ ವ್ಯಾಪ್ತಿಯಲ್ಲಿ ಬರುವಂತಹ ಕೆರೆಗಳು ಸೇರಿದಂತೆ..

(ಮುಂದು..)

(018):03.07.2018-01.00-ಎಂವಿ-ವಿಕೆ

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ತಮ್ಮ ಅನುಮತಿಯ ಮೇರೆಗೆ, ಬಹಳ ಒಳ್ಳೆಯ ವಿಚಾರವನ್ನು ತೆಗೆದುಕೊಂಡಿದ್ದಾರೆ. ಮಾನ್ಯ ಶ್ರೀಕಂಠೇಗೌಡರು ಕೂಡ ಇದೇ ಮಾತನ್ನು ಹೇಳಿದರು. ಇದರಲ್ಲಿ ತಾವು ಅಲ್ಲಿಯೇ ಅವರಿಗೆ ತಮ್ಮ ಅಧಿಕಾರಿಗಳು ಯಾವ jurisdictionನಲ್ಲಿ ಬರುತ್ತಾರೋ, you should hold responsible for them. ಅಂದಾಗ ಮಾತ್ರ ಇದು ಆಗುವುದಕ್ಕೆ ಸರಿ ಹೋಗುತ್ತದೆ. ಇಲ್ಲದೆ ಹೋದರೆ, ಈಗಾಗಲೇ ನಾವು 8-10 ವರ್ಷಗಳಿಂದ ನೋಡುತ್ತಿದ್ದೇವೆ. ಇದರಲ್ಲಿ ತುಂಬಾ corruption ಇದೆ. ಕೆರೆಗಳಿಗೋಸ್ಕರ ಸಾವಿರಾರು ಕೋಟಿ ರೂಪಾಯಿಗಳನ್ನು ನಮ್ಮ ಸರ್ಕಾರ ಖರ್ಚು ಮಾಡುತ್ತಿದೆ. ಶ್ರೀಮತಿ ತೇಜಸ್ವಿನಿ ರಮೇಶ್ ರವರು ಹೇಳಿದ ಹಾಗೆ, ಹಣ ಪೋಲಾಗಿ ಹೋಗುತ್ತಿದೆ. ಆದರೆ, ಕೆರೆಗಳನ್ನು ಅಭಿವೃದ್ಧಿಗೊಳಿಸುವ ಉದ್ದೇಶ ಈಡೇರುತ್ತಿಲ್ಲ. Ground level water source develop ಆಗಬೇಕಾದರೆ, we should first fix the officers concern and hold responsible for them. Otherwise, it is very difficult to maintain the whole issues ಎನ್ನುವಂತಹ ಸಲಹೆಯನ್ನು ತಮಗೆ ಕೊಡುವುದಕ್ಕೆ ಬಯಸುತ್ತೇನೆ. ಮಾನ್ಯ ಸಭಾಪತಿಗಳೇ ತಾವು ಕೂಡ ನಮ್ಮ ಭರವಸೆ ಸಮಿತಿಯಲ್ಲಿ ಅಧ್ಯಕ್ಷರಾಗಿದ್ದಾಗ ಕೆರೆಗಳನ್ನು ನೋಡುವುದಕ್ಕೆ ಹೋದಾಗ ಆ ಕೆರೆಗಳಲ್ಲಿ 1947-50ರಲ್ಲಿ ಏನು postition ಇತ್ತೋ ಅದೇ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

postition ಇದ್ದವು. ನಮ್ಮ ಸರ್ಕಾರದಿಂದ ಬಿಡುಗಡೆಯಾಗಿರುವಂತಹ ಹಣ ಎಲ್ಲಿಗೆ ಹೋಯಿತು ಎಂಬುದು ಗೊತ್ತಿಲ್ಲ. There is rampant corruption in your department. Kindly look into it. Otherwise it is very difficult. ಹೌದು, ಈಗ ಮಾನ್ಯ ಶರವಣರವರು ಬಂದಿದ್ದರು, ತಾವು ಮತ್ತು ಬಸವರಾಜ ಪಾಟೀಲ ಇಟಗಿ ಸಾಹೇಬರು ಎಲ್ಲರೂ ಸಹ ಇದ್ದರು. ಅದಕ್ಕೋಸ್ಕರ ದಯಮಾಡಿ ಇನ್ನೊಂದು ಬಾರಿ ಹೇಳುತ್ತೇನೆ. You should fix them and hold responsible for them. ಧನ್ಯವಾದಗಳು.

**ಸಭಾಪತಿಯವರು:-** ಈಗ ಬಸವರಾಜ ಪಾಟೀಲ್ ಇಟಗಿಯವರು, ತಾವು ಭಾಷಣ ಮಾಡಬೇಡಿ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ನಮ್ಮ ದೇವದುರ್ಗ ತಾಲ್ಲೂಕಿನಲ್ಲಿ ಒಂದು ಕೆರೆ ಅಭಿವೃದ್ಧಿಗಾಗಿ ಒಂದೂವರೆ ಕೋಟಿ ರೂಪಾಯಿಗಳನ್ನು sanction ಮಾಡಿದ್ದಾರೆ. ಆ ಕಂಟ್ರಾಕ್ಟರ್ ಬಂದು ಕೆಲಸವನ್ನು ಶುರು ಮಾಡುತ್ತಾರೆ, ಆ ಕೆಲಸವನ್ನು ಶುರು ಮಾಡಿದ ತಕ್ಷಣ ಭೂಸ್ವಾಧೀನ ಆಗಿರುವುದಿಲ್ಲ. ಅದು ಒಂದು ದೊಡ್ಡ ಸಮಸ್ಯೆಯಾಗಿದೆ. ಇವರು ಏನು ಕೆರೆಗಳನ್ನು ಗುರುತಿಸಿದ್ದಾರೆ, ಮೊದಲು ಏನೋ ಭೂಮಿಗೆ ಬಹಳ ಬೆಲೆ ಬಾಳುತ್ತಿರಲಿಲ್ಲ, ಆದುದರಿಂದ ಯಾರು ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. ಆದರೆ, ಈಗ ಹಳ್ಳಿಗಳಲ್ಲಿ ಒಂದೊಂದು ಎಕರೆ ಜಮೀನಿಗೆ 10 ಲಕ್ಷ 15 ಲಕ್ಷ ಬೆಲೆ ಬಾಳುವಂತಹ ಪರಿಸ್ಥಿತಿ ಇದೆ. ಆದ್ದರಿಂದ ಈಗ ಯಾರು ಸಹ ಕೆರೆ ಅಭಿವೃದ್ಧಿಗೆ ತಮ್ಮ ಜಮೀನುಗಳನ್ನು ಬಿಡುತ್ತಿಲ್ಲ, ಈಗ ಏನು ಮಾಡುತ್ತಾರೆಂದರೆ, ಮಳೆ ಬಂದ ಕೂಡಲೇ ನೀರನ್ನು ಒಡೆದು ಬಿಡುತ್ತಾರೆ. ಆ ಕೆರೆಯನ್ನು ಪಂಕ್ಚರ್ ಮಾಡಿ, ನೀರನ್ನು ಹೊರಗೆ ಕಳುಹಿಸಿಬಿಡುತ್ತಾರೆ. ಆಮೇಲೆ ಬಿತ್ತುವಂತಹ ಕೆಲಸ ಆಗುತ್ತದೆ. ಈಗ ಸರ್ಕಾರ ಏನು ಮಾಡಬೇಕು ಎಂದರೆ, ಒಂದು clear cut ಆಗಿ ನೀವು ಭೂಸ್ವಾಧೀನವಾದ ಜಮೀನಿಗೆ ಪರಿಹಾರವನ್ನಾದರೂ ನೀಡಿ ಅಥವಾ ಯಾರು ರೈತರು ಇದ್ದಾರೆ ಅವರಿಗೆ ಅವರ ಜಮೀನನ್ನು ವಾಪಸ್ಸು ನೀಡಿ. ಈಗ ಸುಮ್ಮನೆ ಅವರಿಗೂ ಇಲ್ಲ, ಇವರಿಗೂ ಇಲ್ಲ, ಇದರಿಂದ ದೊಡ್ಡ ತೊಂದರೆಯಾಗುತ್ತಿದೆ, ಅದನ್ನು clarify ಮಾಡಬೇಕು ಎನ್ನುವಂತಹ ಮಾತನ್ನು ಹೇಳುತ್ತಾ ಮಾನ್ಯ ಸಚಿವರಲ್ಲಿ ವಿನಂತಿಯನ್ನು ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಭೋಜೇಗೌಡರು ಇವತ್ತು ಬಂದು ಇಷ್ಟೊಂದು ಅವಕಾಶವನ್ನು ತೆಗೆದುಕೊಂಡಿದ್ದಾರೆ, ಇನ್ನು ನಾಳೆಗೆ ಇನ್ನೇನು ಗತಿ, ಸಾಕು ಬಹಳ ಅವಕಾಶ ಬೇಡ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನ್ನ ಮಾತನ್ನು ಒಂದು ನಿಮಿಷದಲ್ಲಿ ಮುಗಿಸುತ್ತೇನೆ. ಮೊದಲನೆ ವಿಚಾರ ಬಹಳ ಮುಖ್ಯವಾದ ವಿಚಾರ ಮತ್ತು ಒಂದು ಒಳ್ಳೆಯ ವಿಚಾರವನ್ನು ತೆಗೆದುಕೊಂಡಿರುವಂತಹ ಸಂದರ್ಭದಲ್ಲಿ, ಕೆರೆಗಳಲ್ಲಿ ಹೂಳು ಎತ್ತುವಂತಹ ವಿಚಾರದಲ್ಲಿ ಬದಲಾಗಬೇಕಾಗಿದೆ. ಏಕೆಂದರೆ, ಎಲ್ಲಾ ಕೆರೆಗಳ storage capacity 50 per cent ಗೆ ಬಂದಿದೆ. At least ಇರುವಂತಹ ಕೆರೆಗಳ ಹೂಳನ್ನು ಎತ್ತಿ ಸರಿಪಡಿಸಿಕೊಂಡರೆ, storage ಮಾಡುವುದಕ್ಕೆ 50 per cent ವರೆಗೆ ಬಂದಿರುವಂಥದ್ದನ್ನು ಅದನ್ನು at least 100 per cent ಮಾಡಿಕೊಂಡರೆ, ನೀರಿನ ಸೌಕರ್ಯ ಆಗುತ್ತದೆ. ಇನ್ನೊಂದು ವಿಚಾರ ಏನೆಂದರೆ, ಒಂದು ನೂರು ಎಕರೆ ಆಯವಳ ಇದ್ದರೆ, ಈಗಾಗಲೇ ಇನ್ನೊಂದು 100 ಎಕರೆ ಅದೇ ಕೆರೆ ಜಾಗದಲ್ಲಿ ಬಗರ್‌ಹುಕುಂ ಜಮೀನು ಇರುತ್ತದೆ, ಮೊದಲು ಅದನ್ನು ತಪ್ಪಿಸಬೇಕಾಗಿದೆ. ನೀರಾವರಿ ಇರುವಂತಹ ಜಮೀನುಗಳಲ್ಲಿಯೇ ನೀರಿಲ್ಲದೆ ಮೋಟರು ಪಂಪ್ ಹಾಕಿ ನೀರು ಎತ್ತಿ ಹಾಕಲಾಗುತ್ತಿದೆ ವಿಚಾರದಲ್ಲಿ, ಅದರಲ್ಲಿ ನಮ್ಮ ರಾಜಕಾರಣಿಗಳ ಮತ್ತು ಅಧಿಕಾರಿಗಳ ಕೈವಾಡವಿದೆ. ಏಕೆಂದರೆ ನಮ್ಮ ಓಟಿಗೋಸ್ಕರ ಮತ್ತು ಬಗರ್‌ಹುಕುಂ ಅನ್ನು ಉಳಿಸಿಕೊಳ್ಳುವುದಕ್ಕೋಸ್ಕರ, ನಾವು support ಮಾಡಬೇಕು. ಇದರಿಂದ ಯಾರಿಗೆ ನೀರಾವರಿ ಜಮೀನುಗಳಿವೆ, ಅವರಿಗೆ ನೀರನ್ನು ಕೊಡುವುದಕ್ಕೆ ಆಗುತ್ತಿಲ್ಲ. ಹಾಗಾಗಿ ಕೆರೆಗಳ ರಕ್ಷಣೆ ಮಾಡುವುದು ಬಹಳ ಮುಖ್ಯವಾಗಿದೆ.

**ಸಭಾಪತಿಯವರು:-** ಮಾನ್ಯ ಸಚಿವರೆ, ಎಲ್ಲಾ ಮಾನ್ಯ ಸದಸ್ಯರುಗಳು ಒಂದು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಅದನ್ನು ತಾವು ನೋಡಿ ಒಂದು ಸರಿಯಾದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕು. ಈಗ ಮಾನ್ಯ ಎಸ್.ರುದ್ರೇಗೌಡರು ಮಾತನಾಡುತ್ತಾರೆ.

**ಶ್ರೀ ಎಸ್.ರುದ್ರೇಗೌಡ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತುಂಬಾ ವಿಸ್ತ್ರತವಾದ ಚರ್ಚೆ ನೀರಿನ ಬಗ್ಗೆ ನಡೆದಿದೆ. ಈ ಸಂದರ್ಭದಲ್ಲಿ ಬಹಳ ವಿಷಯಗಳನ್ನು ನಾವು ಚರ್ಚೆ ಮಾಡಿದ್ದೇವೆ. ಮಾನ್ಯ ಮಂತ್ರಿಗಳು ಕೂಡ ಕಳಕಳಿಯನ್ನು ವ್ಯಕ್ತಪಡಿಸಿ ಇದಕ್ಕೆ ಒಂದು ಕಾರ್ಯಗಳನ್ನು ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳಿದ್ದಾರೆ. ಆದರೆ, ಯಾವುದೇ ಯೋಜನೆಗಳಿಗೆ, ಒಂದು ನಿರ್ದಿಷ್ಟವಾದ ಕಾಲಮಿತಿ ಇಲ್ಲದೆ ಇದ್ದರೆ, ಅದರ ಅನುಷ್ಠಾನ ಬಹಳ ಕಷ್ಟವಾಗುತ್ತದೆ. ಆ ಕಾರಣಕ್ಕೆ ಏನು ಭೂಮಾಪನ ಇಲಾಖೆಯಲ್ಲಿ ಇರುವಂತಹ ಹುದ್ದೆಗಳನ್ನು ಭರ್ತಿ ಮಾಡುವುದು ಇರಬಹುದು ಅಥವಾ ಈ ಕಾರ್ಯಕ್ರಮಕ್ಕೆ ಒಂದು ನಿರ್ದಿಷ್ಟವಾದ ರೂಪವನ್ನು ಕೊಡುವುದಕ್ಕೆ ಒಂದು ಕಾಲಮಿತಿಯನ್ನು ಹಾಕಿದರೆ ತುಂಬಾ ಅನುಕೂಲವಾಗುತ್ತದೆ ಎಂಬುದು ನನ್ನ ಅಭಿಪ್ರಾಯ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿ.ಎಸ್.ಪುಟ್ಟರಾಜು**:- ಮಾನ್ಯ ಸಭಾಪತಿಯವರೇ, ಈಗಾಗಲೇ ನಮ್ಮ ಸದಸ್ಯರಾದಂತಹ ಶ್ರೀಮತಿ ತೇಜಸ್ವಿನಿ ರಮೇಶ್ ಗೌಡರು, ಅಂತರ್ಜಲವನ್ನು ಕಾಪಾಡುವಂತಹ ನಿಟ್ಟಿನಲ್ಲಿ ನಮ್ಮ ಇಲಾಖೆಯ ಜವಾಬ್ದಾರಿ ಏನು ಎಂಬುದನ್ನು ಸೂಕ್ಷ್ಮವಾಗಿ ಹೇಳಿದ್ದಾರೆ. ನಾನು ಈ ಸಂದರ್ಭದಲ್ಲಿ ಹೇಳುವಂಥದ್ದು ಏನೆಂದರೆ, ಇವತ್ತು ನಮ್ಮ ಸಣ್ಣ ನೀರಾವರಿ ಇಲಾಖೆಯಿಂದ ಬಹಳ ಬಹು ಮುಖ್ಯವಾದ ಜವಾಬ್ದಾರಿಯನ್ನು ನಮ್ಮ ಇಲಾಖೆ ನಿರ್ವಹಿಸಬೇಕಾಗಿರುವ ಹಿನ್ನೆಲೆಯಲ್ಲಿ ನಾನು ಈಗಾಗಲೇ ಅಧಿಕಾರಿಗಳ ಜೊತೆ ಸಮಾಲೋಚನೆ ಮಾಡಿ ಸೂಚನೆಯನ್ನು ಕೊಟ್ಟಿದ್ದೇನೆ. ಇವತ್ತು ಕೆರೆ ಅಭಿವೃದ್ಧಿ ವಿಚಾರದಲ್ಲಿ ಹೊಸ ವಿಧೇಯಕಕ್ಕೆ ತಿದ್ದುಪಡಿಯಾಗಿ rules frame ಆದ ತಕ್ಷಣ, ಅಧಿಕಾರಿಗಳಿಗೆ ಜವಾಬ್ದಾರಿಯನ್ನು fix ಮಾಡಲಾಗುವುದು ಮೊದಲು ಒತ್ತುವರಿಯಾಗಿರತಕ್ಕಂಥ ಕೆರೆಗಳನ್ನು ಉಳಿಸುವ ಕೆಲಸ ಅಧಿಕಾರ ವಿಕೇಂದ್ರಿಕರಣ ವ್ಯವಸ್ಥೆಯಲ್ಲಿ ಯಾವುದೇ, ಇಲಾಖೆಯಲ್ಲಿ ಇದ್ದರೂ ಕೂಡ, ಇವತ್ತು ನಮ್ಮ ಕೆರೆ ಅಭಿವೃದ್ಧಿ ಪ್ರಾಧಿಕಾರ ಅದರ ಜವಾಬ್ದಾರಿಯನ್ನು ನಿರ್ವಹಿಸಬೇಕಾಗುತ್ತದೆ. ಯಾವುದೇ ಮುಲಾಜಿಗೆ ಒಳಗಾಗದೆ, ಮೊದಲು boundary fix ಮಾಡಿ, ಕೆರೆಗಳನ್ನು ಉಳಿಸುವಂತಹ ಜವಾಬ್ದಾರಿಯನ್ನು ನಮ್ಮ ಇಲಾಖೆ ಮಾಡುತ್ತದೆ ಎನ್ನುವಂಥದ್ದನ್ನು ನಾನು ಸಚಿವನಾಗಿ ಹೇಳುವುದಕ್ಕೆ ಬಯಸುತ್ತೇನೆ. ಎರಡನೆಯದಾಗಿ, ಮಾನ್ಯ ಶರಣಪ್ಪ ಮಟ್ಟೂರ ರವರು ಬಹುಮುಖ್ಯವಾದಂತಹ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ.

ಮಾನ್ಯ ಸಭಾಪತಿಯವರೇ, ಒಂದು ರೀತಿ ನಮ್ಮ ಸಣ್ಣ ನೀರಾವರಿ ಇಲಾಖೆಯ ಬಗ್ಗೆ, ಹೊರಗಡೆ ಇಂತಹ ಮಾತುಗಳನ್ನು ಮಾತನಾಡುವಂಥದ್ದನ್ನು ಸಹ ನಾನು ನನ್ನ ಕಿವಿಗಳಲ್ಲಿ ಕೇಳಿಸಿಕೊಂಡಿದ್ದೇನೆ. ಈಗಾಗಲೇ ನಾನು ಮೊದಲೇ ಹೇಳಿದ ಹಾಗೆ, ನಮ್ಮ ರಾಜ್ಯಮಟ್ಟದ ಅಧಿಕಾರಿಗಳ ಸಭೆಯಲ್ಲಿ ನಿರ್ಧಿಷ್ಟವಾಗಿ ಸೂಚನೆಯನ್ನು ಕೊಟ್ಟಿದ್ದೇನೆ. ಇಂತಹ ಯಾವುದೆ ಮಾತುಗಳು ಸದನದ ಒಳಗಾಗಲಿ ಅಥವಾ ಹೊರಗಾಗಲಿ, ನಮ್ಮ ಇಲಾಖೆಯ ಬಗ್ಗೆ ಯಾರು ಹಗುರವಾಗಿ ಮಾತನಾಡುವಂತಹ ನಿಟ್ಟಿನಲ್ಲಿ ನಿಮ್ಮ ಜವಾಬ್ದಾರಿಯಿಂದ ಕೆಲಸ ಮಾಡಬೇಕು ಎನ್ನುವಂತಹ ಸೂಚನೆಯನ್ನು ಕೊಟ್ಟಿದ್ದೇನೆ.

**ಸಭಾಪತಿಯವರು**:- ಮಾನ್ಯ ಶರಣಪ್ಪ ಮಟ್ಟೂರರವರು ಪಾಯಿಂಟ್ ಹೇಳಿದ್ದನ್ನು ತಾವು ಹೇಳಿ.

**ಶ್ರೀ ಸಿ.ಎಸ್.ಪುಟ್ಟರಾಜು**:- ಮಾನ್ಯ ಸಭಾಪತಿಯವರೇ, ಅದರ ಜೊತೆಗೆ ನಿಖರವಾಗಿ ಅವರಿಗೆ ಸಂಬಂಧಪಟ್ಟಂತಹ ಮತ್ತು ಅವರ ವ್ಯಾಪ್ತಿಯಲ್ಲಿ ಯಾವುದಾದರೂ ಈ ರೀತಿ ಆಗಿದೆ ಎನ್ನುವಂತಹ ವಿಚಾರವನ್ನು ಅವರು ಬರವಣಿಗೆಯಲ್ಲಿ ಕೊಡುವುದಾದರೆ, ತಕ್ಷಣ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಲ್ಲಿ ನನ್ನ ಮನವಿ ಏನೆಂದರೆ, ಅವರು ಕಡತಗಳನ್ನು ತರಿಸಿಕೊಂಡು ಅದನ್ನು ನೋಡಬೇಕು. ನಾವು ಯಾವಾಗಲೂ ಒಂದು ವಿಷಯವನ್ನು ಪ್ರಸ್ತಾಪಿಸುತ್ತಿರುತ್ತೇವೆ ಅದೇನೆಂದರೆ, there is a substance in my statement always. A case has been registered in koppal. ಸುಮಾರು 38 ಕೋಟಿ ರೂಪಾಯಿಗಳ ಹಣ ದುರುಪಯೋಗವಾಗಿದೆ. ಅದನ್ನು ತಾವು ನೋಡಿ, ತಾವು ಇನ್ನು ಹೊಸದಾಗಿ ಬಂದಿದ್ದೀರಿ, ಅದನ್ನು ತಮ್ಮ ಗಮನಕ್ಕೆ ತಂದಿದ್ದೇನೆ. I am not making bald allegations against anybody else. Again I am telling you, there is a rampant corruption in your department ನಾನು ಇನ್ನೊಂದು ಸಲ ಹೇಳುತ್ತೇನೆ. ನಿಮ್ಮ ಇಲಾಖೆಯಲ್ಲಿ ಭ್ರಷ್ಟಾಚಾರ ತುಂಬಿ ತುಳುಕುತ್ತಿದೆ ಎಂದು ನಾನು ಈಗಲೂ ಸಹ ಹೇಳುತ್ತೇನೆ. ಕಾರಣ ಏನೆಂದರೆ. . . . .

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದವರ ಆರೋಪಗಳು ಎಷ್ಟಿವೆಯೋ ಏನೋ?

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಎಸ್.ವ್ಹಿ.ಸಂಕನೂರರವರೆ, ಮತ್ತು ಮಾನ್ಯ ವೈ.ಎ.ನಾರಾಯಣಸ್ವಾಮಿಯವರೆ ನೀವುಗಳು ಕುಳಿತುಕೊಳ್ಳಿ. You please sit down.

(ಗೊಂದಲ)

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸಮಿತಿಯ ಸದಸ್ಯರು ವೀಕ್ಷಣೆ ಮಾಡಿ ಬಂದಿರುವುದನ್ನು ಅವರು ಹೇಳುತ್ತಿದ್ದಾರೆ. ನಾವುಗಳು ತಮ್ಮ ಅಧ್ಯಕ್ಷತೆಯಲ್ಲಿಯೇ ಅದನ್ನು ವೀಕ್ಷಣೆ ಮಾಡಿ ಬಂದಿದ್ದೇವೆ.

(ಗೊಂದಲ)

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೆ ಹಾಗೂ ಸದಸ್ಯರಾದ ಮಾನ್ಯ ನಾರಾಯಣಸ್ವಾಮಿಯವರೆ, ಒಂದು ನಿಮಿಷ ನಾನು ತಮಗೆ ಹೇಳುತ್ತೇನೆ ಕೇಳಿ. ದಯಮಾಡಿ ಯಾವ ಸದಸ್ಯರು ಎದ್ದು ಹೋಗಿ ಮಾತನಾಡುವಂತಿಲ್ಲ ಎಂಬುದನ್ನು ನಾನು ಹೇಳುತ್ತೇನೆ. ನಾನು strictly ಹೇಳುತ್ತೇನೆ ತಪ್ಪು ತಿಳಿದುಕೊಳ್ಳಬೇಡಿ. ಸದನದಲ್ಲಿ discipline ಇರಬೇಕು. ಬೇಕು ಬೇಕಾದಾಗ ಎದ್ದು ಮಾತನಾಡಿದರೆ, ಯಾರಾದರೂ ಸದಸ್ಯರು ಮಾತನಾಡುವುದಿದ್ದರೆ ತಮ್ಮ ಕೈಯನ್ನು ಎತ್ತಿ ಅದಕ್ಕೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ನಾನು ಅನುಮತಿಯನ್ನು ಕೊಡುತ್ತೇನೆ. ಸುಮ್ಮನೆ ಎದ್ದು ಮಾತನಾಡುವುದನ್ನು ನಾನು ಸಹಿಸಿಕೊಳ್ಳುವುದಿಲ್ಲವೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ.

**ಶ್ರೀ ಶರಣಪ್ಪ ಮಟ್ಟೂರ**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಒಳ್ಳೆಯ ಉತ್ತರವನ್ನು ಕೊಟ್ಟಿದ್ದಾರೆ.

**ಸಭಾಪತಿಯವರು**:- ಒಂದು ನಿಮಿಷ, ಸತ್ಯವನ್ನು ಹೇಳುವುದರಲ್ಲಿ ತಪ್ಪೇನು? Opposition Partyಯವರು ಇರಲಿ ಅಥವಾ Ruling Partyಯವರು ಇರಲಿ. ಮಾನ್ಯ ಶರಣಪ್ಪ ಮಟ್ಟೂರ ರವರು ಸರಿಯಾಗಿ ಹೇಳುತ್ತಿದ್ದಾರೆ.

(ಗೊಂದಲ)

**ಸಭಾಪತಿಯವರು**:- ಒಂದು ನಿಮಿಷ ನಾನು ಮಾತನಾಡುತ್ತೇನೆ.

(ಗೊಂದಲ)

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭಾ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷ ಮತ್ತು ಆಡಳಿತ ಪಕ್ಷ ಎರಡೂ ಸಹ ಅಲ್ಲೇ ಇದೆ.

**ಶ್ರೀ ಶರಣಪ್ಪ ಮಟ್ಟೂರ**:- ಮಾನ್ಯ ಸಭಾಪತಿಯವರೇ, ನಾನು ಮಾತನಾಡಲಿಕ್ಕೆ ಪ್ರಾರಂಭಿಸಿದ ತಕ್ಷಣ ವಿರೋಧ ಪಕ್ಷದವರು ಹಾಗೆ ಎದ್ದು ನಿಲ್ಲುವ ಅವಶ್ಯಕತೆ ಏನು ಇಲ್ಲ. ಇಲ್ಲಿ ನಾನು ಏನನ್ನು ಹೇಳುತ್ತೇನೆಂದರೆ, ಅರೇ.. ವಿರೋಧ ಪಕ್ಷದ ನಾಯಕರಾದ ಶ್ರೀ ಪೂಜಾರಿಯವರೆ ತಾಳ್ಮೆ ಇರಲಿ ತಾವು ವಿರೋಧ ಪಕ್ಷದ ನಾಯಕರಾಗಿದ್ದೀರಿ. On the very first day you are harping like anything and I don't understand your attitude. You please sit down. ತಾವು ದಯಮಾಡಿ ಕುಳಿತುಕೊಳ್ಳಿ.

(ಗೊಂದಲ).

I am making my submission and have not yielded. ನಿಮಗಿಂತಲೂ ನನಗೆ ಚೆನ್ನಾಗಿ ಗೊತ್ತಿದೆ.

**(ಮುಂದು...)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(019) 03.07.2018 1.10 ವೈಎಲ್-ಬಿಎನ್ಎಸ್ (ಸಭಾಪತಿಯವರ ಉಪಸ್ಥಿತಿ)**

(ಗೊಂದಲ)

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ತಾವು ವಕೀಲರಾಗಿ...

**ಶ್ರೀ ಶರಣಪ್ಪ ಮಟ್ಟೂರು(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, **ನಾನು ಇನ್ನೂ** yield ಆಗಿಲ್ಲ. I am making my submission. Rules of Procedure and Conduct of Business in the Karnataka Legislative Council ಗೊತ್ತಿಲ್ಲದೆ ವಿರೋಧ ಪಕ್ಷದ ನಾಯಕರು ಏನೇನೋ ಹೇಳುತ್ತಾರೆ. Rules of Procedure ಅನ್ನು ಅವರು ಓದಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ತಾವು ಏನು ತಿಳಿಸಿದ್ದೀರಿ ಅದನ್ನು ನಾವು ಸ್ವೀಕಾರ ಮಾಡಿದ್ದೇವೆ.

(ಗೊಂದಲ)

**ಶ್ರೀ ಶರಣಪ್ಪ ಮಟ್ಟೂರು:-** ಮಾನ್ಯ ಸಭಾಪತಿಯವರೇ, ನಾನು ನನ್ನ ಇನ್ನೂ ಮಾತನ್ನು ಮುಗಿಸಿಲ್ಲ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಈ ರೀತಿ ಹೇಳುವುದು ಸರಿಯಲ್ಲ.

(ಗೊಂದಲ)

**ಶ್ರೀ ಶರಣಪ್ಪ ಮಟ್ಟೂರು:-** ಮಾನ್ಯ ಸಭಾಪತಿಯವರೇ, ನಾನು ನನ್ನ ಮಾತನ್ನು ಮುಗಿಸಿಲ್ಲ. ಮತ್ತೆ ಏತಕ್ಕಾಗಿ ವಿರೋಧ ಪಕ್ಷದ ನಾಯಕರು ಮಧ್ಯೆ ಎದ್ದು ಮಾತನಾಡಬೇಕು.

**ಸಭಾಪತಿಯವರು:-** ಮಾನ್ಯ ಸದಸ್ಯರೆ, ತಾವು ವಿಷಯವನ್ನು ಹೇಳಿದ್ದೀರಿ. ವಿಷಯವನ್ನು ಹೇಳಿ ಉತ್ತರವನ್ನು ಕೇಳಿಕೊಳ್ಳಿ. ಅನಾವಶ್ಯಕವಾಗಿ ಒಂದಕ್ಕೊಂದು ತಾಕಲಾಟವಾಗುವುದು ಬೇಡ. ತಾವು ವಿಷಯವನ್ನು ಹೇಳುತ್ತಿದ್ದೀರಿ, ಬೇಗ ಹೇಳಿ ಮುಗಿಸಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ತಕ್ಷಣವೇ ಕುಳಿತುಕೊಳ್ಳಿ ಎಂದು ಹೇಳಿದರೆ ನಾವು ಕುಳಿತುಕೊಳ್ಳಬೇಕೇ? ಅಥವಾ ತಾವು ಕುಳಿತುಕೊಳ್ಳಿ ಎಂದು ಹೇಳಿದ ಮೇಲೆ ನಾವು ಕುಳಿತುಕೊಳ್ಳಬೇಕೇ? ಅಂದರೆ ವಿರೋಧ ಪಕ್ಷವನ್ನು ನಿಯಂತ್ರಣ ಮಾಡುವವರು ಮಾನ್ಯ ಸದಸ್ಯರೋ ಅಥವಾ ತಾವೋ ಎನ್ನುವುದು ತೀರ್ಮಾನವಾಗಬೇಕು.

(ಗೊಂದಲ)

ಆಡಳಿತ ಪಕ್ಷದವರು ಕುಳಿತುಕೊಳ್ಳಿ ಎಂದ ತಕ್ಷಣ ನಾವು ಕುಳಿತುಕೊಳ್ಳಬೇಕೋ?

**ಸಭಾಪತಿಯವರು:-** ಒಂದು ನಿಮಿಷ. ಬಿಡಿ ನಾನು ಮಾತನಾಡುತ್ತೇನೆ. ಯಾವುದೇ ಸದಸ್ಯರು ಮತ್ತೊಬ್ಬ ಸದಸ್ಯರಿಗೆ 'ಕುಳಿತುಕೊಳ್ಳಿ', 'shut up' ಎನ್ನುವುದನ್ನು ಮಾಡಬಾರದು.

(ಗೊಂದಲ)

**ಸಭಾಪತಿಯವರು:-** ಒಂದು ನಿಮಿಷ ನಾನು ಹೇಳುವುದನ್ನು ಕೇಳಿ.

(ಗೊಂದಲ)

ಯಾವುದೇ ವಿಚಾರವಿದ್ದರೂ ನನಗೆ ಹೇಳಿ, ಇದನ್ನು ಎಲ್ಲಾ ಸದಸ್ಯರು ಗಮನದಲ್ಲಿಟ್ಟುಕೊಳ್ಳಬೇಕು. ಯಾವುದೇ ವಿಚಾರವಿದ್ದರೂ ಪೀಠಕ್ಕೆ ಹೇಳಬೇಕು. ತಾವುಗಳೇ ಮಾತನಾಡಬಾರದು.

(ಗೊಂದಲ)

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ದಯವಿಟ್ಟು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ತಾವು ಹೇಳುವುದನ್ನು ನಾವು ಕೇಳಿದ್ದೇವೆ. ಹಾಗೆಯೇ ಒಬ್ಬ ಸದಸ್ಯರು ಕುಳಿತುಕೊಳ್ಳಿ ಎಂದರೆ, ಸುಮ್ಮನೆ ಇರುವುದಕ್ಕಾಗುತ್ತದೆಯೇ?

**ಸಭಾಪತಿಯವರು:-** ಆಯಿತು. ನಾನು ಹೇಳಿದ್ದೇನೆ ಅಲ್ಲಿಗೆ ಮುಗಿಯಿತು.

**ಶ್ರೀ ವೈ.ಎ.ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಆ ಪದವನ್ನು ಕಡತದಿಂದ ತೆಗೆಯಿಸಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದ ಪದವು ಕಡತಕ್ಕೆ ದಾಖಲಾಗುತ್ತದೆಯೇ?

**ಸಭಾಪತಿಯವರು:-** ನಾನು ನೋಡುತ್ತೇನೆ ಬಿಡಿ. ದಾಖಲಾಗುತ್ತದೆಯೋ, ಏನಾಗುತ್ತದೆ ಎಂಬುದನ್ನು ಹೇಳುತ್ತೇನೆ.

**ಶ್ರೀ ರಘುನಾಥ ರಾವ್ ಮಲ್ಕಾಪೂರೆ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ದಯವಿಟ್ಟು ಈ ಮನೆಗೆ ಒಂದು ರೀತಿಯ ಗೌರವ, ಘನತೆ ಇದೆ. ಇಲ್ಲಿಯ ಕಾರ್ಯಕಲಾಪದಲ್ಲಿ ಒಂದು ಪದ್ಧತಿ ಇದೆ. ನಮ್ಮ ಸ್ನೇಹಿತರು ಗೌರವಾನ್ವಿತ ವಕೀಲರು ಹಾಗೂ ಬುದ್ಧಿವಂತರು, ಬುದ್ಧಿ ಜೀವಿಗಳು. ಈ ರೀತಿ ಸದನದಲ್ಲಿ ಸದನದ ವಿರೋಧ ಪಕ್ಷದ ನಾಯಕರಿಗೆ 'ನೀವು ಕುಳಿತುಕೊಳ್ಳಿ' ಎನ್ನುವಂತಹ ಪದ ಏನಿದೆ ಅದನ್ನು ದಯವಿಟ್ಟು ಮಾನ್ಯ ಸದಸ್ಯರು ಹೇಳಿರುವುದು ತಪ್ಪು. ಅದನ್ನು ಕಡತದಿಂದ ತೆಗೆಯಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಸಭಾಪತಿಯವರು:-** ಆಯಿತು. ಆ ಕಡತವನ್ನು ನಾನು ನೋಡುತ್ತೇನೆ. ನೋಡಿ ಹೇಳುತ್ತೇನೆ.

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ದಯವಿಟ್ಟು ವಿನಂತಿ ಮಾಡಿಕೊಳ್ಳುತ್ತೇನೆ. ಕಡತದಿಂದ ಆ ಪದವನ್ನು ತೆಗೆಯಬೇಕು.

**ಸಭಾಪತಿಯವರು:-** ಆಯಿತು. ಆ ಕಡತವನ್ನು ನೋಡಿ ಹೇಳುತ್ತೇನೆ. ಮಾತನಾಡುವುದು ಬೇಡ. ದಯಮಾಡಿ ಶ್ರೀ ಕೆ.ಬಿ. ಶಾಣಪ್ಪನಂತಹ, ಆಯನೂರು ಮಂಜುನಾಥ್‌ರಂತಹ ಹಿರಿಯ ಸದಸ್ಯರಿದ್ದಾರೆ. ಯಾರು ತಪ್ಪು ತಿಳಿದುಕೊಳ್ಳಬಾರದು. ಸದನವನ್ನು ಒಳ್ಳೆಯ ರೀತಿಯಲ್ಲಿ ನಡೆಸಬೇಕೆಂಬುದು ನಮ್ಮೆಲ್ಲರ ಮುಖ್ಯವಾದ ಉದ್ದೇಶ. ಈಗ ವಿಷಯದ ಮೇಲೆ ಚರ್ಚೆಯಾಗಬೇಕೆಂದು ಸಾಕಷ್ಟು ಅನುಮತಿಯನ್ನು ನೀಡಿದ್ದೇನೆ. ಇದೇ ಚರ್ಚೆ ದಿನವೂ ಇರುತ್ತದೆ ಎಂದು ತಿಳಿದುಕೊಳ್ಳಬಾರದು. ಕಾನೂನು, ನಿಯಮವನ್ನು ಬಿಟ್ಟು ನಾನು ಎಲ್ಲಿಯೂ ಹೋಗುವುದಿಲ್ಲ. ಯಾರು ಏನೇ ತಿಳಿದುಕೊಳ್ಳಲಿ, ಕಾನೂನು, ನಿಯಮವನ್ನು ಬಿಟ್ಟು ಹೋಗುವುದಿಲ್ಲ. ಈ ಸದನವನ್ನು ಒಳ್ಳೆಯ ರೀತಿಯಲ್ಲಿ ನಡೆಸಬೇಕಾಗುವುದು ಧರ್ಮ, ಕರ್ತವ್ಯವಾಗಿರುತ್ತದೆ. ದಯಮಾಡಿ ಸಹಕರಿಸಬೇಕಾಗಿ ಮತ್ತೊಮ್ಮೆ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ಶರಣಪ್ಪ ಮಟ್ಟೂರು:-** ಮಾನ್ಯ ಸಭಾಪತಿಯವರೇ, ಇಲ್ಲಿ ವಿರೋಧ ಪಕ್ಷದವರು ಅಥವಾ ವಿರೋಧ ಪಕ್ಷದ ನಾಯಕರು ಎಂಬ ಉದ್ದೇಶವನ್ನಿಟ್ಟುಕೊಂಡು ನಾನು submission ಅನ್ನು ಮಾಡಲಿಲ್ಲ. ನನಗೆ ಮಾತನಾಡಲು ತಾವು ಅವಕಾಶವನ್ನು ನೀಡಿದ್ದೀರಿ. **ನಾನು ಇನ್ನೂ** yield ಆಗಿಲ್ಲ. ಹೀಗಿರುವಾಗ ನಾನು.....

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಸಭಾಪತಿಯವರು:–** ಆಯಿತು ಬೇಡ, ಬೇಡ. ಮತ್ತೆ ಮಾತನ್ನು ಮುಂದುವರೆಸುವುದು ಬೇಡ.

**ಶ್ರೀ ಶರಣಪ್ಪ ಮಟ್ಟೂರು:–** ಮಾನ್ಯ ಸಭಾಪತಿಯವರೇ, ಇಲ್ಲ ನಾನು ವಿಷಯಕ್ಕೆ ಬರಲೇಬೇಕು. (ಗೊಂದಲ) ತಪ್ಪಾಗಿದೆ (ಗೊಂದಲ) Rules of Procedure ಅನ್ನು ಅವರು ಓದಬೇಕಲ್ಲವೇ?

**ಸಭಾಪತಿಯವರು:– ಮಾ**ನ್ಯ ಸದಸ್ಯರೆ ನಾನು ಹೇಳುವುದನ್ನು ಕೇಳಿ. ಮುಗಿದಿರುವ ವಿಚಾರವನ್ನು ಬಿಡಿ. ತಾವು ಏನು ಪ್ರಶ್ನೆ ಕೇಳಬೇಕು ಅದನ್ನು ಸಚಿವರಿಗೆ ಕೇಳಿ.

(ಗೊಂದಲ)

**ಶ್ರೀ ಕೆ.ಬಿ.ಶಾಣಪ್ಪ(ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ತಾವು ಹೇಳಿದ ಮೇಲೆ ಮುಗಿಯಿತು. ಅಷ್ಟೇ.

**ಶ್ರೀ ಶರಣಪ್ಪ ಮಟ್ಟೂರು:–** ಮಾನ್ಯ ಸಭಾಪತಿಯವರೇ, ಏಕೆ ಹಾಗೆ ಹೇಳುತ್ತೀರಿ. ಓದುವುದು ಬೇಡವೇ?

**ಸಭಾಪತಿಯವರು:–** ಮಾನ್ಯ ಶರಣಪ್ಪ ಮಟ್ಟೂರು ಅವರೇ, ತಾವು ಕುಳಿತುಕೊಳ್ಳಿ. ಸಚಿವರೇ ಉತ್ತರವನ್ನು ಹೇಳಿ. ನಾನು ಕಡತವನ್ನು ತರಿಸಿ ನೋಡುತ್ತೇನೆ ಬಿಡಿ. ಇದರ ಬಗ್ಗೆ ಮಧ್ಯಾಹ್ನದ ಮೇಲೆ ಹೇಳುತ್ತೇನೆ. ಸಚಿವರೆ, ಉತ್ತರವನ್ನು ಹೇಳಿ.

**ಶ್ರೀ ಸಿ.ಎಸ್.ಪುಟ್ಟರಾಜು(ಸಣ್ಣ ನೀರಾವರಿ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನಮ್ಮ ಇಲಾಖೆಯ ಬಗ್ಗೆ ಬಹಳ ಮುಖ್ಯವಾದ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಕೊಪ್ಪಳ ಹಾಗೂ ರಾಯಚೂರು ಜಿಲ್ಲೆಗಳಲ್ಲಿ ನಡೆದಂತಹ 38 ಕೋಟಿ ರೂಪಾಯಿಗಳ ಅವ್ಯವಹಾರದ ಬಗ್ಗೆ ಹಿಂದಿನ ಸರ್ಕಾರ ಈಗಾಗಲೇ C.I.D. (Criminal Investigation Department) ಯವರಿಗೆ ವಹಿಸಿ, ಇಲಾಖೆ ವತಿಯಿಂದ 26 ಅಧಿಕಾರಿಗಳನ್ನು ಅಮಾನತ್ತುಗೊಳಿಸಲಾಗಿದೆ. ಈಗಾಗಲೇ ತಪ್ಪಿತಸ್ಥ ಅಧಿಕಾರಿಗಳ ಮೇಲೆ C.I.D. ಯವರು ಚಾರ್ಜ್ ಶೀಟ್ ಸಲ್ಲಿಸಿದ್ದಾರೆ. ಆ ಹಿನ್ನೆಲೆಯಲ್ಲಿ ನಮ್ಮ ಇಲಾಖೆ ಯಾವುದೇ ಕಾರಣಕ್ಕೂ ಈ ಅವ್ಯವಹಾರದಲ್ಲಿ ಬಾಗಿಯಾದಂತಹ ಅಧಿಕಾರಿಗಳನ್ನು ರಕ್ಷಣೆ ಮಾಡುವಂತಹ ಪ್ರಶ್ನೆ ನಮ್ಮ ಮುಂದೆ ಇಲ್ಲ, ದಿಟ್ಟವಾದಂತಹ ಕಾನೂನಾತ್ಮಕವಾದಂತಹ ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎನ್ನುವಂತಹ ಮಾತನ್ನು ಈ ಸದನದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಬಹುತೇಕ ಎಲ್ಲಾ ಹಿರಿಯ ಸದಸ್ಯರು ಬಹುಮುಖ್ಯವಾಗಿ ರಾಜ್ಯದಲ್ಲಿ ರೈತರಿಗೆ ಬೆನ್ನೆಲುಬಾಗಿರತಕ್ಕಂಥ ಸಣ್ಣ ನೀರಾವರಿ ಇಲಾಖೆ ಯಾವ ರೀತಿ ಕಾರ್ಯಕ್ರಮವನ್ನು ರೂಪಿಸಿಕೊಂಡು ಕೆಲಸ ಮಾಡಬೇಕೆಂಬ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಚಾರವನ್ನು ಬಹಳ ಚೆನ್ನಾಗಿ ಸವಿಸ್ತಾರವಾಗಿ ನನ್ನ ಗಮನಕ್ಕೆ ತಂದಿದ್ದಾರೆ. ಆ ಹಿನ್ನೆಲೆಯಲ್ಲಿ ಈಗಾಗಲೇ ಬಹುತೇಕ ಮಾನ್ಯ ಸದಸ್ಯರುಗಳಾದ ಶ್ರೀ ಎಸ್.ರುದ್ರೇಗೌಡರು, ಶ್ರೀ ಬಸವರಾಜ ಪಾಟೀಲ್ ಇಟಗಿಯವರು, ಶ್ರೀ ಭೋಜೇಗೌಡರು ಹೇಳಿದ ಹಾಗೆ ಕೆರೆಗಳಲ್ಲಿ ಹೂಳೆತ್ತುವ ನಿಟ್ಟಿನಲ್ಲಿ, ನಮ್ಮ ಕೆರೆ ಸಂಜೀವಿನಿ ಕಾರ್ಯಕ್ರಮದಲ್ಲಿ ಯಾವತ್ತು ದುಡ್ಡಿಗೆ ಕೊರತೆ ಇಲ್ಲ. ನೇರವಾಗಿ ನಮ್ಮ ಇಲಾಖೆ ವತಿಯಿಂದ ತಾವು ಎಲ್ಲಿ ಹೇಳುತ್ತೀರಿ ಅಲ್ಲಿಗೆ Hitachi J.C.B. ಗಳನ್ನು ಕಳುಹಿಸುವಂತಹ ವ್ಯವಸ್ಥೆ ನಮ್ಮಲ್ಲಿದೆ. ಕೆರೆಗಳ ವ್ಯಾಪ್ತಿಯಲ್ಲಿ ಬರತಕ್ಕಂಥ ಆ ಭಾಗದ ರೈತರಿಗೆ ಮನದಟ್ಟು ಮಾಡಿ ಅತ್ಯುತ್ತಮ ಫಲವತ್ತಾದ ಕೆರೆ ಮಣ್ಣನ್ನು ಅವರ ಟ್ರ್ಯಾಕ್ಟರ್ ಮೂಲಕ ಅವರ ತೋಟಗಳಿಗೆ ತೆಗೆದುಕೊಂಡು ಹೋಗುವಂತಹ ವ್ಯವಸ್ಥೆಯನ್ನು ಮಾಡಿಕೊಂಡರೆ, ಹೂಳು ತೆಗೆಯುವುದಕ್ಕೆ ಮತ್ತು ಅವರ ಭೂಮಿಯಲ್ಲಿ ಫಲವತ್ತಾದ ಬೆಳೆ ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ನಮ್ಮ ಇಲಾಖೆಯಿಂದ ಆ ಭಾಗದ ಅಧಿಕಾರಿಗಳು ಅವರ ಜೊತೆಯಲ್ಲಿ ನಿಂತು ಉಚಿತವಾಗಿ ಮಣ್ಣನ್ನು ಅವರ ಟ್ರ್ಯಾಕ್ಟರ್‌ಗಳಿಗೆ ಲೋಡ್ ಮಾಡಿಕೊಡುವಂತಹ ಕೆಲಸವನ್ನು ರೈತ ಸಂಜೀವಿನಿ ಕಾರ್ಯಕ್ರಮದಡಿಯಲ್ಲಿ ಮುಂದುವರೆಸುತ್ತಿದ್ದೇವೆ. ಹಣದ ಕೊರತೆ ಎಲ್ಲಿಯೂ ಇಲ್ಲ. ಎಷ್ಟೇ ಅನುದಾನವನ್ನು ಬಿಡುಗಡೆ ಮಾಡುವ ನಿಟ್ಟಿನಲ್ಲಿ ನಾನು ಸಚಿವನಾಗಿ ನನ್ನ ಜವಾಬ್ದಾರಿಯನ್ನು ನಿರ್ವಹಿಸುತ್ತೇನೆ ಎನ್ನುವ ಮಾತನ್ನು ಹೇಳುತ್ತೇನೆ. ಈಗಾಗಲೇ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬಂದು ಒಂದು ತಿಂಗಳಾಗಿದೆ. ಇವತ್ತು ನನ್ನ ಇಲಾಖೆಯಲ್ಲಿರತಕ್ಕಂಥ ಹಲವಾರು ನ್ಯೂನ್ಯತೆಗಳನ್ನು ಸರಿಪಡಿಸಿಕೊಂಡು ಅಭಿವೃದ್ಧಿ ಪಥದ ಕಡೆ ಹೆಜ್ಜೆಯನ್ನಿಡಬೇಕಾಗಿದೆ. ಆ ನಿಟ್ಟಿನಲ್ಲಿ ಮುಂದಿನ ದಿನಗಳಲ್ಲಿ ಈ ಇಲಾಖೆ ರೈತರಿಗೆ ಅನುಕೂಲವಾಗುವಂತಹ ಕಾರ್ಯಕ್ರಮಗಳನ್ನು ಹಾಕಿಕೊಂಡು, ಕೆರೆಗಳನ್ನು ಉಳಿಸುವುದು, ಕೆರೆಗಳನ್ನು ಅಭಿವೃದ್ಧಿ ಮಾಡುವುದು, ಬಹುಮುಖ್ಯವಾಗಿ ಅಂತರ್ಜಲ ಹೆಚ್ಚಿಸುವಂತಹ ನಿಟ್ಟಿನಲ್ಲಿ ಅನೇಕ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುವಂತಹ ನಿಟ್ಟಿನಲ್ಲಿ ನಮ್ಮೆಲ್ಲ ಹಿರಿಯ ಸದಸ್ಯರ ಅನುಭವವನ್ನು ಮಾರ್ಗದರ್ಶನವನ್ನು ಪಡೆದು, ಈ ಇಲಾಖೆ ಜವಾಬ್ದಾರಿಯನ್ನು ನಿರ್ವಹಿಸುತ್ತದೆ ಎಂಬುದನ್ನು ಇಲಾಖೆ ಸಚಿವನಾಗಿ ಸದನಕ್ಕೆ ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗಾಗಲೇ ಕೆರೆಗಳ ಹೂಳೆತ್ತುವ ಬಗ್ಗೆ ಸಾಕಷ್ಟು ಸದಸ್ಯರು ಮಾತನಾಡಿದ್ದಾರೆ. ಈ ಕೆರೆಗಳು ಪುರಾತನ ಕಾಲದಲ್ಲಿ ಕಟ್ಟಿದಂತಹ ಕೆರೆಗಳು. ಆದರೆ, ಇವು ಪುರಾತನ ಕಾಲದಲ್ಲಿ ವೈಜ್ಞಾನಿಕವಾಗಿ ಕಟ್ಟಿದಂತಹ ಕೆರೆಗಳು. ಏಕೆಂದರೆ, ಅದರಲ್ಲಿ layers ಇರುತ್ತದೆ. ಒಂದು layer ನಲ್ಲಿ ಉಸುಕು ಮತ್ತು (ಮಣ್ಣು), ಅಂದರೆ, ಹಳದಿ ಮಣ್ಣನ್ನು mix ಮಾಡಿ ಒಂದು layer ಹಾಕಿರುತ್ತಾರೆ. ಈಗಾಗಲೇ ಹಳಿಯಾಳದಲ್ಲಿ ಸುಮಾರು 110 ಕೆರೆಗಳಲ್ಲಿ ಕ್ಷೀರಸಾಗರ ಯೋಜನೆಯಡಿಯಲ್ಲಿ ಹೂಳನ್ನು ತೆಗೆಯಲಾಗಿದೆ. ಆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಂದರ್ಭದಲ್ಲಿ ಉಸುಕು ಮತ್ತು ಹಳದಿ ಮಣ್ಣನ್ನೂ ಸಹ ತೆಗೆದಿದ್ದಾರೆ. ನೀರು ಇಂಗಬಾರದು ಎಂದು ಆ layer ಹಾಕಲಾಗಿರುತ್ತದೆ. ಅದೆಲ್ಲಾವನ್ನು ತೆಗೆದ ಮೇಲೆ ಕೆರೆಯೊಳಗೆ ನೀರು ಬಂದಮೇಲೆ, ನೀರೇ ನಿಲ್ಲುವುದಿಲ್ಲ. ಅದಕ್ಕಾಗಿ ಇದನ್ನು ಮಾನ್ಯ ಸಚಿವರು ಸ್ವಲ್ಪ ಗಮನದಲ್ಲಿಟ್ಟುಕೊಂಡು ಅಧಿಕಾರಿಗಳಗೆ ತಿಳಸಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರೆಲ್ಲರೂ ತಮ್ಮ ತಮ್ಮ ಊರುಗಳಲ್ಲಿನ ಕೆರೆಗಳ ಬಗ್ಗೆ ಏನೇನು ಕೆಲಸ ಮಾಡಬೇಕಾಗಿದೆ ಎಂಬುದರ ಬಗ್ಗೆ ಒಂದು ಪತ್ರವನ್ನು ಬರೆದು ಮಾನ್ಯ ಸಚಿವರಿಗೆ ಕಳುಹಿಸಿದರೆ, ಎಲ್ಲಾ ರೀತಿಯಲ್ಲಿಯೂ ಸರಿ ಹೋಗುತ್ತದೆ. ಸಚಿವರೂ ಸಹ ಕೆಲಸ ಮಾಡಿಸುವುದಕ್ಕೆ ಅನುಕೂಲವಾಗುತ್ತದೆ ಎಂದು ತಮ್ಮೆಲ್ಲರಿಗೂ ಹೇಳುತ್ತೇನೆ. ಮಧ್ಯಾಹ್ನ 15 ಜನ ಸದಸ್ಯರು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲು ಹೆಸರನ್ನು ನೀಡಿದ್ದಾರೆ. ಇವತ್ತು ಹಾಗೂ ನಾಳೆ ಎರಡು ದಿವಸ ಮಾತ್ರ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡಲು ಅವಕಾಶವಿದೆ. ದಯಮಾಡಿ ಮಾನ್ಯ ಶಾಸಕರಿಗೆ ಹೇಳುವುದೇನೆಂದರೆ, to the point ಅಂದರೆ ಏನು ಮಾತನಾಡಬೇಕು ಎನ್ನುವುದನ್ನು ಮೊದಲೇ ನೋಡಿಕೊಂಡು ಬಂದು ಮಾತನಾಡಬೇಕೆಂಬ ಸಲಹೆಯನ್ನು ಕೊಡುತ್ತೇನೆ. ಈಗ ಸದನವನ್ನು 3 ಗಂಟೆ 15 ನಿಮಿಷದವರೆಗೂ ಮುಂದೂಡುತ್ತಿದ್ದೇನೆ.

**(ಸದನವು ಮಧ್ಯಾಹ್ನ 1 ಗಂಟೆ 18 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ಮಧ್ಯಾಹ್ನ 3 ಗಂಟೆ 15 ನಿಮಿಷಕ್ಕೆ ಸಮಾವೇಶಗೊಳ್ಳಲು ತೀರ್ಮಾನಿಸಿತು)**

(020)/03.07.2018/03.15/ಎಸ್‌ಕೆ-ಬಿಎನ್‌ಎಸ್

(ಸಭಾಪತಿಯವರ ಉಪಸ್ಥಿತಿ)

**ಸದನವು ಭೋಜನ ವಿರಾಮದ ನಂತರ ಮಧ್ಯಾಹ್ನ 3 ಗಂಟೆ 20 ನಿಮಿಷಕ್ಕೆ ಪುನಃ ಸಮಾವೇಶಗೊಂಡಿತು.**

ಸಭಾಪತಿ (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.

~~~~~~~

**ಸಭಾಪತಿಯವರು:-** ಆಡಳಿತ ಪಕ್ಷದ ಕಡೆ ಇಬ್ಬರು ಮಂತ್ರಿಗಳು ಮಾತ್ರ ಇದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"
~~~~~~~

**ಶ್ರೀ ಯು.ಟಿ.ಖಾದರ್ (ನಗರಾಭಿವೃದ್ಧಿ ಮತ್ತು ವಸತಿ ಸಚಿರು)**:-ಇಬ್ಬರು ಮಂತ್ರಿಗಳಿದ್ದಾರೆ. ಉಳಿದವರು ಬರುತ್ತಿದ್ದಾರೆ. Within five minutes they will come. Start ಮಾಡಬಹುದು.

**SRI. IVAN D'SOUZA (NOMINATED)**:- This is also a Treasury Bench.

**ಶ್ರೀ ಲಹರ್ ಸಿಂಗ್ ಸಿರೋಯ (ವಿಧಾನಸಭಾ ಕ್ಷೇತ್ರ)**:- ಇದು ಯಾರ ಸರ್ಕಾರ ಮತ್ತು ಯಾರು ಏನು ಎಂಬುದು ಗೊತ್ತಾಗುತ್ತಿಲ್ಲ.

**ಸಭಾಪತಿಯವರು**:-ಒಂದು ಪ್ರಕಟಣೆ ಇದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# 7. ಪ್ರಕಟಣೆ

**ಸಭಾಪತಿಯವರು**:- ವಿಧಾನ ಪರಿಷತ್ತಿನ ಕಾರ್ಯಕಲಾಪಗಳ ಸಲಹಾ ಸಮಿತಿಯು ದಿನಾಂಕ: 03.07.2018 ರಂದು ಸಭೆ ಸೇರಿ ವಿಧಾನ ಪರಿಷತ್ತಿನ 135ನೇ ಅಧಿವೇಶನದ ಉಪವೇಶನದಲ್ಲಿ ದಿನಾಂಕ: 04.07.2018 ರಿಂದ 12.07.2018 ರವರೆಗೆ ಈ ಕೆಳಕಂಡಂತೆ ಕಾರ್ಯಕಲಾಪಗಳನ್ನು ನಡೆಸಲು ತೀರ್ಮಾನಿಸಿರುತ್ತಾರೆ. ದಿನಾಂಕ: 04.07.2018 ರಂದು ಬುಧವಾರ ಬೆಳಗ್ಗೆ 10.30 ಗಂಟೆಯಿಂದ ಗಮನ ಸೆಳೆಯುವ ಸೂಚನೆ, ನಿಯಮ 330, ಮಧ್ಯಾಹ್ನ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲೆ ಮುಂದುವರೆದ ಚರ್ಚೆ ಹಾಗೂ ಸರ್ಕಾರದಿಂದ ಉತ್ತರ. 05.07.2018 ಗುರುವಾರ ಬೆಳಗ್ಗೆ 11.30 ಗಂಟೆಗೆ ಆಯವ್ಯಯ ಮಂಡನೆ. 06.07.2018 ಶುಕ್ರವಾರ ಬೆಳಗ್ಗೆ 10.30 ಗಂಟೆಗೆ ಗಮನ ಸೆಳೆಯುವ ಸೂಚನೆ, ನಿಯಮ 330, ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ, ವಿಧೇಯಕಗಳ ಮಂಡನೆ, ಪರ್ಯಾಲೋಚನೆ ಹಾಗೂ ಅಂಗೀಕಾರ, 07.07.2018 ಶನಿವಾರ ಮತ್ತು 08.07.2018 ಭಾನುವಾರ ಉಪವೇಶನವಿರುವುದಿಲ್ಲ. ಇದು ತಮ್ಮ ಗಮನಕ್ಕೆ. ಶ್ರೀ ಐವನ್ ಡಿ'ಸೋಜಾರವರು ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯವನ್ನು ಪ್ರಾರಂಭ ಮಾಡುವುದು. ಒಂದು ನಿಮಿಷ. ದಯವಿಟ್ಟು ನಾವೆಲ್ಲ ಅರ್ಥಮಾಡಿಕೊಳ್ಳಬೇಕು. ಬಹಳ ಮಂದಿ ಹೊಸ ಸದಸ್ಯರು ಬಂದಿದ್ದಾರೆ. ಸರ್ಕಾರ ನಾಳೆ ಸಂಜೆ ಐದು ಗಂಟೆಗೆ ಉತ್ತರವನ್ನು ಕೊಡುತ್ತದೆ. ದಯವಿಟ್ಟು, ಸಾಧ್ಯವಾದಷ್ಟು ಸಮಯವನ್ನು ನೋಡಿಕೊಂಡು ಮಾತನಾಡಿ ಬೇಗ ಬೇಗನೆ ಮುಗಿಸಿ. ಹದಿನೈದು ಸದಸ್ಯರಿಗೆ ಮಾತನಾಡುವ ಅವಕಾಶ ಸಿಗುತ್ತದೆ. ಸ್ವಲ್ಪ ಸಮಯ ನೋಡಿಕೊಂಡು ಮಾತನಾಡಿ. ತಮಗೆ ಸಮಯದ ಮಿತಿ ಇಲ್ಲ. ಆದರೂ ಸಹಿತ ತಮ್ಮಲ್ಲಿ ವಿನಂತಿ ಏನೆಂದರೆ, ಆದಷ್ಟು ಮುಗಿಸಿ ಎಂಬುದಷ್ಟೇ.

### 8. ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾನಿರ್ಣಯದ ಮೇಲಿನ ಚರ್ಚೆ.

**ಶ್ರೀ ಐವನ್ ಡಿ'ಸೋಜಾ (ನಾಮ ನಿರ್ದೇಶಿತರು)**:- ಮಾನ್ಯ ಸಭಾಪತಿಯವರೇ, ಜುಲೈ 2 ರಂದು ಗೌರವಾನ್ವಿತ ರಾಜ್ಯಪಾಲರು ವಿಧಾನ ಮಂಡಲದ ಸದಸ್ಯರುಗಳನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ನಾವೆಲ್ಲರೂ ಕೃತಜ್ಞತಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಸೇರಿದ್ದೇವೆ. ನಾನು ಕಂಡಂತೆ ಮಾನ್ಯ ರಾಜ್ಯಪಾಲರು ಸುಮಾರು ಇಪ್ಪತ್ತೆಂಟು ನಿಮಿಷಗಳ ಕಾಲ ಭಾಷಣವನ್ನು ಮಾಡಿದ್ದಾರೆ. ಅನೇಕ ವಿಚಾರಗಳನ್ನು ಈ ರಾಜ್ಯದ ಜನತೆಯ ಮುಂದೆ ಸರ್ಕಾರದ ಪರವಾಗಿ ಇಟ್ಟಿದ್ದಾರೆ. As per Article 176 of the Constitution of

India, ಘನತೆವೆತ್ತ ರಾಜ್ಯಪಾಲರು ವರ್ಷದ ಪ್ರಾರಂಭದಲ್ಲಿ ಎರಡೂ ಸದನಗಳ ಸದಸ್ಯರಗಳನ್ನುದ್ದೇಶಿಸಿ ಭಾಷಣ ಮಾಡುವಂಥದ್ದು ಒಂದು ಸಂವಿಧಾನತ್ಮಕವಾಗಿ Mandate ಎಂದು ನಾನು ಹೇಳಬೇಕು. ಈ ಭಾಷಣ ಸರ್ಕಾರದ ಮುನ್ನೋಟ ಮತ್ತು ಹಿನ್ನೋಟ. ಈ ಹಿಂದೆ ಇದ್ದಂತಹ ಸರ್ಕಾರ ಏನು ಕೆಲಸಗಳನ್ನು ಮಾಡಿದೆ. ಸರ್ಕಾರ ಮುಂದೆ ಏನು ಸಾಧನೆಗಳನ್ನು ಮಾಡುವುದಕ್ಕೆ ಜನರ ಮುಂದೆ ಆಶ್ವಾಸನೆ ಕೊಡುತ್ತಿದೆ ಎನ್ನುವುದನ್ನು ಈ ಒಂದು ಭಾಷಣದಲ್ಲಿ ನಾವು ನೋಡುವುದಕ್ಕೆ ಸಾಧ್ಯವಿದೆ. ಇವತ್ತು as per Article 176 of the Constitution of India ರಾಜ್ಯಪಾಲರು ಪ್ರಾರಂಭದಲ್ಲಿಯೇ ಒಂದು ಸರ್ಕಾರ ಅಧಿಕಾರಕ್ಕೆ ಬಂದಾಗ ಜನರಿಗೆ ಕೊಟ್ಟಿರುವಂತಹ ಆಶ್ವಾಸನೆಗಳು ಅದರಲ್ಲಿ ಪ್ರತ್ಯೇಕವಾಗಿ ನಾವು Manifesto ಎಂದು ಹೇಳುತ್ತೇವೆ. ಒಂದಲ್ಲ ಒಂದು ರೀತಿಯ ಸರ್ಕಾರ ಬರಬೇಕಾಗಿದ್ದರೆ ರಾಜಕೀಯ ಪಕ್ಷಗಳು ನಾವು ಅಧಿಕಾರಕ್ಕೆ ಬಂದರೆ ಇಂತಹ ಸಾಧನೆಗಳನ್ನು ಮಾಡುತ್ತೇವೆ. ನಮಗೆ ಅವಕಾಶಗಳನ್ನು ಕೊಡಿ ಎಂದು ಹೇಳಿ ಜನರ ಮುಂದೆ ಹೋಗಿದ್ದೆವು. ಈ ಸದನದ ಸದಸ್ಯನಾಗಿ  ನಾಲ್ಕು ವರ್ಷಗಳಾಯಿತು. ಎರಡನೇ ಬಾರಿ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯವನ್ನು ಬೆಂಬಲಿಸಿ ಮಾತನಾಡುತ್ತಿದ್ದೇನೆ. ಸುಮಾರು ಎರಡು ವರ್ಷಗಳ ಹಿಂದೆ ಮಾತನಾಡಿದಾಗ, ಈ ಸದನದಲ್ಲಿ ನನ್ನ ಕಾಂಗ್ರೆಸ್ ಪಕ್ಷವೇ ಸರ್ಕಾರವನ್ನು ನಡೆಸುತ್ತಿತ್ತು. ಇವತ್ತು ಸಮ್ಮಿಶ್ರ ಸರ್ಕಾರದ ನನ್ನ ಮಿತ್ರರಾದಂತಹ Janata Dal (Secular) ಪಕ್ಷದ ಜೊತೆಗೂಡಿಕೊಂಡು ಸರ್ಕಾರವನ್ನು ಮಾಡುವಾಗ, ನಾವು ಇವತ್ತು ರಾಜ್ಯಪಾಲರು ಯಾವರೀತಿ ಭಾಷಣ ಮಾಡಿದ್ದಾರೆಂಬುದನ್ನು  ಗಮನಿಸಿ ಬೆಂಬಲ ವ್ಯಕ್ತಪಡಿಸಿ ಮಾತನಾಡಬೇಕಾಗುತ್ತದೆ. ಈ ರಾಜ್ಯದಲ್ಲಿ ಶ್ರೀ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ ಐದು ವರ್ಷಗಳ ಕಾಲ ಅಧಿಕಾರದಲ್ಲಿತ್ತು.

**ಸಭಾಪತಿಯವರು:-** ಮಾನ್ಯ ಐವನ್ ಡಿ'ಸೋಜಾರವರೇ ಒಂದು ನಿಮಿಷ. ಸಭಾ ನಾಯಕರೇ, ಅಧಿಕಾರಿಗಳ ಗ್ಯಾಲರಿಯಲ್ಲಿ ಅಧಿಕಾರಿಗಳು ಹಾಜರಿರುವುದು ಅವರುಗಳ ಜವಾಬ್ದಾರಿ. ನಾನು ಪದೇ ಪದೇ ಹೇಳುತ್ತೇನೆ. ಇಲ್ಲವಾದರೆ, ನಾಳೆಗೆ ಅವರ ಹೆಸರು ಹೇಳಬೇಕಾಗುತ್ತದೆ. ನಾನು ಸ್ಪಷ್ಟವಾಗಿ ಹೇಳುತ್ತೇನೆ. ನಾನು ಬೆಳಗ್ಗೆಯಿಂದ ನಿಮಗೂ ಸಹಿತ ಇವೋತ್ತು ಸದನದಲ್ಲಿ ಹಾಜರಿರಬೇಕಾದ ಅಧಿಕಾರಿಗಳ ಹೆಸರುಗಳನ್ನು ಕೊಡಿ ಎಂದು ಹೇಳುತ್ತಿದ್ದೇನೆ. ಅಧಿಕಾರಿಗಳು ಇಲ್ಲದಿದ್ದರೆ ಹೇಗೆ? ಯಾರೋ ಕುಳಿತುಕೊಂಡರೆ ಆಗುವುದಿಲ್ಲ. ಇಲ್ಲವಾದರೆ ಸಭೆಯನ್ನು adjourn  ಮಾಡಿ ಹೋಗಿ ಬಿಡುತ್ತೇನೆ. ಇವತ್ತು ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯ ನಡೆದಿದೆ. ಅಧಿಕಾರಿಗಳ ಗ್ಯಾಲರಿಯಲ್ಲಿ ಅಧಿಕಾರಿಗಳ ಇಲ್ಲವೆಂದರೆ ಹೇಗೆ? ಅಧಿಕಾರಿಗಳು ಇಲ್ಲವಾದರೆ ಸರ್ಕಾರದವರು ಏನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತಾರೆ. ಈ ಬಗ್ಗೆ ತಕ್ಷಣವೇ ಗಮನಹರಿಸಬೇಕು. I don't tolerate all these things.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು)**:- ಮಾನ್ಯ ಸಭಾಪತಿಯವರೇ, ಅವರು Chief Whip ಅವರನ್ನು ಬೇಗ ನೇಮಕ ಮಾಡಿಕೊಂಡರೆ...

**ಸಭಾಪತಿಯವರು**:-ಆಯಿತು, ಅದು ಬಿಡಿ. ಆ ಊಸಾಬರಿಗೆ ನೀವೇಕೆ ಹೋಗುತ್ತೀರಿ.

**ಶ್ರೀ ಐವನ್ ಡಿ'ಸೋಜಾ (ನಾಮ ನಿರ್ದೇಶಿತರು)**:- ಮಾನ್ಯ ಸಭಾಪತಿಯವರೇ, 2013 ನೇ ಸಾಲಿನಲ್ಲಿ ಮಾನ್ಯ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ ಈ ರಾಜ್ಯದಲ್ಲಿ ಅಧಿಕಾರಕ್ಕೆ ಬಂತು. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಂತಹ ಸಂದರ್ಭದಲ್ಲಿ ಜನರಿಗೆ ಆ 165 ಭರವಸೆಗಳನ್ನು ಕೊಟ್ಟಿತ್ತು. ಆ 165 ಭರವಸೆಗಳಲ್ಲಿ ಐದು ವರ್ಷ ಪೂರ್ತಿಗೊಂಡಿರುವಂತಹ ಸಂದರ್ಭದಲ್ಲಿ, ಸುಮಾರು 160 ಭರವಸೆಗಳನ್ನು ಈಡೇರಿಸಿದಂತಹ ಕೀರ್ತಿ ಸನ್ಮಾನ್ಯ ಸಿದ್ದರಾಮಯ್ಯನವರಿಗೆ ಸಲ್ಲಬೇಕಾಗುತ್ತದೆ. ಹೀಗಾಗಿ ನಾವು ಬಹಳ ಉತ್ಸಾಹದಿಂದ ಸರ್ಕಾರದ ಕಾರ್ಯಕ್ರಮಗಳನ್ನು ಹೇಳುವುದರ ಜೊತೆಗೆ 2013 ರಿಂದ 2018ರವರೆಗೆ ಮಾಡಿದಂತಹ ಸಾಧನೆಗಳ ಒಂದು ಹಿನ್ನೋಟವನ್ನು ನಾನು ಈ ಸದನದ ಮುಂದೆ ಇಡಬೇಕಾಗುತ್ತದೆ. ಇವತ್ತು ಪುನಃ ಐದು ವರ್ಷಗಳ ಕಾಲ ಅಧಿಕಾರಕ್ಕೆ ಮಾನ್ಯ ಕುಮಾರಸ್ವಾಮಿಯವರ ನೇತೃತ್ವದ ಸಮ್ಮಿಶ್ರ ಸರ್ಕಾರ ಅಧಿಕಾರವನ್ನು ವಹಿಸಿಕೊಂಡಿದೆ. ಅದರ ಪ್ರಥಮ ಅಧಿವೇಶನದಲ್ಲಿ ನಾವು ಮುಂದೆ ಏನು ಮಾಡುತ್ತೇವೆ ಎನ್ನುವುದನ್ನು ಕೂಡ ಈ ಸದನದ ಮುಂದೆ ಇಡಬೇಕಾಗುತ್ತದೆ. ಮಾನ್ಯ ಸಿದ್ದರಾಮಯ್ಯನವರ ಸರ್ಕಾರ ಅಧಿಕಾರದಲ್ಲಿಂತಹ ಸಂದರ್ಭದಲ್ಲಿ ಜಾರಿಗೊಳಿಸಿದಂತಹ ಅನೇಕ ಯೋಜನೆಗಳು. ಅದರಲ್ಲಿಯೂ ಬಹಳ ದೊಡ್ಡ ಮಹತ್ವಾಕಾಂಕ್ಷೆಯಾಗಿರುವಂತಹ ಯೋಜನೆ ಅದು "ಅನ್ನಭಾಗ್ಯ ಯೋಜನೆ". ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣ 24 ಗಂಟೆಗಳೊಳಗೆ, I mean to say within three hours, ಅಧಿಕಾರ ಸ್ವೀಕಾರ ಮಾಡಿ ನೇರವಾಗಿ ಕ್ಯಾಬಿನೆಟ್ ಹಾಲ್‌ಗೆ ಬಂದು ಒಂದು ತೀರ್ಮಾನವನ್ನು ತೆಗೆದುಕೊಂಡರು. ವಿರೋಧ ಪಕ್ಷದವರು ಇದನ್ನು ಟೀಕೆ ಮಾಡಿದರು. ಈ ಯೋಜನೆ ಜಾರಿಗೆ ಬರುವುದಕ್ಕುಂಟೆ! ಉಂಟೇ. ಈ ಯೋಜನೆಯಿಂದ ಜನರು ಸೋಮಾರಿಯಾಗುತ್ತಾರೆ. ಕೆಲಸ-ಕಾರ್ಯಗಳಿಗೆ ಜನರು ಸಿಗುವುದಿಲ್ಲ. ಇಂತಹ ಯೋಜನೆಯಿಂದ ಸಮಾಜದಲ್ಲಿ ನಾವು ಜನರನ್ನು ಸೋಮಾರಿಗಳನ್ನಾಗಿ ಮಾಡುತ್ತೇವೆ. ಕೆಲಸ ಕಲಿಸುವುದರ ಬದಲು ಸೋಮಾರಿಗಳನ್ನಾಗಿ ಮಾಡುತ್ತೀರಿ ಎಂದೆಲ್ಲಾ ಹೇಳಿದರು. ವಿರೋಧ ಪಕ್ಷದ ಶಾಸಕರು ನೀವು ಸೋಮಾರಿಗಳನ್ನಾಗಿ ಮಾಡುತ್ತೀರಿ ಎಂದಾಗ ಅಂದಿನ ಮುಖ್ಯ ಮಂತ್ರಿಗಳಾದಂತಹ ಮಾನ್ಯ ಸಿದ್ದರಾಮಯ್ಯನವರು ಈ ಸದನದಲ್ಲಿ ಉತ್ತರ ಕೊಟ್ಟಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮುಂದು...)

(021)03.07.2018/3.30/ಎಂ.ಎಂ-ಕೆ.ಎಸ್

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಐವನ್ ಡಿ'ಸೋಜಾ (ಮುಂದು)**

ಬಹಳ ಸಮಯಗಳ ಕಾಲ ಅವರು ಕೆಲಸ ಮಾಡಿದ್ದಾರೆ, ನಾವು ತಿಂದಿದ್ದೇವೆ. ಇವತ್ತು ನಾವು ಸ್ವಲ್ಪ ಕೆಲಸ ಮಾಡೋಣ, ಅವರು ಸ್ವಲ್ಪ ಆರಾಮವಾಗಲಿ ಎಂದು ಹೇಳಿದರು. ಅದು ಎಲ್ಲಿಯೋ ಒಂದು ಕಡೆ ಪರಿವರ್ತನೆಗೆ ಅವಕಾಶವಾಯಿತು. ಈ ರಾಜ್ಯದಲ್ಲಿ ದೊಡ್ಡ ಮಟ್ಟದ ಸುಮಾರು 176 ತಾಲ್ಲೂಕುಗಳ ಪೈಕಿ 164 ತಾಲ್ಲೂಕುಗಳಲ್ಲಿ ಭೀಕರವಾದ ಬರಗಾಲ ಬಂದಿತ್ತು. ಹಿಂದೆ ಮಾನ್ಯ ಎಸ್.ಎಂ. ಕೃಷ್ಣರವರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾಗ ಬರಗಾಲ ಬಂದಾಗ ಜನರು ಗುಳೇ ಹೋಗಿದ್ದನ್ನು ನೋಡಿದ್ದೇವೆ. ಅಂದು ಜನರು ಮನೆ, ಮಠ ಬಿಟ್ಟು ಹೋದರು, ದನಕರುಗಳು ಸತ್ತವು. ಯಾವುದೇ ಕೆಲಸವನ್ನು ಮಾಡುವುದಕ್ಕೆ ಆಗುತ್ತಿರಲಿಲ್ಲ. ಆದರೆ ಕಳೆದ ಐದು ವರ್ಷಗಳಲ್ಲಿ ಭೀಕರವಾದ ಬರಗಾಲ ಇದ್ದರೂ ಕೂಡ 'ಅನ್ನಭಾಗ್ಯ ಯೋಜನೆ' ಯಿಂದ ಜನರು ಮನೆ ಬಿಟ್ಟು ಕದಲದಂತೆ ಆಯಿತು. Inspite of severe drought the people have sustained themselves. ಅವರು ತಮ್ಮನ್ನು ತಾವು ಸಮರ್ಥಿಸಿಕೊಂಡರು. ಇದು ಈ ರಾಜ್ಯದ ಜನತೆಗೆ ಮಾನ್ಯ ಮುಖ್ಯಮಂತ್ರಿಯವರು ಕೊಟ್ಟಿರುವಂತಹ ಒಂದು ಯೋಜನೆಯಾಗಿದ್ದು, ಜನರು ಹಸಿವಿನಿಂದ ಮುಕ್ತವಾಗುವಂತಹ ಕೆಲಸ ಆಯಿತು. ಅದಕ್ಕಾಗಿ ರಾಜ್ಯದ ಮುಖ್ಯಮಂತ್ರಿಯವರು ಈ ರಾಜ್ಯವನ್ನು ಹಸಿವು ಮುಕ್ತ ಮಾಡುವುದಕ್ಕೆ ಈ ಕಾರ್ಯಕ್ರಮವನ್ನು ನಾವು ಜಾರಿಗೆ ತಂದಿದ್ದೇನೆ ಎಂಬ ಮಾತನ್ನು ಹೇಳಿದರು. ಜನರು ಈ ಕಾರ್ಯಕ್ರಮವನ್ನು ಎಲ್ಲಾ ಕಡೆಯೂ ಸ್ವಾಗತಿಸಿದರು. ಅದೇ ರೀತಿ ನನಗೂ ನೆನಪಿದೆ, ಈ ರಾಜ್ಯದಲ್ಲಿ ಮಾನ್ಯ ಬಿ.ಎಸ್.ಯಡಿಯೂರಪ್ಪನವರ ಸರ್ಕಾರ 2008 ರಿಂದ 2013ವರೆಗೆ ಅಧಿಕಾರದಲ್ಲಿತ್ತು. ಅಂದು ಮಾನ್ಯ ಬಿ.ಎಸ್. ಯಡಿಯೂರಪ್ಪನವರು ನಾವು ಕೆ.ಜಿ. ಒಂದಕ್ಕೆ ರೂ.3 ರಂತೆ ಅಕ್ಕಿಯನ್ನು ಕೊಡುತ್ತೇವೆ ಎಂದು ತಮ್ಮ ಪ್ರಣಾಳಿಕೆಯಲ್ಲಿ ಘೋಷಣೆ ಮಾಡಿದ್ದರು. ಅದನ್ನು ಕೊಟ್ಟಿರಲಿಲ್ಲ. ಅದೇ ರೀತಿ ಕೇಂದ್ರಸರ್ಕಾರದಲ್ಲಿ ನಾವು ಸುಮಾರು ಎರಡು ಕೋಟಿ ಉದ್ಯೋಗವನ್ನು ಪ್ರತಿ ವರ್ಷಕ್ಕೆ ಸೃಷ್ಟಿ ಮಾಡಿದ್ದೆವು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧಪಕ್ಷದ ನಾಯಕರು)**:- ಮಾನ್ಯ ಸಭಾಪತಿಯವರೇ, ನಾವು ಕೆ.ಜಿ. ಒಂದಕ್ಕೆ ರೂ.3ರಂತೆ ಅಕ್ಕಿಯನ್ನು ಕೊಡುತ್ತೇವೆ ಎಂದು ಹೇಳಿದ್ದನ್ನು ಜಾರಿಗೆ ತಂದಿಲ್ಲ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಬಿ.ಪಿ.ಎಲ್ ಪಡಿತರ ಚೀಟಿ ಹೊಂದಿರುವವರಿಗೆ ಒಂದು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೆ.ಜಿ ಅಕ್ಕಿಗೆ 03 ರೂಪಾಯಿಗಳಂತೆ ಜಾರಿಗೆ ತಂದದ್ದು ನಮ್ಮ ಸರ್ಕಾರ. ಆನಂತರ ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿ ಉಚಿತವಾಗಿ ಅಕ್ಕಿಯನ್ನು ಕೊಡುವ ಯೋಜನೆ ತಂದರು. ಅದನ್ನು ಇದೇ ಸದನದಲ್ಲಿ ಈ ಕಡೆ ನಿಂತು ನಾನು ಪ್ರಥಮವಾಗಿ ಅದನ್ನು ಸ್ವಾಗತ ಮಾಡಿದ್ದೆನು. ನಮಗೂ ಮತ್ತು ನಿಮಗೂ ಇರುವ ಅಂತರವೇನೆಂದರೆ, ಚರ್ಚೆಯೇನೆಂದರೆ, ಹಿಂದೆ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರಾಗಿದ್ದ ಮಾನ್ಯ ಸಚಿವರಾದ ಯು.ಟಿ. ಖಾದರ್ ರವರು ಇದ್ದಾರೆ. ಅನ್ನಭಾಗ್ಯ ಯೋಜನೆಯಡಿಯಲ್ಲಿ ಬಡವರಿಗೆ ಉಚಿತವಾಗಿ ಅಕ್ಕಿಯನ್ನು ಕೊಡುತ್ತೀರಿ. ಸಾಮಾನ್ಯವಾಗಿ ಅಕ್ಕಿಯು ಛತ್ತೀಸ್‌ಘಢದಲ್ಲಿ ಖರೀದಿಯಾಗುತ್ತದೆ. ರೂ.32/- ರೂಪಾಯಿಗೆ ಖರೀದಿಯಾಗುವ ಅಕ್ಕಿಗೆ ಕೇಂದ್ರಸರ್ಕಾರವು ರೂ.29/- ರೂಪಾಯಿಗಳನ್ನು ಕೊಡುತ್ತದೆ. ಕೇಂದ್ರದಲ್ಲಿ ಯಾವ ಸರ್ಕಾರ ಇರುತ್ತದೆ ಆ ಸರ್ಕಾರ ಹಣವನ್ನು ಕೊಡುತ್ತದೆ. ರಾಜ್ಯ ಸರ್ಕಾರ ರೂ.3/- ರೂಪಾಯಿಗಳನ್ನು ಕೊಡುತ್ತದೆ. 32 ರೂಪಾಯಿಯನ್ನು ಕೊಡುವ ಮೂಲಕ ಅನ್ನಭಾಗ್ಯ ಯೋಜನೆಯಲ್ಲಿ ಬಡವರಿಗೆ ಅಕ್ಕಿಯನ್ನು ಕೊಟ್ಟು ಹಸಿವುಮುಕ್ತ ಕರ್ನಾಟಕವನ್ನು ಸ್ವಾಗತ ಮಾಡಿದವರಲ್ಲಿ ನಮ್ಮ ಪಕ್ಷದ ವತಿಯಿಂದ ನಾನೇ ಪ್ರಥಮ.

**ಶ್ರೀ ಯು.ಟಿ. ಖಾದರ್ (ಬೆಂಗಳೂರು ನಗರಾಭಿವೃದ್ಧಿ ಮತ್ತು ವಸತಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಿದ್ದರಾಮಯ್ಯನವರ ಸರ್ಕಾರ ಅನ್ನಭಾಗ್ಯ ಯೋಜನೆಯನ್ನು ಘೋಷಣೆ ಮಾಡಿದಾಗ ಆಹಾರ ಭದ್ರತೆ ಕಾಯಿದೆ ಜಾರಿಗೆ ಬರಲಿಲ್ಲ. ಯಾವಾಗ ಕರ್ನಾಟಕ ರಾಜ್ಯದಲ್ಲಿ ಅನ್ನಭಾಗ್ಯ ಯೋಜನೆ ಜಾರಿಗೆ ಬಂದ ಎರಡು ವರ್ಷದ ನಂತರ ಯು.ಪಿ.ಎ ಸರ್ಕಾರ ಆಹಾರ ಭದ್ರತೆ ಕಾಯಿದೆಯನ್ನು ಜಾರಿಗೆ ತಂದಿತು. ಅದಕ್ಕೆ ಮುಂಚೆ ಅನ್ನಭಾಗ್ಯ ಯೋಜನೆ ಜಾರಿಗೆ ಬಂದಿತ್ತು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಅನ್ನಭಾಗ್ಯ ಯೋಜನೆ ಜಾರಿಗೆ ಬಂದ ನಂತರ ಕೇಂದ್ರ ಸರ್ಕಾರ ಕೊಟ್ಟಿತು ಎಂದು ಹೇಳಿದಿರಿ. ಅದನ್ನು ಕೊಟ್ಟಿದ್ದು ಕೇಂದ್ರಸರ್ಕಾರವಾಗಿದೆ.

**ಶ್ರೀ ಯು.ಟಿ. ಖಾದರ್:-** ಮಾನ್ಯ ಸಭಾಪತಿಯವರೇ, ಅನ್ನಭಾಗ್ಯ ಯೋಜನೆಯು ಅದಕ್ಕೂ ಮುಂಚೆಯೇ ಬಂದಿದೆ. ಕೇಂದ್ರಸರ್ಕಾರ ಕೊಡದಿದ್ದರೂ ಕೂಡ ನಮ್ಮ ಸರ್ಕಾರ ಕೊಟ್ಟಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಕಾಯಿದೆ ಬಂದರೂ ಕೂಡ ಅದನ್ನು ಅನುಷ್ಠಾನ ಮಾಡಬೇಕಲ್ಲವೇ. ನಾವು ಭಾಗ್ಯಲಕ್ಷ್ಮಿ ಯೋಜನೆಯನ್ನು ಜಾರಿಗೆ ತಂದೆವು. ಒಂದು ವರ್ಷಕ್ಕೆ ಸುಮಾರು ನಾಲ್ಕು ಲಕ್ಷ ಬಾಂಡ್‌ಗಳನ್ನು ಬಡವರಿಗೆ ಕೊಡಬೇಕಾಯಿತು. ನಿಮ್ಮ ಸರ್ಕಾರ ಬಂದ ನಂತರ ಸುಮಾರು 75 ಸಾವಿರ ಬಾಂಡ್‌ಗಳನ್ನು ಕೊಟ್ಟಿದ್ದೀರಿ. ಕಾಯ್ದೆ ಇದ್ದರೂ ಕೂಡ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅದನ್ನು ಅನುಷ್ಠಾನ ಮಾಡುವ ಒಳ್ಳೆಯ ಗುಣಗಳು ಬೇಕಾಗಿತ್ತು. ನಾನು ಇದನ್ನು ಚರ್ಚೆಗೋಸ್ಕರ ಹೇಳುತ್ತಾ ಇಲ್ಲ. ಈಗಲೂ ನಿಮಗೆ ಗೌರವವನ್ನು ಕೊಡುತ್ತೇನೆ. ಅನ್ನಭಾಗ್ಯ ಯೋಜನೆಯ ಜಾರಿಯ ಬಗ್ಗೆ ಯಾರು ಯಾವ ಅಭಿಪ್ರಾಯವನ್ನು ಪಡುತ್ತಾರೆಯೋ ಗೊತ್ತಿಲ್ಲ, ಆದರೆ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಕೇಂದ್ರಸರ್ಕಾರ ಕೊಟ್ಟಿರುವ ಹಣವನ್ನು ನೆನಪು ಮಾಡಿಕೊಳ್ಳಬೇಕಾಗಿತ್ತು ಎಂಬುದು ಮಾತ್ರ ನನ್ನ ಅನಿಸಿಕೆಯಾಗಿದೆ. ಒಂದು ಕಡೆ ಆಹಾರ ಮಂತ್ರಿಯವರ ಫೋಟೋ ಮತ್ತೊಂದು ಕಡೆ ಮುಖ್ಯಮಂತ್ರಿಯವರ ಫೋಟೋ ಮಧ್ಯದಲ್ಲಿ ಪ್ರಧಾನ ಮಂತ್ರಿಯವರ ಫೋಟೋ ಇರಬೇಕಾಗಿತ್ತು.

**ಶ್ರೀ ಯು.ಟಿ. ಖಾದರ್:-** ಮಾನ್ಯ ಸಭಾಪತಿಯವರೇ, ಈ ದೇಶದ ಕಾನೂನು ಕೊಟ್ಟಂತಹ ಪ್ರಧಾನ ಮಂತ್ರಿ ಶ್ರೀ ಮನಮೋಹನ್‌ಸಿಂಗ್. . . . .

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಭಾಗ್ಯಲಕ್ಷ್ಮಿ ಯೋಜನೆಯನ್ನು ಜಾರಿಗೆ ತಂದಿದ್ದು ನಮ್ಮ ಸರ್ಕಾರ, ಅದನ್ನು ಈಗಿನ ಸರ್ಕಾರ ಅನುಷ್ಠಾನ ಮಾಡಿದ್ದಾರೆಯೇ? ಸರ್ಕಾರ ಜನಾಭಿಪ್ರಾಯದಿಂದ ಕಾಲ ಕಾಲಕ್ಕೆ ಬದಲಾಗುತ್ತದೆ. ಬದಲಾದಾಗ ಸರ್ಕಾರದ ಯಾವ ಯೋಜನೆಯ ವ್ಯಾಪ್ತಿಯಲ್ಲಿ ಆಗಿರುವಂತಹ ಸರ್ಕಾರ ಉತ್ತರದಾಯಿಯಾಗುತ್ತದೆ. ಇದನ್ನು ತಮ್ಮ ಗಮನಕ್ಕೆ ತರುವುದಕ್ಕೋಸ್ಕರ ಹೇಳಿದೆ, ತಾವು ಮುಂದುವರೆಸಿ.

**ಶ್ರೀ ಲಹರ್ ಸಿಂಗ್ ಸಿರೋಯಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಿದ್ದರಾಮಯ್ಯನವರ ಸರ್ಕಾರದ ಬಗ್ಗೆ ಐದು ವರ್ಷಗಳವರೆಗೆ ಇಲ್ಲಿ ಸಾಕಷ್ಟು ಚರ್ಚೆಯಾಗಿದೆ. ಇದಕ್ಕೆ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಜನತೆ ಉತ್ತರವನ್ನೂ ಕೊಟ್ಟಿದ್ದಾರೆ.

(ಗೊಂದಲ)

ಮಾನ್ಯ ಸಭಾಪತಿಯವರೇ, ಹೊಸ ಸರ್ಕಾರದ ಬಗ್ಗೆ ಚರ್ಚೆಯಾಗಬೇಕು. ಸಭಾನಾಯಕರು ಮಾನ್ಯ ಸಿದ್ದರಾಮಯ್ಯನವರು ಏನು ಮಾಡಿದ್ದಾರೆಂದು ಹೇಳಿದ್ದಾರೆ.

**ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಪ್ರಧಾನಮಂತ್ರಿಯವರು ಲೋಕಸಭಾ ಚುನಾವಣೆಯಲ್ಲಿ ಯಾವರೀತಿ ಉತ್ತರ ಕೊಟ್ಟಿದ್ದಾರೆ ಎನ್ನುವುದನ್ನು ಮಾನ್ಯ ಸದಸ್ಯರು ಅರ್ಥ ಮಾಡಿಕೊಳ್ಳಬೇಕು.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಮಾನ್ಯ ಲಹರ್ ಸಿಂಗ್‌ರವರೇ, ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡುವಾಗ politics ಬೇಡ.

(ಗೊಂದಲ)

ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ, ತಾವು ಈಗ ಈ ಸದನದ ವಿರೋಧಪಕ್ಷದ ನಾಯಕರಾಗಿದ್ದೀರಿ, ನನ್ನ ಮಾತಿನ ಬಗ್ಗೆ ಸ್ವಲ್ಪ ಗಮನಹರಿಸಬೇಕು. ಹಿಂದೆ ಸದಸ್ಯರಾಗಿ ಅಲ್ಲಿ ಕುಳಿತು ಮಾತನಾಡುವ ಹಾಗೆ ಮಾತನಾಡಬೇಡಿ. ನಡುವೆ ಅವರು yield ಆದರೆ ಮಾತ್ರ ಮಾತನಾಡಿ. Yield ಆಗದಿದ್ದರೆ ನಾನು ಯಾರನ್ನೂ allow ಮಾಡುವುದಿಲ್ಲ. ಇನ್ನೂ ಅವರು yield ಆಗಿಲ್ಲ, ಕುಳಿತುಕೊಳ್ಳಿ.

**ಶ್ರೀ ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ . . .

**ಸಭಾಪತಿಯವರು:–** ಮಾನ್ಯ ಭೋಜೇಗೌಡರೇ, ಒಂದು ನಿಮಿಷ ಕೇಳಿ. ಅವರು yield ಆದರೆ ಮಾತ್ರ ಮಾತನಾಡಬೇಕು, ಇಲ್ಲದಿದ್ದರೆ ಮಾತನಾಡುವ ಹಾಗಿಲ್ಲ.

**ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಆಯ್ಕೆಯಾದವರು):–** ಮಾನ್ಯ ಸಭಾಪತಿಯವರೇ, ನನಗೆ ನೆನಪಿದೆ. 2014ರಲ್ಲಿ ಪ್ರಧಾನಮಂತ್ರಿಯವರು ಪಂಜಾಬ್‌ನಲ್ಲಿ ಒಂದು ದೊಡ್ಡ ಭಾಷಣ ಮಾಡಿದರು. ಅಂದು ಶ್ರೀ ನರೇಂದ್ರ ಮೋದಿಯವರು ಪ್ರಧಾನಮಂತ್ರಿ ಆಗಿರಲಿಲ್ಲ. ಅವರೇನು ಹೇಳಿದರೆಂದರೆ, 'We are not going to let down our Farmers and Soldiers' ಎಂಬ ಮಾತನ್ನು ಹೇಳಿದರು. 'We will not let down our Farmers' ಎಂಬ ಮಾತನ್ನು ಹೇಳಿದರು. ಇವತ್ತು ಕರ್ನಾಟಕ ರಾಜ್ಯದಲ್ಲಿ ಇದೇ ಸದನದಲ್ಲಿ ನಾವು ಚರ್ಚೆ ಮಾಡಿದ್ದು, ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ, ರೈತರು ಕಷ್ಟದಲ್ಲಿದ್ದು, ಅವರ ಬೆಳೆಗಳಿಗೆ ಸರಿಯಾದ ಬೆಲೆ ಸಿಗುತ್ತಿಲ್ಲ. ಅವರ ಬೆಳೆಗಳಿಗೆ ಬೇಕಾದಂತಹ ನೀರಾವರಿ ಯೋಜನೆಗಳು ಇಲ್ಲ. ಇವತ್ತು ಭೀಕರವಾದ ಬರಗಾಲ ಬಂದಿದೆ. ಕಬ್ಬು ಬೆಳೆಗಾರರಿಗೆ ಸರಿಯಾದ ಬೆಲೆ ಸಿಗದೇ ಅವರು ಕಂಗಾಲಾಗಿದ್ದಾರೆ. ಅವರಿಗೆ ಸಹಾಯ ಮಾಡಿ ಅವರ ಸಾಲವನ್ನು ಮನ್ನಾ ಮಾಡಿ ಎಂದು ಇದೇ ಸದನದಲ್ಲಿ ಹೇಳಿದ್ದರು. ಶ್ರೀ ಎಸ್.ಆರ್. ಪಾಟೀಲರವರು ಇಲ್ಲಿ ಕುಳಿತಿದ್ದಾರೆ. ಅವರು ಸಹಿತ ನಾವು ಒತ್ತಡ ಮಾಡಿದ್ದೆವು. ಅಂದು ಬಿ.ಜೆ.ಪಿಯ ಮಾನ್ಯ ಈಶ್ವರಪ್ಪನವರು ವಿರೋಧಪಕ್ಷದ ನಾಯಕರಾಗಿದ್ದರು. ಇದೇ ಸದನದಲ್ಲಿ ನೀವು ಮೊದಲು ಸಹಕಾರ ಸಂಘಗಳಲ್ಲಿರುವ ರೈತರ ಸಾಲ ಮನ್ನಾ ಮಾಡಿ. ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ರೈತರು ಮಾಡಿರುವ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಾಲ ಮನ್ನಾ ಮಾಡುವಂತಹ ಜವಾಬ್ದಾರಿಯನ್ನು ನಾವು ವಹಿಸಿಕೊಳ್ಳುತ್ತೇವೆ ಎಂಬ ಮಾತನ್ನು ಹೇಳಿದರು. ತಾವು ಹೇಳಿದ ಮಾತಿಗೆ ತಕ್ಕಂತೆ ಮಾನ್ಯ ಸಿದ್ದರಾಮಯ್ಯನವರು ರಾಜ್ಯದ ಮುಖ್ಯಮಂತ್ರಿಗಳಾಗಿ ಸುಮಾರು 8,276 ಕೋಟಿ ರೂಪಾಯಿಗಳನ್ನು, ಸಹಕಾರ ಸಂಘಗಳಲ್ಲಿ ರೈತರು ಪಡೆದಿದ್ದ 50 ಸಾವಿರ ರೂಪಾಯಿವರೆಗಿನ ಸಾಲವನ್ನು ಮನ್ನಾವನ್ನು ಇದೇ ಸದನದಲ್ಲಿ ಪ್ರಕಟ ಮಾಡಿದರು. That day, the Opposition party (BJP) had taken it as a challenge, that they will help the farmers of the State. But, now they have not kept up their words. ನಾನೇಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಇದು ಸರ್ಕಾರದ ಪದ್ಧತಿಗಳ ಬಗ್ಗೆ ಮಾತನಾಡುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಐವನ್ ಡಿ'ಸೋಜಾರವರೆ ಒಂದು ನಿಮಿಷ ಇರಿ. ವಿರೋಧಪಕ್ಷದ ನಾಯಕರು ಎದ್ದಾಗ ಒಂದು ನಿಮಿಷ ಮಾತನಾಡುವುದನ್ನು ನಿಲ್ಲಿಸಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಈಶ್ವರಪ್ಪನವರು ಇಲ್ಲಿ ನಿಂತು ಹೇಳಿದ್ದೇನೆಂದರೆ, ನೀವು ಸಾಲ ಮನ್ನಾವನ್ನು ಮಾಡಿ, ಹೆಚ್ಚುವರಿ ಸಾಲ ಮನ್ನಾ ಮಾಡುವುದು ಅಗತ್ಯವಾದರೆ ನಾವೆಲ್ಲ ಒಟ್ಟಾಗಿ ಕೇಂದ್ರ ಸರ್ಕಾರದ ಬಳಿಗೆ ಹೋಗೋಣ ಎಂದು ಹೇಳಿದ್ದು ಸತ್ಯ. ಅದರರ್ಥ ಸಾಲ ಮನ್ನಾ ಮಾಡುತ್ತೇವೆಂದು ಅಲ್ಲ, ಆ ಹಂತದಲ್ಲಿ ಚರ್ಚೆಯಾಯಿತು. ಆದರೆ ಕೇಂದ್ರ ಸರ್ಕಾರ ಏನು ಹೇಳಿತು ಎಂದರೆ, ಅದು ಪಂಜಾಬ್, ಉತ್ತರ ಪ್ರದೇಶ, ಬಿಹಾರ್ ರಾಜ್ಯಗಳಲ್ಲಿಯೂ ಸಹಿತ ರೈತರು ಸಾಲದ ಸುಳಿಯಲ್ಲಿದ್ದಾರೆ. ಎಲ್ಲಾ ರಾಜ್ಯಗಳಲ್ಲಿಯೂ ಆಯಾಯ ರಾಜ್ಯದವರೇ ರೈತರ ಸಂಪೂರ್ಣ ಸಾಲ ಮನ್ನಾ ಮಾಡಬೇಕೆಂದು ತೀರ್ಮಾನ ಮಾಡಿದರು. ನಮ್ಮ ಸರ್ಕಾರ ಮೊನ್ನೆ ಬಂದಾಗ, ಅಂದರೆ, ನಮಗೆ ಅಧಿಕಾರದಲ್ಲಿ ಮುಂದುವರಿಯಲು ಆಗಲಿಲ್ಲ, ಬಹುಮತದ ಕೊರತೆಯಿಂದ ನೀವು ಅಧಿಕಾರಕ್ಕೆ ಬಂದಿರಿ, ನಿಮಗೆ ಒಳ್ಳೆಯದಾಗಲಿ. ಆದರೆ ಪ್ರಥಮಬಾರಿಗೆ ಮಾನ್ಯ ಬಿ.ಎಸ್. ಯಡಿಯೂರಪ್ಪನವರು ರೈತರ ಸಾಲ ಮನ್ನಾ ಘೋಷಣೆಯನ್ನು ಮಾಡಿದ್ದಾರೆ. ಹಾಗಾಗಿ ಇದು ರಾಜ್ಯದ ಜವಾಬ್ದಾರಿ ಎಂದು ನಾವು ಒಪ್ಪಿಕೊಂಡಿದ್ದೇವೆ, ನೀವು ಸರ್ಕಾರವನ್ನು ನಡೆಸುವಾಗ ನೀವು ಒಪ್ಪಿಕೊಳ್ಳಬೇಕು ಎನ್ನುವುದು ನಮ್ಮ ನಿಲುವಾಗಿದೆ.

**ಶ್ರೀ ಐವನ್ ಡಿ.ಸೋಜಾ:-** ಮಾನ್ಯ ಸಭಾಪತಿಯವರೇ, ನಾನು ಏನನ್ನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ಸರ್ಕಾರದ ಬದ್ಧತೆಗಳು ಹೇಗಿರಬೇಕು ಎಂದು ನನ್ನ ಪ್ರಶ್ನೆ. ನಾನು ಹೇಳಿದ್ದು ನಿಮಗೆ ಕಹಿ ಇರಬಹುದು. ಆದರೆ ನಾನು ಸತ್ಯವನ್ನು ಹೇಳುತ್ತಿದ್ದೇನೆ. ತಾವು ಹೇಳಿದಿರಿ. ಐವತ್ತು ದಿನ ಕಾಯಿರಿ, demonetisation ಮಾಡಿ ನಾವು ಎಲ್ಲಾ ಕಪ್ಪು ಹಣವನ್ನು ತೆಗೆದುಕೊಂಡು ಬಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಡವರ ಖಾತೆಗಳಿಗೆ 15 ಲಕ್ಷ ರೂಪಾಯಿಗಳನ್ನು ಹಾಕುತ್ತೇವೆ ಎಂದು ಹೇಳಿದ್ದಿರಿ. ಅದನ್ನು ನಾವು ನಂಬಿದೆವು. ಆದರೆ ಇವತ್ತಿನವರೆಗೂ ಐದು ಪೈಸೆಯನ್ನೂ ಹಾಕುವುದಕ್ಕೆ ಸಾಧ್ಯವಾಗಿಲ್ಲ.

**ಶ್ರೀ ಎಸ್.ಆರ್. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ವಿರೋಧಪಕ್ಷದ ನಾಯಕರೇ, ಇದು ರಾಜ್ಯ ಸರ್ಕಾರದ ಕರ್ತವ್ಯ, ರಾಜ್ಯ ಸರ್ಕಾರಗಳೇ ರೈತರ ಸಾಲವನ್ನು ಮನ್ನಾ ಮಾಡಬೇಕು, ರೈತರ ಕಷ್ಟಗಳಿಗೆ ಧಾವಿಸಿ ಬರುವಂತಹ ಜವಾಬ್ದಾರಿ ರಾಜ್ಯ ಸರ್ಕಾರಗಳ ಮೇಲಿವೆ ಎಂದು ಹೇಳಿದರು. ಜಗತ್ಪ್ರಸಿದ್ಧವಾದ ಆರ್ಥಿಕ ತಜ್ಞರಾದ ಶ್ರೀ ಮನಮೋಹನ್‌ಸಿಂಗ್ ರವರು ಈ ದೇಶದ ಪ್ರಧಾನಮಂತ್ರಿಯಾಗಿದ್ದಾಗ ಬರಗಾಲ ಇತ್ತು.

(ಮುಂದು).....

(22) 03-07-2018/3-40/ಕೆಹೆಚ್/ಕೆಎಸ್

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ಆರ್. ಪಾಟೀಲ್ (ಮುಂದು)**:- ಜಗತ್ಪ್ರಸಿದ್ಧವಾದಂತಹ ಆರ್ಥಿಕ ತಜ್ಞರಾದ ಡಾ|| ಮನಮೋಹನ್ ಸಿಂಗ್ ರವರು ಈ ದೇಶದ ಪ್ರಧಾನಮಂತ್ರಿಯಾಗಿದ್ದಾಗ ಈ ದೇಶದಲ್ಲಿ ಬರಗಾಲವಿತ್ತು. ಆದರೆ ಅದು ಇಷ್ಟೊಂದು ತೀವ್ರವಾದ ಬರಗಾಲವಾಗಿರಲಿಲ್ಲ. ಆದರೂ ಸಹ ಅವರು ಇಡೀ ರಾಜ್ಯದ ರೈತರು ಸಂಕಷ್ಟಕ್ಕೆ ಒಳಗಾಗಿದ್ದಾರೆ ಎಂದು 72 ಸಾವಿರ ಕೋಟಿ ರೂಪಾಯಿಗಳಷ್ಟು ಸಾಲ ಮನ್ನಾ ಮಾಡಿದರು. ಆದರೆ ಅದು ಕೇಂದ್ರ ಸರ್ಕಾರದ ಯೋಜನೆಯಾಗಿರಲಿಲ್ಲ ಎಂಬ ಅಂಶವನ್ನು ತಮ್ಮ ಗಮನಕ್ಕೆ ತರುವುದಕ್ಕಾಗಿ ನಾನು ಈ ಮಾತನ್ನು ಹೇಳಿದ್ದೇನೆ.

**(ಈ ಹಂತದಲ್ಲಿ ಆಡಳಿತ ಪಕ್ಷದ ಮಾನ್ಯ ಸದಸ್ಯರೆಲ್ಲರೂ ಮೇಜು ಕುಟ್ಟಿ ಹರ್ಷವನ್ನು ವ್ಯಕ್ತಪಡಿಸಿದರು)**

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು)**:- ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಕಪ್ಪು ಹಣ Swiss Bank ನಲ್ಲಿ ಜಾಸ್ತಿಯಾಗಿದೆ ಎಂಬ ಬಗ್ಗೆ ವರದಿಗಳು ಬರುತ್ತಿವೆ. Swiss Bank ನಲ್ಲಿ ದುಡ್ಡನ್ನು ತೆಗೆದುಕೊಂಡು ಬಂದು ಕೊಡುತ್ತೇನೆ ಎಂದು ನಮಗೆ ಹೇಳಿದ್ದೀರಿ. ಅದನ್ನು ನಾವು ನಂಬಿಕೊಂಡಿದ್ದೇವೆ. ಇವತ್ತಿನ ದಿವಸ Swiss Bank ನಲ್ಲಿ ದುಡ್ಡು ಜಾಸ್ತಿ ಇದೆ ಎಂದು ವರದಿಗಳು ಬರುತ್ತಿವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು**:- ಶ್ರೀ ಐವನ್ ಡಿ'ಸೋಜಾ ರವರೇ ಈ ಕಡೆ ಮಾತನಾಡಿ. ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರ ಕಡೆ ನೋಡಿಕೊಂಡು ಮಾತನಾಡಬೇಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು)**:- ಮಾನ್ಯ ಸಭಾಪತಿಯವರೇ, ಶ್ರೀ ಐವನ್ ಡಿ'ಸೋಜಾ ರವರು ನನಗೆ ಒಳ್ಳೆಯ ಸ್ನೇಹಿತರು. ಅವರು ಅದರ ಭ್ರಮೆಯಲ್ಲಿಯೇ ಮಾತನಾಡಬಾರದು. ಆ ಭ್ರಮೆಯಲ್ಲಿ ಮಾತನಾಡುವುದನ್ನು ಬಿಟ್ಟು ವಾಸ್ತವಿಕವಾಗಿ ಮಾತನಾಡಬೇಕು. ಯಾವತ್ತೂ ಕೂಡ ಪ್ರಧಾನ ಮಂತ್ರಿಯವರು ನಿಮ್ಮ ಅಕೌಂಟಿಗೆ 15 ಲಕ್ಷ ರೂಪಾಯಿಗಳನ್ನು ಹಾಕುತ್ತೇವೆ ಎಂದು ಎಲ್ಲೂ ಹೇಳಿರಲಿಲ್ಲ. ಶ್ರೀ ಐವನ್ ಡಿ'ಸೋಜಾ ಮತ್ತು ಶ್ರೀ ಯು.ಟಿ.ಖಾದರ್‌ರವರು . . . .

(ಗೊಂದಲ)

**ಸಭಾಪತಿಯವರು**:- ಮಾನ್ಯ ಸದಸ್ಯರೇ ಒಂದು ನಿಮಿಷ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೇ, ಇವರು ಎಲ್ಲಿಯವರೆಗೆ ಸೃಷ್ಟಿ ಮಾಡಿದ್ದಾರೆ ಎಂದರೆ ಈ ರೀತಿಯಲ್ಲಿ ಸುಳ್ಳು ಹೇಳುತ್ತಾರೆಂದು ನನಗೆ ಗೊತ್ತಿರಲಿಲ್ಲ. ನೀವು ಸುಳ್ಳು ಹೇಳಿ ಹೇಳಿ ಸತ್ಯವನ್ನು ತಲೆ ಬಾಗಿಸಿಬಿಟ್ಟಿದ್ದೀರಿ.

(ಗೊಂದಲ)

**ಸಭಾಪತಿಯವರು**:- ಮಾನ್ಯ ವಿರೋಧ ಪಕ್ಷದ ನಾಯಕರೇ, ಒಂದು ನಿಮಿಷ. ನಾನು ನಿಮಗೆ ಮುಂದೆ ಮಾತನಾಡುವುದಕ್ಕೆ ಸಮಯವನ್ನು ಕೊಡುವುದಿಲ್ಲವೆಂದು ಈಗಲೇ ಹೇಳಿಬಿಡುತ್ತೇನೆ. ಈಗ ಅವರಿಗೆ ಸಮಯವನ್ನು ಕೊಟ್ಟಿದ್ದೇನೆ. ತಾವು ಪ್ರತಿ ಬಾರಿ ಎದ್ದು ನಿಂತು ಮಾತನಾಡುತ್ತಿದ್ದರೆ ಅವರು ಏನು ಮಾತನಾಡಬೇಕು?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೇ, ರಾಜ್ಯಪಾಲರ ಭಾಷಣದ ಮೇಲಿನ ವಂದನಾರ್ಪಣಾ ನಿರ್ಣಯಕ್ಕೆ ಸಂಬಂಧಪಟ್ಟಂತೆ ಅತ್ಯಂತ ವಿಸ್ತಾರಕ್ಕೆ ಹೋದಾಗ ಮತ್ತು ಕೆಣಕುವುದಕ್ಕೆ ಹೋದಾಗ ಹಾಗೂ ಸತ್ಯಕ್ಕೆ ದೂರವಾದ ವಿಚಾರವನ್ನು ಹೇಳಿದಾಗ, ಕಡತದಲ್ಲಿ ತಪ್ಪು ಅಭಿಪ್ರಾಯ ಬರುವಾಗ ನಾನು ಮಧ್ಯಪ್ರವೇಶ ಮಾಡಬೇಕಲ್ಲವೇ?

"ತಿದ್ದುಪಡಿಯಾಗದ ಪ್ರತಿ: ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಸದಸ್ಯರೇ ನೀವು ಒಮ್ಮೆ ಕೆಣಕುತ್ತೀರಿ. ಆದರೆ ಹಗಲೆಲ್ಲಾ ಕೆಣಕಬೇಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಅದನ್ನೆ ಹೇಳುತ್ತಿರುತ್ತಾರೆ. ತಾವು ಅನುಮತಿಯನ್ನು ಕೊಟ್ಟರೆ ಅದರ ಬಗ್ಗೆ ನನ್ನ ಆಕ್ಷೇಪವಿಲ್ಲ, ಏನು ಬೇಕಾದರೂ ಮಾತನಾಡಿ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ನಾನು ಹೇಳುವುದು ಕಹಿ ಎಂದು ಅನಿಸುತ್ತದೆ ಎಂಬುದು ನನಗೆ ಗೊತ್ತಿದೆ. ಅದನ್ನು ತಾವು ಸಹಿಸುವುದಿಲ್ಲವೆಂಬುದು ಸಹ ನನಗೆ ಗೊತ್ತಿದೆ. ಆದರೆ ಸತ್ಯವನ್ನು ಹೇಳಬೇಕಲ್ಲವೇ?

**ಸಭಾಪತಿಯವರು:-** ಮಾನ್ಯ ಸದಸ್ಯರೇ ತಮ್ಮ ಭಾಷಣದಲ್ಲಿ ಅದನ್ನು ಹೇಳಿ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, The truth is always bitter. ಹಾಗಾಗಿ ನಾನು ಇವತ್ತಿನ ದಿವಸ ಹೇಳುತ್ತಿದ್ದೇನೆ. 'ಸಾಲ ಮನ್ನಾ ಮಾಡುವುದಕ್ಕೆ ನಾವು ಕರೆದುಕೊಂಡು ಹೋಗಿ ಮಾತನಾಡುತ್ತೇವೆ ಎಂದು ಹೇಳಿದ್ದೇವೆ. ಸಾಲ ಮನ್ನಾ ಮಾಡುತ್ತೇವೆ ಎಂದು ಹೇಳಿಲ್ಲ' ಎಂದು ಮಾನ್ಯ ಸದಸ್ಯರು ಹೇಳಿದರು. ಸದಸ್ಯರುಗಳಿಗೆ ಒಂದು live example ಅನ್ನು ಕೊಡುತ್ತೇನೆ. ಈಗಾಗಲೇ ನಮ್ಮ ಹಿರಿಯರು ಒಂದು ಮಾತನ್ನು ಹೇಳಿದರು. 72 ಸಾವಿರ ಕೋಟಿ ರೂಪಾಯಿಗಳ ಸಾಲ ಮನ್ನಾ ಮಾಡಿದರಲ್ಲವೇ, ಅದನ್ನು ರೈತರಿಗೆ ತಾವು pass on ಮಾಡಬಹುದಿತ್ತಲ್ಲವೇ, ಅದರ ನಂತರ demonetization ಆಯಿತು. Demonetization ನಂತರ ಕಪ್ಪು ಹಣವನ್ನು ಸಂಗ್ರಹ ಮಾಡಿ, ಬಡವರಿಗೆ, ಕೂಲಿಕಾರ್ಮಿಕರಿಗೆ, ಈ ದೇಶದ ಜನರಿಗೆ ಸಹಾಯವಾಗುತ್ತದೆ ಎಂದು ಎಣಿಸಿದ್ದೆವು. Demonetization ಮಾಡಿದಂತಹ ಸಂದರ್ಭದಲ್ಲಿ ಏನು ಹೇಳಿದ್ದರು ಎಂದರೆ, 50 ದಿನಗಳನ್ನು ಕೊಡಿ, 60 ದಿನಗಳನ್ನು ಕೊಡಿ; ಹೌದು, ಈ ದೇಶದ ರೈತರು ಸಹಿಸಿಕೊಂಡರು. If it is good for the nation, we are ready to sacrifice. ಎಷ್ಟೋ ಜನ ಕಾರ್ಮಿಕರು, ಸಣ್ಣ-ಪುಟ್ಟ ಅಂಗಡಿಯವರು ಅಂಗಡಿಯನ್ನು ಮಾರಿಬಿಟ್ಟು, ಬೇಕಾಬಿಟ್ಟಿಯಾಗಿ ಹೋದರು. ಚಿಕ್ಕ-ಚಿಕ್ಕ ವ್ಯಾಪಾರವನ್ನು ಮಾಡುವವರು ವ್ಯಾಪಾರವನ್ನು ಮಾಡದೇ ಇರುವ ಹಾಗಾಯಿತು. Demonetization ನಿಂದ ದುಡ್ಡಿಲ್ಲ. ಯಾವುದೇ ಕೆಲಸವನ್ನು ಮಾಡುವುದಕ್ಕೂ ದುಡ್ಡಿಲ್ಲ. ಫ್ಯಾಕ್ಟರಿಗಳು ಬಂದ್ ಆಯಿತು. ತರಕಾರಿಯನ್ನು ಮಾರುವವನು ಇಲ್ಲ. ಮಾವಿನ ಹಣ್ಣು ಮಾರುವವನು ಇಲ್ಲ. Seasonal business ಮಾಡುವವನಿಗೆ ದುಡ್ಡಿಲ್ಲ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಲ್ಲಿಯವರೆಗೆ ಅಂದರೆ ಮೀನು ಮಾರುವವನಿಗೆ ಮಾರುಕಟ್ಟೆಯಲ್ಲಿ ಮೀನು ತರುವುದಕ್ಕೆ ದುಡ್ಡು ಇಲ್ಲದಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಲಾಯಿತು. ನಾವು ಇದನ್ನು ಸಹಿಸಿಕೊಂಡೆವು. ಆದರೆ what is the result? ಈ ದೇಶದ ಜನತೆಗೆ ನೀವು ಕೊಟ್ಟಿರುವಂತಹ ಅದರ ಪರಿಣಾಮವೇನು? -ಎಂದು ಕೇಳುವುದಕ್ಕೆ ಬಯಸುತ್ತೇನೆ. A.T.M. (Automated Teller Machine), ಗಳ ಮುಂದೆ ಹೋಗಿ . . .

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು)**:- ಮಾನ್ಯ ಸಭಾಪತಿಯವರೇ, ತಾವೆಲ್ಲಾ ಮೀನು ಮಾರಾಟ ಮಾಡುವವರು, ತರಕಾರಿ ಮಾರಾಟ ಮಾಡುವವರು, ತಮಗೆಲ್ಲಾ ತುಂಬಾ ಕಷ್ಟವಾಗಿದೆಯಲ್ಲವೇ?-ಎಂದು ನಿಮ್ಮ ಪಾರ್ಟಿ ಮಾಜಿ ಸಂಸದರೊಬ್ಬರು ಹೋಗಿ ಕೇಳಿದರು. ಆಗ ಬಡವಳೊಬ್ಬಳು ಏನು ಹೇಳಿದಳೆಂದರೆ, 'ಕೋಟ್ಯಾಂತರ ರೂಪಾಯಿಗಳನ್ನು ಮನೆಯಲ್ಲಿಟ್ಟುಕೊಂಡು ಅವರಿಗೆ ತೊಂದರೆಯಾಗಿರಬಹುದು, ದುಡಿದು ತಿನ್ನುವವರಿಗೆ ನಮಗೇನು ತೊಂದರೆ'?- ಎಂದು ಅವಳು ಕೇಳಿದಳು. ಈ ಸದನದಲ್ಲಿ ಇದರ ಬಗ್ಗೆ ಮೊದಲು ಕೂಡ ಚರ್ಚೆಯಾಗಿತ್ತು. 500 ಕೋಟಿ ರೂಪಾಯಿಗಳನ್ನು ಒಳಗಡೆ ಇಟ್ಟುಕೊಂಡು, ನೋಟು ರದ್ಧತಿಯ ಬಗ್ಗೆ ಸಿಟ್ಟು ಬಂದಿತಲ್ಲವೇ, ಅವರೆಲ್ಲಾ ಬಂದು ಗಲಾಟೆಯನ್ನು ಮಾಡಿದರು. ಆ ಗಲಾಟೆಗೆ ಶ್ರೀ ರಮೇಶ್ ಕುಮಾರ್‌ರವರು ಉತ್ತರವನ್ನು ಕೊಟ್ಟು ಏನು ಹೇಳಿದರೆಂದರೆ 'ಜಾಸ್ತಿ ಇದ್ದವರ ಹತ್ತಿರ ಹೋಯಿತು. ಬಡವರಿಗೆ ಏನು ತೊಂದರೆಯಾಗಲಿಲ್ಲ. ಇದರ ಬಗ್ಗೆ ನನ್ನ ಆಕ್ಷೇಪವೇನು ಇಲ್ಲ' ಎಂದು ಹೇಳಿದರು. ನಿಮ್ಮ ಬಗ್ಗೆ ನಾಲ್ಕು ಜನ ಬೇರೆ ಬೇರೆ ಕಾರಣಕ್ಕೆ ವಿರೋಧವನ್ನು ಮಾಡಿದ್ದಾರೆ. ಅದಕ್ಕೆ ನಿಮಗೇನು ತೊಂದರೆ ಇಲ್ಲ. ಅನಿರೀಕ್ಷಿತ ಕಾರಣದಿಂದ ಶ್ರೀಮಂತರು ತೀರಿ ಹೋದಾಗ . . . .

(ಗೊಂದಲ)

**ಶ್ರೀ ಯು.ಟಿ.ಖಾದರ್ (ಬೆಂಗಳೂರು ನಗರಾಭಿವೃದ್ಧಿ ಮತ್ತು ವಸತಿ ಸಚಿವರು)**:- ಮಾನ್ಯ ಸಭಾಪತಿಯವರೇ, ಬಡವರು ತೀರಿ ಹೋದಾಗ . . .

(ಗೊಂದಲ)

**ಸಭಾಪತಿಯವರು**:- ಮಾನ್ಯ ಸದಸ್ಯರು ಮಾತನಾಡುವಾಗ ಎಲ್ಲರೂ ಮಧ್ಯಪ್ರವೇಶ ಮಾಡಿದರೆ ಸರಿಹೋಗುವುದಿಲ್ಲ. ಮಾನ್ಯ ಸದಸ್ಯರೇ, ಒಂದು ನಿಮಿಷ, ಈಗ ಶ್ರೀ ಎಂ.ನಾರಾಯಣಸ್ವಾಮಿಯವರು ಮಾತನಾಡುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಷ್ಟ್ರೀಯ ಅಧ್ಯಕ್ಷರಾಗಿದ್ದಂತಹ ಶ್ರೀ ಅಮಿತ್ ಶಾ ರವರು co-operative bank ನಲ್ಲಿ ಸುಮಾರು 700 ಕೋಟಿ ರೂಪಾಯಿಗಳು ಬದಲಾವಣೆಯಾಗುತ್ತಿದೆಯೆಂದರೆ ಯಾವ ರೀತಿ ಇದೆ ಎಂದು ಅರ್ಥಮಾಡಿಕೊಳ್ಳಬೇಕು. ಮಾನ್ಯ ಸದಸ್ಯರು ಅದರ ಬಗ್ಗೆ ಮಾತನಾಡುತ್ತಾರೆ. ಅವರಿಗೆ ಸಂಪೂರ್ಣವಾಗಿ ಮಾತನಾಡುವುದಕ್ಕೆ ಬಿಡಬೇಕಷ್ಟೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, I am not going to yield now. ತಾವು ನನಗೆ ಮಾತನಾಡುವುದಕ್ಕೆ ಕಾಲಾವಕಾಶವನ್ನು ಕೊಟ್ಟಿದ್ದೀರಿ. I will complete.

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸದನದ ಸದಸ್ಯರ ಹೆಸರುಗಳನ್ನು ತೆಗೆದುಕೊಳ್ಳುವುದಕ್ಕಿಂತ ಮುಂಚೆ ಇದರಲ್ಲಿ ಶ್ರೀ ಅಮಿತ್ ಶಾ ಮತ್ತು ಶ್ರೀ ನರೇಂದ್ರ ಮೋದಿಯವರ ಹೆಸರು ಪ್ರಸ್ತಾಪವಾಗುತ್ತಿದೆ. ಮಾನ್ಯ ಸದಸ್ಯರು ಭಾಷಣದ ಇತಿ-ಮಿತಿಯನ್ನು ಅರ್ಥ ಮಾಡಿಕೊಂಡು ಭಾಷೆಯ ಪ್ರಯೋಗವನ್ನು ಮಾಡಬೇಕು. ತಾವು ಅದಕ್ಕೆಲ್ಲಾ ಅವಕಾಶವನ್ನು ಕೊಡಬಾರದು.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾವು ಸತ್ಯವನ್ನು ಹೇಳುತ್ತಿದ್ದೇವೆ; ಸಭಾಪತಿಯವರಿಗೆ ಹೇಳುತ್ತಿದ್ದೇವೆ. Demonetization ಬಗ್ಗೆ ಚರ್ಚೆ ಬಂದಂತಹ ಸಂದರ್ಭದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಅದಕ್ಕೆ ಸರ್ಕಾರದವರಾಗಿ ಉತ್ತರವನ್ನು ಕೊಡಬೇಕಲ್ಲವೇ?

(ಗೊಂದಲ)

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸದನದಲ್ಲಿ ಮಾನ್ಯ ಸದಸ್ಯರು ಅರ್ಥಮಾಡಿಕೊಂಡು ಮಾತನಾಡಬೇಕು. ಆದ್ದರಿಂದ ಸದನದಲ್ಲಿ ಮಾತನಾಡುವುದಕ್ಕೆ ಸದಸ್ಯರು ಪೀಠದ ಅನುಮತಿಯನ್ನು ತೆಗೆದುಕೊಂಡು ಮಾತನಾಡಬೇಕಾಗುತ್ತದೆ.

**ಶ್ರೀ ಎಂ.ನಾರಾಯಣಸ್ವಾಮಿ:-** ನಾನು ಮಾನ್ಯ ಸಭಾಪತಿಯವರ ಅನುಮತಿಯನ್ನು ತೆಗೆದುಕೊಂಡು ಮಾತನಾಡುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರಿಗೆ ನಾನು ಮಾತನಾಡುವುದಕ್ಕೆ ಅನುಮತಿಯನ್ನು ಕೊಟ್ಟಿದ್ದೇನೆ. ನಾನು ಹೇಳುವುದನ್ನು ಮಾನ್ಯ ಸದಸ್ಯರೆಲ್ಲರೂ ದಯಮಾಡಿ ಕೇಳಬೇಕು. ನಾನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾತನಾಡುವುದಕ್ಕೆ ಅನುಮತಿಯನ್ನು ಕೊಟ್ಟರೆ ಮಾತನಾಡಿ. ಅನುಮತಿಯನ್ನು ಕೊಡದೇ ಇದ್ದರೆ ಪದೇ ಪದೇ ಎದ್ದು ತೊಂದರೆ ಕೊಡಬೇಡಿ. ನನಗೆ ಗೊತ್ತು, ಯಾರಿಗೆ ಮಾತನಾಡುವುದಕ್ಕೆ ಅನುಮತಿಯನ್ನು ಕೊಡಬೇಕು; ಯಾರಿಗೆ ಅನುಮತಿಯನ್ನು ಕೊಡಬಾರದು ಎಂದು ನನಗೆ ಗೊತ್ತಾಗುತ್ತದೆ. ನಾನು ಅನುಮತಿಯನ್ನು ಕೊಟ್ಟಾಗ ಮಾತ್ರ ಮಾತನಾಡಬೇಕು. ಮಾತನಾಡುತ್ತಿದ್ದವರು yield ಆದಾಗ ಮಾತ್ರ ಮಾತನಾಡಬೇಕು. ಸುಮ್ಮನೆ ಎದ್ದು ಮಾತನಾಡಬೇಡಿ. ಅದು ಕಡತಕ್ಕೆ ಹೋಗುವುದಿಲ್ಲ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ demonetization ಬಗ್ಗೆ ಹೇಳುತ್ತಿದ್ದೇನೆ. 147 ಮಂದಿ ತಮ್ಮ ದುಡ್ಡನ್ನು ತಾವು ತೆಗೆದುಕೊಳ್ಳುವುದಕ್ಕೆ ಹೋಗುವಾಗ A.T.M. ನ ಮುಂದೆ ಕಾಲು ಬುಡಕ್ಕೆ ಬಿದ್ದು ಸಾಯುತ್ತಾರೆ. ಉಪವಾಸ ಇದ್ದು ಸಾಯುತ್ತಾರೆ. ಇದರ ಬಗ್ಗೆ ಏನಾದರೂ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆಯೇ, ಇದರ ಬಗ್ಗೆ ಏನಾದರೂ ಚಿಂತನೆ ನಡೆದಿದೆಯೇ? 'I will not let down our farmers and I will not allow the Soldiers to die', ಎನ್ನುವ ಮಾತನ್ನು ಪ್ರಧಾನ ಮಂತ್ರಿಯವರು ಹೇಳಿದರು. ಅದು ಬಹಳ ದೊಡ್ಡ ಮಾತು. I agree that, we are in need of such a dynamic leader in our Country. ಈಗ ಆಗಿರುವಂತಹದ್ದು ಏನು? ನಮ್ಮ ಊರಿನಲ್ಲಿ ಜನತೆಗೆ ಒಂದು ಅಕೌಂಟ್‌ನ್ನು ತೆರೆಯುವುದಕ್ಕೆ ಹೇಳಿದ್ದರು. ಇದರ ಬಗ್ಗೆ ಒಳ್ಳೆಯ ಕಥೆ ಇದೆ. 'ಜನ್-ಧನ್' ಎಂದು ಇದರ ಘೋಷಣೆ ಏನೆಂದರೆ ಬ್ಯಾಂಕ್‌ಗಳಲ್ಲಿ immediately go and open an account. ಜನರೆಲ್ಲಾ ಹೋಗಿ ಇದರ ಬಗ್ಗೆ ಪ್ರಚಾರ ಮಾಡುವುದು. 'ಜನ್-ಧನ್' ಮಾಡಿ, ಎಂದು ಪ್ರಚಾರ ಮಾಡುವುದು. ಮನೆಯಲ್ಲಿದ್ದ ಮಲಗಿದ್ದ ಅಜ್ಜಿಯಂದಿರು, ಕಷ್ಟದಲ್ಲಿದ್ದವರು, ತಲೆಯ ದಿಂಬಿನ ಅಡಿಯಲ್ಲಿದ್ದ ನೂರು, ಐವತ್ತು ರೂಪಾಯಿಗಳನ್ನು ಎಲ್ಲಾ ತೆಗೆದುಕೊಂಡು ಹೋಗಿ ಬ್ಯಾಂಕುಗಳಲ್ಲಿ ಅಕೌಂಟ್‌ಗಳನ್ನು ಪ್ರಾರಂಭ ಮಾಡಿದ್ದೆ, ಮಾಡಿದ್ದು. ಮೊದಲು ಏನು ಹೇಳಿದ್ದರೆಂದರೆ, soon after opening an account ೫೦೦೦ ರೂಪಾಯಿಗಳು ಸಿಗುತ್ತದೆ ಎಂಬ ಮಾತನ್ನು ಹೇಳಿದರು.

**ಶ್ರೀ ಕೆ.ಬಿ. ಶಾಣಪ್ಪ:-** ಮಾನ್ಯ ಸಭಾಪತಿಯವರೇ, ಅದರ ಬಗ್ಗೆ ಸದನದಲ್ಲಿ ಏಕೆ ಚರ್ಚೆ ಮಾಡುವುದು.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, later sum of Rs.25000 will be deposited to the account ಎಂಬ ಮಾತನ್ನು ಹೇಳಿದರು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಮಾನ್ಯ ಐವನ್ ಡಿ'ಸೋಜಾ ರವರೇ ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡಿ, ದಿಲ್ಲಿಯ ಬಗ್ಗೆ ಮಾತನಾಡಬೇಡಿ.

**ಶ್ರೀ ಕೆ.ಬಿ. ಶಾಣಪ್ಪ:–** ಮಾನ್ಯ ಸಭಾಪತಿಯವರೇ, Point of Order.....

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ನಾನು ಪೂರಕವಾಗಿಯೇ ಮಾತನಾಡುತ್ತಿದ್ದೇನೆ. ನಾನು ಇದು ಹೇಗೆ relevant ಎಂಬುದನ್ನು ಹೇಳುತ್ತೇನೆ.

**ಶ್ರೀ ಕೆ.ಬಿ. ಶಾಣಪ್ಪ:–** ಮಾನ್ಯ ಸಭಾಪತಿಯವರೇ, ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡಿ, ನಂತರ precedent ಬಗ್ಗೆ ಮಾತನಾಡಿಸೋಣ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಶ್ರೀ ಐವನ್ ಡಿ'ಸೋಜಾ ರವರು ಸರ್ಕಾರಕ್ಕೆ ಪೂರಕವಾಗಿ ಮಾತನಾಡುತ್ತಿದ್ದಾರೆ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ರಾಜ್ಯಪಾಲರ ಭಾಷಣದಲ್ಲಿ as far as my knowledge is concerned, I need not restrict myself.

**ಸಭಾಪತಿಯವರು:–** ಮಾನ್ಯ ಸದಸ್ಯರು yield ಆದಾಗ ಮಾತ್ರ ಮಾತನಾಡಬೇಕು. ಮಾನ್ಯ ಸದಸ್ಯರಿಗೆ ಹಗಲೆಲ್ಲ ದಿಲ್ಲಿಗೆ ಹೋಗಬೇಡಿ ಎಂದು ಹೇಳಿದ್ದೇನೆ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ನಮ್ಮ ಜನರ ಬಗ್ಗೆ ಮಾತನಾಡುತ್ತಿದ್ದೇನೆ. ದಿಲ್ಲಿ ಜನರ ಬಗ್ಗೆ ಮಾತನಾಡುತ್ತಿಲ್ಲ. 'ಜನ್-ಧನ್' ಅಕೌಂಟ್‌ನ್ನು ಪ್ರಾರಂಭ ಮಾಡಿ ಎಂದು ಹೇಳಿದರು. ನಮ್ಮ ಜನರೆಲ್ಲಾ ಬ್ಯಾಂಕ್‌ಗಳಿಗೆ ಹೋಗಿ Zero balance Account ಅನ್ನು ಪ್ರಾರಂಭ ಮಾಡಿದರು. Now the Account holders have replied as, 'since the account has not been operated, the account has been closed'. ಇವರು ೫೦೦ ರೂಪಾಯಿ ಅಕೌಂಟಿಗೆ ಹಾಕಿದ್ದು, ದಿವಸಕ್ಕೆ 5 ರೂಪಾಯಿ, ೫೦ ರೂಪಾಯಿ ಕಳೆದು ಕಳೆದು Zero balance ಆಗಿ, ಅಕೌಂಟ್ close ಆಗಿಬಿಟ್ಟಿದೆ. ಜನರಿಗೆ ಮೋಸ ಮಾಡಬಾರದು. Minimum balance maintain ಮಾಡಬೇಕು ಎಂದು ಹೇಳುತ್ತೀರಿ. ಆ ರೀತಿ ಏಕೆ ಮಾಡುತ್ತೀರಿ?

(ಗೊಂದಲ)

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮುಂದು)

**(23)03/07/2018/ಎಸ್‌ಪಿಆರ್/ಜಿ.ಆರ್./3:50**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೆ.ಬಿ. ಶಾಣಪ್ಪ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, this is not the way.

**(ಗೊಂದಲ)**

**ಶ್ರೀ ಕೆ.ಬಿ. ಶಾಣಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಈ ವಿಚಾರವನ್ನು ಸಂಸತ್ತಿನಲ್ಲಿ ಮಾತನಾಡಲಿ. Why should he talk about it here?

**(ಗೊಂದಲ)**

**ಶ್ರೀ ಕೆ.ವಿ.ನಾರಾಯಣಸ್ವಾಮಿ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಿಮಗೆ ಅದನ್ನು ಕೇಳುವುದಕ್ಕಾಗುವುದಿಲ್ಲವೇ?

**(ಗೊಂದಲ)**

**ಶ್ರೀ ಕೆ.ಬಿ. ಶಾಣಪ್ಪ:-** ಮಾನ್ಯ ಸಭಾಪತಿಯವರೇ, ಒಂದು ವೇಳೆ ಅವರು ಮಾನ್ಯ ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡಿದರೆ, we politely accept them. If they deviate and raise the subject which is not before the House, then we will have to enter into the well of the House.

**ಸಭಾಪತಿಯವರು:-** ಮಾನ್ಯ ಸದಸ್ಯರಿಗೆ ಹೀಗೇಯೇ ಮಾತನಾಡಿ ಎಂದು ನಾನು ಹೇಳುವುದಕ್ಕಾಗುವುದಿಲ್ಲ. ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಿ ಎಂದು ನಾನು ಈಗಾಗಲೇ ಹೇಳಿದ್ದೇನೆ. ಹೀಗೆ ಪದೇ ಪದೇ ಎಲ್ಲರೂ ಎದ್ದು ನಿಂತು ಕೊಂಡು ಮಾತನಾಡಿದರೆ, ಯಾರು ಯಾವ ರೀತಿಯಾಗಿ ಮಾತನಾಡಬೇಕು? ನೀವೇ ಹೇಳಿ. ಇದನ್ನೇ ಎಷ್ಟು ಬಾರಿ ಹೇಳುತ್ತೀರಿ?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಜನ್-ಧನ್ ಖಾತೆಯಿಂದ ಮೋಸ ಆಯಿತು ಎಂದು ಹೇಳಿದ್ದಾರೆ.

**ಸಭಾಪತಿಯವರು:-** ನಿಮಗೆ ಮಾತನಾಡಲು ಅವಕಾಶ ನೀಡಿದಾಗ ನೀವು ಮಾತನಾಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಾವು ಸುಮ್ಮನಿರಬೇಕೆ?

**ಸಭಾಪತಿಯವರು:-** ಅದಕ್ಕೆ ನಾನು ಏನು ಮಾಡಬೇಕೆಂದು ನೀವು ಹೇಳುತ್ತೀರಿ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುತ್ತಿರುವುದು ಸರಿಯಲ್ಲ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಸುಳ್ಳು ಮಾತನಾಡುವುದು ಬೇಡ; ಸತ್ಯಾಂಶವನ್ನು ಮಾತನಾಡಲಿ.

**ಶ್ರೀ ಎಸ್.ಆರ್.ಪಾಟೀಲ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರೇ ತಮಗೆ ಮಾತನಾಡಲು ಅವಕಾಶವಿರುತ್ತದೆ. ಆಗ ನೀವು ಉತ್ತರವನ್ನು ನೀಡಿ. You don't obstruct the flow of thoughts. ಮಧ್ಯದಲ್ಲಿ ಮಾತನಾಡಬೇಡಿ. ಮಾನ್ಯ ಶಾಣಪ್ಪನವರು ಹಿರಿಯ ಸದಸ್ಯರಾಗಿದ್ದಾರೆ. ನಾನು ಅವರಿಗೆ ಹೇಳುವುದಕ್ಕೆ ಹೋಗುವುದಿಲ್ಲ.

**(ಗೊಂದಲ)**

ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಾತನಾಡುವಾಗ ದಿಲ್ಲಿಗೆ-ಅಲ್ಲಿಗೆ ಹೋಗುವುದು ಬೇಡ ಎಂಬುದಾಗಿ ಹೇಳಬೇಡಿ. ನನಗೆ 21 ವರ್ಷಗಳ ಅನುಭವವಿದ್ದು, ಮಾನ್ಯ ಸಭಾಪತಿಯವರು ನನಗಿಂತ ಹಿರಿಯರಾಗಿದ್ದಾರೆ. ರಾಜ್ಯಪಾಲರ ವಂದನಾ ನಿರ್ಣಯದ ಬಗ್ಗೆ ಮಾತನಾಡುವಾಗ,. sky is the limit. But, the Member, who speaks....

**(ಗೊಂದಲ)**

ನಾನು ಮಾತನಾಡುವುದನ್ನು ಮೊದಲು ಕೇಳಿ. ನಾನು ನೋಡಿಯೇ ಹೇಳುತ್ತಿದ್ದೇನೆ. ರಾಜ್ಯಪಾಲರ ವಂದನಾ ನಿರ್ಣಯದ ಬಗ್ಗೆ ಮಾತನಾಡುವಾಗ, ಬಹಳ ವಿಸ್ತೃತವಾಗಿ ಚರ್ಚೆಯನ್ನು ಮಾಡಬಹುದು. ಇವತ್ತಿನ ದಿವಸ ನಾನು ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ sky is the limit ಎಂಬ ಮಾತನ್ನು ಹೇಳಿದ್ದೇನೆ. ರಾಜ್ಯಪಾಲರ ವಂದನಾ ನಿರ್ಣಯದ ಬಗ್ಗೆ ಮಾತನಾಡುವಾಗ ವಿಸ್ತೃತವಾಗಿ ಅನೇಕ ವಿಚಾರಗಳನ್ನು ತೆಗೆದುಕೊಂಡು ಮಾತನಾಡಬಹುದು. Relevant ವಿಷಯಗಳನ್ನು ಮಾನ್ಯ ಸದಸ್ಯರು ಕನೆಕ್ಟ್ ಮಾಡುತ್ತಾರೆ. ಮಾನ್ಯ ಸದಸ್ಯರು ಹಾಗೇ ಕನೆಕ್ಟ್ ಮಾಡುವ

ಮೊದಲೇ ಮಾನ್ಯ ವಿರೋಧ ಪಕ್ಷದ ನಾಯಕರು ಪದೇ ಪದೇ ಎದ್ದು ನಿಂತುಕೊಂಡು ಮಾನ್ಯ ಸದಸ್ಯರು ಆ ವಿಚಾರಗಳನ್ನು, ಈ ವಿಚಾರಗಳನ್ನು ಮಾತನಾಡಬಾರದು ಎಂಬುದಾಗಿ ಹೇಳುತ್ತಿದ್ದಾರೆ. ಹೀಗೆ ಮಾಡಿದ್ದಲ್ಲಿ ಮಾತನಾಡುವ ಸದಸ್ಯರಿಗೆ ಇದೇ ರೀತಿಯಾಗಿಯೇ ಮಾತನಾಡಿ ಎಂಬಂತಹ ನಿರ್ದೇಶನವನ್ನು ನೀಡಬೇಕಾಗುತ್ತದೆ. ಇದು ಸರಿಯಾದ ದಾರಿಯಲ್ಲ. ನಾನು ನನ್ನ ಅನುಭವದಿಂದ ಮಾತನಾಡುತ್ತಿದ್ದೇನೆ. ನಾನು ಎಷ್ಟೋ ಬಾರಿ begin ಮಾಡಿದ್ದೇನೆ, ಎಷ್ಟೋ ಬಾರಿ second ಮಾಡಿದ್ದೇನೆ. ನಾನು ಹಲವಾರು ಬಾರಿ ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಮಾತನಾಡಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಈ ವಿಚಾರದ ಬಗ್ಗೆ, ಆ ವಿಚಾರದ ಬಗ್ಗೆ ಮಾತನಾಡಿ, ಇಂತಹ ವಿಚಾರಗಳ ಬಗ್ಗೆಯೇ ಮಾತನಾಡಿ ಎಂದು ಹೇಳಬೇಡಿ. ಮಾನ್ಯ ವಿರೋಧ ಪಕ್ಷದ ಸದಸ್ಯರಾದ ಶ್ರೀ ಆಯನೂರು ಮಂಜುನಾಥ್‌ರವರು ಶ್ರೀ ಅಮಿತ್ ಷಾರವರ ವಿಚಾರಕ್ಕೆ ಸಂಬಂಧಪಟ್ಟಂತೆ ಹೇಳಿರುವ ಮಾತಿನಂತೆ, ಈ ಸದನದ ಸದಸ್ಯರಲ್ಲದವರ ಹೆಸರನ್ನು ಇಲ್ಲಿ ಪ್ರಸ್ತಾಪ ಮಾಡಬಾರದು, because, they cannot defend themselves here, in the House. ಈ ಅಂಶವನ್ನು ನಾವು ಒಪ್ಪಿಕೊಳ್ಳುತ್ತೇನೆ. I am a quite reasonable man. Above the political affiliations, I will speak.

**ಸಭಾಪತಿಯವರು:-** ಮಾನ್ಯ ಶಾಣಪ್ಪನವರು ಹಿರಿಯ ಸದಸ್ಯರಾಗಿದ್ದಾರೆ. ಮಾನ್ಯ ವಿರೋಧ ಪಕ್ಷದ ಸದಸ್ಯರ ಸಲಹೆಯಂತೆ ನಾನು ಆಡಳಿತ ಪಕ್ಷದ ಸದಸ್ಯರಿಗೆ ಹೇಳಿದ್ದೇನೆ.

**ಶ್ರೀ ಕೆ.ಬಿ.ಶಾಣಪ್ಪ:-** ಈ ಸದನದ ಸದಸ್ಯರಲ್ಲದವರ ಹೆಸರನ್ನು ಇಲ್ಲಿ ಪಸ್ತಾಪಿಸಿದರೆ, ಅವರು ಅದನ್ನು ಇಲ್ಲಿ ರಕ್ಷಣೆ ಮಾಡುವುದಕ್ಕಾಗುವುದಿಲ್ಲ. This is not our subject. Let the Hon'ble Member talk about anything pertaining to our State.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದ ಮಾನ್ಯ ಸದಸ್ಯರು ಈ ಸದನದ ಸದಸ್ಯರಲ್ಲದ ಶ್ರೀ ಅಮಿತ್ ಷಾ ರವರ ಹೆಸರನ್ನು ಪ್ರಸ್ತಾಪಿಸಿದ್ದಾರೆ. ಅವರು ಹಾಗೇ ಮಾಡಬಾರದು. ಏಕೆಂದರೆ ಅವರು ಈ ಸದನದಲ್ಲಿ ಉಪಸ್ಥಿತರಿರುವುದಿಲ್ಲ. ಹೀಗಾಗಿ ಅವರು ಅವರ ರಕ್ಷಣೆಯನ್ನು ಮಾಡಿಕೊಳ್ಳುವುದಕ್ಕಾಗುವುದಿಲ್ಲ. ಈ ಅಂಶವನ್ನು ನಾವೂ ಸಹ ಒಪ್ಪಿಕೊಂಡಿದ್ದೇವೆ. ಆದರೆ ನಾವುಗಳು ಮಾತನಾಡವಾಗ ಆ ವಿಚಾರ, ಈ ವಿಚಾರಗಳನ್ನು ಮಾತನಾಡಬೇಡಿ ಎಂದು ವಿರೋಧ ಪಕ್ಷದ ಸದಸ್ಯರುಗಳು ದಯಮಾಡಿ ಪದೇ ಪದೇ ಮಧ್ಯದಲ್ಲಿ ಬಾಯಿ ಹಾಕಿ ಹೇಳಬಾರದು.

**(ಗೊಂದಲ)**

He has just begun now. ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಆಡಳಿತ ಪಕ್ಷದ ಸದಸ್ಯರು ಮಾತನಾಡುತ್ತಾರೆ. ಮಾನ್ಯ ಸದಸ್ಯರು ನಗದು ಅಪಮೌಲ್ಯೀಕರಣ ವಿಷಯವನ್ನು ಮತ್ತೊಂದು ವಿಚಾರಕ್ಕೆ ಕನೆಕ್ಟ್ ಮಾಡುತ್ತಾರೆ. ಆದರೆ ಅವರಿಗೆ ಮಾತನಾಡಲಿಕ್ಕೆ ನೀವು ಅವಕಾಶವನ್ನು ಕೊಡುತ್ತಿಲ್ಲ. He is going to connect the matter.

**(ಗೊಂದಲ)**

ನಿಮಿಷಕ್ಕೊಮ್ಮೆ ವಿರೋಧ ಪಕ್ಷದ ನಾಯಕರು ನಿಂತುಕೊಂಡು ಆಕ್ಷೇಪ ವ್ಯಕ್ತಪಡಿಸುತ್ತಿದ್ದರೆ, ಆಡಳಿತ ಪಕ್ಷದ ಮಾನ್ಯ ಸದಸ್ಯರು ಹೇಗೆ ಮಾತನಾಡಬೇಕು?

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ, ನಾನು ನಿಮ್ಮ ಮಾತನ್ನೂ ಕೇಳುತ್ತೇವೆ, ಅವರ ಮಾತನ್ನೂ ಸಹ ಕೇಳುತ್ತೇವೆ. ಮಾನ್ಯ ಸದಸ್ಯರು ಹೇಳುವುದು ಸರಿಯಾಗಿದೆ ಎಂದರೆ ನಾವು ಕುಳಿತುಕೊಳ್ಳುತ್ತೇವೆ, ಆಕ್ಷೇಪ ವ್ಯಕ್ತಪಡಿಸುವುದಿಲ್ಲ.

**(ಗೊಂದಲ)**

**Sri S.R.PATIL:-** Mr.Chairman Sir, let the Hon'ble Member Sri Shanappa allow Hon'ble Member Sri Ivan D'sa to connect the matter properly.

**(ಗೊಂದಲ)**

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ, ಅವಕಾಶವಿಲ್ಲ, ಮಣ್ಣೂ ಇಲ್ಲ. ಸುಮ್ಮನೇ ಏನೇನೋ ಮಾತನಾಡಲಿಕ್ಕೆ ಹೋಗಬೇಡಿ.

**ಶ್ರೀ ಭೋಜೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದು ಸತ್ಯದ ಅರಿವಾಯಿತು. ಮೊನ್ನೆಯವರೆಗೆ ನಾನೂ ಕೂಡ ಒಬ್ಬ ಸಾರ್ವಜನಿಕ ವ್ಯಕ್ತಿಯಾಗಿದ್ದೆನು. ಇವತ್ತಿನ ದಿವಸ ಈ ಸದನದ ಸದಸ್ಯನಾಗಿ ಒಳಗೆ ಬಂದಿದ್ದೇನೆ. ಸದನದ ಸಮಯವನ್ನು ಶಾಸಕರು ಈ ರೀತಿಯಾಗಿ ಹಾಳು ಮಾಡುತ್ತಿದ್ದಾರೆ ಎಂದು ಸದನದ ಹೊರಗಡೆ ಜನರು ಮಾತನಾಡುತ್ತಾರೆ. ಆದರೆ ನಾನೂ ಸಹ ಈ ಪಟ್ಟಿಗೆ ಸೇರಿದ್ದೇನೆ ಎಂದು ಬಹಳ ದುಃಖವಾಗುತ್ತದೆ.

**(ಗೊಂದಲ)**

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ, ಇವರ ಜಾಣತನವನ್ನು ನಾವು ಪ್ರಶ್ನೆ ಮಾಡುತ್ತಿಲ್ಲ. ದಯಮಾಡಿ ಆಡಳಿತ ಪಕ್ಷದ ಮಾನ್ಯ ಸದಸ್ಯರಿಗೆ ಇಲ್ಲಿನ ವಿಚಾರಗಳನ್ನು ಮಾತನಾಡುವಂತೆ ತಿಳಿಸಿ.

**ಸಭಾಪತಿಯವರು:-** ನಾನು ಹೇಳುವುದನ್ನು ಹೇಳುತ್ತೇನೆ. ಆದರೆ ಆಡಳಿತ ಪಕ್ಷದ ಸದಸ್ಯರು ಮಾತನಾಡುವುದನ್ನು ನಾನು restrict ಮಾಡುವುದಕ್ಕಾಗುವುದಿಲ್ಲ. ನಾನು ಹೀಗೇಯೇ ಮಾತನಾಡಿ ಎಂದು ಹೇಳುವುದಕ್ಕಾಗುವುದಿಲ್ಲ. ಮಾನ್ಯ ಐವನ್ ಡಿ'ಸೋಜಾರವರೇ ನೀವು ಮಾತನಾಡುವುದನ್ನು ಮುಂದುವರೆಸಿ. ಯಾರಿಗೂ ಸಹ ಮಧ್ಯದಲ್ಲಿ ಮಾತನಾಡಲು ನಾನು ಅವಕಾಶವನ್ನು ನೀಡುವುದಿಲ್ಲ.

**(ಗೊಂದಲ)**

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದ ಮಾನ್ಯ ಸದಸ್ಯರಿಗೆ ದೆಹಲಿ ವಿಚಾರವನ್ನು ಬಿಟ್ಟು ಇಲ್ಲಿನ ವಿಚಾರವನ್ನು ಮಾತನಾಡಲು ಹೇಳಿ.

**ಸಭಾಪತಿಯವರು:-** ಅದನ್ನು ನಾನು ಹೇಗೆ ಹೇಳುವುದಕ್ಕಾಗುತ್ತದೆ. ಮಧ್ಯದಲ್ಲಿ ಯಾರೂ ಸಹ ಮಾತನಾಡಬೇಡಿ. ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಐವನ್ ಡಿ'ಸೋಜಾ ರವರೇ ತಾವು ಮಾತನಾಡುವುದನ್ನು ಮುಂದುವರೆಸಿ. ನಾನು ಮಧ್ಯದಲ್ಲಿ ಯಾರಿಗೂ ಸಹ ಮಾತನಾಡಲು ಅವಕಾಶವನ್ನು ನೀಡುವುದಿಲ್ಲ. ಪದೇ ಪದೇ ಮಧ್ಯದಲ್ಲಿ ಏಳಬೇಡಿ.

**ಶ್ರೀ ಐವನ್ ಡಿ'ಸೋಜಾ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನಾನು ಯಾವ ವಿಚಾರವನ್ನು ಮಾತನಾಡಲಿಕ್ಕೆ ಹೊರಟಿದ್ದೇನೆ ಎಂದರೆ, ನನಗೆ ಎಲ್ಲಿಯೋ ಒಂದು ಕಡೆ ಒಂದು ಸರ್ಕಾರ ಈ ರೀತಿಯ ಭರವಸೆಗಳನ್ನು ಕೊಟ್ಟು, ಅದನ್ನು ಜನರಿಗೆ ಈಡೇರಿಸದೇ ಇದ್ದರೆ, Representation of Peoples Act ಅಡಿ cheating ಮಾಡಿದ ಹಾಗೆ ಆಗುತ್ತದೆ ಎಂಬುದಾಗಿ ಹೇಳಲಿಕ್ಕೆ ಹೊರಟಿದ್ದೇನೆ. ನೀವು ಯಾವ ರೀತಿಯ ಭರವಸೆಯನ್ನು ನೀಡುತ್ತೀರಿ? ಜನ್-ಧನ್ ಖಾತೆಯಡಿ ಖಾತೆಯನ್ನು ತೆರೆಯಿರಿ ಎಂಬುದಾಗಿ ನೀವು ಹೇಳುತ್ತೀರಿ. ಅದಕ್ಕೆ 5,000 ರೂಪಾಯಿಗಳಿಂದ 25,000 ರೂಪಾಯಿಗಳವರೆಗೆ ಜಮೆ ಮಾಡಿ ಎಂಬುದಾಗಿ ಹೇಳುತ್ತೀರಿ. ನಗದು ಅಪಮೌಲೀಕರಣ ಮಾಡುತ್ತೀರಿ. ಜನರು ದುಡ್ಡನ್ನು ತೆಗೆದುಕೊಂಡು ಸಾವನ್ನಪ್ಪುತ್ತಾರೆ. ರೈತರ ಸಾಲವನ್ನು ಮನ್ನಾ ಮಾಡುತ್ತೀರಿ. ಇಷ್ಟೆಲ್ಲಾ ಭರವಸೆಗಳನ್ನು ನೀವು ನೀಡುತ್ತೀರಿ. You have not done anything. ಜನರನ್ನು ಮೂರ್ಖರನ್ನಾಗಿ ಮಾಡಿದ್ದೀರಿ ಎಂದು ನನಗೆ ಬೇಸರವಾಗಿದೆ. ಪ್ರಸ್ತುತ

ಸದನದಲ್ಲಿ ಶ್ರೀ ಕೃಷ್ಣಭೈರೇಗೌಡ ರವರು ಉಪಸ್ಥಿತರಿದ್ದಾರೆ. ಅವರು ಈ ಹಿಂದೆ ರಾಜ್ಯದ ಕೃಷಿ ಸಚಿವರಾಗಿದ್ದರು. ನಮ್ಮ ರಾಜ್ಯಕ್ಕೆ ಬರಗಾಲ ಪರಿಸ್ಥಿತಿಯುಂಟಾಯಿತು. ರಾಜ್ಯ ಸರ್ಕಾರವು 4,500/- ಕೋಟಿ ರೂಪಾಯಿಗಳಷ್ಟು ಹಣದ ಬೇಡಿಕೆಯನ್ನಿಟ್ಟಿತ್ತು. ಆದರೆ ಕೇಂದ್ರ ಸರ್ಕಾರವು ಕೊಟ್ಟದ್ದು ಎಷ್ಟು ಹಣ ಎಂಬುದನ್ನು ಹೇಳಿ.

**(ಗೊಂದಲ)**

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಅದು ಯಾವ ನ್ಯಾಯ? ಎಲ್ಲಿಂದ ಎಲ್ಲಿಗೆ ಜೋಡಿಸುತ್ತೀರಿ?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ನೀವು ಈ ರೀತಿಯಾಗಿ ಮಾಡಿದರೆ, ಸದನವನ್ನು ನಡೆಸುವುದಕ್ಕಾಗುವುದಿಲ್ಲ. ಮಧ್ಯದಲ್ಲಿ ಏಕೆ ಮಾತನಾಡುತ್ತೀರಿ. ಅವರಿಗೆ ಮಾತನಾಡಲು ಅವಕಾಶವನ್ನು ನೀಡಿ. ನಿಮಗೆ ಅವಕಾಶವನ್ನು ನೀಡಿದಾಗ ಮಾತನಾಡಿ.

**(ಗೊಂದಲ)**

**ಶ್ರೀ ಲಹರ್‌ಸಿಂಗ್ ಸಿರೋಯಾ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ಅವಕಾಶವನ್ನು ನೀಡಿ. ನಾನು ಅವರ ಪರವಾಗಿ ಮಾತನಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಡಿ'ಸೋಜಾರವರೇ ನೀವು ಮುಂದುವರೆಸಿ. ನಾನು ಬೇರೆಯವರಿಗೆ ಮಾತನಾಡಲು ಅವಕಾಶವನ್ನು ನೀಡುವುದಿಲ್ಲ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದ 146 ತಾಲ್ಲೂಕುಗಳಲ್ಲಿ ಭೀಕರವಾದ ಬರಗಾಲವಿದ್ದಾಗ, ನಾನು ನಿಮ್ಮನ್ನು ಕೇಳಿದ್ದೇವು. Being responsible opposition, ಕೇಂದ್ರದಲ್ಲಿ ನಿಮ್ಮ ಪಕ್ಷವು ಆಡಳಿತದಲ್ಲಿದೆ, ನೀವು ಸ್ವಲ್ಪ ದುಡ್ಡನ್ನು ತಂದು ಕೊಡಿ ಎಂಬುದಾಗಿ ಕೇಳಿದೆವು. ನೀವು ಕೊಟ್ಟಂತಹ ಕಾಣಿಕೆ ಎಷ್ಟು? ಈ ಹಿಂದಿನ ಕೃಷಿ ಸಚಿವರು ಪ್ರಸ್ತುತ ಸದನದಲ್ಲಿ ಉಪಸ್ಥಿತರಿದ್ದಾರೆ. ನಾವು 4,500 ಕೋಟಿ ರೂಪಾಯಿಗಳನ್ನು ಕೇಳಿದರೆ, 1,500 ಕೋಟಿ ರೂಪಾಯಿಗಳನ್ನು ನೀಡಿದ್ದೀರಿ.

**ಸಭಾಪತಿಯವರು:–** ನೀವು ಎಂಬುದಾಗಿ ಹೇಳಬೇಡಿ. ಅದರ ಬದಲಾಗಿ ಕೇಂದ್ರ ಸರ್ಕಾರ ಎಂಬುದಾಗಿ ಹೇಳಿ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಆದರೆ ಬೇರೆ ರಾಜ್ಯಗಳು ಕೇಳಿದ ಮೊತ್ತಕ್ಕಿಂತ ಹೆಚ್ಚಿನ ಮೊತ್ತವನ್ನು ಕೇಂದ್ರ ಸರ್ಕಾರದವರು ನೀಡಿದ್ದಾರೆ.

**(ಗೊಂದಲ)**

**ಸಭಾಪತಿಯವರು :–** ಅವರುಗಳು ಯಾರೂ ಮಾತನಾಡುವುದು ಕಡತಕ್ಕೆ ಹೋಗಬಾರದು.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, 72 ಸಾವಿರ ಕೋಟಿ ರೂಪಾಯಿಗಳಷ್ಟು ರೈತರ ಸಾಲ ಮನ್ನಾ ಮಾಡಿದ್ದೇವೆ ಎಂಬುದಾಗಿ ನಾವು ಕೇಳಿದ್ದೇವೆ. ಆದರೆ ಅದನ್ನು ಮಾಡಲಿಕ್ಕೆ ನಿಮಗೆ ಸಾಧ್ಯವಾಯಿತೇ? ಈ ಅಂಶವನ್ನು ನಾನು ಪ್ರಶ್ನೆ ಮಾಡಲಿಕ್ಕೆ ಹೊರಟಿದ್ದೇನೆ. ನಾನು ಹೇಳಲಿಕ್ಕೆ ಹೊರಟಿರುವುದೇನೆಂದರೆ, ನೀವು ಮತ್ತು ನಾವು, ಒಂದು ಸರ್ಕಾರ ಅಧಿಕಾರಕ್ಕೆ ಬಂದರೆ ಅದರ ಬದ್ಧತೆ ಏನು ಎಂದು ನಾನು ಹೇಳಲಿಕ್ಕೆ ಬಯಸುತ್ತೇನೆ. 2008 ರಿಂದ 2013 ನೇ ಸಾಲಿನ ವರೆಗೆ ಬಿ.ಜೆ.ಪಿ. ಸರ್ಕಾರದ ಆಡಳಿತವಿತ್ತು. 2013 ರಿಂದ 2018 ರ ವರೆಗೆ ಶ್ರೀ ಸಿದ್ಧರಾಮಯ್ಯನವರ ಆಡಳಿತ . . .

**ಸಭಾಪತಿಯವರು:–** ಮಾನ್ಯ ಐವನ್ ಡಿ'ಸೋಜಾರವರೇ ಪ್ರಸ್ತುತ ಅಂಶಗಳ ಬಗ್ಗೆ ಮಾತನಾಡಿ. ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಿ. ಹಿಂದಿನ ವಿಚಾರಗಳ ಬಗ್ಗೆ ಪ್ರಸ್ತಾಪ ಬೇಡ.

**(ಗೊಂದಲ)**

ನೀವು ಮುಂದುವರೆಸಿ. ಸಮಯವನ್ನು ವ್ಯರ್ಥ ಮಾಡಬೇಡಿ. ನೀವು ಯಾವುದನ್ನೂ ಹೋಲಿಕೆ ಮಾಡಲಿಕ್ಕೆ ಹೋಗಬೇಡಿ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ವೈ.ಎ.ನಾರಾಯಣಸ್ವಾಮಿ ರವರು ಮಾತನಾಡಲು ಪ್ರಾರಂಭಿಸಿದರು)**

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಶ್ರೀ ವೈ.ಎ.ನಾರಾಯಣಸ್ವಾಮಿ ರವರು ಮಾತನಾಡಿದ್ದು ಕಡತಕ್ಕೆ ಹೋಗುವುದಿಲ್ಲ.

**(ಮಾನ್ಯ ಸಭಾಪತಿಯವರ ಆದೇಶದ ಮೇರೆಗೆ, ಮಾನ್ಯ ಸದಸ್ಯರಾದ ಶ್ರೀ ವೈ.ಎ.ನಾರಾಯಣಸ್ವಾಮಿ ರವರು ಮಾತನಾಡಿರುವುದನ್ನು ದಾಖಲಿಸಿರುವುದಿಲ್ಲ)**

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ನಾನು ಹೇಳಲಿಕ್ಕೆ ಹೊರಟಿರುವುದೇನೆಂದರೆ, ಈ ರಾಜ್ಯದಲ್ಲಿ 2013 ರಿಂದ 2018 ನೇ ಸಾಲಿನವರೆಗೆ ಸರ್ಕಾರ ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ರೈತರಿಗೆ ಬೇಕಾದಂತಹ ನ್ಯಾಯವನ್ನು ನಾವು ಕೊಟ್ಟಿದ್ದೇವೆ. ಕೃಷಿಕರಿಗೆ ಬೇಕಾದಷ್ಟು ಸ್ಪಂದನೆಯನ್ನು ನಾವು ಮಾಡಿದ್ದೇವೆ. ಕೂಲಿ ಕಾರ್ಮಿಕರಿಗೆ, ಸಮಾಜದ ಕಟ್ಟ ಕಡೆಯ ಜನರಿಗೆ ಅನ್ನ ಭಾಗ್ಯ ಯೋಜನೆಯನ್ನು ಜಾರಿಗೆ ತರುವ ಮುಖಾಂತರ ನಾವು ಜನರಿಗೆ ಸಹಾಯವನ್ನು ಮಾಡಿದ್ದೇವೆ. ಈ ರಾಜ್ಯದ ಜನರು ಎಂದೂ ನಾನು ಸರ್ಕಾರವನ್ನು ಅಧಿಕಾರಕ್ಕೆ ತಂದಿದ್ದೇವೆ, ಈ ಸರ್ಕಾರ ಕೊಟ್ಟ ಭರವಸೆಯನ್ನು ಈಡೇರಿಸಿದೆ ಎನ್ನುವಂತಹ ಸಂತೃಪ್ತಿ ಹಿಂದಿನ ಸರ್ಕಾರಕ್ಕೆ ಇದೆ. ಹೀಗಾಗಿ ಇದು ಹಿನ್ನೋಟ ಎಂದು ನಾನು ಹೇಳಲಿಕ್ಕೆ ಬಯಸುತ್ತೇನೆ. ಈ ವಿಚಾರದಲ್ಲಿ ನಾನು ಕೇಂದ್ರ ಸರ್ಕಾರವನ್ನು ಯಾವ ಕಾರಣಕ್ಕಾಗಿ ಹೋಲಿಕೆ ಮಾಡಿದ್ದೇನೆ ಎಂದರೆ, ಕೇಂದ್ರ ಸರ್ಕಾರವು ಕೂಡ ನಮಗೆ ಭರವಸೆಗಳನ್ನು ಕೊಟ್ಟಿತ್ತು. 'You have not done justice for the people of Karnataka' ಎನ್ನುವಂತಹ ಅಂಶವನ್ನು ನಾನು ಹೇಳಲಿಕ್ಕೆ ಹೊರಟಿದ್ದೇನೆ. ಈ ಮಾತು ಮಾನ್ಯ ವಿರೋಧ ಪಕ್ಷದ ಸದಸ್ಯರುಗಳಿಗೆ ಸಹಿಸುವುದಿಲ್ಲ. ಈ ಮಾತನ್ನು ನಾವು ಪದೇ ಪದೇ ಹೇಳಿದ್ದೇವೆ. ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಬರಬೇಕಾದಂತಹ ಸಾಲವನ್ನಾದರೂ ಕೊಡಿ. ನಮಗೆ ಸಹಾಯವನ್ನು ಮಾಡಿ. ಅದನ್ನು ಮಾಡಲಿಕ್ಕೆ ರಾಜ್ಯದ ವಿರೋಧ ಪಕ್ಷವೂ ಸಂಪೂರ್ಣವಾಗಿ ವಿಫಲತೆ ಕಂಡಿದೆ ನಾನು ಹೇಳಲಿಕ್ಕೆ ಬಯಸುತ್ತೇನೆ.

(ಮುಂದು)

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳ

(024) 03-7-2018 04.00 ಬಿಎಸ್‌ಡಿ/ಜಿಆರ್

**ಶ್ರೀ ಐವನ್ ಡಿ'ಸೋಜಾ (ಮುಂದು)**

ಅಂದರೆ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೆ ಸಹಾಯ ಮಾಡುವುದರಲ್ಲಿ ರಾಜ್ಯದ ವಿರೋಧ ಪಕ್ಷ ಸಂಪೂರ್ಣವಾಗಿ ವಿಫಲತೆಯನ್ನು ಹೊಂದಿದೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ಘನತೆವೆತ್ತ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಈ ಸರ್ಕಾರ ಏನು ಮಾಡಲು ಹೊರಟಿದೆ ಎಂದು ಹೇಳಿದ್ದಾರೆ. ಅದರಲ್ಲಿ ' ಯುವ ಜನರಿಗೆ ಉದ್ಯೋಗ, ಶಿಕ್ಷಣಕ್ಕೆ ಒತ್ತು, ಆರೋಗ್ಯ ವಲಯಕ್ಕೆ ಬಲ ತುಂಬುವುದು ಸೇರಿದಂತೆ ಮುಂತಾದ ಯೋಜನೆಗಳ ಜೊತೆಗೆ ಅವಕಾಶ ವಂಚಿತ ಕಲ್ಯಾಣ ಹಾಗೂ ಮಹಿಳೆಯರ ಸಬಲೀಕರಣಕ್ಕೆ ಪ್ರಮುಖ ಆದ್ಯತೆಗಳು, ಪ್ರಮುಖವಾಗಿ ರೈತರ ಬದುಕಿನಲ್ಲಿ ಸಂತೃಪ್ತಿ ತರಲು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯೋಜನೆಗಳನ್ನು ರೂಪಿಸಲಿದೆ, ಕೃಷಿ ಉತ್ಪನ್ನಗಳಿಗೆ ನ್ಯಾಯೋಚಿತವಾದ ಬೆಲೆ ಖಚಿತಪಡಿಸಲು ಇಡೀ ದೇಶದಲ್ಲಿಯೇ ಪ್ರಥಮ ಬಾರಿಗೆ ಮಾದರಿ ಯೋಜನೆ ಜಾರಿಗೆ ತರುವಂತಹ ಆಸೆ ಆಕಾಂಕ್ಷೆಯನ್ನು ಇಟ್ಟುಕೊಂಡಿದ್ದೇನೆ' ಎನ್ನುವ ಮಾತನ್ನು ಹೇಳಿದ್ದೇವೆ. ಇದನ್ನು ಏಕೆ ಹೇಳಿದ್ದೇವೆಂದರೆ, ಕೇಂದ್ರ ಸರ್ಕಾರದಿಂದ 2 ಕೋಟಿ ಜನರಿಗೆ ಉದ್ಯೋಗ ಸಿಗುತ್ತದೆ ಎಂದು ಕಾಯುತ್ತಿದ್ದೆವು. ಆದರೆ ಉದ್ಯೋಗ ಸಿಗಲಿಲ್ಲ. ಆದರೆ ರಾಜ್ಯ ಸರ್ಕಾರವು ವರ್ಷಕ್ಕೆ 2.5 ಲಕ್ಷ ಉದ್ಯೋಗವನ್ನು ಸೃಷ್ಟಿ ಮಾಡಿ, ವಿಶ್ವ ಬಂಡವಾಳ ಹೂಡಿಕೆಯ ಮೂಲಕ ರಾಜ್ಯಕ್ಕೆ ಹೂಡಿಕೆದಾರರನ್ನು ತಂದಿದೆ. ಇನ್ನು ಇವತ್ತಿಗೂ ನಾವು ಐ.ಟಿ, ಬಿ.ಟಿ., ಯಲ್ಲಿ ವಿಶ್ವದಲ್ಲಿಯೇ ಪ್ರಥಮ ಸ್ಥಾನದಲ್ಲಿದ್ದೇವೆ. ಈ ಕ್ಷೇತ್ರದಲ್ಲಿ ಅನೇಕ ಅಭಿವೃದ್ಧಿಗಳನ್ನು ಮಾಡಿದ್ದು, ಇದನ್ನು ಮುಂದುವರೆಸಿಕೊಂಡು ಹೋಗುವುದು ಸಮ್ಮಿಶ್ರ ಸರ್ಕಾರದ ಮುಖ್ಯ ಯೋಜನೆಯಾಗಿದೆ ಎಂದು ಘೋಷಣೆಯನ್ನು ಮಾಡಿದ್ದೇವೆ. ರಾಜ್ಯಪಾಲರು ತಮ್ಮ ಭಾಷಣದಲ್ಲಿ ಈ ಸರ್ಕಾರವು ರಾಜ್ಯದ ಎಲ್ಲಾ ವರ್ಗಗಳ ಜನರ ಬೇಡಿಕೆಗಳು ಮತ್ತು ನೀಡಿರುವ ಆಶ್ವಾಸನೆಗಳನ್ನು ಈಡೇರಿಸುವಂತಹ ಕೆಲಸಗಳನ್ನು ಆದ್ಯತೆ ಮೇಲೆ ಮಾಡುತ್ತೇವೆ ಎಂದು ಹೇಳಿದ್ದಾರೆ. ರಾಜ್ಯದ ಸಂಪನ್ಮೂಲವನ್ನು ಕ್ರೋಢೀಕರಿಸುವ ಕೆಲಸ ಇರಬಹುದು, ರಾಜ್ಯದ ಅನ್ನದಾತನ ಅಂದರೆ ಪ್ರಮುಖವಾಗಿ ರೈತರ ಬಗ್ಗೆ ಗಮನಹರಿಸಬೇಕು. ಈ ರಾಜ್ಯದಲ್ಲಿ ರೈತರ ಕಷ್ಟಗಳು ಬಹಳ ಇದ್ದು, ಸುಮಾರು 1,10,170 ಲಕ್ಷ ಹೆಕ್ಟೇರ್ ಭೂಮಿ ಬೀಳು ಬಿದ್ದಿದೆ. ಅದರಲ್ಲಿ ಕೃಷಿ ಮಾಡುವ ಅವಕಾಶವನ್ನು ಒದಗಿಸಿಕೊಡಬೇಕಾಗಿದೆ. ರೈತರಿಗೆ ಇಸ್ರೇಲ್ ಮಾದರಿಯಲ್ಲಿ ಕೃಷಿ ಮಾಡಲು ಪ್ರೋತ್ಸಾಹ ನೀಡಲು ಹೊರಟಿದ್ದೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಮಳೆ ಇಲ್ಲದ ರಾಷ್ಟ್ರವಾದ ಇಸ್ರೇಲ್‌ನಲ್ಲಿ ವೈಜ್ಞಾನಿಕ ಬೆಳೆ ಬೆಳೆಸುವ ಮೂಲಕ, ಹನಿ ನೀರಾವರಿ ಮೂಲಕ ಅನೇಕ ಬಗೆಯ ಕೃಷಿ ಮತ್ತು ತೋಟಗಾರಿಕೆ ಬೆಳೆಗಳನ್ನು ಬೆಳೆಸುವ ಪ್ರಯತ್ನಗಳು ಆಗುತ್ತವೆ, ಅದೇ ಮಾದರಿಯಲ್ಲಿ ಕರ್ನಾಟಕದಲ್ಲಿಯೂ ಮಾಡಲು ಹೊರಟಿದ್ದೇವೆ ಎನ್ನುವ ಮಾತುಗಳನ್ನು ರಾಜ್ಯಪಾಲರು ಭಾಷಣದಲ್ಲಿ ಹೇಳಿದ್ದಾರೆ. ಇವತ್ತು ಮಳೆ ಬಾರದೇ, ಕೆಲವು ಕಡೆ ಬೆಳೆ ಇಲ್ಲದೇ ಮೋಡ ಬಿತ್ತನೆ ಕೆಲಸ ಮಾಡುವ ದೊಡ್ಡ ಸವಾಲು ಇದೆ. ಮಳೆ ಇಲ್ಲದೇ ಅನೇಕ ಕಡೆ ರೈತರು ಕಷ್ಟಕ್ಕೆ ಒಳಗಾಗಿದ್ದಾರೆ. ಮಳೆ ಅವಲಂಬಿತ ಕೃಷಿ ಮಾಡಲಾಗದೇ ರೈತರು ಪಡೆದ ಸಾಲವನ್ನು ಕಟ್ಟಲಾಗದೇ ಆತ್ಮಹತ್ಯೆಗೆ ಶರಣಾಗಿರುವುದನ್ನು ಕಂಡಿದ್ದೇವೆ. ಇಂತಹ ವಿಚಾರಗಳಲ್ಲಿ ಪರಿಹಾರ ಹುಡುಕುವ ದಿಸೆಯಲ್ಲಿ ಸರ್ಕಾರವು ಹೆಜ್ಜೆಯನ್ನು ಮುಂದಕ್ಕೆ ಇಟ್ಟಿದೆ. ರಾಜ್ಯದಲ್ಲಿ ಕೃಷಿ ಮತ್ತು ತತ್ಸಂಬಂಧ ಕ್ಷೇತ್ರಕ್ಕೆ ಸುಮಾರು ರೂ.40 ಕೋಟಿಗಳನ್ನು ಮೀಸಲಿಟ್ಟಿದೆ. ಅದೇರೀತಿ ತೋಟಗಾರಿಕೆಗೆ ಸುಮಾರು ರೂ.5,080 ಕೋಟಿಗಳನ್ನು ಮೀಸಲಿಟ್ಟಿದೆ. ಕೃಷಿ ಮತ್ತು ತೋಟಗಾರಿಕೆಗೆ ಹೆಚ್ಚು ಅನುದಾನ ಕೊಡಲು ನಮ್ಮ ಸರ್ಕಾರ ಮುಂದಾಗಿದೆ ಎಂಬ ವಿಷಯವನ್ನು ಗಮನಕ್ಕೆ ತರಲು ಬಯಸುತ್ತೇನೆ. ಇವತ್ತು ಎಲ್ಲರೂ ತೋಟಗಾರಿಕೆ ಬೆಳೆಗಳ ಬಗ್ಗೆ ಮಾತನಾಡಿದರೂ, ನಮ್ಮ ಕರಾವಳಿ ಭಾಗಗಳಲ್ಲಿ ಹಣ ಗಳಿಸುವ ಅತ್ಯಂತ ದೊಡ್ಡ ಬೆಳೆ ಅಡಿಕೆಯನ್ನು ಬೆಳೆಯುತ್ತಾರೆ. ಶಿವಮೊಗ್ಗ ಭಾಗಗಳಲ್ಲಿಯೂ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಡಿಕೆಯನ್ನು ಬೆಳೆಯುತ್ತಾರೆ. ಅಡಿಕೆ ಬೆಳೆಗಾರರು ಸರಿಯಾದ ಬೆಲೆ ಸಿಗದೇ, ಅಡಿಕೆ ಬೆಳೆಗೆ ಕೊಳೆ ರೋಗಗಳು ಬಂದು, ಅಡಿಕೆ ಬೆಳೆಗಾರರ ಕಷ್ಟ-ಕಾರ್ಪಣ್ಯಗಳಿಗೆ ಸ್ಪಂದನೆ ಮಾಡಲಾಗದ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಹಣ ಗಳಿಸುವ ವಾಣಿಜ್ಯ ಅಡಿಕೆ ಬೆಳೆಯನ್ನು 5 ರಾಜ್ಯಗಳು ಅವಲಂಬಿಸಿವೆ. ನಮ್ಮ ದೇಶದಲ್ಲಿ ಉತ್ಪಾದನೆಯಾಗುವ ಶೇ.50 ರಷ್ಟು ಅಡಿಕೆ ಕರ್ನಾಟಕ ರಾಜ್ಯದಲ್ಲಿ ಉತ್ಪಾದನೆಯಾಗುತ್ತದೆ. ಇಡೀ ಪ್ರಪಂಚದ ಶೇ.51 ಅಡಿಕೆ ಭಾರತ ದೇಶದಲ್ಲಿ ಆಗುತ್ತದೆ. ಈ ಚಿಂತನೆಯಲ್ಲಿಯೂ ಕೇಂದ್ರ ಸರ್ಕಾರ ಅಡಿಕೆ ಬೆಳೆಗಾರರ ನೆರವಿಗೆ ಬರಲಿಲ್ಲ ಎಂದು ಹೇಳುವುದಕ್ಕೆ ಬಯಸುತ್ತೇನೆ. ದಿನಾಂಕ 12-12-17ರಂದು ಬಿಹಾರದ ಶಿವಾನ್ ಕ್ಷೇತ್ರದ ಸಂಸದರ ಪ್ರಶ್ನೆಗೆ ಕೇಂದ್ರದ ಆರೋಗ್ಯ ಮತ್ತು ಕಲ್ಯಾಣ ರಾಜ್ಯ ಸಚಿವರು ನೀಡಿರುವ ಲಿಖಿತ ಉತ್ತರದಲ್ಲಿ 'ಸತತವಾಗಿ ಅಡಿಕೆ ಬಳಸುವುದು ಕ್ಯಾನ್ಸರ್‌ಗೆ ಕಾರಣವಾಗುತ್ತದೆ, ಉರಿಪೂತ ದವಡೆಗಳಿಗೆ ಹಾನಿಯುಂಟು ಮಾಡುತ್ತದೆ, ಇದರಲ್ಲಿ ಕ್ಯಾನ್ಸರ್‌ಕಾರಕ ಅಂಶಗಳಿವೆ ಮತ್ತು ಅಡಿಕೆಯಿಂದ ತಯಾರಾಗುವ ಸುಗಂಧಪೂರಿತ ಅಡಿಕೆ ಉತ್ಪನ್ನಗಳ ತಯಾರಿ ಮತ್ತು ಮಾರಾಟವನ್ನು ನಿಷೇಧ ಮಾಡುವಂತೆ ಎಲ್ಲಾ ರಾಜ್ಯಗಳಿಗೆ ಸೂಚನೆ ನೀಡಿದ್ದೇವೆ' ಎಂದು ಹೇಳಿದ್ದಾರೆ. ಇದು ರೈತರ ಸಹಾಯಕ್ಕೆ ಬರುವ ಕೆಲಸವಾಗಿದೆಯೇ? ಪಾರ್ಲಿಮೆಂಟ್ ಸದಸ್ಯರು ಗುಣಾತ್ಮಕವಾಗಿ ಪ್ರೊಟೆಕ್ಟೀವ್ ಸೆಲ್ ಮಾಡಿಕೊಂಡಿದ್ದಾರೆ. ಆದರೆ ಈ ಭಾಗದಿಂದ ಆರಿಸಿ ಹೋಗಿರುವ ಸಂಸದರು ಅಡಿಕೆ ಬೆಳೆಗಾರರ ರಕ್ಷಣೆಗೆ ಬರಲಿಲ್ಲ. ಆದರೆ ರಾಜ್ಯ ಸರ್ಕಾರವು ಅವರನ್ನು ರಕ್ಷಣೆ ಮಾಡಬೇಕು ಎಂದು ಹೇಳಿದೆ. ಅಡಿಕೆ ಬೆಳೆಗಳಿಗೆ ಕೊಳೆ ರೋಗ ಬಂದಾಗ ಮಾನ್ಯ ಎಸ್.ಎಂ.ಕೃಷ್ಣಾರವರ ಸರ್ಕಾರವು ರೂ.10 ಕೋಟಿಗಳನ್ನು ಪರಿಹಾರವಾಗಿ ಕೊಟ್ಟಿದೆ. ಅದಾದ ನಂತರ ಅಡಿಕೆ ಬೆಳೆಗಾರರ ಮಂಡಳಿಯನ್ನು ರಚನೆ ಮಾಡಲು ಒತ್ತಾಯವನ್ನು ಮಾಡಿತ್ತು. ಇದೇ ಸದನದಲ್ಲಿ ಅಂದಿನ ಸಚಿವರಾಗಿದ್ದ ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ ರವರು ರಾಜ್ಯದಲ್ಲಿ ಅಡಿಕೆ ಮಂಡಳಿಯನ್ನು ರಚನೆ ಮಾಡುವ ಬಗ್ಗೆ ಉತ್ತರ ಕೊಟ್ಟಿದ್ದಾರೆ. ಅಡಿಕೆ ಬೆಳೆಗಾರರಿಗೆ ತೊಂದರೆಯಾದಾಗ ಮತ್ತು ಅಡಿಕೆ ಬೆಳೆ ಕುಸಿತವಾದಾಗ, ಹಾಗೂ ಅಡಿಕೆಯಿಂದ ತಯಾರಾಗುವ ಹೊಸ ಉಪ ಉತ್ಪಾದಕಗಳನ್ನು ಪ್ರೋತ್ಸಾಹಿಸಲು ಮಂಡಳಿ ರಚನೆ ಮಾಡಬೇಕೆಂದು ಹೇಳಿದ್ದಾರೆ. ಇದಕ್ಕೆ ಸರ್ಕಾರ ಬದ್ಧವಾಗಿದೆ ಎಂದು ಹೇಳಬಯಸುತ್ತೇನೆ ಹಾಗೂ ಇದು ನಮ್ಮ ಕಾಮನ್ ಮಿನಿಮಮ್ ಪ್ರೋಗ್ರಾಂನಲ್ಲಿದೆ. ಅದೇರೀತಿ ಮಾನ್ಯ ಸಿದ್ಧರಾಮಯ್ಯನವರ ನೇತೃತ್ವದ ಸರ್ಕಾರ ಇದ್ದಾಗ ಇದೇ ಸದನದಲ್ಲಿ ವಿಶ್ವ ಆರೋಗ್ಯ ಯೋಜನೆ ಬಗ್ಗೆ ದೊಡ್ಡ ಚರ್ಚೆ ನಡೆಯಿತು. ಕರ್ನಾಟಕ ಆರೋಗ್ಯ ಯೋಜನೆಯನ್ನು ಮಾಡಬೇಕು. ಈ ರಾಜ್ಯದ ಎಲ್ಲಾ ಜನರಿಗೆ ಆರೋಗ್ಯ ಭಾಗ್ಯವನ್ನು ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಕೊಡಬೇಕು, ಈ ರಾಜ್ಯದ ಎಲ್ಲಾ ಜನರಿಗೆ ಆರೋಗ್ಯದ ಬಗ್ಗೆ ರಕ್ಷಣೆಯನ್ನು ಕೊಡಬೇಕು.

(ಮುಂದು)

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

25/03.07.2018/4.10/ಹೆಚ್‌ವಿಃಎಂಡಿ

**ಶ್ರೀ ಐವನ್ ಡಿ'ಸೋಜಾ(ಮುಂದುವರೆದದ್ದು):-**

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಿದ್ಧರಾಮಯ್ಯನವರ ನೇತೃತ್ವದ ಸರ್ಕಾರ ಅಧಿಕಾರದಲ್ಲಿದ್ದಾಗ, ಈ ಸದನದಲ್ಲಿ Universal Health Coverage Scheme, ಕರ್ನಾಟಕ ಆರೋಗ್ಯ ಯೋಜನೆಯನ್ನು ಮಾಡಬೇಕೆನ್ನುವ ಬಗ್ಗೆ ದೊಡ್ಡ ಚರ್ಚೆ ನಡೆದಿತ್ತು. ಈ ರಾಜ್ಯದ ಎಲ್ಲ ಜನರಿಗೂ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಚಿಕಿತ್ಸೆ ನೀಡಬೇಕು ಮತ್ತು ಈ ರಾಜ್ಯದ ಎಲ್ಲ ಜನರ ಆರೋಗ್ಯ ರಕ್ಷಣೆ ಮಾಡಬೇಕೆನ್ನುವುದು ಈ ಯೋಜನೆಯ ಉದ್ದೇಶವಾಗಿತ್ತು. ಅಂದಿನ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಸಿದ್ಧರಾಮಯ್ಯನವರು ಹಾಗೂ ಆರೋಗ್ಯ ಸಚಿವರಾಗಿದ್ದ ಮಾನ್ಯ ರಮೇಶ್‌ಕುಮಾರ್‌ರವರು ಜೊತೆಗೂಡಿ ಒಂದು ಕಾನೂನನ್ನು ಜಾರಿಗೆ ತಂದಂತಹ ಸಂದರ್ಭದಲ್ಲಿ ಪರ-ವಿರೋಧ ಚರ್ಚೆಗಳು ನಡೆದವು. ನಮ್ಮ ರಾಜ್ಯದಲ್ಲಿ ದೊರೆಯುತ್ತಿರುವ ವೈದ್ಯಕೀಯ ಚಿಕಿತ್ಸೆ ಬೇರೆ ರಾಜ್ಯಗಳಿಗೆ ಹೋಲಿಸಿದರೆ costliest treatment ಆಗಿದೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಯು.ಟಿ.ಖಾದರ್‌ರವರು, 'ರೋಗಿಗಳು ಆಸ್ಪತ್ರೆಯೊಳಗೆ ಹೋಗುವಾಗ ಎ.ಪಿ.ಎಲ್. ಆಗಿರುತ್ತಾರೆ, ಹೊರಗೆ ಬರುವಾಗ ಬಿ.ಪಿ.ಎಲ್ ಆಗಿರುತ್ತಾರೆ' ಎನ್ನುವ ಮಾತನ್ನು ಹೇಳುತ್ತಿದ್ದರು. ಇಂತಹ ಪರಿಸ್ಥಿತಿ ಇರುವಾಗ ಆಸ್ಪತ್ರೆಗಳನ್ನು streamline ಮಾಡುವಂತಹ ಸಂದರ್ಭದಲ್ಲಿ ಈ ರಾಜ್ಯದಲ್ಲಿ ಅನೇಕರ ವಿರೋಧ ಕಂಡುಬಂದರೂ ಸಹ ಕಾಯಿದೆಗೆ ಸರಿಯಾದಂತಹ ತಿದ್ದುಪಡಿಗಳನ್ನು ತಂದು, ಕಾಯಿದೆಯನ್ನು ಕಾನೂನು ಮಾಡಿ Universal Health Coverage Scheme ಅನ್ನು ರೂಪಿಸಲಾಯಿತು. ಈ ಯೋಜನೆಯನ್ನು ಜಾರಿಗೆ ತರುವ ಬಗ್ಗೆ ಈ ಸರ್ಕಾರ ಬದ್ಧತೆಯನ್ನು ತೋರಿಸಿದೆ. ಈ ಯೋಜನೆ ಜಾರಿಗೊಂಡರೆ, ರಾಜ್ಯದಲ್ಲಿರುವ ಸುಮಾರು 1.43 ಕೋಟಿ ಕುಟುಂಬಗಳಿಗೆ ಈ ಯೋಜನೆ ಮುಟ್ಟುವಂತಾಗುತ್ತದೆ. The Government said, it wants to continue this scheme. ಈ ಯೋಜನೆಯಿಂದಾಗಿ ವಾರ್ಷಿಕವಾಗಿ ಸುಮಾರು ರೂ.1011 ಕೋಟಿಗಳಷ್ಟು ಹೊರೆ ಸರ್ಕಾರದ ಮೇಲೆ ಬರುತ್ತದೆ. ಆದರೆ, ಈ ರಾಜ್ಯದ ಜನತೆಯ ಆರೋಗ್ಯದ ದೃಷ್ಟಿಯಿಂದ ಸರ್ಕಾರ ಈ ಹೊರೆಯನ್ನು ಭರಿಸಲು ಸಿದ್ಧವಾಗಿದೆ. ಈ ರಾಜ್ಯದ ಜನರು ಮೊದಲು ಸರ್ಕಾರಿ ಆಸ್ಪತ್ರೆಗೆ ಹೋಗಬೇಕು ಅಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರಿಯಾದಂತಹ ಚಿಕಿತ್ಸೆ ದೊರೆಯದೇ ಹೋದರೆ, ಅಲ್ಲಿಯ reference ಅನ್ನು ತೆಗೆದುಕೊಂಡು ಯಾವ ಆಸ್ಪತ್ರೆಗೆ ಅವರು refer ಮಾಡುತ್ತಾರೆ, this treatment is not available in the hospital ಎಂದು ಹೇಳಿದರೆ, they are entitled to take treatment in the private hospital.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಐವನ್ ಡಿ'ಸೋಜಾರವರು ಇಡೀ ರಾಜ್ಯದ ಎಲ್ಲ ಜನರಿಗೆ ನೀಡುವ ಹೆಲ್ತ್ ಕಾರ್ಡ್ ಬಗ್ಗೆ ಮಾತನಾಡುತ್ತಿದ್ದಾರೆ, ಯಾವಾಗ ಇದನ್ನು ಅನುಷ್ಠಾನಗೊಳಿಸಲಾಗುತ್ತದೆ ಎನ್ನುವುದರ ಬಗ್ಗೆ ತಿಳಿಸಬೇಕಾಗಿದೆ. 'ವಾಜಪೇಯಿ ಆರೋಗ್ಯಶ್ರೀ ಯೋಜನೆ'ಯಡಿಯಲ್ಲಿ ಯಾರಾದರೂ heart operationಗೆ ಒಳಗಾದರೆ ತಕ್ಷಣವೇ ಒಂದೂವರೆ ಲಕ್ಷ ರೂಪಾಯಿಗಳನ್ನು free ಮಾಡಲಾಗುತ್ತಿತ್ತು. 'ರಾಜೀವ್‌ಗಾಂಧಿ ಆರೋಗ್ಯಶ್ರೀ' ಯೋಜನೆಯಡಿಯಲ್ಲಿ ಒಂದಷ್ಟು ಜನ ಎ.ಪಿ.ಎಲ್.ಕಾರ್ಡುದಾರರಿಗೂ ಸಹ ಆರೋಗ್ಯ ಸೌಲಭ್ಯಗಳನ್ನು ವಿಸ್ತರಿಸಲಾಗಿತ್ತು. ಇದರಿಂದ ಜನರಿಗೆ ಸಹಾಯವಾಗುತ್ತಿತ್ತು. ಇದಕ್ಕೂ ಮೊದಲು ಯಶಸ್ವಿನಿ ಯೋಜನೆಯಿಂದಾಗಿ ಬಡ ಜನರಿಗೆ ಪ್ರಯೋಜನವಾಗುತ್ತಿತ್ತು. ಈ ಯೋಜನೆಯ ಸೌಲಭ್ಯ ಪಡೆದುಕೊಳ್ಳುವ ಬಗ್ಗೆ ಆಸ್ಪತ್ರೆಗಳಲ್ಲಿ ಬೋರ್ಡ್ ಹಾಕುತ್ತಿದ್ದರು, ಜನರು ನೇರವಾಗಿ ಆಸ್ಪತ್ರೆಗಳಿಗೆ ಹೋಗುತ್ತಿದ್ದರು. ಆದರೆ, ಈಗ ಈ ಸರ್ಕಾರ Universal Health Coverage Scheme ಯೋಜನೆಯನ್ನು ಸಹ ಅನುಷ್ಠಾನಗೊಳಿಸಲಿಲ್ಲ ಮತ್ತು ಹಿಂದೆ ಇದ್ದಂತಹ ಆರೋಗ್ಯ ಯೋಜನೆಗಳು ಸಹ ರದ್ದಾಗಿವೆ. ಈಗ ಎಂಥ ಪರಿಸ್ಥಿತಿ ಇದೆ ಎನ್ನುವುದು ಅವರಿಗೆ ಗೊತ್ತಿಲ್ಲ. ಮಾನ್ಯ ಐವನ್ ಡಿ'ಸೋಜಾರವರು ವಾಸ್ತವಿಕ ವಿಚಾರವನ್ನು ಬಿಟ್ಟು ಭ್ರಮೆಯಲ್ಲಿ ಮಾತನಾಡುತ್ತಿದ್ದಾರೆ. ಅವರು ತಂದಿರುವಂತಹ ಕಾಯಿದೆ ಮತ್ತು ನಿಯಮಗಳು ಉತ್ತಮವಾಗಿವೆ. ಆದರೆ, ಅದನ್ನು ಅನುಷ್ಠಾನಗೊಳಿಸುವುದಕ್ಕೆ ಸರ್ಕಾರಕ್ಕೆ ಶಕ್ತಿ ಇಲ್ಲ. ಈಗ ಯಶಸ್ವಿನಿ ಯೋಜನೆ ರದ್ದಾಗಿದೆ. ಎಲ್ಲಿಯೂ ಯಶಸ್ವಿನಿ ಯೋಜನೆ ಮತ್ತು ರಾಜೀವಗಾಂಧಿ ಆರೋಗ್ಯಶ್ರೀ ಯೋಜನೆ ಜಾರಿಯಲ್ಲಿಲ್ಲ. ಮಾನ್ಯ ಆರೋಗ್ಯ ಸಚಿವರು ಸತ್ಯ ಹೇಳುತ್ತಾರೆನ್ನುವ ನಂಬಿಕೆ ನನಗಿಲ್ಲ. ಈಗ ಮಾನ್ಯ ಆರೋಗ್ಯ ಸಚಿವರು ಈ ಯೋಜನೆಯನ್ನು ಅನುಷ್ಠಾನಗೊಳಿಸಬೇಕಾಗಿದೆ.

**ಶ್ರೀ ಕೃಷ್ಣಭೈರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವನಾಗಿ ಅಧಿಕಾರವನ್ನು ವಹಿಸಿಕೊಂಡ ಮೇಲೆ ಈ ಸದನದಲ್ಲಿ ಮೊದಲನೆಯ ಬಾರಿ ಮಾತನಾಡಲು ನಿಂತಿದ್ದೇನೆ. ಮಾನ್ಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೋಟ ಶ್ರೀನಿವಾಸ ಪೂಜಾರಿಯವರು ವಿರೋಧ ಪಕ್ಷದ ನಾಯಕರಾಗಿದ್ದಾರೆ ಅವರಿಗೆ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವನಾಗಿ ನನ್ನ ಕಡೆಯಿಂದ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಸರ್ಕಾರ ನಡೆಸುವ ನಿಟ್ಟಿನಲ್ಲಿ ಅವರ ಸಹಕಾರವನ್ನು ಬಯಸುತ್ತಿದ್ದೇನೆ. ವಿರೋಧ ಪಕ್ಷದ ಸದಸ್ಯರ ಸಲಹೆ ಸೂಚನೆಗಳನ್ನು ಸಕಾರಾತ್ಮಕವಾಗಿ ಪರಿಗಣಿಸಿ ಆದಷ್ಟು ವ್ಯವಸ್ಥಿತವಾಗಿ ಸರ್ಕಾರ ನಡೆಸುವಂತಹ ಪ್ರಯತ್ನವನ್ನು ಮಾಡುತ್ತೇವೆ. ವಿರೋಧ ಪಕ್ಷದವರ ಬಗ್ಗೆ ನಮಗೆ ಗೌರವವಿದೆ ಎನ್ನುವ ಮಾತನ್ನು ತಮ್ಮ ಮೂಲಕ ಎಲ್ಲ ವಿರೋಧ ಪಕ್ಷದ ಸದಸ್ಯರಿಗೆ ತಿಳಿಸಲು ಬಯಸುತ್ತೇನೆ. ಇದು ನನ್ನ ಕರ್ತವ್ಯವೂ ಆಗಿದೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಆರೋಗ್ಯ ಯೋಜನೆಗಳ ಬಗ್ಗೆ ಮಾತನಾಡಿದ್ದಾರೆ. ಕೇಂದ್ರ ಸರ್ಕಾರದವರು ಒಂದು ವಿಸ್ತೃತವಾಗಿರುವಂತಹ Universal Health Coverage Scheme ಎನ್ನುವ ಆರೋಗ್ಯ ಕಾರ್ಯಕ್ರಮವನ್ನು ಜಾರಿಗೆ ತಂದಿದ್ದಾರೆ. ಈ ಯೋಜನೆಯನ್ನು ಘೋಷಣೆ ಮಾಡುವುದಕ್ಕೂ ಮೊದಲೇ ಇಂತಹ ಆರೋಗ್ಯ ಯೋಜನೆಯ ಅವಶ್ಯಕತೆ ಇದೆ ಎನ್ನುವ ಅಂಶವನ್ನು ಮನಗಂಡು ನಮ್ಮ ರಾಜ್ಯ ಸರ್ಕಾರ Universal Health Coverage Scheme ಅನ್ನು ಘೋಷಣೆ ಮಾಡಿತ್ತು. ಇದೊಂದು ಮಹತ್ವಾಕಾಂಕ್ಷಿ ಯೋಜನೆಯಾಗಿದೆ. ಮಾನ್ಯ ಐವನ್ ಡಿ'ಸೋಜಾರವರು ಶ್ರೀ ಯು.ಟಿ.ಖಾದರ್‌ರವರ ಹೇಳಿಕೆಯನ್ನು ಉಲ್ಲೇಖ ಮಾಡಿ ಸೂಚಕವಾಗಿ 'ರೋಗಿಗಳು ಆಸ್ಪತ್ರೆಯೊಳಗೆ ಹೋಗುವಾಗ ಎ.ಪಿ.ಎಲ್. ಆಗಿರುತ್ತಾರೆ, ಹೊರಗೆ ಬರುವಾಗ ಬಿ.ಪಿ.ಎಲ್ ಆಗಿರುತ್ತಾರೆ' ಎನ್ನುವ ಮಾತನ್ನು ಹೇಳಿದ್ದಾರೆ. ಇದು ಅವರ ಅನುಭವದ ಮಾತುಗಳಾಗಿದ್ದರೂ ಸಹ ವಾಸ್ತವವಾಗಿ ಇದರಲ್ಲಿ ಸತ್ಯಾಂಶವಿದೆ. World Health Organization ಭಾರತ ದೇಶದಲ್ಲಿ ಒಂದು ಅಧ್ಯಯನವನ್ನು ಕೈಗೊಂಡು, ಭಾರತದಲ್ಲಿ ಪ್ರತಿ ವರ್ಷ ಶೇಕಡಾ 5ರಷ್ಟು ಜನ ಬಡತನ ರೇಖೆಗಿಂತ ಮೇಲಿದ್ದವರು ಆರೋಗ್ಯ ವೆಚ್ಚದ ಕಾರಣದಿಂದಾಗಿ ಬಡತನ ರೇಖೆಗಿಂತ ಕೆಳಗೆ ಕುಸಿಯುತ್ತಿದ್ದಾರೆ ಎನ್ನುವ ಮಾತನ್ನು ಹೇಳಿದ್ದಾರೆ. ಅವರು ಹೇಳಿರುವ ಮಾತು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುತ್ತಿರುವ ಮಾತು ಎಲ್ಲವೂ ನಿಜ. ಈ ಸಮಸ್ಯೆಯನ್ನು ಪರಿಹರಿಸಬೇಕೆನ್ನುವ ನಿಟ್ಟಿನಲ್ಲಿ ನಾವು Universal Health Coverage Scheme ಯೋಜನೆಯನ್ನು ಪ್ರಾರಂಭ ಮಾಡಿದ್ದೇವೆ. ಯೋಜನೆಯ ಆರಂಭದ ಹಂತದಲ್ಲಿ ಸ್ವಲ್ಪ ಗೊಂದಲಗಳಿವೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿರುವ ಮಾತುಗಳನ್ನು ನಾನು ಅಲ್ಲಗಳೆಯುತ್ತಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಯಶಸ್ವಿನಿ ಯೋಜನೆ, ರಾಜೀವ್‌ಗಾಂಧಿ ಆರೋಗ್ಯಶ್ರೀ ಮತ್ತು ವಾಜಪೇಯಿ ಆರೋಗ್ಯಶ್ರೀ ಈ ಎಲ್ಲ ಯೋಜನೆಗಳನ್ನು ಬಿಡದೇ ಇದರಲ್ಲಿ ಕ್ರೋಡೀಕರಿಸಿಕೊಂಡು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಂದು Universal Health Coverage Scheme ಇರಬೇಕು ಎನ್ನುವುದು ನಮ್ಮ ಉದ್ದೇಶವಾಗಿದೆ. ಭಾರತ ಸರ್ಕಾರದವರು ಯೋಚನೆ ಮಾಡಿ ಈ ಯೋಜನೆಯನ್ನು ಘೋಷಣೆ ಮಾಡುವುದಕ್ಕೂ ಮೊದಲೇ ನಾವು ಈ ಯೋಜನೆಯನ್ನು ತಂದಿದ್ದೇವೆ. ಯಶಸ್ವಿನಿ ಯೋಜನೆಯವರು ಆಸ್ಪತ್ರೆಗಳಿಗೆ ಹೋದಾಗ ಗೊಂದಲದ ವಾತಾವರಣ ನಿರ್ಮಾಣವಾಗಿದೆ. ಈ ಗೊಂದಲವನ್ನು ಪರಿಹರಿಸುತ್ತೇವೆ. ಇದು ನಮ್ಮ ಸರ್ಕಾರದ ದೃಢ ಮತ್ತು ಮಹಾತ್ವಾಕಾಂಕ್ಷಿ ಯೋಜನೆಯಾಗಿದೆ. ಮಾನ್ಯ ರಮೇಶ್‌ಕುಮಾರ್‌ರವರು ಆರೋಗ್ಯ ಸಚಿವರಾಗಿದ್ದಾಗ ಬಡವರಿಗೆ ಆರೋಗ್ಯದ ಸೇವೆ ಸಿಗಬೇಕೆನ್ನುವ ನಿಟ್ಟಿನಲ್ಲಿ ಈ ಯೋಜನೆಯನ್ನು ತಂದಿದ್ದರೂ, ಇರುವಂತಹ ಗೊಂದಲಗಳನ್ನು ನಿವಾರಣೆ ಮಾಡಿಕೊಂಡು ಕೆಲವೇ ತಿಂಗಳುಗಳಲ್ಲಿ ಯಾವುದೇ ಸಮಸ್ಯೆಗಳು ಬರದಂತೆ ಯೋಜನೆಯನ್ನು ಜಾರಿಗೊಳಿಸಲಾಗುತ್ತದೆ. ಈ ಯೋಜನೆ ಕ್ರಾಂತಿಕಾರಿ ದಿಕ್ಕಿನಲ್ಲಿ ಹೆಜ್ಜೆಯನ್ನಿಟ್ಟಿದೆ. ಅದನ್ನು ಮುಂದುವರಿಸಿಕೊಂಡು ಹೋಗುತ್ತಿದ್ದೇವೆಂದು ಮಾನ್ಯ ಐವನ್ ಡಿ'ಸೋಜಾರವರು ಹೇಳುತ್ತಿದ್ದಾರೆ. ಸಮಸ್ಯೆಗಳು ಇಲ್ಲವೆಂದು ಹೇಳಿಲ್ಲ, ಅದನ್ನು ಪರಿಹರಿಸುತ್ತೇವೆ.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಐವನ್ ಡಿ'ಸೋಜಾರವರು ಮಾತನಾಡುತ್ತಿದ್ದ ಸಂದರ್ಭದಲ್ಲಿ ಮೋಡ ಬಿತ್ತನೆಯ ವಿಚಾರವನ್ನು ಪ್ರಸ್ತಾಪ ಮಾಡಿದರು. ಮಾನ್ಯ ಕೃಷಿ ಸಚಿವರು ಸಹ ಈ ಸದನದಲ್ಲಿ ಉಪಸ್ಥಿತರಿದ್ದಾರೆ. Now we are in the month of July. ಮಾಧ್ಯಮಗಳಲ್ಲಿ ಈಗ ಮಳೆ ಚೆನ್ನಾಗಿ ಆಗಿದೆ ಎನ್ನುವ ವರದಿ ಪ್ರಕಟವಾಗುತ್ತಿದೆ. ಇದು ಬಹಳ ಒಳ್ಳೆಯ ವಿಚಾರ. ಆದರೆ, ಉತ್ತರ ಕರ್ನಾಟಕ ಭಾಗದಲ್ಲಿ ಮಳೆಯ ಕೊರತೆ ಇದೆ. ಜೂನ್ ತಿಂಗಳಿಗಿಂತ ಮೊದಲು ಆಗಿರುವ ಮಳೆಯಿಂದಾಗಿ ಬಿತ್ತನೆ ಮಾಡಲಾಗಿದೆ. ಆದರೆ, ಕಳೆದ ಒಂದೂವರೆ ತಿಂಗಳಿಂದ ಅಲ್ಲಿ ಮಳೆಯಾಗಿಲ್ಲ. ಈ ಅಂಶವನ್ನು ಮಾನ್ಯ ಸಚಿವರು ಗಮನಿಸಬೇಕಾಗಿದೆ. ಮೋಡ ಬಿತ್ತನೆಯ ಬಗ್ಗೆ ಹೇಳಬೇಕಾದರೆ, ಮೋಡಗಳು ಇರುವಾಗಲೇ ಮೋಡ ಬಿತ್ತನೆ ಮಾಡಿದರೆ ಮಳೆಯಾಗುತ್ತದೆ. If the Government decides to go for a cloud seeding in the month of August or in the month of September, ಆಗ ಮೋಡಗಳೇ ಇರುವುದಿಲ್ಲ. ಸರ್ಕಾರ ಮೋಡ ಬಿತ್ತನೆ ಮಾಡಬೇಕೆನ್ನುವ ನಿರ್ಧಾರವನ್ನು ಮಾಡಿದ್ದರೆ ಕೂಡಲೇ ಆ ವಿಚಾರವಾಗಿ ಒಂದು ನಿರ್ಣಯವನ್ನು ತೆಗೆದುಕೊಂಡು ಮೋಡ ಬಿತ್ತನೆಯನ್ನು ಮಾಡಿದರೆ, ಈಗ ಬಿತ್ತನೆ ಮಾಡಿರುವ ಶೇಕಡಾ ೫೦ರಷ್ಟು ಬೆಳೆಯಾದರೂ ಕೈಗೆ ಸಿಗುವ ಸಾಧ್ಯತೆಗಳಿವೆ. ಸರ್ಕಾರ ತೀವ್ರಗತಿಯಲ್ಲಿ ಈ ವಿಚಾರವಾಗಿ ಸ್ಪಂದಿಸಬೇಕೆಂದು ಒತ್ತಾಯ ಮಾಡುತ್ತಿದ್ದೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎನ್.ಹೆಚ್.ಶಿವಶಂಕರರೆಡ್ಡಿ(ಕೃಷಿ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಹಲವಾರು ಭಾಗದಲ್ಲಿ ವಾಡಿಕೆ ಮಳೆಗಿಂತ ಹೆಚ್ಚು ಮಳೆಯಾಗಿದೆ. ಕೆಲವು ಭಾಗಗಳಲ್ಲಿ ಆಗಿಲ್ಲ.

**ಸಭಾಪತಿಯವರು:–** ಮಾನ್ಯ ಕೃಷಿ ಸಚಿವರೇ, ಮಾನ್ಯ ಸದಸ್ಯರು ಉತ್ತರ ಕರ್ನಾಟಕ ಭಾಗದ ಬಗ್ಗೆ ಉಲ್ಲೇಖ ಮಾಡುತ್ತಿದ್ದಾರೆ.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:–** ಸನ್ಮಾನ್ಯ ಸಭಾಪತಿಯವರೇ, Comprehensive ಆಗಿ ನೋಡದೇ ಜಿಲ್ಲಾವಾರು ಮಳೆ ಪ್ರಮಾಣವನ್ನು ತರಿಸಿಕೊಂಡು ನೋಡಬೇಕಾಗಿದೆ.

**ಶ್ರೀ ಎನ್.ಹೆಚ್.ಶಿವಶಂಕರರೆಡ್ಡಿ:–** ಸನ್ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಕೆಲವು ಭಾಗಗಳನ್ನು ಬಿಟ್ಟರೆ ಹಲವಾರು ಭಾಗಗಳಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗಿದೆ. ಇನ್ನು 4–5 ದಿನಗಳಲ್ಲಿ ಇಡೀ ರಾಜ್ಯದಲ್ಲಿ ಮಳೆಯಾಗುವ ಮುನ್ಸೂಚನೆ ಇದೆ. ಕೆಲವು ಕಡೆಗಳಲ್ಲಿ ಬಿತ್ತನೆ ಕಾರ್ಯ ಪ್ರಾರಂಭಗೊಂಡಿಲ್ಲ. ಕೆಲವು ಕಡೆಗಳಲ್ಲಿ ಜುಲೈ ಅಂತ್ಯದವರೆಗೆ ಮಳೆಯ ಪ್ರಮಾಣ ಕಡಿಮೆಯಾಗಿದೆ ಎನ್ನುವುದಾದರೆ, ಅಗತ್ಯವಿದ್ದರೆ ಮೋಡ ಬಿತ್ತನೆಯ ಬಗ್ಗೆ ಮಾನ್ಯ ಸದಸ್ಯರು ನೀಡಿರುವ ಸಲಹೆಯ ಬಗ್ಗೆ ಪರಿಶೀಲನೆ ಮಾಡಲಾಗುತ್ತದೆ.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:–** ಸನ್ಮಾನ್ಯ ಸಭಾಪತಿಯವರೇ, ಮಳೆ ಆಗದಿದ್ದರೆ, ಆಗ ಪ್ಲಾನ್ ಮಾಡಿ, ಆಗಸ್ಟ್ ತಿಂಗಳಿನಲ್ಲಿ ಮೋಡ ಬಿತ್ತನೆ ಮಾಡಬಾರದು, ಮೋಡಗಳು ಇದ್ದಾಗ ಮಾತ್ರ ಮೋಡ ಬಿತ್ತನೆ ಮಾಡಬೇಕು ಎನ್ನುವುದಷ್ಟೇ ನನ್ನ ವಿನಂತಿಯಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮುಂದುವರಿದಿದೆ)

(26) 3.7.2018 4.20 : ಪಿಕೆ:ಎಂಡಿ

ಶ್ರೀ ಎನ್.ಹೆಚ್.ಶಿವಶಂಕರ್‌ರೆಡ್ಡಿ :- ಮಾನ್ಯ ಸಭಾಪತಿಯವರೇ, ಈಗಾಗಲೇ weather forecasting report favourable ಆಗಿ ಬಂದಿದೆ.

**ಸಭಾಪತಿಯವರು:-** ಮಾನ್ಯ ಸದಸ್ಯರ ಸಲಹೆಗಳನ್ನೂ ತೆಗೆದುಕೊಳ್ಳಿ.

ಶ್ರೀ ಎನ್.ಹೆಚ್.ಶಿವಶಂಕರ್‌ರೆಡ್ಡಿ:- ಮಾನ್ಯ ಸದಸ್ಯರ ಸಲಹೆಗಳನ್ನು ತೆಗೆದುಕೊಳ್ಳುತ್ತೇವೆ. ಸಾಧ್ಯಾಸಾಧ್ಯತೆಗಳನ್ನು ಪರಿಶೀಲನೆ ಮಾಡಿ ಮುಂದುವರೆಯುತ್ತೇವೆ.

ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:- ಮಾನ್ಯ ಸಭಾಪತಿಯವರೇ, Air Craft ಸಿಗುವುದಿಲ್ಲ, ಅವುಗಳನ್ನು ಬುಕ್ ಮಾಡಬೇಕು ಎಂದು ಹೇಳುವ exercise ಕಳೆದ ಸಲವೇ ಆಗಿದೆ.

ಸಭಾಪತಿಯವರು:- ಮಾನ್ಯ ಸಚಿವರೇ, ಮಾನ್ಯ ಸದಸ್ಯರು ಹೇಳಿರುವ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಮುಂದುವರೆಯಿರಿ.

**ಶ್ರೀ ಎನ್.ಹೆಚ್.ಶಿವಶಂಕರ್‌ರೆಡ್ಡಿ:-** ಹಾಗೆ ಮಾಡುತ್ತೇವೆ.

ಶ್ರೀ ಐವನ್ ಡಿ'ಸೋಜಾ:- ಮಾನ್ಯ ಸಭಾಪತಿಯವರೇ, ನಾನು Universal Health Scheme ಬಗ್ಗೆ ಹೇಳುತ್ತಿದ್ದೆ. ಆ ಸ್ಕೀಮನ್ನು ಜನರ ಅಭಿಪ್ರಾಯದಂತೆ, ಜನರಿಗೆ ಮುಟ್ಟುವ ರೀತಿಯಲ್ಲಿ ಕಾರ್ಯಗತ ಮಾಡುವ ಅವಶ್ಯಕತೆ ಇದೆ.

ಸಭಾಪತಿಯವರು:- ಈ ಮಾತುಗಳನ್ನು ಈಗಾಗಲೇ ಸಚಿವರು ಹೇಳಿದ್ದಾರೆ. ಮುಂದಿನ ವಿಷಯದ ಬಗ್ಗೆ ಹೇಳಿ.

ಶ್ರೀ ಐವನ್ ಡಿ'ಸೋಜಾ:- ಮಾನ್ಯ ಸಭಾಪತಿಯವರೇ, 1.43 ಕೋಟಿ ಜನರಿಗೆ ತಲುಪುವ ಯೋಜನೆ ಇದಾಗಿದೆ. ಆದರೆ ಪ್ರಾರಂಭದಲ್ಲಿ ಸ್ವಲ್ಪ ಸಮಸ್ಯೆ ಕಂಡುಬಂತು.

ಮಾನ್ಯ ಸಭಾಪತಿಯವರೇ, ಇನ್ನು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಕುಡಿಯುವ ನೀರಿನ ಸಮಸ್ಯೆ ರಾಜ್ಯಾದ್ಯಂತ ಇದೆ. ಉಡುಪಿ, ದಕ್ಷಿಣ ಕನ್ನಡ, ಉತ್ತರ ಕನ್ನಡ ಈ ಕರಾವಳಿ ಭಾಗಕ್ಕೆ ಸಂಬಂಧಪಟ್ಟ ಹಾಗೆ, ಪಶ್ಚಿಮ ವಾಹಿನಿ ಯೋಜನೆಯನ್ನು ಜಾರಿಗೆ ತರುತ್ತೇವೆ ಎಂದು ಕಳೆದ ಸರ್ಕಾರ ಆಶ್ವಾಸನೆ ಕೊಟ್ಟಿತ್ತು ಹಾಗೂ ಅದಕ್ಕಾಗಿ ರೂ.200 ಕೋಟಿ ಹಣವನ್ನು ಬಿಡುಗಡೆ ಮಾಡಿತು. ಮತ್ತೆ, ಬೇಕಾದಾಗ ಅಂದರೆ ಪ್ರತಿವರ್ಷ ರಿವೈಸ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿ ರೂ.1500 ಕೋಟಿ ಹಣವನ್ನು ಕುಡಿಯುವ ನೀರಿನ ಯೋಜನೆಗೆ ಮತ್ತು ಅಂತರ್ಜಲವನ್ನು ಮೇಲೆ ತಂದು ಇದರಿಂದ ರೈತರಿಗೆ ಸಹಾಯವಾಗುವ ನಿಟ್ಟಿನಲ್ಲಿ ಸಹಾಯ ಮಾಡುತ್ತೇವೆ ಎಂದು ಹೇಳಿತ್ತು. ಕಾಂಗ್ರೆಸ್ ಪಕ್ಷ 2018–2023ರ ಪ್ರಣಾಳಿಕೆಯಲ್ಲಿ ಏನು ಭರವಸೆ ಕೊಟ್ಟಿತ್ತೋ ಆ ಅಂಶಗಳನ್ನು ಪುನರುಚ್ಚಾರ ಮಾಡಿ, ನೀರಾವರಿಗೆ ದೊಡ್ಡ ಪ್ರಮಾಣದಲ್ಲಿ ಹಣವನ್ನು ಮೀಸಲಾಗಿಡಬೇಕು ಎನ್ನುವ ಉದ್ದೇಶದಿಂದ Common Minimum Programme ನಲ್ಲಿ ತೀರ್ಮಾನ ತೆಗೆದುಕೊಂಡಿದ್ದೇವೆ. ನಮ್ಮ ಅನೇಕ ಮಿತ್ರರು, ಜಾರಿಗೆ ತರುವಂತಹ ಈ ಯೋಜನೆ ಎತ್ತಿನಹೊಳೆ ಯೋಜನೆಗೆ ಪೂರಕವಾಗಿ ತರುವಂಥದ್ದು ಎನ್ನುವ ಮಾತನ್ನು ಹೇಳಿದರು. ಎತ್ತಿನಹೊಳೆ ಪ್ರಾಜೆಕ್ಟ್‌ನಲ್ಲಿ, ಕರಾವಳಿ ಭಾಗದಲ್ಲಿ ಬೀಳುವಂತಹ ಮಳೆಯಿಂದ ಸಿಗುವ ಹೆಚ್ಚುವರಿ ನೀರನ್ನು ಶೇಖರಣೆ ಮಾಡಿ, ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ ಮತ್ತು ಕೋಲಾರ ಈ ಜಿಲ್ಲೆಗಳಿಗೆ ಕುಡಿಯುವ ನೀರನ್ನು ಒದಗಿಸುವ ಅಂಶಗಳಿವೆ. ಇದಕ್ಕೆ ರೂ.15000 ಕೋಟಿಗಳನ್ನು ಮೀಸಲಿಟ್ಟಿದೆ. ಈ ಯೋಜನೆ ಜಾರಿಗೆ ತರಬೇಕಿದೆ. ಈ ಯೋಜನೆಯನ್ನು ಪ್ರಸ್ತುತ ಸರ್ಕಾರ ಮುಂದುವರೆಸಿಕೊಂಡು ಹೋಗಿ, ಈ ಸರ್ಕಾರದ ಅವಧಿಯಲ್ಲೇ ಆದಷ್ಟುಬೇಗ ಪೂರ್ತಿಗೊಳಿಸಲಾಗುತ್ತದೆ ಎನ್ನುವ ಆಶ್ವಾಸನೆಯನ್ನು ರಾಜ್ಯದ ಜನರಿಗೆ ನೀಡಬೇಕಾಗುತ್ತದೆ ಎಂದು ಹೇಳುವುದಕ್ಕೆ ಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ಇವತ್ತು ನಾವು ದೊಡ್ಡ ಸಂಖ್ಯೆಯಲ್ಲಿ ಸಮ್ಮಿಶ್ರ ಸರ್ಕಾರದ ಪರವಾಗಿದ್ದೇವೆ. ವಿರೋಧ ಪಕ್ಷದವರೂ ಕೂಡ, ಈ ಸರ್ಕಾರ ಯಾವರೀತಿ ಮುಂದುವರೆಯುತ್ತಿದೆ ಎಂದು ಉತ್ಸಾಹದಿಂದ ನೋಡುತ್ತಿದ್ದಾರೆ. ಕೆಲವರು, ಈ ಸರ್ಕಾರ ಣಚಿಞಜ-ಔಜಿಜ ಆಗಿಲ್ಲ ಎಂದು ಹೇಳಿದರು. ನಾನು ನಿನ್ನೆ ಚರ್ಚೆಯಲ್ಲಿ ಭಾಗವಹಿಸಿ what do you mean by take-off ಎಂದು ಕೇಳಿದೆ. Take-off ಆಗಿದೆ ಎಂದು ಹೇಳಿದರೆ, you are not flying at all ಎಂದು ಹೇಳುತ್ತಾರೆ. We are flying successfully ಎಂದು ನಾವು ಹೇಳಿದರೆ, no, you are not landing at all ಎನ್ನುತ್ತಾರೆ. Take-off ಎನ್ನುವ ಶಬ್ದವನ್ನು ನಾವು ಎಂದೂ ಸಮರ್ಥನೆ ಮಾಡುವುದಕ್ಕೆ ಸಾಧ್ಯವಿಲ್ಲ. ಈ ಸರ್ಕಾರ ಅಧಿಕಾರಕ್ಕೆ ಬಂದ ಒಂದು ತಿಂಗಳ ಅವಧಿಯಲ್ಲಿ, ಜನಸಾಮಾನ್ಯರಿಗೆ ತೊಂದರೆ ಆಗದ ರೀತಿಯಲ್ಲಿ ನಡೆದುಕೊಂಡು ಹೋಗಿದೆ ಮತ್ತು ಜನಪರ ಯೋಜನೆಗಳನ್ನು ಮುಂದುವರೆಸಿಕೊಂಡು ಹೋಗಿದೆ. ಈ ಸರ್ಕಾರಕ್ಕೆ ಬದ್ಧತೆ ಇದೆ. 2013 ರಿಂದ 2018ರವರೆಗೆ ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿತ್ತೋ ಆ ಕಾರ್ಯಕ್ರಮಗಳನ್ನು ಮುಂದುವರೆಸುವುದರ ಜೊತೆಗೆ, ಜೆಡಿ(ಎಸ್) ಪಕ್ಷದ ಪ್ರಣಾಳಿಕೆಯಲ್ಲಿ ಹೇಳಿಕೊಂಡಿದ್ದಂಥ ಕಾರ್ಯಕ್ರಮಗಳನ್ನು ಕೂಡಿಸಿಕೊಂಡು ಜೊತೆಜೊತೆಯಾಗಿ ಈ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ರಾಜ್ಯದ ಜನತೆಯ ಏಳಿಗೆಗಾಗಿ ಕೆಲಸ ಮಾಡುತ್ತೇವೆ. ಸಮ್ಮಿಶ್ರ ಸರ್ಕಾರದ ಯೋಜನೆಗಳನ್ನು ನಾವು ಜಾರಿಗೆ ತರುತ್ತೇವೆ. ಅದರ ಆಶಯ ಈ ರಾಜ್ಯಪಾಲರ ಭಾಷಣದಲ್ಲಿ ವ್ಯಕ್ತವಾಗಿದೆ. ಆದ್ದರಿಂದ ನಾನು ರಾಜ್ಯಪಾಲರ ಭಾಷಣವನ್ನು ಸಮರ್ಥನೆ ಮಾಡುತ್ತೇನೆ. ಅವರ ಭಾಷಣಕ್ಕೆ ನಾನು ಅಭಿನಂದನೆ ಸಲ್ಲಿಸುತ್ತೇನೆ. ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿರುವಂತಹ ಎಲ್ಲಾ ಅಂಶಗಳನ್ನು ಜಾರಿಗೆ ತರುವಲ್ಲಿ ಚಾಚೂ ತಪ್ಪದೇ ಕೆಲಸ ಮಾಡುತ್ತೇವೆ, ಕಾರ್ಯೋನ್ಮುಖವಾಗುತ್ತೇವೆ. ವಿರೋಧ ಪಕ್ಷದವರು, take-off ಆಗಲಿಲ್ಲ, landing ಆಗಲಿಲ್ಲ, ನೀರಿಲ್ಲ, ಪೆಟ್ರೋಲ್ ಇಲ್ಲ, ಡೀಸೆಲ್ ಇಲ್ಲ ಎಂದು ಹೇಳುವುದನ್ನು ಬಿಟ್ಟು ಸಂಪೂರ್ಣವಾಗಿ ಸಹಕಾರ ನೀಡಬೇಕು ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಎಂ. ಕೆ. ಪ್ರಾಣೇಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ಹೇಳಬಯಸುತ್ತೇನೆ. ಬಹುಶಃ ರಾಜ್ಯ ವಿಧಾನಮಂಡಲವನ್ನು ಉದ್ದೇಶಿಸಿ ಘನತೆವೆತ್ತ ರಾಜ್ಯಪಾಲರು ಮಾಡಿದ ಭಾಷಣದ ಮೇಲೆ ಮಾತನಾಡಬೇಕು ಎಂದು ನನಗೆ ಖಂಡಿತವಾಗಿ ಅನಿಸುತ್ತಿಲ್ಲ. ಇದೊಂದು ನೀರಸವಾದಂತಹ ಭಾಷಣವಾಗಿತ್ತು. ಈಗಾಗಲೇ ಮಾನ್ಯ ಐವನ್ ಡಿ'ಸೋಜಾರವರು ಮಾತನಾಡಿದರು. ಅದಕ್ಕಿಂತ ಮೊದಲು ನನಗೊಂದು ಅನುಮಾನ ಕಾಡುತ್ತಿತ್ತು. ದಕ್ಷಿಣ ಕನ್ನಡ ಭಾಗದಲ್ಲಿ ನಾಲ್ಕರಿಂದ ಐದು ಸೀಟುಗಳನ್ನು ಗೆಲ್ಲುತ್ತೇವೆ ಎಂದು ಯೋಚನೆ ಮಾಡಿದ್ದೆವು. ಆದರೆ ಎಂಟು ಸೀಟುಗಳಲ್ಲಿ ಏಳು ಸೀಟುಗಳನ್ನು ಗೆದ್ದೆವು. ಐವನ್ ಡಿ'ಸೋಜಾರವರು ಆ 7 ಭಾಗಗಳಲ್ಲಿ ತಮ್ಮ ಪ್ರಚಾರ ಭಾಷಣ ಮಾಡಿದ ಸಲುವಾಗಿ ನಾವು ಗೆದ್ದೆವು ಎಂದೆನಿಸುತ್ತಿದೆ. ಇವರು ಹೇಳಿದಂತಹ ಸುಳ್ಳುಗಳನ್ನು ಜನರು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದರು. ಅದೃಷ್ಟವಶಾತ್ ಮಾನ್ಯ ಖಾದರ್‌ರವರು ಚುನಾವಣೆಗೆ ನಿಂತಿದ್ದ ಜಾಗಕ್ಕೆ ಪ್ರಚಾರಕ್ಕೆಂದು ಹೋಗದೇ ಇದ್ದುದರಿಂದ ಅವರು ಗೆದ್ದಿದ್ದಾರೆ. ಹಾಗಾಗಿ ಅಲ್ಲಿ ಒಂದು ಸೀಟನ್ನು ಗೆದ್ದರು.

ಶ್ರೀ ಯು.ಟಿ.ಖಾದರ್:– ನಮ್ಮಲ್ಲಿಗೆ ಬಂದಿದ್ದರು ಮತ್ತು ಪ್ರಚಾರ ಕೂಡ ಮಾಡಿದ್ದರು.

ಸಭಾಪತಿಯವರು:- ಮಾನ್ಯ ಪ್ರಾಣೇಶ್‌ರವರೇ ದಯವಿಟ್ಟು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಿ.

(ಗೊಂದಲ)

ಶ್ರೀ ಎಂ.ಕೆ.ಪ್ರಾಣೇಶ್:- ಮಾನ್ಯ ಸಭಾಪತಿಯವರೇ, ಬಹುಶಃ ಇಡೀ ರಾಜ್ಯದ ಜನ . . .

(ಗೊಂದಲ)

**ಶ್ರೀ ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ರಾಜ್ಯಪಾಲರ ಭಾಷಣ ನೀರಸ ಭಾಷಣ ಎಂದು ಹೇಳಿದರು. ಅವರು ಹಿಂದಿಯಲ್ಲಿ ಭಾಷಣ ಮಾಡಿದ್ದರಿಂದ ಅದು ನೀರಸ ಎಂದೆನಿಸಿರಬೇಕು.

(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಮಾನ್ಯ ಭೋಜೇಗೌಡರು ಹೇಳಿದ ಮಾತುಗಳನ್ನು ಕಡತದಲ್ಲಿ ದಾಖಲಿಸದಂತೆ ಸೂಚನೆ ನೀಡಿದರು)

ಸಭಾಪತಿಯವರು:- ಆಗಾಗ ಮಧ್ಯದಲ್ಲಿ ಎದ್ದುನಿಂತು ಮಾತನಾಡುವುದು ಸರಿಯಲ್ಲ.

ಶ್ರೀ ಎಂ.ಕೆ.ಪ್ರಾಣೇಶ್:-ಮಾನ್ಯ ಸಭಾಪತಿಯವರೇ, ನಾವು ಒಂದು ಉದ್ದೇಶವನ್ನು ಇಟ್ಟುಕೊಂಡು ಜನರ ಮುಂದೆ ಹೋದ ಕಾರಣ ಇಷ್ಟು ಸಂಖ್ಯೆಯಲ್ಲಿ ಗೆಲ್ಲುವುದಕ್ಕೆ ಸಾಧ್ಯವಾಯಿತು. ನಮ್ಮ ರಾಜಕೀಯ ಇತಿಹಾಸದಲ್ಲಿ ಹಲವಾರು ವಿಚಾರಗಳು, ಒಳ್ಳೆಯ ಕೆಲಸ-ಕಾರ್ಯಗಳಿಗೆ ಸೇರ್ಪಡೆ ಆಗಿರುವಂಥದ್ದನ್ನು ನಾವು ನೋಡಿದ್ದೇವೆ. ಅವು ಸುವರ್ಣ ಅಕ್ಷರದಲ್ಲಿ ಬರೆದಿಡುವಂತಹ ವ್ಯವಸ್ಥೆ ಕೂಡ ಆಗಿದೆ. ಆದರೆ, ದುರಾದೃಷ್ಟವೋ ಏನೋ ಇತಿಹಾಸದ ಒಳಗೆ ಕೆಲವು ಆಗಬಾರದ ವಿಚಾರಗಳೂ ಕೂಡ ಆಗಿ ಅದು ಇತಿಹಾಸದ ಪುಟಗಳಲ್ಲಿ ಸೇರುವಂತಹ ವ್ಯವಸ್ಥೆಗಳು ನಮ್ಮ ರಾಜ್ಯದಲ್ಲಿ ಆಗಿವೆ. ಇದಕ್ಕೆ ಉದಾಹರಣೆ ಎಂದರೆ, 104 ಸೀಟುಗಳನ್ನು ಭಾರತೀಯ ಜನತಾ ಪಕ್ಷ ಗೆದ್ದರೂ ಕೂಡ ಅಧಿಕಾರ ಹಿಡಿಯುವುದಕ್ಕೆ ಆಗಲಿಲ್ಲ. ಕೇವಲ 37 ಶಾಸಕರನ್ನು ಹೊಂದಿರುವ ಪಕ್ಷದವರು ಮುಖ್ಯಮಂತ್ರಿ ಆಗಿ ರಾಜ್ಯವನ್ನು ಆಳುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಅದಕ್ಕೆ 78 ಜನ ಗೆದ್ದಿರುವ ಶಾಸಕರು ಹಿಂದಿನಿಂದ ಸಪೋರ್ಟ್ ಮಾಡುವಂತಹ ವ್ಯವಸ್ಥೆಗಳು ನಿರ್ಮಾಣವಾಗಿದೆ. ಇದು ಇತಿಹಾಸದ ಒಳಗೆ ಸೇರಿಕೊಳ್ಳುವಂಥದ್ದು ಒಂದು ಭಾಗ, ಸೇರಿ ಕೊಳ್ಳುವಂಥದ್ದು ಇನ್ನೊಂದು ಭಾಗ . . . .

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಸಾ.ರಾ.ಮಹೇಶ್ (ಪ್ರವಾಸೋದ್ಯಮ ಹಾಗೂ ರೇಷ್ಮೆ ಸಚಿವರು):- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ, ರಾಜಕಾರಣ ಬಿಟ್ಟು ಬೇರೆ ಮಾತನಾಡುವುದಕ್ಕೆ ಹೇಳಿ.

(ಗೊಂದಲ)

(ಈ ಹಂತದಲ್ಲಿ ಸದನದ ಹಲವಾರು ಜನ ಸದಸ್ಯರು ಒಟ್ಟಿಗೆ ಎದ್ದುನಿಂತು ಮಾತನಾಡಿದ ಕಾರಣ, ಅವರು ಮಾತನಾಡಿದ್ದು ಯಾವುದೂ ಕಡತಕ್ಕೆ ಹೋಗಬಾರದು ಎಂದು ಮಾನ್ಯ ಸಭಾಪತಿಯವರು ಸೂಚಿಸಿದರು)

ಸಭಾಪತಿಯವರು:- ಎಲ್ಲರೂ ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಭೋಜೇಗೌಡರೇ ದಯವಿಟ್ಟು ಕುಳಿತುಕೊಳ್ಳಿ. ನನ್ನ ಮಾತು ಕೇಳುತ್ತೀರೋ ಇಲ್ಲವೋ? ಪ್ರಾಸಂಗಿಕವಾಗಿ ಕೆಲವು ಮಾತುಗಳು ಬರುತ್ತವೆ. ಆದರೆ ಅದನ್ನೇ ದೊಡ್ಡದಾಗಿ ಮಾಡಬಾರದು.

(ಮುಂದು . . .)

(027)3-7-2018 4.30 ಡಿಎಸ್-ಎಕೆ

ಶ್ರೀ **ಎಂ.ಕೆ. ಪ್ರಾಣೇಶ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ಇದರಲ್ಲಿ ಹಿರಿಯ ಸದಸ್ಯರು, ಕಿರಿಯ ಸದಸ್ಯರುಗಳು ಇದ್ದಾರೆ. ಎಲ್ಲರೂ ಕೂಡ ಯೋಚನೆ ಮಾಡಬೇಕಾಗಿದೆ. ನಾವು ಪ್ರಥಮವಾಗಿ ಏನನ್ನು ಮಾತನಾಡಿದ್ದೇವೆ, ಇನ್ನೊಬ್ಬರು ಮಾತನಾಡಬೇಕಾದರೆ ಪ್ರಶ್ನೆ ಮಾಡುವಂತಹ ನೈತಿಕತೆಗಳನ್ನು ಅವರುಗಳು ಇಟ್ಟುಕೊಳ್ಳಬೇಕಾಗುತ್ತದೆ. ಹಾಗಾಗಿ ಆ ನೈತಿಕತೆಗಳ ಆಧಾರದ ಮೇಲೆ ಮಾತನಾಡಬೇಕಾಗುತ್ತದೆ. ಅವರು ಮಾತನಾಡುವಾಗ ಒಂದು, ನಾವು ಮಾತನಾಡುವಾಗ ಇನ್ನೊಂದು ಆಗುವುದಕ್ಕೆ ಸಾಧ್ಯವಿಲ್ಲ. ಸದನ ಎಲ್ಲರಿಗೂ ಒಂದೇ. ದೊಡ್ಡವರಿಗೂ ಒಂದೇ, ಕಿರಿಯರಿಗೂ ಒಂದೇ. ಆದರೆ ಗೌರವ ಉಳಿಸುವಂತಹ ಜವಾಬ್ದಾರಿಗಳು ನಮ್ಮ ಮೇಲೆ ಇದೆ. ಮಾತನಾಡಿದಕ್ಕೆ ನಾವು ಮಾತನಾಡಲೇಬೇಕಾಗಿದೆ. ನಾನು ಇವತ್ತು ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಮಾತನಾಡುತ್ತಿದ್ದೇನೆ. ರಾಜ್ಯಪಾಲರ ಭಾಷಣದ ಬಗ್ಗೆ ಏನು ಮಾತನಾಡಬೇಕು?

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

2017ರ ರಾಜ್ಯಪಾಲರ ಭಾಷಣದಲ್ಲಿ ಏನಿತ್ತು ಅದೇ ವಿಷಯ ಈ ಭಾಷಣದಲ್ಲಿಯೂ ಇದೆ. ರಾಜ್ಯಪಾಲರು ಸರ್ಕಾರ ಬರೆದುಕೊಟ್ಟಿರುವುದನ್ನು ಓದಿದ್ದಾರೆ. ಪುನಃ ಅದನ್ನೇ ಮತ್ತೆ ಪ್ರಸ್ತಾಪ ಮಾಡಿ, ಹಿಂದೆಯೂ ಕೂಡ ಇದೇ ವಿಚಾರವನ್ನು ಮಾತನಾಡಿದ್ದೇವೆ. ಮತ್ತೆ ಅದೇ ವಿಚಾರವನ್ನು ಮಾತನಾಡಿ ಎಂದರೆ ಹೇಗೆ ಮಾತನಾಡುವುದಕ್ಕೆ ಸಾಧ್ಯ? ಈ ವಿಚಾರಗಳನ್ನು ಹೇಳಬೇಕಾಗುತ್ತದೆಯಲ್ಲವೆ? ಈಗ ನಮ್ಮ ಸ್ನೇಹಿತರು ಮಾತನಾಡಬೇಕಾದರೆ ಹಿಂದೆ ಇದ್ದಂತಹ ಸರ್ಕಾರ 165 ಕಾರ್ಯಕ್ರಮಗಳನ್ನು ಕೊಟ್ಟಿದೆ, 160 ಕಾರ್ಯಕ್ರಮಗಳನ್ನು ಜಾರಿಗೆ ಮಾಡಿದೆ ಎಂದು ಹೇಳಿದರು. ಹಾಗಾದರೆ ಏಕೆ 78 ಕ್ಷೇತ್ರಗಳಲ್ಲಿ ಮಾತ್ರ ಕಾಂಗ್ರೆಸ್ ಪಕ್ಷ ಗೆಲುವನ್ನು ಸಾಧಿಸಿದೆ, 150 ಸೀಟ್ ಬರಬೇಕಾಗಿತ್ತಲ್ಲವೇ? ಅವರ ಕಾರ್ಯಕ್ರಮಗಳು ಏನು ಪರಿಣಾಮ ಬೀರಿವೆ?

(ಗೊಂದಲ)

ಮಾತನಾಡಬೇಕಾದರೆ ಯೋಚನೆ ಮಾಡಿ ಮಾತನಾಡಬೇಕು. ಜನರಿಗೆ ಏನು ತಲುಪಿದೆ? ಈ ರಾಜ್ಯದಲ್ಲಿ ನೂರಾರು ಸಮಸ್ಯೆಗಳಿವೆ. ರಾಜ್ಯಪಾಲರ ಭಾಷಣದಲ್ಲಿ ಜನರ ಸಮಸ್ಯೆಗಳ ಬಗ್ಗೆ ಎಲ್ಲಿ ಉಲ್ಲೇಖವನ್ನು ಮಾಡಿದ್ದಾರೆ? ಸಮಸ್ಯೆಗಳ ಬಗ್ಗೆ ಉಲ್ಲೇಖವೇ ಇಲ್ಲ.

**ಸಭಾಪತಿಯವರು:–** ಮಾನ್ಯ ಪ್ರಾಣೇಶ್‌ರವರೇ, ರಾಜ್ಯಪಾಲರು ಭಾಷಣ ಮಾಡಿರುವ ಪುಸ್ತಕವನ್ನು ತಮಗೆ ಕೊಟ್ಟಿದ್ದಾರೆ. ನಿಮಗೇನು ಸರಿ ಅನಿಸುತ್ತಿದೆ ಅದರ ಬಗ್ಗೆ ಮಾತನಾಡಿ. ಸರಿಯಿಲ್ಲದಿರುವುದನ್ನು ಮಾತನಾಡಬೇಡಿ.

**ಶ್ರೀ ಎಂ.ಕೆ.ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ತಮ್ಮಲ್ಲಿ ಕಳಕಳಿಯ ಮನವಿ ಏನೆಂದರೆ, ಎಲ್ಲರಿಗೂ ಒಂದೇ ಕಾನೂನನ್ನು ಅಳವಡಿಸಬೇಕಾಗುತ್ತದೆ. ಇದರೊಳಗೆ ಇರುವಂಥದ್ದನ್ನು ಮಾತನಾಡಿ ಎಂದು ತಾವು ನನಗೆ ಹೇಳುತ್ತಿದ್ದೀರಿ. ಹಿಂದೆ ಮಾತನಾಡಿರುವಂಥವರಿಗೆ ಪುಸ್ತಕದ ಬಗ್ಗೆ ಮಾತನಾಡಿ ಎಂದು ತಾವು ಹೇಳಿಲ್ಲ.

(ಗೊಂದಲ)

**ಸಭಾಪತಿಯವರು:–** ಮಾನ್ಯ ಶಾಣಪ್ಪನವರೇ, ಹೀಗಾದರೆ ಸದನ ನಡೆಸುವುದು ಹೇಗೆ?

(ಗೊಂದಲ)

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಂ.ಕೆ.ಪ್ರಾಣೇಶ್:-** ಮಾನ್ಯ ಸಭಾಪತಿಯವರೇ, ರೈತ ನಾಯಕರು ಮುಖ್ಯಮಂತ್ರಿಯಾಗಿ ಸನ್ಮಾನ್ಯ ಯಡಿಯೂರಪ್ಪನವರು ಕೇವಲ ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ರೈತರ ಸಾಲ ಮನ್ನಾ ಮಾಡುತ್ತೇವೆಂದು ಹೇಳಿದರು.

(ಗೊಂದಲ)

**ಸಭಾಪತಿಯವರು:-** ನಾನು ನಿಮಗೆಲ್ಲರಿಗೂ ಕೇಳುತ್ತಿದ್ದೇನೆ. ನೀವು ನನ್ನ ಮಾತನ್ನು ಕೇಳದಿದ್ದರೆ ನಾನು ಸದನವನ್ನು ಮುಂದೂಡುತ್ತೇನೆ. ನೀವೆಲ್ಲರೂ ಬೇಕಾದ್ದು ಮಾತನಾಡುತ್ತಿದ್ದೀರಿ. ಯಾರು ಹೇಳುವವರು, ಕೇಳುವವರು ಇಲ್ಲವೆ?

(ಗೊಂದಲ)

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ, 104 ಸೀಟ್ ಬಂದಿದೆ, 37 ಸೀಟ್ ಬಂದವರಿಗೆ ಬೆಂಬಲ ಕೊಟ್ಟಿದ್ದಾರೆ ಎಂದು ಹೇಳಿದ್ದರಲ್ಲಿ ಏನು ತಪ್ಪಿದೆ?

(ಗೊಂದಲ)

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಬಿಜೆಪಿ ಯವರು ಅಧಿಕಾರಕ್ಕೆ ಬರಬಾರದು ಎಂದು ಜೆಡಿ(ಎಸ್)ಗೆ ಬೆಂಬಲ ಕೊಟ್ಟಿದ್ದೇವೆ. ಅವರಿಗೆ ಏಕೆ ಹೊಟ್ಟೆಕಿಚ್ಚು? ನಾವು ಕೋಮುವಾದಿಗಳನ್ನು ದೂರ ಇಟ್ಟಿದ್ದೇವೆ. ಕರ್ನಾಟಕದ ಇತಿಹಾಸದಲ್ಲಿ ಅವರು ಅಧಿಕಾರಕ್ಕೆ ಬರುವುದೇ ಇಲ್ಲ. ಅವರು ಇದನ್ನು ಬರೆದಿಟ್ಟುಕೊಳ್ಳಲಿ. ಗೋವಾದಲ್ಲಿ ಬಿಜೆಪಿ ಯವರು ಮಾಡಿದ್ದಾರಲ್ಲಾ ಅದನ್ನು ನಾವು ಇಲ್ಲಿ ಮಾಡುವುದಕ್ಕೆ ಬಿಟ್ಟಿಲ್ಲ.

(ಗೊಂದಲ)

**ಶ್ರೀ ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಬಹಳ ಅರ್ಜೆಂಟಾಗಿ ಶ್ರೀ ಬಿ.ಎಸ್.ಯಡಿಯೂರಪ್ಪನವರು ಅಧಿಕಾರವನ್ನು ಸ್ವೀಕಾರ ಮಾಡಿದ್ದಾರಲ್ಲಾ ಏಕೆ ಬಹುಮತ ಸಾಬೀತುಪಡಿಸಲಿಲ್ಲ? ಇವತ್ತು ಏಕೆ ಮಾತನಾಡುತ್ತಿದ್ದಾರೆ? ನಾವು ಬಹುಮತ ಸಾಬೀತು ಮಾಡಿ ಸರ್ಕಾರ ನಡೆಸುತ್ತಿದ್ದೇವೆ.

**ಸಭಾಪತಿಯವರು:-** ಮಾನ್ಯ ಭೋಜೇಗೌಡರೇ, ನೀವು ಏಕೆ ಮಾತನಾಡುತ್ತಿದ್ದೀರಿ, ನೀವು ಉತ್ತರ ಕೊಡುತ್ತಿದ್ದೀರಾ? ಸದನ ನಡೆಯಬೇಕೋ ಬೇಡವೋ? ನೀವು ಏಕೆ ಪ್ರತಿಯೊಂದಕ್ಕೂ ಮಧ್ಯೆ ಎದ್ದು ನಿಂತು ಮಾತನಾಡುತ್ತೀರಿ? ದಯಮಾಡಿ ಯಾರು ಮಧ್ಯೆ ಮಾತನಾಡಬೇಡಿ. ಮಾನ್ಯ ಸದಸ್ಯರುಗಳು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಏನು ಮಾತನಾಡಿದರೂ ಕೂಡ ಸರ್ಕಾರಕ್ಕೆ ಉತ್ತರ ಕೊಡುವ ಎಲ್ಲಾ ಅಧಿಕಾರವಿದೆ. ನೀವು ಉತ್ತರ ಹೇಳುವಾಗ ಹೇಳಿ.

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ನಾನು ತಮಗೆ ವಿನಂತಿ ಮಾಡುತ್ತಿದ್ದೇನೆ.

**ಸಭಾಪತಿಯವರು:-** ತಾವು ಹಿರಿಯ ಸದಸ್ಯರಾಗಿದ್ದೀರಿ, ನನ್ನ ಮಾತುನ್ನು ಕೇಳಿ. ಇನ್ನು ಮಾತನಾಡುವವರು 15 ಮಂದಿ ಇದ್ದಾರೆ.

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ನಾನು ಒಂದೇ ಒಂದು ವಿನಂತಿ ಮಾಡುವುದಕ್ಕೆ ನಿಂತಿದ್ದೇನೆ.

**ಸಭಾಪತಿಯವರು:-** ನಾನು ಬೇಡ ಎಂದ ಮೇಲೆ ಸುಮ್ಮನಿರಬೇಕು. ನಾನು ಬೇಡ ಎಂದರೂ ನೀವು ಮಾತನಾಡುತ್ತೇನೆಂದರೆ ಹೇಗೆ? ನಾನು ತಮಗೆ ಅವಕಾಶ ಕೊಡುವುದಿಲ್ಲ. ಮಾನ್ಯ ಪ್ರಾಣೇಶ್‌ರವರೇ, ತಾವು ಮಾತನಾಡಿ.

**ಶ್ರೀ ಎಂ.ಕೆ.ಪ್ರಾಣೇಶ್:-** ಮಾನ್ಯ ಸಭಾಪತಿಯವರೇ, ನಾನು ಏನಾದರೂ ತಪ್ಪು ಮಾತನಾಡಿದ್ದೇನೆಯೇ? ಇರುವಂತಹ ಸತ್ಯ ವಿಚಾರವನ್ನು ಬಿಟ್ಟು ಬೇರೆ ಮಾತನಾಡಿದ್ದರೆ ನೀವು ಹೇಳಿದರೆ ನಾನು ಈಗಲೇ ಕುಳಿತುಕೊಳ್ಳುತ್ತೇನೆ. ಈ ವ್ಯವಸ್ಥೆಯೊಳಗೆ ಆಗಿರುವಂತಹ ವಿಚಾರವನ್ನು ಮಾತ್ರ ನಾನು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ಏಕೆಂದರೆ, ಇವತ್ತು ಈ ರಾಜ್ಯದಲ್ಲಿ ನೂರಾರು ಸಮಸ್ಯೆಗಳಿವೆ. ಅದರ ಪರಿಹಾರದ ಬಗ್ಗೆ ಎಲ್ಲಿಯೂ ಉಲ್ಲೇಖ ಮಾಡಿಲ್ಲ. ಎಳೆಎಳೆಯಾಗಿ ಬಿಡಿಸುವಂತಹ ಸಮಸ್ಯೆಗಳು ನಮ್ಮ ರಾಜ್ಯದಲ್ಲಿವೆ. ಹಿಂದಿನ ಸರ್ಕಾರದ ಜೊತೆಯಲ್ಲಿ ಇವರು ಒಟ್ಟಿಗೆ ಇಲ್ಲವೆ? ಇವತ್ತು ಸಮ್ಮಿಶ್ರ ಸರ್ಕಾರ ಹೊಸ ಸರ್ಕಾರ ಎಂದು ಹೇಳುತ್ತಾರೆ. ಭಾಗ ಒಂದು ಇತ್ತು, ಈಗ ಭಾಗ ಎರಡು ಸೇರಿ ಸರ್ಕಾರವನ್ನು ನಡೆಸುತ್ತಿರುವಂಥದ್ದು. ಇವರು ಹಿಂದೆ ಇರುವಂತಹ ಕಾರ್ಯಕ್ರಮ ಇದೆಯಲ್ಲಾ ಅದನ್ನೇ ಜೋಡಿಸಿ ಸರಿಪಡಿಸುವಂತಹ ವ್ಯವಸ್ಥೆ ಆಗಬೇಕಲ್ಲವೆ? ಹಳೆಯದನ್ನು ಬಿಟ್ಟುಬಿಟ್ಟರು. ಹೊಸದಾಗಿ ಜೋಡಿಸುವಂಥದ್ದು ಏನಿದೆ? ಇವತ್ತು ನಮ್ಮ ರಾಜ್ಯದಲ್ಲಿ ಎಲ್ಲರಿಗೂ ಗೊತ್ತಿದೆ. ದೊಡ್ಡ ಸಮಸ್ಯೆಯಾಗಿ ಕಾಡುತ್ತಿರುವುದು ಮರಳು ದಂಧೆ. ಅದನ್ನು ಪರಿಹಾರ ಮಾಡುವಂತಹ ಕೆಲಸ ಮಾಡಿದ್ದಾರೆಯೇ? ಒಂದರ ಹಿಂದೆ ಒಂದ ಜೀವಗಳು ಹೋಗುತ್ತಿದೆಯಲ್ಲಾ ಇದರ ಬಗ್ಗೆ ಉಲ್ಲೇಖ ಮಾಡಿದ್ದಾರೆಯೇ? ಹಿಂದೂ ಕಾರ್ಯಕರ್ತರ ಕೊಲೆಗಳು ನಿರಂತರವಾಗಿ ನಮ್ಮ ರಾಜ್ಯದಲ್ಲಿ ಸಾಗುತ್ತಿದೆಯಲ್ಲಾ ಅದರ ಬಗ್ಗೆ ಉಲ್ಲೇಖ ಇದೆಯೇ? ನಾನು ಪ್ರಶ್ನೆ ಮಾಡುವುದಕ್ಕೆ ಹೊರಟಿರುವುದು ಅಷ್ಟೆ. ಭಾಷಣವನ್ನು ರಾಜ್ಯಪಾಲರ ಹತ್ತಿರ ಓದಿಸಿದ್ದಾರಲ್ಲಾ ಅದರಲ್ಲಿ ಇವೆಲ್ಲವನ್ನು ಹಾಕಿದ್ದರೆ ನಾವು ಅದರ

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪರವಾಗಿ ಮಾತನಾಡುತ್ತಿದ್ದೆವು. ರಾಜ್ಯದ ಬಗ್ಗೆ ಈ ಸರ್ಕಾರಕ್ಕೆ ಕಾಳಜಿ ಇದ್ದರೆ ಖಂಡಿತವಾಗಿಯೂ ಸರ್ಕಾರದ ಕಾಲು ಎಳೆಯುವಂತಹ ಕೆಲಸವನ್ನು ನಾವು ಮಾಡುವುದಿಲ್ಲ. ಸಮ್ಮಿಶ್ರ ಸರ್ಕಾರವೋ ಅಥವಾ ಮತ್ತೊಂದೋ ಈ ರಾಜ್ಯವನ್ನು ಅಭಿವೃದ್ಧಿ ದಿಕ್ಕಿನಲ್ಲಿ ತೆಗೆದುಕೊಂಡು ಹೋಗಿ ಒಳ್ಳೆಯ ಕೆಲಸವನ್ನು ಮಾಡಿ. ಯಾವುತ್ತು ತಪ್ಪನ್ನು ಗುರುತು ಮಾಡಿ ಸರ್ಕಾರವನ್ನು ಎಚ್ಚರಿಸುವುದಕೋಸ್ಕರ ವಿರೋಧ ಪಕ್ಷಗಳು ಇರುವಂಥದ್ದು. ಸರ್ಕಾರ ಜಾಗ್ರತೆ ಹೆಜ್ಜೆಗಳನ್ನು ಇಡಬೇಕು. ಅದನ್ನು ಬಿಟ್ಟು ಇಚ್ಚಾನುಸಾರವಾಗಿ ಮಾತನಾಡುತ್ತಿದ್ದಾರೆ. ನಾವು ಇರುವಂತಹ ಸತ್ಯವನ್ನು ಹೇಳಿದರೆ, "ಕಂಡದ್ದು ಕಂಡ ಹಾಗೆ ಹೇಳಿದರೆ ಕೆಂಡದಂತಹ ಕೋಪ ಅಂತೆ" ಅವರು ಏಕೆ ಕೋಪ ಮಾಡಿಕೊಳ್ಳಬೇಕು, ತಾಳ್ಮೆಯಿಂದ ಕೇಳಲಿ. ತಪ್ಪಾದಾಗ ಸಭಾಪತಿಯವರಾದ ತಾವು ನಮಗೆ ನೀವು ಮಾತನಾಡುತ್ತಿರುವುದು ಸರಿಯಿಲ್ಲ. ಅದನ್ನು ಕಡತದಿಂದ ತೆಗೆದು ಹಾಕಿಸುತ್ತೇನೆಂದು ಹೇಳುತ್ತೀರಿ. ಈ ರೀತಿ ಇರಬೇಕಾದರೆ ಅವರು ಏಕೆ ವಿರೋಧ ಮಾಡುತ್ತಾರೆ? ನಾವು ತಪ್ಪು ಹೆಜ್ಜೆಗಳನ್ನು ಇಟ್ಟಾಗ ಮತ್ತೊಬ್ಬರು ಸರಿ ಮಾಡುವಂತಹ ದಿಕ್ಕಿನಲ್ಲಿ ಹೋದಾಗ ಜಾಗ್ರತೆಯಿಂದ ಕೇಳಿಸಿಕೊಂಡು ಸರಿ ದಾರಿಯಲ್ಲಿ ಹೋಗುವಂಥದ್ದು ನಮ್ಮ ಜವಾಬ್ದಾರಿ. ನಮಗೆ ಜನ ಕೊಟ್ಟಿರುವ ಅಧಿಕಾರವನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಅದನ್ನು ಬಿಟ್ಟು ನಾವು ಈ ರೀತಿ ಜಗಳ ಮಾಡಿಕೊಂಡು ಕುಳಿತರೆ ಹೇಗೆ? ಸರ್ಕಾರ ಟೇಕಾಫ್ ಆಗಿಲ್ಲ ಎಂದು ಹೇಳಿದ್ದಕ್ಕೆ ಭೋಜೇಗೌಡರು ಎದ್ದು ನಿಂತು ಗಲಾಟೆ ಮಾಡಿದರು. ಟೇಕಾಫ್ ಆಗಬೇಕೆನ್ನುವುದು ನಮಗೆ ಕಾಳಜಿ ಇದೆ. ಜನರ ಬಗ್ಗೆ ಕಾಳಜಿ ಇದೆ. ಅದನ್ನು ಬೇಗ ಟೇಕಾಫ್ ಮಾಡಿ. ಅವರಲ್ಲಿ ಏನೇ ಭಿನ್ನಾಭಿಪ್ರಾಯವಿದ್ದರೂ ಹೊರ ಪ್ರಪಂಚಕ್ಕೆ ತೋರಿಸಬೇಡಿ. ನಮ್ಮ ವಿರೋಧ ಪಕ್ಷಗಳಿಗೆ ಕೊಡಬೇಡಿ. ಒಳಗಡೆ ರೂಮಿನಲ್ಲಿ ಕುಳಿತುಕೊಂಡು ಸರಿ ಮಾಡಿಕೊಳ್ಳಿ. ಸರ್ಕಾರವನ್ನು ಸರಿಯಾದ ದಿಕ್ಕಿನಲ್ಲಿ ತೆಗೆದುಕೊಂಡು ಹೋಗಿ. ನನ್ನ ಸಹೋದರಿ ಡಾ:ಜಯಮಾಲರವರು ಸಭಾನಾಯಕಿಯಾಗಿದ್ದಾರೆ. ಅವರಿಗೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಆದರೆ ನಮಗೆ ಮಾಹಿತಿ ಬಂದಿರುವುದೇನೆಂದರೆ, 20 ಜನ ಸದಸ್ಯರು ಸಹಿ ಹಾಕಿ ಅವರನ್ನು ಸಭಾನಾಯಕಿಯಾಗಿ ಮಾಡಬಾರದು ಎನ್ನುವ ಮಾತನ್ನು ಹೇಳುತ್ತಿದ್ದರು. ಈ ರೀತಿ ಮಾಡಿದರೆ ಸರ್ಕಾರ ನಡೆಸುವುದಕ್ಕಾಗುತ್ತದೆಯೇ?

(ಗೊಂದಲ)

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ. ಒಬ್ಬ ಸಭಾನಾಯಕರು ಆಯ್ಕೆಯಾಗಿದ್ದಾರೆ. ಅವರನ್ನು ಅಭಿನಂದಿಸಿದ್ದಾರೆ. ಇವತ್ತಿನ ದಿವಸ ಯಾವುದೇ ಆಧಾರವಿಲ್ಲದಿರುವಂತಹ ಮಾತನ್ನು ಅವರು ಹೇಳುತ್ತಿದ್ದಾರೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

028/03-07-2018/bkp-ak/4-40

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಸಿ.ಎಂ. ಇಬ್ರಾಹಿಂ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು point of order ಎತ್ತಿದ್ದೇನೆ.

**ಶ್ರೀ ಎನ್.ಎಸ್.ಬೋಸ್‌ರಾಜು(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ,

**ಸಭಾಪತಿಯವರು:–** ಶ್ರೀಯುತ ಬೋಸ್‌ರಾಜುರವರೇ, ನಾನು ಶ್ರೀಯುತ ಸಿ.ಎಂ. ಇಬ್ರಾಹಿಂ ರವರಿಗೆ ಮಾತನಾಡಲಿಕ್ಕೆ ಅವಕಾಶವನ್ನು ಕೊಟ್ಟಿದ್ದೇನೆ. ಅವರು ಮಾತನಾಡಲಿಕ್ಕೆ ಬಿಡಿ.

**ಶ್ರೀ ಸಿ.ಎಂ. ಇಬ್ರಾಹಿಂ:–** ನೀವು ಮರಳಿನ ವಿಚಾರವಾಗಿ ಹೇಳುತ್ತಿರುತ್ತೀರಿ. ಅದು ಸರಿ.

**ಶ್ರೀ ಪ್ರಾಣೇಶ್ ಎಂ.ಕೆ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಪತ್ರಿಕೆಯಲ್ಲಿ ಬಂದಿರುವುದನ್ನು ಹೇಳುತ್ತಿದ್ದೇನೆ.

**ಶ್ರೀ ಸಿ.ಎಂ.ಇಬ್ರಾಹಿಂ:–** ಪತ್ರಿಕೆಯಲ್ಲಿ ನೂರು ವಿಷಯಗಳು ಬರುತ್ತವೆ. ಅವುಗಳನ್ನು ತೆಗೆದುಕೊಂಡು ಚರ್ಚೆ ಮಾಡುವುದಕ್ಕೆ ಈ ಸದನ ಇದೆಯೇ? ಈ ಸದನಕ್ಕೆ ಒಂದು ಇತಿಹಾಸ ಇದೆ, ಒಂದು ಗೌರವ ಇದೆ. 1980ನೇ ಇಸವಿಯಲ್ಲಿಯೇ ನಾನು ಈ ಸದನಕ್ಕೆ ಬಂದಿದ್ದೇನೆ ಎನ್ನುವುದನ್ನು ಶ್ರೀಯುತ ಕೆ.ಬಿ.ಶಾಣಪ್ಪನವರ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಹೇಳಬೇಕೆಂದರೆ, ನಿಮ್ಮೆಲ್ಲರಿಗಿಂತ ನಾನು ಹಿರಿಯನಿದ್ದೇನೆ. ಇದು ನಿಮಗೆ ಗೊತ್ತಿರಬಹುದು. ಮಾನ್ಯ ಸದಸ್ಯರು ಮರಳಿನ ವಿಚಾರವಾಗಿ ಹೇಳಿದ್ದಾರೆ. ಅದು ಸರಿ. ಇಂತಹ ಸಲಹೆಗಳು ಏನಿವೆ, ಅವುಗಳ ಬಗ್ಗೆ highlight ಮಾಡಬೇಕು. ಆ ಮೂಲಕ ಸರ್ಕಾರಕ್ಕೆ ಉತ್ತಮವಾದಂತಹ ಸಲಹೆಗಳನ್ನು ಕೊಡುವಂತಹ ಸದನ ಇದಾಗಿದೆ. ಹಿಂದುಳಿದ ಜನಾಂಗದ ಒಬ್ಬ ಹೆಣ್ಣುಮಗಳು ಈ ಸಭೆಯ ನಾಯಕಿಯಾಗಿ ಕುಳಿತಿರುವಂತಹ ಈ ಸಂದರ್ಭದಲ್ಲಿ ಮಾನ್ಯ ಸದಸ್ಯರು ಮಾತನಾಡುತ್ತಾ, ಅದರ ಬಗ್ಗೆ ಕೆಣಕಿ, 20 ಜನರು ಪತ್ರವನ್ನು ಕೊಟ್ಟಿದ್ದಾರೆಂದು ಹೇಳುತ್ತಿದ್ದಾರೆ, ಈ ಬಗ್ಗೆ ಸದಸ್ಯರಿಗೇನು ಕನಸು ಬಿದ್ದಿತ್ತೇ?

**ಶ್ರೀ ಪ್ರಾಣೇಶ್ ಎಂ.ಕೆ:–** ಮಾನ್ಯ ಸಭಾಪತಿಯವರೇ, ಈ ವಿಚಾರ ಪತ್ರಿಕೆಯಲ್ಲಿ ಬಂದಿತ್ತು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

**ಶ್ರೀ ಸಿ.ಎಂ.ಇಬ್ರಾಹಿಂ:–** ಪತ್ರಿಕೆಯಲ್ಲಿ ಸಾವಿರ ಬರುತ್ತದೆ. ಅದನ್ನು ಇಲ್ಲಿ ಪ್ರಸ್ತಾಪ ಮಾಡಬೇಕೆಂದೇನೂ ಇಲ್ಲ.

(ಗೊಂದಲ)

**ಸಭಾಪತಿಯವರು:–** ಶ್ರೀಯುತ ಪ್ರಾಣೇಶ್‌ರವರೇ, ಶ್ರೀಯುತ ಸಿ.ಎಂ. ಇಬ್ರಾಹಿಂ ರವರಿಗೆ ನಾನು ಮಾತನಾಡಲಿಕ್ಕೆ ಅವಕಾಶವನ್ನು ಕೊಟ್ಟಿದ್ದೇನೆ. ಅವರು ಮಾತನಾಡುತ್ತಿದ್ದಾರೆ. ಅವರು ಮಾತನಾಡಿದ್ದು ಮುಗಿದ ನಂತರ ತಾವು ಮಾತನಾಡಿ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೇ, ಶ್ರೀಮಾನ್ ಸಿ.ಎಂ.ಇಬ್ರಾಹಿಂರವರು ಹಿರಿಯ ಸದಸ್ಯರಿದ್ದಾರೆ ಎನ್ನುವುದು ಎಲ್ಲರಿಗೂ ಗೊತ್ತಿದೆ.

**ಶ್ರೀ ಸಿ.ಎಂ.ಇಬ್ರಾಹಿಂ:–** ಇದು ಹೋರಿ ಇದ್ದಂತೆ; ಒಂಟಿ ಸಲಗ ಇದ್ದಂತೆ. ನಾನು ಚಿಂತೆ ಮಾಡುವುದಿಲ್ಲ.

(ಗೊಂದಲ)

ಮಾನ್ಯ ಸಭಾಪತಿಯವರೇ, ಡಾ॥ ಜಯಮಾಲ ರಾಮಚಂದ್ರರವರು ಈ ಸದನದ ಸಭಾನಾಯಕಿಯಾಗಿದ್ದಾರೆ. ಅವರನ್ನು ನಾವೆಲ್ಲರೂ ಅಭಿನಂದಿಸಿದ್ದೇವೆ. ಆ ವಿಚಾರ ಮುಗಿದು ಹೋಗಿದೆ. ಈಗ ಸದನ ನಡೆಯುತ್ತಿದೆ. ಆದ್ದರಿಂದ, ಮಾನ್ಯ ಸದಸ್ಯರು ಈಗ ಹೇಳಿದಂತಹ ವಿಚಾರವನ್ನು **ಕಡತದಿಂದ ತೆಗೆದು ಹಾಕುವುದು ಉತ್ತಮ ಎನ್ನುವುದು ನನ್ನ ಸಲಹೆಯಾಗಿದೆ.**

**ಶ್ರೀ ಆರ್.ಧರ್ಮಸೇನ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, 20 ಜನ ಸಹಿ ಮಾಡಿದ್ದಾರೆಂದು ಏನು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ, ಅದು ಡಾ॥ ಜಯಮಾಲ ರಾಮಚಂದ್ರ ಅವರಿಗೆ ಸಂಬಂಧಪಟ್ಟ ವಿಷಯವಲ್ಲ. ಕೇಂದ್ರ ಸರ್ಕಾರದಲ್ಲಿ ರಾಜ್ಯ ಸಭೆಗೆ ಚುನಾಯಿತರಾಗಿರುವ 20 ಸದಸ್ಯರು ಈಗ ಮಂತ್ರಿಗಳಾಗಿದ್ದಾರೆ. ಇಲ್ಲಿನ ಸದಸ್ಯರುಗಳನ್ನು ಮಂತ್ರಿಗಳನ್ನಾಗಿ ಮಾಡಿ ಎಂದು ಕೇಳಿದ್ದಾರೆಯೇ ವಿನಃ ಇದು ಡಾ॥ಜಯಮಾಲ ರಾಮಚಂದ್ರ ಅವರ ವಿಚಾರ ಅಲ್ಲ. ಏತಕ್ಕೆ ಸುಮ್ಮನೆ ತಪ್ಪು ತಪ್ಪು ಸಂದೇಶವನ್ನು ಕೊಡುತ್ತೀರಿ?

**ಸಭಾಪತಿಯವರು:–** ಶ್ರೀಯುತ ಪ್ರಾಣೇಶ್ ರವರೇ, ತಾವು ಮಾತನಾಡಿ.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಪ್ರಾಣೇಶ್ ಎಂ.ಕೆ:–** ಮಾನ್ಯ ಸಭಾಪತಿಯವರೇ, ನಾನು ಹೇಳುತ್ತಿರುವುದಿಷ್ಟೆ. ಸರ್ಕಾರವನ್ನು ಜಾಗೃತಗೊಳಿಸುವಂತಹ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಈಗಾಗಲೇ ಹಲವಾರು ಯೋಜನೆಗಳನ್ನು ಹಿಂದಿನ ಸರ್ಕಾರಗಳು ಮಾಡಿವೆ. ಸನ್ಮಾನ್ಯ ಶ್ರೀ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಹಲವಾರು ಯೋಜನೆಗಳನ್ನು ಮಾಡಿದ್ದರು. ಅವುಗಳನ್ನು ಕೈಬಿಡುವಂತಹ ಕೆಲಸವನ್ನು ಮಾಡುವುದರ ಮೂಲಕ ದ್ವೇಷದ ರಾಜಕಾರಣವನ್ನು ಮಾಡಿದ್ದೀರಲ್ಲಾ, ಅವುಗಳನ್ನು ಏತಕ್ಕೆ ರಾಜ್ಯಪಾಲರ ಭಾಷಣದಲ್ಲಿ ಸೇರಿಸಿ ಮಾಡುತ್ತೇವೆಂದು ಹೇಳಿರುವುದಿಲ್ಲ. ಉದಾಹರಣೆಗೆ ಹೇಳುವುದಾದರೆ ಶ್ರೀಮಾನ್ ಯಡಿಯೂರಪ್ಪನವರ ಕಾಲದಲ್ಲಿ ಅಂಗವಿಕಲರ ಭಾಗ್ಯವನ್ನು ಕೊಟ್ಟಿದ್ದು, ಅದನ್ನು ನಿಲ್ಲಿಸಿದ್ದೀರಿ. ವೃದ್ಧಾಪ್ಯವೇತನವನ್ನು ಕೇಳುತ್ತಲೇ ಇದ್ದಾರೆ, ಆದರೆ, ಇನ್ನೂ ಅವರಿಗೆ ವೃದ್ಧಾಪ್ಯವೇತನ ದೊರಕುತ್ತಿಲ್ಲ. ಆ ಪರಿಸ್ಥಿತಿ ಏತಕ್ಕೆ ಬಂದಿದೆ? ಏಕೆಂದರೆ, ಇದನ್ನು ಶ್ರೀಯುತ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದಂತಹ ಕಾಲದಲ್ಲಿ ಮಾಡಿದ್ದಾರೆನ್ನುವ ಉದ್ದೇಶಕ್ಕೋಸ್ಕರ ನಿಲ್ಲಿಸಿದ್ದೀರಾ? ಹಾಲು ಉತ್ಪಾದನೆ ಮಾಡುತ್ತಿರುವಂತಹ ರೈತರ ಬಗ್ಗೆ ಇಷ್ಟೊಂದು ಯೋಚನೆ ಮಾಡುತ್ತೀರಲ್ಲಾ, ಅವರಿಗೆ ಕೊಡುತ್ತಿದ್ದ ಸಹಾಯಧನದಲ್ಲಿ 2 ರೂಪಾಯಿಗಳನ್ನು ಕಡಿಮೆ ಮಾಡಿದ್ದಾರೆ. ಅದರ ಬಗ್ಗೆ ಸರ್ಕಾರ ಯೋಚನೆ ಮಾಡಿಲ್ಲವೆನ್ನುವುದನ್ನು ನಾನು ಮಾನ್ಯ ಸಭಾಪತಿಗಳ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಇದರ ಬಗ್ಗೆ ಸರ್ಕಾರ ಗಮನಹರಿಸಬೇಕೆಂದರೆ ನಾನು ಸುಳ್ಳು ಹೇಳುತ್ತಿದ್ದೇನೆಂದು ಹೇಳುತ್ತಿದ್ದಾರೆ. ನಾನು ಇದುವರೆವಿಗೂ ಹೇಳಿರುವುದರಲ್ಲಿ ಯಾವುದೇ ಒಂದು ಸುಳ್ಳು ಇರುವುದಿಲ್ಲ. ನನ್ನ ಹತ್ತಿರ ಇರುವಂತಹ ದಾಖಲೆಗಳ ಸಮೇತ ನಾನು ಮಾತನಾಡಿರುವುದಾಗಿದೆ. ಏನಾದರೂ ಇದ್ದಲ್ಲಿ ಅದರ ಬಗ್ಗೆ ಪ್ರಶ್ನೆಯನ್ನು ಮಾಡಲಿ. ಅದಕ್ಕೆ ನನ್ನದೇನೂ ವಿರೋಧವಿಲ್ಲ. ಹೀಗಾಗಿ, ಇದೆಲ್ಲವನ್ನೂ ಜೋಡಿಸುವಂತಹ ಕೆಲಸವನ್ನು ನಾವು ಮಾಡಬೇಕಾಗಿದೆ.

ನಮಗೆ ತಿಳಿದಿರುವಂತೆ ಹಿಂದೆ, ಲೋಕೋಪಯೋಗಿ ಇಲಾಖೆಯಲ್ಲಿ ಆಗಿರುವಂತಹ ಹಗರಣಗಳ ಬಗ್ಗೆ ಹಾಲಿ ಇರುವಂತಹ ಮುಖ್ಯಮಂತ್ರಿಗಳೇ ನೇರವಾಗಿ ಹಿಂದಿನ ಸರ್ಕಾರದ ಮೇಲೆ ಆರೋಪ ಮಾಡಿದ್ದರು. ಇದರಲ್ಲಿ ಸಾಕಷ್ಟು ಭ್ರಷ್ಟಾಚಾರಗಳು ನಡೆದಿವೆ, ಸ್ವತಃ ಲೋಕೋಪಯೋಗಿ ಮಂತ್ರಿಗಳೇ ಇದರಲ್ಲಿ ಶಾಮೀಲಾಗಿದ್ದಾರೆ, ಅದರ ಬಗ್ಗೆ ಕಾನೂನು ಕ್ರಮ ಜರುಗಿಸಬೇಕೆಂದು ಹಿಂದೆ ಒತ್ತಾಯ ಮಾಡಿದ್ದರು. ಈಗ ಏತಕ್ಕೆ ಆ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳು ತೆಗೆದುಕೊಳ್ಳುತ್ತಿಲ್ಲ. ಈ ರೀತಿ ಆದಲ್ಲಿ ಈ ರಾಜ್ಯದ ಜನತೆಗೆ ಹೇಗೆ ನ್ಯಾಯವನ್ನು ಕೊಡಿಸಿದಂತೆ ಆಗುತ್ತದೆ? ನನ್ನ ಪ್ರಶ್ನೆ ಇಷ್ಟೆ. ರಾಜ್ಯದ ಜನರಿಗೆ ನ್ಯಾಯವನ್ನು ಕೊಡಬೇಕು. ಈಗ ರಾಜ್ಯದ ಜನರು 'ನಾವು ತಪ್ಪು ಮಾಡಿದ್ದೇವೆ' ಎನ್ನುವ ಯೋಚನೆಯನ್ನು ಮಾಡುವ ಪರಿಸ್ಥಿತಿಗೆ ಬಂದು ಬಿಟ್ಟಿದ್ದಾರೆ. 104 ಸ್ಥಾನಗಳನ್ನು ಗೆದ್ದಂತಹ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಾವುಗಳು ಇಲ್ಲಿ ವಿರೋಧ ಪಕ್ಷದಲ್ಲಿದ್ದುಕೊಂಡು ಒಪ್ಪಿಕೊಂಡಿದ್ದೇವೆ. ನೀವು ಪ್ರಜಾಪ್ರಭುತ್ವದ ವ್ಯವಸ್ಥೆಯೊಳಗಡೆ ಒಟ್ಟಾಗಿದ್ದೀರಿ. ತಲೆ ಎಣಿಕೆಗಳು ಅಥವಾ number count ನಲ್ಲಿ ಈ ರೀತಿ ಆಗಿದೆ. ಆದರೆ, ನೀವೀಗ take off ಆಗದೇ ಒಳಗಿನಿಂದೊಳಗಡೆ ವಿಚಾರಗಳನ್ನು ಗೊಂದಲ ಮಾಡುತ್ತಿದ್ದೀರಿ. ಈ ಮೂಲಕ ಜನರನ್ನು ಬೀದಿಗೆ ಹಾಕುವಂತಹ ಕೆಲಸ ಆಗಬಾರದು ಎಂದು ಹೇಳಲಿಕ್ಕೆ ಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ನಾನು ಜಾಸ್ತಿ ಸಮಯ ಮಾತನಾಡಲಿಕ್ಕೆ ಹೋಗುವುದಿಲ್ಲ. ಏಕೆಂದರೆ, ತುಂಬಾ ವಿಚಾರಗಳನ್ನು ಪ್ರಸ್ತಾಪ ಮಾಡಿದರೆ, ಆ ವಿಚಾರಗಳಿಗೆ ಗೌರವವೂ ಬರುವುದಿಲ್ಲ, ತೂಕವೂ ಬರುವುದಿಲ್ಲ. ಹೀಗಾಗಿ, ಈ ಎಲ್ಲಾ ವಿಚಾರಗಳ ಒಳಗಡೆ ಮಾತನಾಡಬೇಕಾಗುತ್ತದೆ. ರೈತರ ಸಾಲವನ್ನು ಮಾಡುವಂತಹ ವಿಚಾರ ಇದೆ. ಖಂಡಿತವಾಗಿಯೂ ಸಹ ರೈತರ ಸಾಲವನ್ನು ಮನ್ನಾ ಮಾಡಬೇಕು, ಸಾಲ ಮನ್ನಾ ಮಾಡಿದ ದಿನ ನಾವು ಅವರಿಗೆ ಅಭಿನಂದಿಸುತ್ತೇವೆ. ಆದರೆ, ಇವರು ಕೊಟ್ಟ ಮಾತನ್ನು ಉಳಿಸಿಕೊಳ್ಳಬೇಕಾಗುತ್ತದೆ. ಕೊಟ್ಟ ಮಾತಿನಂತೆ ಸಂಪೂರ್ಣವಾಗಿ ಸಾಲ ಮನ್ನಾ ಮಾಡಬೇಕು. ನಾನು ಮೊನ್ನೆ WhatsApp ನಲ್ಲಿ ಒಂದು ವಿಚಾರವನ್ನು ಗಮನಿಸಿದ್ದೇನೆ. WhatsApp ನೋಡಿದಂತಹ ಸಂದರ್ಭದಲ್ಲಿ ರೈತರ ಸಾಲವನ್ನು ಮನ್ನಾ ಮಾಡುತ್ತಿದ್ದೀರಿ, ಬಹಳ ಸಂತೋಷ. ಆದರೆ, ನಮ್ಮ ಬಗ್ಗೆ ಏತಕ್ಕೆ ಸರ್ಕಾರ ಚಿಂತನೆ ಮಾಡುತ್ತಿಲ್ಲವೆಂದು ಬಡ ಕೂಲಿ ಕಾರ್ಮಿಕರು ಅದರಲ್ಲೂ ಸಣ್ಣ ಸಣ್ಣ ವ್ಯಾಪಾರ ಮಾಡುತ್ತಿರುವಂತಹ ಕೂಲಿ ಕಾರ್ಮಿಕರು WhatsApp ನಲ್ಲಿ ಈ ವಿಚಾರವನ್ನು ಹಂಚಿಕೊಂಡಿದ್ದರು. 40% ರಷ್ಟು ರೈತರಿದ್ದು, ಇನ್ನುಳಿದವರು ಅದಕ್ಕಿಂತಲೂ ಹೆಚ್ಚು ಭಾಗ ಇದ್ದು, ನಾವು ಕೂಡ ನಮ್ಮ ಬದುಕಿಗೋಸ್ಕರ ಸಣ್ಣ ಸಣ್ಣ ಸಾಲವನ್ನು ಮಾಡಿದ್ದೇವೆ, ಈ ಸಾಲ ಮನ್ನಾ ಮಾಡುವಂತಹ ಯೋಚನೆಯನ್ನು ಸರ್ಕಾರ ಮಾಡುತ್ತಿಲ್ಲವಲ್ಲವೆಂದು ಹೇಳುತ್ತಿದ್ದಾರೆ. ರೈತರ ಸಾಲವನ್ನು ಮನ್ನಾ ಮಾಡಲೇಬೇಕು. ಏಕೆಂದರೆ, ಅವನು ನಮಗೆ ಅನ್ನದಾತ. ಆದರೆ, ಇವರುಗಳ ಭವಿಷ್ಯವನ್ನೂ ನೋಡಬೇಕಲ್ಲವೇ? ಇವರುಗಳು 5 ಸಾವಿರ, 10 ಸಾವಿರ 15 ಸಾವಿರಗಳ ಸಾಲವನ್ನು ಮಾಡಿ ತಮ್ಮ ತಮ್ಮ ಬದುಕುಗಳನ್ನು ನಡೆಸಿಕೊಳ್ಳಲಿಕ್ಕೆ ಮಾಡಿದಂತಹ ಸಾಲವನ್ನು ಬ್ಯಾಂಕ್‌ಗೆ ಕಟ್ಟಲಾಗದೇ ತೊಂದರೆ ಪಡುತ್ತಿದ್ದಾರೆ. ಈಗ ಎಲ್ಲಾ commodities ಇವೆ. ಈಗ ಯಾವುದಕ್ಕೂ ಬೆಲೆ ಇಲ್ಲ. ಅವರುಗಳಿಗೂ ವ್ಯಾಪಾರಗಳಿಲ್ಲ. ಅವರುಗಳು ಸಹ ಸಾಲದ ಸುಳಿಗೆ ಸಿಕ್ಕಿಹಾಕಿಕೊಳ್ಳುವಂತಹ ಪರಿಸ್ಥಿತಿಗಳು ನಿರ್ಮಾಣವಾಗಿವೆ. ಹೀಗಾಗಿ, ಸರ್ಕಾರ ಇದರ ಬಗ್ಗೆ ಎಲ್ಲಿಯೂ ಉಲ್ಲೇಖ ಮಾಡಿಲ್ಲ. ಅವರನ್ನೂ ಇದರಲ್ಲಿ ಜೋಡಿಸಿಕೊಳ್ಳುತ್ತೇವೆ, ಅವರ ಬಗ್ಗೆಯೂ ಪರಿಹಾರವನ್ನು ಕಂಡುಕೊಳ್ಳುತ್ತೇವೆಂದು ಹೇಳುವುದರ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೂಲಕ ಅವರ ಬಗ್ಗೆ ಗಮನಹರಿಸಬೇಕು. ಅದರ ಜವಾಬ್ದಾರಿಯನ್ನು ಈಗ ಇರುವಂತಹ ಸರ್ಕಾರದ ಮುಖ್ಯಮಂತ್ರಿಗಳು ತೆಗೆದುಕೊಳ್ಳಬೇಕಾಗುತ್ತದೆ. ಹೀಗಾಗಿ, ಎಲ್ಲವೂ ಸೇರಿ ಮಾಡುವಂತಹ ಕೆಲಸಗಳನ್ನು ಮಾಡಿದರೆ ಮಾತ್ರ ಸಾಧ್ಯವಾಗುತ್ತದೆ.

ಇನ್ನೂ ಸಾಕಷ್ಟು ವಿಷಯಗಳನ್ನು ಹೇಳಬೇಕೆಂದು ನಾನು ಒಂದು ಕಡತವನ್ನೇ ತಯಾರು ಮಾಡಿಕೊಂಡು ಬಂದಿದ್ದೇನೆ. ಆದರೆ, ಸಮಯಾವಕಾಶ ಕಡಿಮೆ ಇದೆ. ಬಜೆಟ್ ಮೇಲೆ ಮಾತನಾಡ್ತಲಿಕ್ಕೆ ಅವಕಾಶ ಸಿಕ್ಕಿದಂತಹ ಸಮಯದಲ್ಲಿ ಇನ್ನುಳಿದ ಅಂಶಗಳ ಬಗ್ಗೆ ಉಲ್ಲೇಖ ಮಾಡುತ್ತೇನೆ. ಇತ್ತೀಚೆಗೆ ಹೊಸ ಮುಖಗಳಾಗಿ ವಿಧಾನಸಭೆಯಲ್ಲಿ ಮತ್ತು ವಿಧಾನ ಪರಿಷತ್ತಿನಲ್ಲಿ ಸದಸ್ಯರು ಬಂದಿದ್ದಾರೆ. ನಾನು ಸಹ ಈ ಸದನಕ್ಕೆ ಬಂದು ಎರಡು ವರ್ಷಗಳು ಕಳೆದಿವೆ. ಖಂಡಿತವಾಗಿಯೂ ಸಹ ನನಗೆ ಮಾನ್ಯ ಸಭಾಪತಿಗಳಲ್ಲಿ ಭಾರಿ ಗೌರವ ಇದೆ. ಹೊಸದಾಗಿ ಬಂದವರು ಸದನಕ್ಕೆ ತಪ್ಪದೇ ಹಾಜರಾಗಬೇಕು, ಹಿರಿಯ ಸದಸ್ಯರು ಹೇಳುವಂತಹ ವಿಚಾರಗಳನ್ನು ಕೇಳಬೇಕೆಂದು ಹಿಂದೆ ಇದ್ದಂತಹ ಸಭಾಪತಿಯವರು ಸಹ ಹೇಳುತ್ತಿದ್ದರು. ನಾವು ಯಾವಾಗ ಕುಳಿತುಕೊಂಡು ಎಲ್ಲಾ ವಿಚಾರಗಳನ್ನು ಕೇಳಿಕೊಳ್ಳುತ್ತೇವೆ, ಎಲ್ಲಾ ವಿಚಾರಗಳು ನಮಗೆ ಗೊತ್ತಾಗುತ್ತವೆ.

ಮಾನ್ಯ ಸಭಾಪತಿಯವರೇ, ಸದನದ ದಿಕ್ಕು ತಪ್ಪಿಸುವಂತಹ ಕೆಲಸವನ್ನು ನಮ್ಮ ಹಿರಿಯ, ಗೌರವಾನ್ವಿತ ಸದಸ್ಯರುಗಳು ಮಾಡಬಾರದು ಎನ್ನುವುದು ತಮ್ಮ ಮೂಲಕ ನನ್ನ ಕಳಕಳಿಯ ಮನವಿಯಾಗಿದೆ. ಸರ್ಕಾರದಲ್ಲಿ ನನ್ನ ಮತ್ತೊಂದು ವಿನಂತಿ ಇದೆ. ಸರ್ಕಾರದವರು ನೀವು ಏನು ಹೇಳಿದ್ದೀರಿ, ಅದನ್ನು ಮಾಡಬೇಕು. ನೀವು ಸರ್ಕಾರದಲ್ಲಿ ಎಷ್ಟು ದಿವಸ ಇರುತ್ತೀರೋ ಬಿಡುತ್ತೀರೋ ಅದು ನಮ್ಮ ವಿರೋಧ ಪಕ್ಷಕ್ಕೆ ಸಂಬಂಧಪಟ್ಟ ವಿಚಾರವಲ್ಲ. ನಿಮ್ಮ ಹೊಂದಾಣಿಕೆಗಳು, ನಿಮ್ಮ ಕಾರ್ಯವೈಖರಿಗಳ ಮೇಲೆ ಸರ್ಕಾರ ನಡೆಯುತ್ತದೆ. 3 ತಿಂಗಳು, 6 ತಿಂಗಳು ಸರ್ಕಾರದಲ್ಲಿ ಇರುತ್ತೀರೋ ಅಥವಾ 5 ವರ್ಷಗಳ ಕಾಲ ಇರುತ್ತೀರೋ ಎನ್ನುವುದು ನಿಮಗೆ ಬಿಟ್ಟ ವಿಚಾರ. ಅದರ ಬಗ್ಗೆ ಚರ್ಚೆ ಮಾಡುವುದಿಲ್ಲ. ಇದ್ದಷ್ಟು ದಿವಸಗಳಲ್ಲಿ ಒಳ್ಳೆಯ ಕೆಲಸಗಳನ್ನು ಮಾಡಿ. ರಾಜ್ಯಪಾಲರ ಕಡೆಯಿಂದ ಏನು ಭಾಷಣವನ್ನು ಓದಿಸಿದ್ದೀರಿ, ಅ ಸಂಬಂಧ ಕನಿಷ್ಠ ಕಾರ್ಯಕ್ರಮಗಳನ್ನು ಮಾಡಬೇಕು. ಈಗಾಗಲೇ ಕನಿಷ್ಠ ಕಾರ್ಯಕ್ರಮಗಳಿಗೂ ಒಂದು ಸಮಿತಿಯನ್ನು ಮಾಡಿಕೊಂಡಿದ್ದೀರಿ. ಶಾಂತಿಯ ವನದಲ್ಲಿದ್ದುಕೊಂಡು ಹೊರಗಡೆ ಬರುವಂತಹ ಸಂದರ್ಭದಲ್ಲಿ ರಾಜ್ಯದಲ್ಲೇ ಅಶಾಂತಿಯ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದಂತಹ ಹೆಗ್ಗಳಿಕೆ ಕೂಡ ನಿಮ್ಮ ಮೇಲೆ ಇದೆ. ಅದನ್ನು ಬಿಟ್ಟು ಮತ್ತೆ ಶಾಂತಿಯನ್ನು ಕಾಪಾಡುವಲ್ಲಿ ತಾವು ಕೆಲಸ ಮಾಡಬೇಕೆಂದು ಹೇಳುತ್ತಾ, ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟ ಮಾನ್ಯ ಸಭಾಪತಿಯವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಟಿ.ಎ.ಶರವಣ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ವಿರೋಧ ಪಕ್ಷದ ಸದಸ್ಯರು ಹಾಗೂ ನನ್ನ ಆತ್ಮೀಯರಾದ ಶ್ರೀಯುತ ಪ್ರಾಣೇಶ್ ರವರು ಒಂದು ಮಾತನ್ನು ಹೇಳಿದರು. ಈ ಮೈತ್ರಿ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಇಡೀ ರಾಜ್ಯದಲ್ಲಿ ಒಳ್ಳೆಯ ಮಳೆಯಾಗುತ್ತಿದೆ, ಒಳ್ಳೆಯ ಬೆಳೆಯಾಗುತ್ತಿದೆ, ಈ ರಾಜ್ಯದ ಎಲ್ಲಾ ಜನರು ಈ ಒಂದು ಪರಿಸರದಿಂದ ತಣ್ಣಗಿದ್ದಾರೆನ್ನುವುದನ್ನು ಮೊದಲನೆಯದಾಗಿ ಹೇಳಲಿಕ್ಕೆ ಬಯಸುತ್ತಿದ್ದೇನೆ.

**(ಈ ಹಂತದಲ್ಲಿ ಮಾನ್ಯ ಪ್ಯಾನಲ್ ಮೆಂಬರ್ ಶ್ರೀ ಕೆ.ಬಿ.ಶಾಣಪ್ಪನವರು ಸಭಾಪೀಠದಲ್ಲಿ ಉಪಸ್ಥಿತರಾದರು)**

ಎರಡನೆಯದಾಗಿ, ಈ ಸರ್ಕಾರ take off ಆಗಿಲ್ಲ, take off ಆಗಿಲ್ಲ ಎಂದು ಹೇಳುತ್ತಿದ್ದೀರಿ. ಈ ಸರ್ಕಾರದಿಂದ ರಾಜ್ಯಪಾಲರ ಭಾಷಣವನ್ನು ಏನು ಕೊಟ್ಟಿದ್ದೇವೆ, ಇದು ಒಂದು ರೀತಿಯಲ್ಲಿ trailer ಇದ್ದ ಹಾಗೆ. 5ನೇ ತಾರೀಖು picture ಅನ್ನು release ಮಾಡುತ್ತಿದ್ದೇವೆ. ಅಲ್ಲಿಯವರೆಗೆ ತಾವುಗಳು ಸ್ವಲ್ಪಮಟ್ಟಿಗೆ ಸಮಾಧಾನವಾಗಿರಬೇಕೆಂದು ಹೇಳಲಿಕ್ಕೆ ಬಯಸುತ್ತೇನೆ. ನೀವು ಸರ್ಕಾರಕ್ಕೆ ಸಲಹೆಗಳನ್ನು ಕೊಡಿ, ಅವುಗಳನ್ನು ನಾವು ಒಪ್ಪಿಕೊಳ್ಳುತ್ತೇವೆ. ತಾವುಗಳು 104 ಜನ ಸದಸ್ಯರುಗಳಿದ್ದೇವೆಂದು ಹೇಳುತ್ತಿದ್ದೀರಿ. 104 ಜನ ಸದಸ್ಯರು ಬಂದಿದ್ದರೂ ಕೂಡ ನೀವು ಅಲ್ಲಿಯೇ ಕುಳಿತಿದ್ದೀರಿ. ಮುಂದೆಯೂ ಸಹ ಅಲ್ಲಿಯೇ ಕುಳಿತುಕೊಳ್ಳಬೇಕೆಂದಿದ್ದರೆ ನೀವು ರಾಜಕೀಯವಾಗಿ ಏನು ಬೇಕಾದರೂ ಮಾತನಾಡಿ. ನಾನು ಏನೂ ಕೇಳುವುದಿಲ್ಲ. ಆದರೆ, ನೀವು ಇವತ್ತು ರಾಜಕೀಯವಾಗಿ ಮಾತನಾಡುವುದಿಲ್ಲವೆಂದು ಹೇಳಿ, ರಾಜಕೀಯವನ್ನೇ ಮಾತನಾಡಿದ್ದೀರಿ. ಚುನಾವಣೆ ಬಂದಂತಹ ಸಂದರ್ಭದಲ್ಲಿ ರಾಜಕೀಯವನ್ನು ಮಾಡೋಣ. ಚುನಾವಣೆಯಾದ ನಂತರ ಇವತ್ತು ಒಳ್ಳೆಯ ಮೈತ್ರಿ ಸರ್ಕಾರ ನಡೆಯುತ್ತಿದೆ.

ಮುಂದು. . .

**(029) 03.07.2018 04.50 ಎಸ್‌ವಿ-ಆರ್‌ಎನ್**

**(ವೈಸ್ ಛೇರ್ಮನ್‌ರವರ ಉಪಸ್ಥಿತಿ)**

**ಶ್ರೀ ಟಿ.ಎ.ಶರವಣ (ಮುಂದು):-**

ಈ ದೇಶದ ಮಾಜಿ ಪ್ರಧಾನಮಂತ್ರಿಗಳಾದ ಶ್ರೀ ಹೆಚ್.ಡಿ.ದೇವೇಗೌಡರು, 13 ಬಾರಿ ಬಜೆಟ್ ಅನ್ನು ಮಂಡನೆ ಮಾಡಿರತಕ್ಕಂತಹ ಆರ್ಥಿಕ ತಜ್ಞರಾದ ಶ್ರೀ ಸಿದ್ದರಾಮಯ್ಯನವರ ಮಾರ್ಗದರ್ಶನದಲ್ಲಿ ಇವತ್ತು ನಮ್ಮ ನಾಯಕರಾದಂತಹ ಶ್ರೀ ಕುಮಾರಸ್ವಾಮಿಯವರು ಹಾಗೂ ಉಪ ಮುಖ್ಯಮಂತ್ರಿಗಳಾದಂತಹ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಡಾ.ಜಿ.ಪರಮೇಶ್ವರ್ ಅವರ ನೇತೃತ್ವದಲ್ಲಿ ಇವತ್ತು ಜನಪರ ಸರ್ಕಾರ ನಡೆಯುತ್ತಿದೆ. ರಾಜ್ಯದ ಜನ ಯಾವ ರೀತಿಯಾದಂತಹ ಬಜೆಟ್ ಅನ್ನು ಕೊಡಬೇಕೆಂದು ಬಯಸುತ್ತಿದ್ದಾರೆಯೋ, ಅದನ್ನು 12 ವರ್ಷಗಳ ಕಾಲ ವಿರೋಧಪಕ್ಷದಲ್ಲಿ ಕುಳಿತು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಕುಮಾರಸ್ವಾಮಿಯವರು ಒಂದು ನೀಲಿನಕ್ಷೆಯನ್ನು ಸಿದ್ಧಪಡಿಸಿ ಪ್ರತಿದಿನ 20 ಗಂಟೆಗಳ ಕಾಲ ಇಲಾಖಾವಾರು ಅಧಿಕಾರಿಗಳ ಸಭೆಯನ್ನು ನಡೆಸಿ, ಯಾವ ರೀತಿಯ ಬಜೆಟ್ ಅನ್ನು ಕೊಡಬೇಕು? ಜನರಿಗೆ ಯಾವ ವ್ಯವಸ್ಥೆಯನ್ನು ಮಾಡಿಕೊಡಬೇಕು? ಹಿಂದಿನ ಸರ್ಕಾರ ತನ್ನ ಬಜೆಟ್‌ನಲ್ಲಿ ಏನು ಮಾಡಿತ್ತು? ನಮ್ಮ ಪ್ರಣಾಳಿಕೆಯಲ್ಲಿ ಏನೇನು ಹೇಳಿದ್ದೆವು? ಎಲ್ಲಾ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಸಾಮಾನ್ಯ ಕನಿಷ್ಟ ಕಾರ್ಯಕ್ರಮವನ್ನು ಮಾಡಿಕೊಂಡು 5ನೇ ತಾರೀಖು ಇಡೀ ರಾಜ್ಯಾದ್ಯಂತ ಒಂದು ಚಲನಚಿತ್ರದ ರೀತಿಯಲ್ಲಿ ಹೊರಬರಲಿದೆ. ಆದುದರಿಂದ ದಯಮಾಡಿ ವಿರೋಧಪಕ್ಷದ ಮಾನ್ಯ ಸದಸ್ಯರು ಆತಂಕಕ್ಕೆ ಒಳಗಾಗುವುದು ಬೇಡ. ವಿರೋಧಪಕ್ಷದ ಮಾನ್ಯ ಸದಸ್ಯರು ಹೇಳಿದಂತೆ 2 ತಿಂಗಳೋ, 2 ವರ್ಷವೋ ಎಂಬ ಅನುಮಾನ ಬೇಡ. ಐದು ವರ್ಷಗಳ ಕಾಲ ಸರ್ಕಾರ ಸುಭದ್ರವಾಗಿರುತ್ತದೆ. ಅದಕ್ಕೆ ಮಾನ್ಯ ಸದಸ್ಯರ ಸಲಹೆ-ಸಹಕಾರಗಳನ್ನು ಬಯಸುತ್ತೇನೆ.

**ಶ್ರೀ ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಿದ್ಧರಾಮಯ್ಯನವರು ಮಾನ್ಯ ಕುಮಾರಸ್ವಾಮಿಯವರಿಗೆ ನಿಮ್ಮಪ್ಪನಾಣೆ ಮುಖ್ಯಮಂತ್ರಿಯಾಗುವುದಿಲ್ಲ ಎಂದು ಹೇಳಿದ್ದರು. ಮಾನ್ಯ ಶರವಣ ಅವರಿಗೆ ಅದು ಜ್ಞಾಪಕವಿದೆಯೇ?

**ಶ್ರೀ ಆರ್.ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಿದ್ಧರಾಮಯ್ಯನವರು ಸರಿಯಾಗಿಯೇ ಹೇಳಿದ್ದಾರೆ. ಅಂದರೆ ಮಾನ್ಯ ಕುಮಾರಸ್ವಾಮಿಯವರು ಆಗಲಿಲ್ಲವೆಂದರೂ ನಾವು ಮಾಡುತ್ತೇವೆಂದು ಅವರ ಮಾತಿನ ಅರ್ಥ.

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಧಾನಮಂತ್ರಿಯವರು ಏನೇನು ಹೇಳಿದ್ದರು, ಏನೇನು ಕೊಟ್ಟಿದ್ದಾರೆಂಬುದನ್ನು ನೋಡುತ್ತಿದ್ದೇವಲ್ಲವೆ? ಜನ ಮುಂದಿನ ಲೋಕಸಭಾ ಚುನಾವಣೆಯಲ್ಲಿ ಯಾರನ್ನು ಮನೆಗೆ ಕಳುಹಿಸಬೇಕೆಂಬುದನ್ನು ತೀರ್ಮಾನ ಮಾಡಲಿದ್ದಾರೆ.

**ವೈಸ್‌ಛೇರ್ಮನ್:-** ಮಾನ್ಯ ಶರವಣ ಅವರೆ, ಚೆನ್ನಾಗಿ ಮಾತನಾಡುತ್ತಿದ್ದೀರಿ. ನನ್ನನ್ನು ನೋಡಿಕೊಂಡು ಮಾತನಾಡಿ.

**ಶ್ರೀ ಟಿ.ಎ.ಶರವಣ:-** ಬಡವರಿರಬಹುದು, ದೀನದಲಿತರು ಇರಬಹುದು, ಶೋಷಿತರಿರಬಹುದು; ಯಾರೇ ಆದರೂ ಸಹ ಅಭಿವೃದ್ಧಿಯ ಕಡೆ ಗಮನ ಹರಿಸುವತ್ತ ನಮ್ಮ ಸರ್ಕಾರ ಹೋಗುತ್ತಿದೆ. ಈ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವಿಷಯದಲ್ಲಿ ಯಾವುದೇ ಅನುಮಾನ ಬೇಡ. ‘ನುಡಿದಂತೆ ನಡೆದ ಸರ್ಕಾರ’. ನಮಗೆ ನಮ್ಮದೇ ಆದಂತಹ ಬದ್ಧತೆ ಇದೆ. ಪತ್ರಿಕೆಗಳಲ್ಲಿ, ದೃಶ್ಯ ಮಾಧ್ಯಮಗಳಲ್ಲಿ ಬರುತ್ತಿರುವುದನ್ನು ಕುರಿತು ವಿರೋಧಪಕ್ಷದವರು ಹಲವು ರೀತಿಯ ವ್ಯಾಖ್ಯಾನವನ್ನು ಮಾಡುತ್ತಿದ್ದಾರೆ. ಏನು ಬೇಕಾದರೂ ಬರಲಿ. ರೈತರಿಗೆ ಸಾಕಷ್ಟು ಯೋಜನೆಗಳನ್ನು ಸರ್ಕಾರ ತರಲಿದೆ. ಸಾಲಮನ್ನಾ ಮಾಡುವುದಷ್ಟೆ ಅಲ್ಲ...

**ಶ್ರೀ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಶರವಣರವರು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಉಲ್ಲೇಖಿಸಿರುವಂತಹ ವಿಷಯಗಳ ಬಗ್ಗೆ ಪ್ರಸ್ತಾಪಿಸಲಿ.

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಇದರಲ್ಲಿ ರೈತರ ಸಾಲ ಮನ್ನಾ ಬಗ್ಗೆ ಇಲ್ಲವೆ? ಮಾನ್ಯ ಸದಸ್ಯರಿಗೆ ಹೀಗೆ ಮಧ್ಯೆ ಮಧ್ಯೆ ಎದ್ದು ನಿಂತು ಮಾತನಾಡದೆ, ಕುಳಿತುಕೊಳ್ಳುವುದಕ್ಕೆ ಹೇಳಿ.

**ವೈಸ್ ಛೇರ್ಮನ್:–** ಮಾನ್ಯ ನಾರಾಯಣಸ್ವಾಮಿಯವರೇ, ನಿಮ್ಮ ಅವಕಾಶ ಬಂದಾಗ ನೀವು ಮಾತನಾಡಿ.

**ಶ್ರೀ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಶರವಣ ಅವರ ವ್ಯಾಖ್ಯಾನ ಹೇಗಿದೆ ಎಂದರೆ, ಅವರೇ ಮುಖ್ಯಮಂತ್ರಿಗಳೆಂಬ ಭಾವನೆ ಅವರಲ್ಲಿದ್ದಂತಿದೆ. ಸಾಲಮನ್ನಾ ಅವರೇ ಮಾಡುವಂತಿದ್ದಾರೆ. ಅವರಿಗೆ ಎಷ್ಟು ಬೇಕೋ ಅಷ್ಟು ಮಾತ್ರ ಮಾತನಾಡುವುದಕ್ಕೆ ಹೇಳಿ.

**ವೈಸ್ ಛೇರ್ಮನ್:–** ಮಾತನಾಡಲಿ, Let him talk.

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ನಮ್ಮ ಸರ್ಕಾರ..

**ಶ್ರೀ ಕೃಷ್ಣ ಬೈರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):–** ಮಾನ್ಯ ಸಭಾಪತಿಯವರೇ, ಎಲ್ಲಾ ಮಾನ್ಯ ಸದಸ್ಯರು ಸ್ವಲ್ಪ ತಾಳ್ಮೆ ತೆಗೆದುಕೊಳ್ಳಬೇಕು. ಮೊದಲನೆಯ ದಿನವಾದ ಇಂದೇ ಇಷ್ಟು ರೂಲ್ಸ್, ಇಷ್ಟೊಂದು ಬಿಗಿಯಾಗಿಬಿಟ್ಟರೆ ಹೇಗೆ? ಒಮ್ಮೊಮ್ಮೆ ಯಾರೇ ಆಗಲಿ ಎಲ್ಲೆಯನ್ನು ಮೀರುತ್ತಾರೆ. ನಾವು ಸಹ ಮಾತನಾಡುವಾಗ ಸ್ವಲ್ಪ ಎಲ್ಲೆಯನ್ನು ಮೀರುತ್ತೇವೆ. ಇರಲಿ. ಸದನ ನಡೆಯಲಿ. ಯಾರು ಪರಿಪಕ್ವವಾಗಿರುವುದಿಲ್ಲ. ಎಲ್ಲರೂ ಒಬ್ಬರಿಗೊಬ್ಬರಿಗೆ ಆಡಳಿತ ಪಕ್ಷ ಅಥವಾ ವಿರೋಧ ಪಕ್ಷ ಸಹಕಾರ ನೀಡಬೇಕು.

**ವೈಸ್ ಛೇರ್ಮನ್:–** ಎಲ್ಲಾ ಡಿಬೇಟ್ಸ್‌ನಲ್ಲಿ wits ಇದ್ದೇ ಇರುತ್ತವೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಮಾನ್ಯ ನಾರಾಯಣಸ್ವಾಮಿಯವರು ವಿರೋಧಪಕ್ಷದ ನಾಯಕರಾಗುತ್ತಾರೆ ಎಂಬ ಭಾವನೆಯಲ್ಲಿದ್ದರು. ಆದುದರಿಂದ ಬಹಳ ಜೋರಾಗಿ ಮಾತನಾಡುತ್ತಿದ್ದಾರೆ.

ರೈತರ ಬಾಳಿನಲ್ಲಿ ಬೆಳಕು ಚೆಲ್ಲುವಂತಹ ಮಾತನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಮಾಡಿದ್ದಾರೆ. ಅದನ್ನು ಮುಂದುವರೆಸುವಂತಹ ಕೆಲಸ ನಡೆಯುತ್ತದೆ. ಜೊತೆಗೆ ಮೈಸೂರಿನಲ್ಲಿ ವೈಫೈ ಅಳವಡಿಸಿರುವಂತೆ ಬೆಂಗಳೂರಿನಲ್ಲಿಯೂ ಅಳವಡಿಸಲಾಗುವುದೆಂದು ರಾಜ್ಯಪಾಲರ ಭಾಷಣದಲ್ಲಿ ತೋರಿಸಿರುವುದಕ್ಕೆ ನಾನು ಸರ್ಕಾರವನ್ನು ಅಭಿನಂದಿಸಬಯಸುತ್ತೇನೆ. ಜೊತೆಗೆ ಬೆಂಗಳೂರು ನಗರದಲ್ಲಿ ಕಾನೂನು, ಸುವ್ಯವಸ್ಥೆ ಇರಬಹುದು, ಕುಡಿಯುವ ನೀರು ಇರಬಹುದು; ಅದಕ್ಕೆ ವಿಶೇಷವಾದಂತಹ ಕಾಳಜಿಯನ್ನು ವಹಿಸಿ ಕಾರ್ಯಕ್ರಮಗಳನ್ನು ಜಾರಿಗೆ ತರಲಾಗುವುದೆಂದು ಘೋಷಣೆ ಮಾಡಲಾಗಿದೆ. ಎಲ್ಲರ ಚಿತ್ತ ಬೆಂಗಳೂರು ನಗರದತ್ತ ಎಂದು ಹೇಳುತ್ತಿರುವಂತೆ ಬೆಂಗಳೂರು ನಗರದ ಅಭಿವೃದ್ಧಿಗಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು. 2020ರ ಒಳಗಾಗಿ ಶಿಕ್ಷಣ ವ್ಯವಸ್ಥೆಯಲ್ಲಾಗಲೀ, ಅಲ್ಪಸಂಖ್ಯಾತರಿಗೆ ಮೂಲಭೂತ ಸೌಕರ್ಯವನ್ನು ಹೆಚ್ಚಿಸುವುದಕ್ಕಾಗಲೀ, ಅಂಗನವಾಡಿ ಕೇಂದ್ರಗಳ ಮಕ್ಕಳ ಸಮಗ್ರ ಬೆಳವಣಿಗೆಗಾಗಿ ಅನೇಕ ಜನಪರವಾದ ಕಾರ್ಯಕ್ರಮಗಳನ್ನು ಈ ಸರ್ಕಾರ ತರಬೇಕೆನ್ನುವ ಒಂದು ಒಳ್ಳೆಯ ಉದ್ದೇಶದಿಂದ ರಾಜ್ಯಪಾಲರ ಭಾಷಣದಲ್ಲಿ ತೋರಿಸಲಾಗಿರುವುದನ್ನು ನಾವೆಲ್ಲರೂ ಸ್ವಾಗತಿಸಬೇಕು. ಆರು ಕೋಟಿ ಕನ್ನಡಿಗರ ವಿಶ್ವಾಸವನ್ನು ಗೆಲ್ಲುವ ಹಾದಿಯಲ್ಲಿ ನಾವು ಕೆಲಸ ಮಾಡಬೇಕು. ಜನ ಇವತ್ತು ನಮ್ಮನ್ನು ನೋಡುತ್ತಿದ್ದಾರೆ. ಹೊಸ ಸರ್ಕಾರ ಏನು ಕೆಲಸ ಮಾಡುತ್ತಿದೆ ಎಂದು ಜನ ನಮ್ಮನ್ನು ಗಮನಿಸುತ್ತಿದ್ದಾರೆ. ಎಲ್ಲರ ನಿರೀಕ್ಷೆಯಂತೆ ಈ ಸರ್ಕಾರ ಕೆಲಸ ಮಾಡುತ್ತದೆ. ಎಲ್ಲಾ ಕ್ಷೇತ್ರವಾರು ಒಳ್ಳೆಯ ಯೋಜನೆಗಳನ್ನು ಕೊಟ್ಟಿದ್ದಾರೆ. ಅದನ್ನು ನಾವೆಲ್ಲರೂ ಸ್ವಾಗತ ಮಾಡಿ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುವುದಕ್ಕೆ ಎಲ್ಲರೂ ಸಹಕಾರ ನೀಡಬೇಕೆಂದು ಕೋರುತ್ತಾ, ರಾಜ್ಯಪಾಲರ ಭಾಷಣಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ಎಲ್ಲಾ ಕಾರ್ಯಕ್ರಮಗಳು ಬಜೆಟ್‌ನಲ್ಲಿ ಬರಲಿ ಎಂಬ ನಿರೀಕ್ಷೆಯೊಂದಿಗೆ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಿನ್ನೆ ಮಾನ್ಯ ರಾಜ್ಯಪಾಲರ ಭಾಷಣವನ್ನು ನಾವು ಕೇಳಿದೆವು. ಇವತ್ತು ಮತ್ತು ನಾಳೆ ಒಟ್ಟಾರೆ ಭಾಷಣದ ಕುರಿತಂತೆ ನಮ್ಮ ಅಭಿಪ್ರಾಯಗಳನ್ನು ತಿಳಿಸುವಂತೆ ತಾವು ಅವಕಾಶವನ್ನು ಕೊಟ್ಟಿರುತ್ತೀರಿ. ಈ ಸಂದರ್ಭದಲ್ಲಿ ತಮಗೆ ಧನ್ಯವಾದಗಳನ್ನು ಸಮರ್ಪಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಟ್ಟು 19 ಪುಟಗಳ ಭಾಷಣವನ್ನು ರಾಜ್ಯಪಾಲರು ನಿನ್ನೆ ಮಾಡಿದ್ದಾರೆ. ಅದರಲ್ಲಿ ಎರಡನೆಯ ಪುಟದಲ್ಲಿ ಅನ್ನದಾತನ ಬದುಕನ್ನು ಹಸನುಗೊಳಿಸಲು ನಮ್ಮ ಸರ್ಕಾರವು ಮಾನವೀಯತೆಯ ಚೌಕಟ್ಟಿನಲ್ಲಿ ನಿಲುವು-ನಿರ್ಧಾರಗಳನ್ನು ಕೈಗೊಳ್ಳಲಿದೆ ಎಂ ದು ಇದೆ. ರೈತರ ಬದುಕನ್ನು ಹಸನುಗೊಳಿಸುವುದಕ್ಕಾಗಿ ಏನೇನು ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳಿ ಇದರಲ್ಲಿ ಯಾವುದೇ ಸ್ಪಷ್ಟತೆ ಇಲ್ಲ. ಉದಾಹರಣೆಗೆ ನಾನು ಕೆಲವು ಅಂಶಗಳ ಬಗ್ಗೆ ಬೆಳಕು ಚೆಲ್ಲುವುದಕ್ಕೆ ಪ್ರಯತ್ನ ಪಡುತ್ತೇನೆ. ಈ ಸರ್ಕಾರ ಯಾವ ಬೇಸ್ ಮೇಲೆ ರೈತರ ಬದುಕನ್ನು ಹಸನು ಮಾಡುವುದಕ್ಕೆ ಹೊರಟಿದೆ? ಈ ಮುಂಚೆ ಕೆರೆಗಳನ್ನು ತುಂಬಿಸುವುದರ ಬಗ್ಗೆ ನಾವು ಚರ್ಚೆ ಮಾಡಿದ್ದೆವು. ಕಳೆದ ಸರ್ಕಾರ ಮತ್ತು ಈ ಸರ್ಕಾರ ಈ ರಾಜ್ಯದಲ್ಲಿ ಎಷ್ಟು ಕೆರೆಗಳನ್ನು ತುಂಬಿಸಿತು? ಎಷ್ಟು ಜನ ರೈತರಿಗೆ ವಿದ್ಯುತ್ ಅನ್ನು ಕೊಟ್ಟಿತು? ಎಷ್ಟು ಕೋಟಿ ಜನ ರೈತರ ಬೆಳೆಗಳಿಗೆ ಸರಿಯಾದ ಬೆಲೆಯನ್ನು ಕೊಟ್ಟಿತು? ಎಷ್ಟು ಬೋರ್‌ವೆಲ್‌ಗಳಲ್ಲಿ ನೀರಿತ್ತು?

**(...ಮುಂದು)**

(030)03.07.20185.00ಕೆಜಿ.ಆರ್‌ಎನ್

**(ವೈಸ್‌ಚೆರ್ಮನ್‌ರವರ ಉಪಸ್ಥಿತಿ)**

**ಎನ್.ರವಿಕುಮಾರ್ (ಮುಂದು..):-** ಎಷ್ಟು ಜನ ರೈತರಿಗೆ ಉತ್ಸಾಹ ಬರುವಂತಹ ಹಾಗೂ ಉಲ್ಲಾಸ ಬರುವಂತಹ ಕಾರ್ಯಕ್ರಮಗಳನ್ನು ರೂಪಿಸಿದೆ ಎನ್ನುವ ಬಗ್ಗೆ ನಮ್ಮ ರಾಜ್ಯದ ರೈತರ ಮಧ್ಯದಲ್ಲಿ ಸರ್ವೇ ಮಾಡಿದರೆ ಯಾರು ಸಹ ಸರ್ಕಾರವನ್ನು ಬೆಂಬಲಿಸುವಂತಹ ಅಭಿಪ್ರಾಯವನ್ನು ಕೊಡುವುದಿಲ್ಲ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈಗ ಉದಾಹರಣೆಗೆ, ರೈತರಿಗೆ ಬೇಕಾದಂತಹ ಕಾರ್ಯಕ್ರಮಗಳನ್ನು ಸರ್ಕಾರ ಜಾರಿಗೆ ತಂದಿದೆಯಾದರೆ, ಏಕೆ ಪ್ರತಿವರ್ಷದಿಂದ ವರ್ಷಕ್ಕೆ, ಪ್ರತಿ ದಿವಸದಿಂದ ದಿನಕ್ಕೆ ಹಳ್ಳಿಗಳು ಖಾಲಿಯಾಗುತ್ತಿವೆ. ಏಕೆ ರೈತರು ನಗರ ಪ್ರದೇಶಕ್ಕೆ ಬರುತ್ತಿದ್ದಾರೆ. ರೈತರ ಬದುಕಿನಲ್ಲಿ ಏಕೆ ಉತ್ಸಾಹ ತೋರಿಸುತ್ತಿಲ್ಲ. ಏಕೆ ರೈತರು ಕೃಷಿ ಬದುಕು ಬೇಡವೆಂದು ಮಾತನಾಡಿಕೊಳ್ಳುತ್ತಿದ್ದಾರೆ. ಏಕೆ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಏಕೆ ರೈತರ ಬದುಕಿನಲ್ಲಿ ಜಿಗುಪ್ಸೆ ತುಂಬುಹೋಗುತ್ತಿದೆ. ಹಾಗಾಗಿ, ನನ್ನ ಪ್ರಕಾರ ರೈತರ ವಿಷಯದಲ್ಲಿ ಸರ್ಕಾರ ಚೆಲ್ಲಾಟವಾಡಿದೆ ಹೊರತು ಯಾವುದೇ ರೀತಿಯಲ್ಲೂ ಜೀವನದಲ್ಲಿ ಉತ್ಸಾಹ ತರುವಂತಹ ಕೆಲಸವನ್ನು ಕಳೆದ ಸರ್ಕಾರ ಮಾಡಿಲ್ಲ. ಇದರ ಪರಿಣಾಮವಾಗಿಯೇ ಕಳೆದ ವರ್ಷ 3800 ಜನ ರೈತರು ಆತ್ಮಹತ್ಯೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡಿಕೊಂಡರು. ರೈತರು ಏಕೆ ನಮಗೆ ಸಾಲ ಸಿಕ್ಕುತ್ತಿಲ್ಲ, ಸಾಲ ಸಿಕ್ಕುತ್ತಿಲ್ಲವೆಂದು ಹೇಳುತ್ತಿದ್ದಾರೆ. ಸರ್ಕಾರ ಸರಿಯಾದಂತಹ ಕ್ರಮಗಳನ್ನು ತೆಗೆದುಕೊಂಡಿದ್ದರೆ ಇವತ್ತು ರೈತರು ಚೆನ್ನಾಗಿ ಇರಬೇಕಾಗಿತ್ತು ಅಲ್ಲವೇ? ಇವತ್ತು ರೈತರಿಗೆ ಸಾಲ ಇಲ್ಲದಿದ್ದರೆ ಬಿತ್ತನೆ ಮಾಡುವುದಕ್ಕೆ ಆಗುವುದಿಲ್ಲ. ಅವರ ಮಕ್ಕಳನ್ನು ಶಾಲೆಗೆ ಕಳುಹಿಸುವುದಕ್ಕೆ ಆಗುವುದಿಲ್ಲ. ಈ ತರಹದ ಪರಿಸ್ಥಿತಿ ರೈತರ ಬದುಕಿನಲ್ಲಿದೆ. ನನ್ನ ಪ್ರಕಾರ, ಅನ್ನದಾತನ ಬದುಕನ್ನು ಹಸನುಗೊಳಿಸಲು ನಮ್ಮ ಸರ್ಕಾರವು ಮಾನವೀಯತೆಯ ಚೌಕಟ್ಟಿನಲ್ಲಿ ನಿಲವು-ನಿರ್ಧಾರಗಳನ್ನು ಕೈಗೊಳ್ಳಲಿದೆ ಎಂದು ಹೇಳಿರುವುದು ಅತ್ಯಂತ ಜಳ್ಳು ಭರವಸೆಯ ಭಾಷಣವೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ರಾಜ್ಯಪಾಲರ ಭಾಷಣದ ಪುಸ್ತಕದ ಪ್ಯಾರಾ ಸಂಖ್ಯೆ 3 ರಲ್ಲಿ 'ಶಿಕ್ಷಣವೇ ಶಕ್ತಿ' ಎಂಬುದರ ಅರಿವು ನನ್ನ ಸರ್ಕಾರಕ್ಕಿದೆ ಎಂದು ಹೇಳಿದ್ದಾರೆ. ಇದರಲ್ಲಿ ಸರಿಯಾಗಿ ಮಕ್ಕಳಿಗೆ ಬಿಸಿಯೂಟ ಸಿಗುತ್ತಿಲ್ಲ. ಆದರೆ, ಈ ರಾಜ್ಯಪಾಲರ ಭಾಷಣದ ಪುಸ್ತಕದಲ್ಲಿ 'ಶಿಕ್ಷಣವೇ ಶಕ್ತಿ' ಎಂದು inverted comma ದಲ್ಲಿ ಹಾಕಿದ್ದಾರೆ. ಮೊನ್ನೆ ದಿವಸ ನಮ್ಮ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು Open Book Exam ಎಂದು ಹೇಳಿರುವುದು ಪತ್ರಿಕೆಗಳಲ್ಲಿ ಪ್ರಕಟವಾಗಿದೆ. News Paper ಓದುತ್ತೀರಾಬೇಕಾದರೆ, ಏನಿದು Open Book Exam? ಬಹಳಷ್ಟು ಜನರು ನಗುತ್ತಿದ್ದರು. ಅಂದರೆ, ಪುಸ್ತಕ ಕೊಟ್ಟು ಪರೀಕ್ಷೆ ಬರೆಸುವುದು ಇದು Open Book Exam. ಈಗ closed book ಇದ್ದುಕೊಂಡು ಒಂದು ವರ್ಷದಲ್ಲಿ ಪೂರ್ತಿ ಓದಿಕೊಂಡು 8 ರಿಂದ 10 ದಿವಸಗಳಲ್ಲಿ ಪರೀಕ್ಷೆ ಬರೆದಾಗ ಅದರಲ್ಲೂ ಅನೇಕ ಜನ ವಿದ್ಯಾರ್ಥಿಗಳು ಅನುತ್ತೀರ್ಣರಾಗುತ್ತಾರೆ. ಹಾಗಾದರೆ, Open Book Exam ವಿದ್ಯಾರ್ಥಿಗಳು ಅನುತ್ತೀರ್ಣ ಆಗುವುದಿಲ್ಲವೇ? Open Book Exam ಕೊಟ್ಟಾಗಲೂ ಸಹ, ವಿದ್ಯಾರ್ಥಿಗಳು ಅನುತ್ತೀರ್ಣರಾದರೆ ಅವರ ತಂದೆ-ತಾಯಿಗಳು ಏನು ಅಂದುಕೊಳ್ಳಬಹುದು. Closed Book Exam ಇದ್ದಂತಹ ಸಂದರ್ಭದಲ್ಲಿಯೂ ಸಹ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರು. Open Book Exam ಕೊಟ್ಟಾಗಲೂ ಸಹ ವಿದ್ಯಾರ್ಥಿ ಅನುತ್ತೀರ್ಣನಾಗಿದ್ದಾನೆಂದರೆ, ಆ ವಿದ್ಯಾರ್ಥಿ ಉಪಯೋಗವಿಲ್ಲವೆಂದು ಆತನ ತಂದೆ ತಾಯಿ ಆತನನ್ನು ಹೊರಗಡೆ ಹಾಕಿಬಿಡಬಹುದು. ಹಾಗಾದರೆ, ನನಗೆ ಅನಿಸುವುದೇನೆಂದರೆ, ಈ Open Book Exam ಎನ್ನುವುದನ್ನು ಮಾನ್ಯ ಸಚಿವರು ಹೇಗೆ ಹೇಳಿದರು? 'ಶಿಕ್ಷಣವೇ ಶಕ್ತಿ' ಎಂದು ಬರೆಯಬೇಕಾದಂತಹ ಸಂದರ್ಭದಲ್ಲಿ ಇದರ ಕೆಳಗಡೆ ಬರುವಂತಹ ಅಂಶಗಳು ಏನು? ಈ ಸಂದರ್ಭದಲ್ಲಿ ನಾನು ಇನ್ನೊಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ನಮ್ಮ ರಾಜ್ಯದಲ್ಲಿ 412 ಡಿಗ್ರಿ ಕಾಲೇಜುಗಳು ಇವೆ. ಈ ಅಂಕಿಸಂಖ್ಯೆ ಸರಿ ಇದೆ ನಾನು ಹೇಳುವುದಿಲ್ಲ. 412 ಡಿಗ್ರಿ ಕಾಲೇಜುಗಳ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪೈಕಿ ಸುಮಾರು 390 ಕಾಲೇಜುಗಳಲ್ಲಿ ಪ್ರಾಶಂಪಾಲರು ಇಲ್ಲ. ಆ ಕಾಲೇಜುಗಳ ವ್ಯವಸ್ಥೆ ಹೇಗೆ ಇರುತ್ತದೆ. ಆ ಕಾಲೇಜುಗಳ ಆಡಳಿತ ವ್ಯವಸ್ಥೆ ಹೇಗೆ ನಿರ್ವಹಣೆ ಆಗುತ್ತದೆಂದು ಆ ದೇವರೆ ಬಲ್ಲ. ಈಗೀಗ ಮೂರು University ಗಳಿಗೆ Vice Chancellor ಬಂದರು. ನಮ್ಮ ರಾಜ್ಯದಲ್ಲಿರುವ ಒಟ್ಟು University ಗಳಲ್ಲಿ 7 University ಗಳಿಗೆ, ಒಂದು ವರ್ಷದಿಂದ Vice Chancellor ಇರಲಿಲ್ಲ. ಹೀಗಾದರೆ, ಶಿಕ್ಷಣದ ಕಥೆ ಏನು? ಒಂದು ವರ್ಷದಿಂದಲೂ ಮಾನ್ಯ ಶಿಕ್ಷಣ ಸಚಿವರು ಏನು ಮಾಡುತ್ತಿದ್ದರು? ನಾನು ಮಾನ್ಯ ಶಿಕ್ಷಣ ಸಚಿವರನ್ನು ಮತ್ತು ಮಾನ್ಯ ಮುಖ್ಯಮಂತ್ರಿಗಳನ್ನು ಈಗಲೂ ಕೇಳಲು ಬಯಸುತ್ತೇನೆ. 390 ಡಿಗ್ರಿ ಕಾಲೇಜುಗಳಿಗೆ ಪ್ರಾಂಶುಪಾಲರು ಇಲ್ಲ. ಸರ್ಕಾರ ಏನು ಮಾಡುತ್ತಿದೆ? ವಿದ್ಯಾರ್ಥಿಗಳು ಪರೀಕ್ಷೆ ಯಾವಾಗಲೂ ಬರೆಯುತ್ತಾರೆ. ಅದರ ಫಲಿತಾಂಶ ಯಾವಾಗಲೂ ಬರುತ್ತದೆ. ನನ್ನ ಪ್ರಕಾರ, ಸಾವಿರಾರು ಜನ ಶಿಕ್ಷಕರ ಹುದ್ದೆಗಳು ಖಾಲಿ ಇವೆ. ನಾವು University Education quality ಬಗ್ಗೆ ಮಾತನಾಡುತ್ತೇವೆ. ಹಾಗಾಗಿ, 'ಶಿಕ್ಷಣವೇ ಶಕ್ತಿ' ಎಂದು inverted comma ದಲ್ಲಿ ಹಾಕಿರುವುದು ಏನಿದೆ ಅದು ಹೇಗೆ 'ಶಿಕ್ಷಣವೇ ಶಕ್ತಿ' ಆಗುತ್ತದೆ? ಶಿಕ್ಷಣದ ಕಥೆ ಈ ರೀತಿಯಾದರೆ, ಇನ್ನೂ ಬೇರೆ ಬೇರೆ ಕ್ಷೇತ್ರಗಳ ಪರಿಸ್ಥಿತಿ ಯಾವ ರೀತಿ ಇರುತ್ತದೆ ಎಂಬುದನ್ನು ಬಹಳ ಗಂಭೀರವಾಗಿ ಚಿಂತನೆ ಮಾಡಬೇಕಾಗುತ್ತದೆ.

ಮಾನ್ಯ ಸಭಾಪತಿಯವರೇ, ಇನ್ನೂ ನಮ್ಮ ರಾಜ್ಯದ ರೈತರು ಇಸ್ರೇಲ್ ಮಾದರಿಯ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳಬೇಕು ಎಂಬುದು ನನ್ನ ಸರ್ಕಾರದ ಬಯಕೆ ಎಂದು ಮಾನ್ಯ ರಾಜ್ಯಪಾಲರ ಭಾಷಣ ಮೂಲಕ ಹೇಳಿಸಿದ್ದಾರೆ. ಇಸ್ರೇಲ್ ಮಾದರಿಯ ಕೃಷಿ ಎಂದರೆ ಏನು? ಇಸ್ರೇಲ್ ಮಾದರಿಯ ಮೂಲಕ ನಮ್ಮ ರಾಜ್ಯದಲ್ಲಿ ಏನು ಮಾಡುವುದಕ್ಕೆ ಹೊರಟ್ಟಿದ್ದಾರೆ? ಹಾಗಾದರೆ, ನಮ್ಮ ಕರ್ನಾಟಕದ ಮಾದರಿ ಕೃಷಿ ಪದ್ಧತಿ failure ಆಯಿತೇ? ಭಾರತೀಯ ಮಾದರಿ failure ಆಯಿತೇ? ನಮ್ಮಲ್ಲಿ ಏನು failure ಆಗಿದೆ? ಏಕೆ ಇಸ್ರೇಲ್ ಮಾದರಿಗೆ ಹೋದರು. ಇಸ್ರೇಲ್ ಮಾದರಿಯ ಕೃಷಿಯಲ್ಲಿ ಅಂತಹದ್ದು ಏನಿದೆ. ಇವರು ಯಾವ ರೈತ ತಜ್ಞರ ಜೊತೆಗೆ ಚರ್ಚೆ ಮಾಡಿದ್ದಾರೆ. ಇವರು ಇಸ್ರೇಲ್ ಮಾದರಿಯ ಕೃಷಿಯನ್ನು ತೆಗೆದುಕೊಂಡು ಬಂದು ಏನು ಮಾಡುವುದಕ್ಕೆ ಹೊರಟಿದ್ದಾರೆ. ಈ ನೆಲದಲ್ಲಿ ನೀರು ಇಲ್ಲದೆ ಹೋದರೆ, ಸರಿಯಾದ ಬೆಳೆ ಬಾರದಿದ್ದಲ್ಲಿ, ಇಂತಹ ಸಮಸ್ಯೆಗಳು ನಮ್ಮಲ್ಲಿ ಇದ್ದಾಗ್ಯೂ ಸಹ, ಇಸ್ರೇಲ್ ಮಾದರಿಯ ಕೃಷಿಯನ್ನು ನಮ್ಮ ರಾಜ್ಯಕ್ಕೆ ತಂದರೆ, ಅದು success ಆಗಿಬಿಡುತ್ತದೆಯೇ? ರೈತರು ಬಂಗಾರದ ಬೆಳೆಯನ್ನು ಬೆಳೆದು ಬಿಡುತ್ತಾರೆಯೇ? ದಯವಿಟ್ಟು ಇದಕ್ಕೆ ಉತ್ತರವನ್ನು ಬಯಸುತ್ತೇನೆ. ರಾಜ್ಯಪಾಲರ ಮೂಲಕ ಈ ರೀತಿಯಾದಂತಹ ನಿರಸವಾದಂತಹ ಭಾಷಣವನ್ನು ಹೇಳಿಸಿದ್ದಾರೆಂಬ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಶ್ರೀ ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ತುಂಬಾ ತ್ಾಳ್ಮೆಯಿಂದ ಕುಳಿತುಕೊಂಡಿದ್ದೇನೆ..

(ಗೊಂದಲ)

**ಸಭಾಪತಿಯವರು:-** ಮಾನ್ಯ ಭೋಜೇಗೌಡರೇ, ಮಾನ್ಯ ಸದಸ್ಯರದ್ದು maiden speech ಇದೆ. ದಯಮಾಡಿ ಕುಳಿತುಕೊಳ್ಳಿ. ನಿಮಗೆ ಇನ್ನೂ ಗೊತ್ತಿಲ್ಲ. He is speeking first time.

(ಗೊಂದಲ)

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ಎಲ್ಲಾ ಚರ್ಚೆಗೆ ಉತ್ತರ ಕೊಡಬೇಕಾಗಿರುವವರು ಮಾನ್ಯ ಮುಖ್ಯಮಂತ್ರಿಯವರು.

(ಗೊಂದಲ)

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ರೈತರು ಸಾಲಗಾರರಾಗಿ ಹತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ.

(ಗೊಂದಲ)

**ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕಡೆಯ ಪಕ್ಷ ಇಸ್ರೇಲ್ ಮಾದರಿಯ ಕೃಷಿಯು ಯಾವ ರೀತಿ ಇದೆ ಎಂಬುದರ ಬಗ್ಗೆ ವಿವರಣೆಯನ್ನು ಕೊಡಬೇಕು ಅಲ್ಲವೇ?

**ಸಭಾಪತಿಯವರು:-** ಮಾನ್ಯ ಭೋಜೇಗೌಡರೇ, ಮಾನ್ಯ ಸದಸ್ಯರು maiden speech ಮಾಡುತ್ತಿದ್ದಾರೆಂದು ನಿಮಗೆ ತಿಳಿಯಲಿಲ್ಲವೇ? You must ask me. Hon'ble Member is speaking first time on the floor of this House. So, allow him to speak. Why you are interfering?

(ಗೊಂದಲ)

**ಶ್ರೀ ಶಿವಶಂಕರರೆಡ್ಡಿ (ಕೃಷಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಏನು ಸಮಸ್ಯೆಗಳನ್ನು ಎತ್ತಿದ್ದಾರೆ. ಅದಕ್ಕೆಲ್ಲಾ ವಿವರಣೆಯನ್ನು ಕೊಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-**ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದಲ್ಲಿ ರೈತರಿಗೆ ಏನೇನು ಸಮಸ್ಯೆಗಳು ಇದ್ದಾಗಲೂ ಸಹ ಇಸ್ರೇಲ್ ಮಾದರಿಯನ್ನು ತಂದರೆ ಅದು success ಆಗುತ್ತದೆಯೇ ಎಂಬ ಪ್ರಶ್ನೆಯನ್ನು ಇಟ್ಟಿದ್ದೇನೆ. ಇನ್ನೂ ಮಾನ್ಯ ರಾಜ್ಯಪಾಲರ ಭಾಷಣದ ಪ್ಯಾರಾ ಸಂಖ್ಯೆ 7 ರಲ್ಲಿ ‘ನನ್ನ ಸರ್ಕಾರವು ರಾಜ್ಯದಲ್ಲಿ ತೃಪ್ತಿಕರವಾದ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಯ್ದುಕೊಂಡಿದೆ’ ಎಂದು ರಾಜ್ಯಪಾಲರ ಮೂಲಕ ಹೇಳಿಸಿದ್ದಾರೆ. ನನಗೆ ಈ ಮಾತನನ್ನು ಹೇಳಬೇಕಾದರೆ ಬಹಳ ನಗು ಬರುತ್ತದೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ತಾವು ಇತಿಮಿತಿಯಲ್ಲಿ ನೋಡಿಕೊಂಡು ಆದಷ್ಟು ಮಟ್ಟಿಗೆ finish your speech. ದಯಮಾಡಿ, ಅದನ್ನು ತಾವು ನೋಡಿಕೊಳ್ಳಿ. ಮೊದಲನೇ ಸಲ ಮಾತನಾಡುವುದಕ್ಕೆ ಪ್ರಯತ್ನ ಪಟ್ಟಿದ್ದೀರಿ. ಅದಕ್ಕೆ ನಾನು interfere ಮಾಡುವುದಕ್ಕೆ ಹೋಗುವುದಿಲ್ಲ. ಆದರೆ, ನೀವು ನಿಮ್ಮನ್ನು control ಮಾಡಿಕೊಂಡು timings ಪ್ರಕಾರ ಬಿಟ್ಟುಬಿಡಿ. ಇನ್ನೂ ಬೇಕಾದಷ್ಟು ಜನ ಸದಸ್ಯರು ಮಾತನಾಡುವವರು ಇದ್ದಾರೆ.

**ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಆಯಿತು.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ರಾಜ್ಯಪಾಲರ ಭಾಷಣದಲ್ಲಿ ನನ್ನ ಪ್ರಕಾರ ಕಾನೂನು ಸುವ್ಯಸ್ಥೆಯನ್ನು ಕಾಯ್ದುಕೊಂಡಿದೆ ಎಂದು ಹೇಳಿದ್ದಾರೆ. ಆದರೆ, ಈಗ ಬೆಂಗಳೂರಿನಲ್ಲಿ ಮಹಿಳೆಯರು ರಾತ್ರಿ ವೇಳೆಯಲ್ಲಿ ಓಡಾಡುವುದಕ್ಕೂ ಸಹ ಹೆದರಿಕೊಳ್ಳುವಂತಹ ಪರಿಸ್ಥಿತಿ ಇದೆ. ರಾತ್ರಿ ವೇಳೆ ಎಂದರೆ, ರಾತ್ರಿ 10 ಗಂಟೆಯ ಮೇಲೆ ಅಲ್ಲ. ರಾತ್ರಿ 10 ಗಂಟೆಯ ಒಳಗೂ ಸಹ ಇದೆ. ಅವರವರ ವಾಹನಗಳಲ್ಲಿ ಸುರಕ್ಷಿತವಾಗಿ ಮಗಳು ಮತ್ತು ಮನೆಯವರು ಬಂದರೋ ಇಲ್ಲವೋ ಎಂದು ಗಾಬರಿ ಪಡುವಂತಹ ಪರಿಸ್ಥಿತಿ ಬೆಂಗಳೂರಿನಲ್ಲಿ ಇದೆ. ಇದು Capital Centre. ಕೆಲವು ತಿಂಗಳುಗಳ ಹಿಂದೆ ಪೊಲೀಸ್ ಅಧಿಕಾರಿಯ ಪತ್ನಿಯು ಅವರ ಕೊರಳಿನಲ್ಲಿ ಹಾಕಿಕೊಂಡಿದ್ದ ಚಿನ್ನದ ಸರವನ್ನು ಕಿತ್ತುಕೊಂಡು ಹೋದರು. ಕರ್ನಾಟಕದ Capital Centre, ಬೆಂಗಳೂರಿನ ಕಾನೂನು ಸುವ್ಯವಸ್ಥೆ ಅತ್ಯಂತ ಹದಗೆಟ್ಟಿರುವಂತಹ ಪರಿಸ್ಥಿತಿ ಇದೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

(ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಎನ್.ರವಿಕುಮಾರ್ (ಮುಂದು...):-**

ಬೆಂಗಳೂರಿನ ಕಾನೂನು ಸುವ್ಯವಸ್ಥೆ ಅತ್ಯಂತ ಹದಗೆಟ್ಟಿರುವಂತಹ ಪರಿಸ್ಥಿತಿ ಇದೆ. ಪೋಲೀಸ್ ಅಧಿಕಾರಿಗಳ ಪರಿಸ್ಥಿತಿ ಈ ರೀತಿ ಇದ್ದರೆ, ಇನ್ನು ಸಾಮಾನ್ಯ ಜನರ ಮತ್ತು ಸಾಮಾನ್ಯ ಮಹಿಳೆಯರ ಪರಿಸ್ಥಿತಿ ಹೇಗಿದೆ ಎನ್ನುವುದು ಅತ್ಯಂತ ಗಂಭೀರವಾಗಿರುವಂತಹ ವಿಷಯ ಇದೆ. ಆದರೆ, ರಾಜ್ಯಪಾಲರ ಮೂಲಕ ಕರ್ನಾಟಕ ರಾಜ್ಯದಲ್ಲಿ ತೃಪ್ತಿಕರವಾದ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಯ್ದುಕೊಂಡಿದೆ ಎಂದು ಹೇಳಿ ಭಾಷಣವನ್ನು ಮಾಡಿಸಿದ್ದಾರೆ. ಅತ್ಯಂತ ನೀರಸವಾಗಿರುವಂತಹ ಭಾಷಣ ಎನ್ನುವುದಕ್ಕೆ ಇದು ಒಂದು ಉದಾಹರಣೆ ಎಂದು ನಾನು ಹೇಳಬಯಸುತ್ತೇನೆ.

ಇನ್ನು ಪೇಜ್ ನಂಬರ್.5, ಪಾಯಿಂಟ್ ನಂಬರ್.9ರಲ್ಲಿ 371(ಜೆ) ಅನುಚ್ಛೇಧದ ಅನುಸಾರ ಹೈದ್ರಾಬಾದ್-ಕರ್ನಾಟಕದ ವಿಕಾಸದ ಬಗ್ಗೆ ಹೇಳಿದ್ದಾರೆ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

ಮಾನ್ಯ ಸಭಾಪತಿಯವರೇ, ಹೈದ್ರಾಬಾದ್ ಕರ್ನಾಟಕ ಅದು ಆದಷ್ಟು ಬೇಗ ವಿಕಾಸವಾಗಬೇಕು. ಅದು ಬೆಂಗಳೂರಿನಂತೆ ಆಗಬೇಕು, ಅದು ಮಂಗಳೂರಿನಂತೆ ಆಗಬೇಕು ಮತ್ತು ಉಡುಪಿಯಂತೆ ಆಗಬೇಕು. ಹೈದ್ರಾಬಾದ್ ಕರ್ನಾಟಕದ ಜನ ಕರ್ನಾಟಕ ರಾಜ್ಯದ ಮುಖ್ಯವಾಹಿನಿಯಲ್ಲಿ ಬಹು ಬೇಗ ಸೇರಬೇಕು ಎನ್ನುವುದು ವಿಧಾನ ಪರಿಷತ್ತಿನಲ್ಲಿ ಇರುವಂತಹ ನಮ್ಮೆಲ್ಲ ಸದಸ್ಯರ ಬಯಕೆಯು ಆಗಿದೆ ಎಂದು ನಾನು ಭಾವಿಸುತ್ತೇನೆ. ನಾನು ಆ ಪ್ರದೇಶಗಳಿಗೆ ಪ್ರವಾಸ ಮಾಡುತ್ತಿರುತ್ತೇನೆ. ಅಲ್ಲಿ ತೆಗೆದುಕೊಂಡಿರುವಂತಹ ಮಾಹಿತಿ ಪ್ರಕಾರ, ಅಲ್ಲಿಗೆ 371(ಜೆ) ಪ್ರಕಾರವಾಗಿ ನೇಮಕ್ಕಾತಿಯಲ್ಲಿ ವಿಶೇಷಾಗಿರುವಂತಹ ಆದ್ಯತೆಯನ್ನು ಕೊಡಲಾಗಿದೆ. ಆದ್ಯತೆಯನ್ನು ಕೊಟ್ಟಾಗಲೂ ಕೂಡ ನೇಮಕಾತಿ ಆಗಿದೆಯೇ ಎಂದಾಗ, ನೇಮಕಾತಿ ಆಗಿಲ್ಲ, ಉದ್ಯೋಗವನ್ನು ಕೊಟ್ಟಿಲ್ಲ. ಸ್ವಲ್ಪ ಹತ್ತಿರದ ಅಂಕಿಅಂಶಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಸಮಾರು 40 ಸಾವಿರಕ್ಕಿಂತಲೂ ಹೆಚ್ಚು ಉದ್ಯೋಗಗಳು ಇವತ್ತಿಗೂ ಕೂಡ ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಖಾಲಿ ಉಳಿದುಕೊಂಡಿವೆ. ಹಾಗಾದರೆ ಏನು ನೇಮಕಾತಿ ಮಾಡಿದ್ದಾರೆ? ಏನು ವಿಕಾಸ ಮಾಡಿದರು ಮತ್ತು ಕೊಟ್ಟಿರುವಂತಹ ಹಣಕಾಸಿನಲ್ಲಿ ಸಾವಿರಾರು ಕೋಟಿ ರೂಪಾಯಿ ಹಣವನ್ನು ಹಾಗೆಯೇ ಉಳಿಸಿದ್ದಾರೆ ಅದನ್ನು ಖರ್ಚು ಮಾಡಿಲ್ಲ. ಏಕೆ ಖರ್ಚು ಮಾಡಿಲ್ಲ? ಹಾಗಾದರೆ ಹೈದ್ರಾಬಾದ್ ಕರ್ನಾಟಕದ ವಿಕಾಸ ಬೇಕಿಲ್ಲವೆ ಎನ್ನುವಂತಹ ಪ್ರಶ್ನೆ ನನ್ನನ್ನು ಕಾಡುತ್ತಿದೆ.

ಪೇಜ್ ನಂಬರ್.6, ಪಾಯಿಂಟ್ ನಂಬರ್ 11ರಲ್ಲಿ ಕರ್ನಾಟಕವು, ಹಾಲಿನ ಸಂಗ್ರಹಣೆಯಲ್ಲಿ ದೇಶದಲ್ಲಿ ಎರಡನೇ ಸ್ಥಾನವನ್ನು ಗಳಿಸಿದೆ ಎಂದು ಹೇಳಿದ್ದಾರೆ. ಹಾಲಿನ ಸಂಗ್ರಹಣೆಯಲ್ಲಿ ದೇಶದಲ್ಲಿ ಎರಡನೇ ಸ್ಥಾನವನ್ನು ಗಳಿಸಿರುವಂಥದ್ದು ಅತ್ಯಂತ ಖುಷಿಯ ವಿಷಯ. ಆದರೆ, ಅಷ್ಟೇ ದುಃಖದ ವಿಷಯ ಏನೆಂದು ಹೇಳಿದರೆ, ಕಳೆದ ಆರು ತಿಂಗಳಿನಿಂದ ಸುಮಾರು 82ರಿಂದ 85 ಲಕ್ಷ ಲೀಟರ್ ಪ್ರತಿದಿನ ನಮ್ಮ ರಾಜ್ಯದಲ್ಲಿ ಹಾಲು ಉತ್ಪಾದನೆ ಆಗುತ್ತಿದೆ.  ಅವರಿಗೆ ಕೊಡುವಂತಹ ಪ್ರೋತ್ಸಾಹ ಧನವನ್ನು ಕಳೆದ ಆರು ತಿಂಗಳಿನಿಂದ ಕೊಟ್ಟಿಲ್ಲ. ಹತ್ತಿರ ಹತ್ತಿರ ಎಷ್ಟು amount ಎಂದು ಹೇಳಿದರೆ, ಸುಮಾರು 720 ಕೋಟಿ ರೂಪಾಯಿಗಳ amount ಆಗುತ್ತದೆ.  ಅವರೆಲ್ಲರೂ ಕೂಡ ಬಡವರಿದ್ದಾರೆ. ಕಳೆದ ಆರು ತಿಂಗಳಿನಿಂದ ಏಕೆ ಆ ಬಡವರ ಹಣ ಕಷ್ಟಪಟ್ಟು ಜೀವನ್ನು ನಿರ್ವಹಿಸುತ್ತಿರುವಂತಹ ಮಹಿಳೆಯರ ಹಣವನ್ನು ಸರ್ಕಾರ ಇನ್ನು ಕೊಟ್ಟಿಲ್ಲ ಎನ್ನುವುದು ನನಗೆ ಅರ್ಥ ಆಗದೆ ಇರುವಂತಹ ಸಂಗತಿ.

ಪೇಜ್ ನಂಬರ್.9ರಲ್ಲಿ ಈ ಪ್ಲಾಸ್ಟಿಕ್ ಕ್ಯಾರಿಬ್ಯಾಗ್‌ಗಳು ಮತ್ತು ಇತರ ಪ್ಲಾಸ್ಟಿಕ್ ವಸ್ತುಗಳ ಉತ್ಪಾದನೆ, ಸರಬರಾಜು, ಮಾರಾಟ ಮತ್ತು ಬಳಕೆಯನ್ನು ಸರ್ಕಾರವು ನಿಷೇಧಿಸಿದೆ ಎಂದು ಹೇಳಿದ್ದಾರೆ. ಇದು ಬಹಳ ಸ್ವಾಗತಾರ್ಹವಾದ ನಿರ್ಧಾರ, ಇದನ್ನು ನಾನು ಸ್ವಾಗತಿಸುತ್ತೇನೆ. ಆದರೆ, ಇದರ ಪರಿಣಾಮವಂತು ಕರ್ನಾಟಕದಲ್ಲಿ ಎಲ್ಲಿ ಹೋದರೂ ಸಹ ಕಾಣಿಸುವುದಿಲ್ಲ. ಯಾರ ಕೈಯಲ್ಲಿ ನೋಡಿದರು ಸಹ ಪ್ಲಾಸ್ಟಿಕ್ ಬ್ಯಾಗ್ ಇರುತ್ತದೆ. ಯಾರ ಕೈಯಲ್ಲಿ ನೋಡಿದರು ಸಹ ಪ್ಲಾಸ್ಟಿಕ್‌ನ ಕವಚ ಇರುತ್ತದೆ. ಹಾಗಾಗಿ ಮಾನ್ಯ ಸಭಾಪತಿಯವರೇ, ಅದು ನಿರ್ಧಾರವಾಗಿರುತ್ತದೆ, ಅದು ಪೇಪರ್‌ನಲ್ಲಿ ಇರುತ್ತದೆ and proper implementation ಆಗಿರುವುದಿಲ್ಲ. ಹಾಗಾಗಿ ಇದು ರಾಜ್ಯಪಾಲರ ಮೂಲಕ ಪ್ಲಾಸ್ಟಿಕ್ ನಿಷೇಧ ಆಗಿದೆ ಎಂದು ಹೇಳಿಸಿರುವಂಥದ್ದು ಇದು successful ಆಗಿರುವಂತಹ ಕಾರ್ಯಕ್ರಮವಲ್ಲ ಎನ್ನುವಂತಹ ಮಾತನ್ನು ಮಾನ್ಯ ಸಭಾಪತಿಯವರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

ಇನ್ನು ಹಾಸ್ಟೆಲ್ ವಸತಿ ನಿಲಯಗಳ ಬಗ್ಗೆ, ಪ್ರಸ್ತಾಪ ಮಾಡಿದ್ದಾರೆ. ನಾನು ಎರಡು ಬಾರಿ ಹಾಸ್ಟೆಲ್‌ಗಳ ಸರ್ವೆಕಾರ್ಯವನ್ನು ಮಾಡಿದ್ದೇನೆ. ಮಾನ್ಯ ಶಿಕ್ಷಣ ಸಚಿವರು ಇಲ್ಲೇ ಇದ್ದರು ಮತ್ತು ಮಾನ್ಯ ಸಮಾಜ ಕಲ್ಯಾಣ ಸಚಿವರು ಮತ್ತು ಮಾನ್ಯ ಸಭಾಪತಿಯವರ ಗಮನಕ್ಕೂ ಸಹ ತರುತ್ತೇನೆ. ರಾಜ್ಯದ ಸರ್ಕಾರಿ ಹಾಸ್ಟೆಲ್‌ಗಳ ಸ್ಥಿತಿ ಅತ್ಯಂತ ನರಕಸದೃಶ್ಯವಾಗಿದೆ. ನಾವು ಮಾಡಿರುವಂತಹ ಸರ್ವೆ ಪ್ರಕಾರ 10ರಿಂದ 20 ವಿದ್ಯಾರ್ಥಿಗಳು ಹಾಸ್ಟೆಲ್‌ನಲ್ಲಿ ಇರುವಂತಹ ಒಂದು ಶೌಚಾಲಯ ಅನ್ನು ಉಪಯೋಗಿಸುವಂತಹ ಪರಿಸ್ಥಿತಿ ಇದೆ. ಆ ಶೌಚಾಲಯಗಳ ಸ್ಥಿತಿ ಹೇಗಿದೆ ಎಂದರೆ, ಆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಶೌಚಾಲಯವನ್ನು ನೋಡಿ ಬಂದ ಮೇಲೆ ಯಾರಿಗೂ ತಿಂಡಿ ತಿನ್ನುವುದಕ್ಕೆ ಆಗುವುದಿಲ್ಲ, ಊಟ ಮಾಡುವುದಕ್ಕೆ ಆಗುವುದಿಲ್ಲ. ಅಂತಹ ಒಂದು ಗಬ್ಬು ನಾರುತ್ತಿರುವಂತಹ ಪರಿಸ್ಥಿತಿ ಕರ್ನಾಟಕ ರಾಜ್ಯದ ಸರ್ಕಾರಿ ಹಾಸ್ಟೆಲ್‌ಗಳಲ್ಲಿ ಇದೆ. ಇದಕ್ಕೇನಾದರೂ ಸವಾಲು ಹಾಕುವುದಾದರೆ, ನಾವು ಸರ್ವೇ ಮಾಡಿರುವಂತಹ ವರದಿಯನ್ನು ಮಂತ್ರಿಗಳಿಗೆ ಕೊಡುವುದಕ್ಕೆ ಬಯಸುತ್ತೇನೆ. ಆ ವರದಿಯನ್ನು ಇಟ್ಟುಕೊಂಡು ರಾಜ್ಯದ ಯಾವುದೇ ಹಾಸ್ಟೆಲ್‌ಗಳಿಗೆ ನಾವು ಬರುವುದಕ್ಕೆ ತಯಾರಿದ್ದೇವೆ. ಸುಮಾರು ಮೂರು ಸಾವಿರಕ್ಕಿಂತಲ್ಲೂ ಹೆಚ್ಚು ಹಾಸ್ಟೆಲ್‌ಗಳ ಸರ್ವೆಯನ್ನು ನಾವೇ ಖುದ್ದಾಗಿ ಮಾಡಿದ್ದೇವೆ. ಅತ್ಯಂತ ಚಿಂತಾಜನಕ ಪರಿಸ್ಥಿತಿ ಕರ್ನಾಟಕ ರಾಜ್ಯದ ಸರ್ಕಾರಿ ಹಾಸ್ಟೆಲ್‌ಗಳಲ್ಲಿ ಇದೆ. ರಾಜ್ಯದ ಹಾಸ್ಟೆಲ್‌ಗಳ ಬಗ್ಗೆ ಇದರಲ್ಲಿ ಉಲ್ಲೇಖ ಮಾಡಿಸಿದ್ದಾರೆ; ಹಾಸ್ಟೆಲ್‌ಗಳ ಮತ್ತು ವಸತಿ ನಿಲಯಗಳ ನಿರ್ಮಾಣಕ್ಕಾಗಿ ನಮ್ಮ ಸರ್ಕಾರ ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿಸಿದ್ದಾರೆ. ಆದರೆ, ಏನೇನು ಬದಲಾವಣೆ ಇಲ್ಲ.

ಇನ್ನು ಸ್ತ್ರೀ ಶಕ್ತಿ ಒಕ್ಕೂಟಗಳನ್ನು ರಚಿಸಿ, ನೋಂದಣಿ ಮಾಡಲಾಗಿದೆ. ವಿಶೇಷ ಪಾಲನಾ ಯೋಜನೆಯಡಿಯಲ್ಲಿ Human Immunodeficiency Virus ಸೋಂಕಿತ ಮತ್ತು ಬಾಧಿತ ಮಕ್ಕಳಿಗೆ ಆರ್ಥಿಕ ನೆರವನ್ನು ಒದಗಿಸಲಾಗುತ್ತಿದೆ, ರಾಜ್ಯದ ಪ್ರಮುಖ ಆಸ್ಪತ್ರೆಗಳಲ್ಲಿ ಮಹಿಳೆಯರು ಮತ್ತು ಮಕ್ಕಳಿಗೆ ವಿಶೇಷ ಚಿಕಿತ್ಸಾ ಘಟಕಗಳನ್ನು ಸ್ಥಾಪಿಸಲಾಗಿದೆ. ಆದರೆ, ರೋಗಿಗಳ ಸಂಖ್ಯೆ ಕಡಿಮೆ ಆಗಿಲ್ಲ. Viral diseases ಗಳು ಕರ್ನಾಟಕ ರಾಜ್ಯದಲ್ಲಿ ಹೆಚ್ಚಾಗುತ್ತಾ ಇದೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಸರ್ಕಾರಿ ಆಸ್ಪತ್ರೆಗಳ ಸರ್ವೆಯನ್ನು ಕೂಡ ನಮ್ಮ Medical Cell ನಿಂದ ನಾವು ಮಾಡಿಸಿದ್ದೇವೆ. ಅದರ ಪ್ರಕಾರ 89 PHC (Primary Health Centre) ಗಳಿಗೆ ರಸ್ತೆಗಳು ಇಲ್ಲ. ನಾನು ಹಳ್ಳಿಗಳಿಗೆ ಹೇಳುತ್ತಿಲ್ಲ. Primary Health Centreಗಳಿಗೆ ರಸ್ತೆ ಇಲ್ಲ. ಇನ್ನು ಆಸ್ಪತ್ರೆಗಳ ಪರಿಸ್ಥಿತಿ ಹೇಗಿರಬಹುದು. ಡಾಕ್ಟರ್ ಅಲ್ಲಿಗೆ ಹೋಗುತ್ತಾರೆಯೇ? ಅವರು ತಮ್ಮ ಡ್ಯೂಟಿಯನ್ನು ಮಾಡುತ್ತಾರೆಯೇ? ಅಲ್ಲಿ ಸರಿಯಾದ ಇಂಜೆಕ್ಷನ್ ಸಿಗುತ್ತದೆಯೇ? ಅಲ್ಲಿ ಸರಿಯಾದ ಮೆಡಿಸಿನ್ ಸಿಗುತ್ತದೆಯೇ? ಖಾಯಿಲೆಗಳು ವಾಸಿಯಾಗುತ್ತವೆಯೇ? ಬಹಳ ಗಂಭೀರವಾದಂತಹ ಪರಿಸ್ಥಿತಿ ಕರ್ನಾಟಕ ರಾಜ್ಯದ ಆಸ್ಪತ್ರೆಗಳಲ್ಲಿ ಇದೆ. ಹೀಗೆ ಅನೇಕ ವಿಷಯಗಳ ಬಗ್ಗೆ ನಿನ್ನೆಯ ದಿವಸ ರಾಜ್ಯಪಾಲರ ಹತ್ತಿರ 19 ಪುಟಗಳ ಭಾಷಣವನ್ನು ಏನು ಮಾಡಿಸಲಾಗಿದೆ, ಮತ್ತು ಓದಿಸಲಾಗಿದೆ ಅದು ಅತ್ಯಂತ ನೀರಸವಾಗಿರತಕ್ಕಂತಹ ಮತ್ತು ಅತ್ಯಂತ ನಿರುತ್ಸಾಹದಾಯಕವಾಗಿರುವಂತಹ ಮತ್ತು ಏನು ದಿಕ್ಕು ದೆಸೆ ಇಲ್ಲದೆ ಇರುವಂತಹ ಭಾಷಣವಾಗಿದೆ ಎನ್ನುವಂಥದ್ದನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ. ಇನ್ನು ಕೊನೆಯ ಎರಡು ಮಾತುಗಳನ್ನು ಹೇಳುವುದಾದರೆ, ಕಳೆದ ಶ್ರೀ ಸಿದ್ದರಾಮಯ್ಯನವರ ನೇತೃತ್ವದಲ್ಲಿ ಇದ್ದಂತಹ ಸರ್ಕಾರದ ಕಾರ್ಯಕ್ರಮಗಳನ್ನು ಜನ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂಪೂರ್ಣವಾಗಿ ನಿರ್ಲಕ್ಷಿಸಿದ್ದಾರೆ. ಎಷ್ಟರಮಟ್ಟಿಗೆ ಎಂದು ಹೇಳಿದರೆ ಈ ಕಾರ್ಯಕ್ರಮಗಳು ಸರಿಯಾಗಿ implementation ಆಗಿಲ್ಲದೆ ಇರುವ ಕಾರಣ, ಜನರು ಭಾರತೀಯ ಜನತಾ ಪಕ್ಷಕ್ಕೆ 104 ಸ್ಥಾನಗಳನ್ನು ಕೊಟ್ಟರು, ಕಾಂಗ್ರೆಸ್ ಪಕ್ಷಕ್ಕೆ 80 ಸ್ಥಾನಗಳನ್ನು ಕೊಟ್ಟರು ಮತ್ತು ಜೆ.ಡಿ.ಎಸ್. ಪಕ್ಷಕ್ಕೆ 37 ಸ್ಥಾನಗಳನ್ನು ಕೊಟ್ಟರು. ಅವರು ಇಬ್ಬರು ಕೂಡ ಅಧಿಕಾರಕ್ಕೆ ಬರಬಾರದು ಎನ್ನುವಂತಹ ತೀರ್ಮಾನವನ್ನು ಕರ್ನಾಟಕ ರಾಜ್ಯದ ಜನರು ಕೊಟ್ಟರು ಹಾಗಾಗಿ ಕುಮಾರ ಸ್ವಾಮಿಯವರಿಗೆ ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ, ಅವರು ಹೇಳುತ್ತಾರೆ ನಾನು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಲ್ಲ, ನಾನು ಕಾಂಗ್ರೆಸ್ ಪೋಷಿತವಾಗಿರತಕ್ಕಂಥ ಜೆಡಿಎಸ್ 37 ಜನರ ಅನಿವಾರ್ಯ ಮುಖ್ಯಮಂತ್ರಿ, ಜನರ ಮುಖ್ಯಮಂತ್ರಿಯಲ್ಲ ಎನ್ನುವಂಥದ್ದನ್ನು ಬಹಳ ಸತ್ಯವಾಗಿ ಹೇಳಿದ್ದಾರೆ. ಸತ್ಯ ಹೇಳಿರುವುದಕ್ಕೆ ನಾನು ಈ ಸಂದರ್ಭದಲ್ಲಿ ಅಭಿನಂದನೆಯನ್ನು ಸಲ್ಲಿಸುತ್ತೇನೆ.

**ಸಭಾಪತಿಯವರು**:- ಈಗ ಶ್ರೀ ಕೆ.ಅಬ್ದುಲ್ ಜಬ್ಬಾರ್ ರವರು ಮಾತನಾಡುವುದು.

**ಶ್ರೀ ಕೆ.ಅಬ್ದುಲ್ ಜಬ್ಬಾರ್ (ನಾಮನಿರ್ದೇಶಿತರು)**:- ಮಾನ್ಯ ಸಭಾಪತಿಯವರೇ, ನಾನು ನಾಳೆ ಮಾತನಾಡುತ್ತೇನೆಂದು ತಿಳಿಸಿದ್ದೇನೆ.

**ಸಭಾಪತಿಯವರು**:- ಈಗ ಶ್ರೀ ಆಯನೂರು ಮಂಜುನಾಥ್ ರವರು ಮಾತನಾಡುವುದು.

**(ಮುಂದು...)**

**(032) 03.07.2018 5.20 ವೈಎಲ್-ವಿಕೆ** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಆಯನೂರ ಮಂಜುನಾಥ್(ಪದವೀಧರರ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ಇದು ನನ್ನ maiden speech ಎಂಬುದನ್ನು ಗಮನದಲ್ಲಿಟ್ಟುಕೊಂಡು ಬಹಳ ಜನ ಮಂತ್ರಿಗಳು ಮಧ್ಯೆ ಹೇಳುವುದು ಬೇಡ, ಸದಸ್ಯರು ಹೇಳಲಿ. ನಾನು ಗಮನಿಸುತ್ತಿದ್ದೇನೆ. ಮಾನ್ಯ ಸದಸ್ಯರು ನಮ್ಮ ಮಾತುಗಳಿಗೆ ಅಡಚಣೆ ಮಾಡುವುದನ್ನು ಒಂದು ಹಂತದಲ್ಲಿ ಒಪ್ಪುತ್ತೇನೆ. ಆದರೆ, ಸದಸ್ಯರು ಮಾತನಾಡುವಾಗ ಸರ್ಕಾರವೇ ಎದ್ದು ನಿಂತರೆ, ಅದು ಸದನಕ್ಕೆ ಮತ್ತು ಮಂತ್ರಿಗಳಿಗೆ ಶೋಭೆ ತರುವುದಿಲ್ಲ. ಹಾಗಾಗಿ ಮಾನ್ಯ ಸಚಿವರಲ್ಲಿ ದಯಮಾಡಿ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಸಾ.ರಾ.ಮಹೇಶ್(ಪ್ರವಾಸೋದ್ಯಮ ಹಾಗೂ ರೇಷ್ಮೆ ಸಚಿವರು)**:- ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಮಾನ್ಯ ಸದಸ್ಯರು ಮಾತನಾಡುವಂತಹ ಸಂದರ್ಭದಲ್ಲಿ ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರದವರೆಗೂ ವಿಷಯಗಳನ್ನು ಪ್ರಸ್ತಾಪಿಸುತ್ತಾ ಹೋಗುತ್ತಿದ್ದರು. ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪವಾಗಿರುವ ವಿಷಯಗಳಲ್ಲಿನ ಸರಿ ತಪ್ಪುಗಳನ್ನು ತಿಳಿಸುವಂತಹ ಅವಕಾಶ ಮಾನ್ಯ ಸದಸ್ಯರಿಗೂ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇದೆ. ಅದರ ಬಗ್ಗೆ ನಾನು ಪ್ರಶ್ನೆ ಮಾಡುವುದಿಲ್ಲ. ಈಗ ನಮ್ಮ ಸ್ನೇಹಿತರು ಬಹಳ ಚೆನ್ನಾಗಿ ಮಾತನಾಡಿದರು. ಆದರೆ, ಅವರು ಮಾತನಾಡುವಂತಹ ಸಂದರ್ಭದಲ್ಲಿ ನೇರವಾಗಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಪ್ರಶ್ನೆ ಮಾಡಿದರು. ಅವರ ಒಂದು ಸಾರಿ ಯೋಚನೆ ಮಾಡಬೇಕಾಗುತ್ತದೆ. 23 ಪಕ್ಷವನ್ನು ಕಟ್ಟಿಕೊಂಡು ಮಾಜಿ ಪ್ರಧಾನ ಮಂತ್ರಿಗಳಾದ ಅಟಲ್ ಬಿಹಾರಿ ವಾಜಪೇಯಿಯವರು 5 ವರ್ಷ ಸರ್ಕಾರವನ್ನು ನಡೆಸಿದರು. ಆ ವಿಚಾರದಲ್ಲಿ ನಾವು objection raise ಮಾಡಿದ್ದೆವು. ಇಲ್ಲದೇ ಇದ್ದರೆ ಅದನ್ನು ಪ್ರಶ್ನೆ ಮಾಡುತ್ತೇವೆ. ಬೇರೆ ವಿಚಾರದ ಬಗ್ಗೆ ಚರ್ಚೆ ಮಾಡಿ. ನಾವು ಅದರ ಬಗ್ಗೆ ಮಾತನಾಡುವುದಿಲ್ಲ. ಮಾನ್ಯ ಸದಸ್ಯರು ಮೂಲವಾಗಿ elected member ಆಗಿದ್ದು, ಪ್ರಜಾಪ್ರಭುತ್ವದ ವ್ಯವಸ್ಥೆಯೇ ಸರಿಯಿಲ್ಲವೆಂದರೆ ಹೇಗೆ ಒಪ್ಪಿಕೊಳ್ಳುವುದು. ಮಾನ್ಯ ಸದಸ್ಯರೆ ತಾವು ಹಿರಿಯರು. ಬೇರೆ ವಿಚಾರದ ಬಗ್ಗೆ ನಾವು ಆಕ್ಷೇಪ ಮಾಡುವುದಿಲ್ಲ.

**ಸಭಾಪತಿಯವರು**:- ಮಾನ್ಯ ಸಚಿವರೆ ಹೆಚ್ಚು ಬೆಳೆಸುವುದಕ್ಕೆ ಹೋಗುವುದು ಬೇಡ.

**ಶ್ರೀ ಆರ್.ಧರ್ಮಸೇನ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ಯಾವ ವಿರೋಧ ಪಕ್ಷವೂ ಸಹ 5 ವರ್ಷ ಆಡಳಿತ ನಡೆಸಿರುವುದಿಲ್ಲ. ದಯವಿಟ್ಟು 5 ವರ್ಷ ಎಂದು ಮಾನ್ಯ ಸಚಿವರು ಹೇಳುವುದಕ್ಕೆ ಹೋಗುವುದು ಬೇಡ.

ಶ್ರೀ ಸಾ.ರಾ.ಮಹೇಶ್:- ಮಾನ್ಯ ಸಭಾಪತಿಯವರೇ, ಮಾಜಿ ಪ್ರಧಾನ ಮಂತ್ರಿಗಳಾದ ಅಟಲ್ ಬಿಹಾರಿ ವಾಜಪೇಯಿಯವರು ಒಂದು ಸಲ 5 ವರ್ಷ ಕಾಲ ಆಡಳಿತ ನಡೆಸಿದ್ದಾರೆ. ಆಗ ಮಾನ್ಯ ಸದಸ್ಯರೂ ಸಹ ಇದ್ದರು. ನಾನು ಆಗ ಭಾರತೀಯ ಜನತಾ ಪಕ್ಷದಲ್ಲಿದ್ದೆ. 20 ರಿಂದ 23 ಪಕ್ಷ ಕಟ್ಟಿಕೊಂಡಿದ್ದರು.

**ಸಭಾಪತಿಯವರು**:- ಮಾನ್ಯ ಸಚಿವರೆ, ತಾವು ಮಾತನಾಡಲೇಬೇಕೆಂಬ ಕಾಯ್ದೆ ಏನಿಲ್ಲ. ತಾವು ಒಂದು ಸಲ ಮಾತನಾಡುವ ಅನಿವಾರ್ಯತೆ ಇತ್ತು ಮಾತನಾಡಿದ್ದೀರಿ ತಪ್ಪೇನಿಲ್ಲ. ಮಾನ್ಯ ಸದಸ್ಯರೆ ತಾವು ಮಾತನಾಡಿ. ತಮಗೆ ಎಲ್ಲಾ ಕಡೆ ಬಹಳ ಅನುಭವ ಇದೆ. ತಾವು ಮಾತನಾಡಿ.

**ಶ್ರೀ ಆಯನೂರ ಮಂಜುನಾಥ್**:- ಮಾನ್ಯ ಸಭಾಪತಿಯವರೇ, ನಾನು ವಿನಂತಿ ಮಾಡಿಕೊಂಡೆ. ಆ ವಿನಂತಿ ಎಂಬ ಪದವನ್ನು ನಮ್ಮ ಸ್ನೇಹಿತರು ಕೇಳಿಸಿಕೊಳ್ಳಲಿಲ್ಲ. ನಾನು ಹೇಳುವುದೇನೆಂದರೆ, ಅಂತಿಮವಾಗಿ ಸರ್ಕಾರ ಎಲ್ಲದಕ್ಕೂ ಉತ್ತರಿಸುತ್ತದೆ. ಈ ರೀತಿ ಇದ್ದಾಗ ನಮ್ಮ ಸದಸ್ಯರು, ನಮ್ಮ ಗೆಳೆಯರು ಎಂದು ಮಾತನಾಡುವುದಕ್ಕೆ ಹೋಗುತ್ತೇನೆ. ಆದರೆ, ಸಚಿವರು ಆ ರೀತಿ ಹೇಳುವುದು ಬೇಡ. ಸರ್ಕಾರವೇ ಎದ್ದಂತೆ ಆಗುತ್ತದೆ ಎಂಬುದು ನನ್ನ ಒಂದು ಅನಿಸಿಕೆ. ಅದನ್ನು ಮಾನ್ಯ ಸಚಿವರು ಹೇಗೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅರ್ಥೈಸಿಕೊಳ್ಳುತ್ತಾರೋ ಅದು ಅವರಿಗೆ ಬಿಟ್ಟ ವಿಚಾರ. ಎರಡನೆಯದಾಗಿ, ನಾನೂ ಸಹ ಪ್ರಾರಂಭದಲ್ಲಿ ಸರಿಯಾಗುತ್ತದೆ ಎಂದು ಹೇಳಿದ್ದೆ. ನಮ್ಮ ಹಿರಿಯರಾದ ಮಾನ್ಯ ಎಸ್.ಆರ್.ಪಾಟೀಲ್‌ರವರು ಹಾಗೂ ಬೇರೆಯವರು sky is the limit ಎಂದು ಹೇಳಿದ್ದಾರೆ. ಆ ರೀತಿ ಕೊಟ್ಟಾಗ ಎಲ್ಲವನ್ನು ಸಹಿಸಿಕೊಳ್ಳುವಂತಹ ಸ್ಥಿತಿ ಎಲ್ಲರಿಗೂ ಬಂದು ಬಿಡುತ್ತದೆ, ಒಬ್ಬರಿಗೆ ಬರುವುದಿಲ್ಲ. ಮೊನ್ನೆ ದಿವಸ ಸನ್ಮಾನ್ಯ ಘನತೆವೆತ್ತ ರಾಜ್ಯಪಾಲರ ಭಾಷಣವನ್ನು ನನ್ನ ರಾಜಕೀಯ ಅವಧಿಯಲ್ಲಿ ಎರಡನೆ ಸಲ ಕೇಳಿದ್ದೇನೆ. 1994ರಲ್ಲಿ ಮಾಜಿ ಪ್ರಧಾನ ಮಂತ್ರಿಗಳಾದ ದೇವೇಗೌಡರವರು ಮುಖ್ಯಮಂತ್ರಿಯಾಗಿದ್ದಾಗ ಕೇಳಿದ್ದೆ. ಈಗ ಅವರ ಮಗ ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾದ ಮೇಲೆ ಕೇಳಿದ್ದೇನೆ. 3 ತಿಂಗಳ ಕೆಳಗೆ ಆದಂತಹ ರಾಜ್ಯಪಾಲರ ಭಾಷಣದ ಪ್ರತಿಯೂ ನನ್ನ ಹತ್ತಿರ ಇದೆ. ಮೊನ್ನೆ ದಿವಸ ಮಾಡಿದ ಭಾಷಣದ ಪ್ರತಿಯೂ ಇದೆ. ಸರ್ಕಾರ ಮಾತ್ರ ಒಂದೇ. ನಾವು ಎರಡೂ ಸರ್ಕಾರದ ಬಗ್ಗೆ ಟೀಕೆ ಮಾಡಿದರೆ, ಎರಡೂ ಪಕ್ಷದವರು ಎದ್ದು ನಿಲ್ಲುತ್ತಾರೆ ಅಂದ ಮೇಲೆ ಸರ್ಕಾರ ಒಂದೇ ಇರುವುದು. ಮೂರು ತಿಂಗಳ ಕೆಳಗೆ ಯಾವ ಸರ್ಕಾರ ಅಧಿಕಾರದಲ್ಲಿತ್ತೋ ಅದೇ ಸರ್ಕಾರ ಅಧಿಕಾರದಲ್ಲಿದೆ ಎಂದು ಬಾವಿಸಿಕೊಳ್ಳಬೇಕೊ ಅಥವಾ ಬೇರೆ ಸರ್ಕಾರ ಅಧಿಕಾರದಲ್ಲಿದೆ ಎಂದು ಭಾವಿಸಿಕೊಳ್ಳಬೇಕೋ ಗೊತ್ತಾಗುತ್ತಿಲ್ಲ. ಆದರೆ, ಒಂದು ವಿಚಾರ ನನಗೆ ಅನಿಸಿದ್ದು, ದಿನಾಂಕ 05.02.2018ರಲ್ಲಿ ಮಾಡಿದ ರಾಜ್ಯಪಾಲರ ಭಾಷಣ ಹಾಗೂ ಮೊನ್ನೆ ದಿವಸ ಮಾಡಿದ ರಾಜ್ಯಪಾಲರ ಭಾಷಣದಲ್ಲಿ ಅವತ್ತು ಸರ್ಕಾರದ ಪರವಾಗಿದ್ದವರು ಏನು ಹೇಳಿದ್ದಾರೆ, ಇವತ್ತು ಏನು ಹೇಳಿದ್ದಾರೆ ಎಂಬುದನ್ನು ನೋಡಿದರೆ, ಅವತ್ತು ಮಾನ್ಯ ಸಿದ್ಧರಾಮಯ್ಯನವರು ಮಾತನಾಡುವಾಗ ಸ್ವಲ್ಪ ಯೋಚನೆಗಳಿಂದ ತುಂಬಿ ತುಳುಕಿದೆ. ನಾವು ಏನೇನು ಯೋಜನೆಗಳನ್ನು ತಂದಿದ್ದೇವೆ. ಏನೇನು ಕೆಲಸಗಳನ್ನು ಮಾಡುವುದಕ್ಕೆ ಹೊರಟಿದ್ದೇವೆ ಎನ್ನುವ ದಿಕ್ಸೂಚಿಯನ್ನು ಹೇಳಿದ್ದಾರೆ. ಮಾಜಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು ನಮ್ಮ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿತ್ತು. ಆಗ ನಾನು ಏನು ಕೆಲಸ ಮಾಡಿದ್ದೇನೆ, ಮುಂದೆ ಏನು ಕೆಲಸ ಮಾಡುವುದಕ್ಕೆ ಬಯಸಿದ್ದೇನೆ ಎಂಬುದನ್ನು ರಾಜ್ಯಪಾಲರ ಭಾಷಣದ ಮೂಲಕ ಹೇಳಿಸಿದ್ದಾರೆ. ಬಹಳ ಆಶ್ಚರ್ಯವಾಗುತ್ತದೆ. ಇದರಲ್ಲಿ ಮಿಟ್ಟ-ಗಿಟ್ಟಿಯ ಸರ್ಕಾರ ಇದೆ. 3 ತಿಂಗಳ ಕೆಳಗೆ ಇದ್ದಂತಹ ಯಾವುದೇ ಯೋಜನೆಯ ಪ್ರಸ್ತಾಪ ಮೊನ್ನೆ ದಿವಸದ ಭಾಷಣದ ಪುಸ್ತಕದಲ್ಲಿ ಓದಲಿಲ್ಲ. ಮುಂದುವರೆದಿದೆಯೇ ಅಥವಾ drop ಆಗಿದೆಯೇ ಎಂಬುದು ನನಗೆ ಗೊತ್ತಿಲ್ಲ. ಅವೆರಡನ್ನು ಇಟ್ಟುಕೊಂಡಾಗ ಹಳೆಯ ಸರ್ಕಾರದಲ್ಲಿ ಯಾವುದು ಜನೋಪಯೋಗಿ ಯೋಜನೆಗಳಿದ್ದವೋ, ಅವೆಲ್ಲವೂ ಸಹ ರಾಜ್ಯಪಾಲರು ಭಾಷಣ ಮಾಡಿದಂತಹ ಸಂದರ್ಭದಲ್ಲಿ ಮುಂದುವರೆಯುತ್ತದೆ ಅಥವಾ ಮುಂದುವರೆಯುವುದಿಲ್ಲ ಎಂದು ಹೇಳಲಿಲ್ಲ. ಅಂದರೆ ಆಗಾಧವಾದಂತಹ, ಹೊಂದಾಣಿಕೆ ರಹಿತವಾದಂತಹ ಮನೋಭಾವ ನನಗೆ ಕಂಡಿದೆ. ಮೇಲ್ನೋಟಕ್ಕೆ ಕಾಂಗ್ರೆಸ್ ಮತ್ತು ಜೆ.ಡಿ.ಎಸ್ ಪಕ್ಷ ಒಂದಾಗಿದೆ ಎಂದು ಹೇಳಿರಬಹುದು.

ಆದರೆ, ಹೊಸ ಮುಖ್ಯಮಂತ್ರಿಗಳಿಗೆ ಹಳೆಯ ಮುಖ್ಯಮಂತ್ರಿಗಳು ನೀವು ಹೇಳಿರುವುದೆಲ್ಲಾ ಮಾಡುವುದಕ್ಕಾಗುವುದಿಲ್ಲ ಎಂದು ಅಪ್ರತ್ಯೇಕ್ಷವಾಗಿ ಹೇಳಿದ್ದಾರೆ ಎಂದು ನಾನು ಭಾವಿಸುತ್ತೇನೆ. ಇವೆರಡು ಪಕ್ಷಗಳ ನಡುವೆ ಹೊಂದಾಣಿಕೆ ಇಲ್ಲ ಎಂಬುದು ಮೇಲ್ನೋಟಕ್ಕೆ ಹಿಂದೆ ಆದಂತಹ ಹಾಗೂ ಮೊನ್ನೆ ನಡೆದಂತಹ ರಾಜ್ಯಪಾಲರ ಭಾಷಣ ಒಂದೇ ಸಾಕು. ಏಕೆಂದರೆ, ಹಿಂದೆ ಇದ್ದಂತಹ ಸಚಿವರೆ ಇವತ್ತು ಸಹ ಸರ್ಕಾರದ ಸಚಿವರಾಗಿದ್ದಾರೆ. ಪಾಪ ಹೇಗೆ ಅವರು defend ಮಾಡಿಕೊಳ್ಳಬೇಕು? ಹಳೆಯದನ್ನು ಮಾಡಿಕೊಳ್ಳಬೇಕೋ ಅಥವಾ ಹೊಸದನ್ನು ಮಾಡಿಕೊಳ್ಳಬೇಕೋ ಗೊತ್ತಿಲ್ಲ. ಆದರೂ ರಾಜ್ಯಪಾಲರು ಭಾಷಣದ ಉದ್ದಕ್ಕೂ ನನ್ನ ಸರ್ಕಾರ, ನನ್ನ ಸರ್ಕಾರ, ನನ್ನ ಸರ್ಕಾರ ಎಂದು ಹೇಳಿದ್ದಾರೆ, ಅದು ಸಹಜ. ಅವರಿಗೆ ಬರೆದು ಕೊಟ್ಟ ಮೇಲೆ ಹಾಗೆಯೇ ಹೇಳಬೇಕಾಗುತ್ತದೆ. ನನ್ನ ಸರ್ಕಾರವೆಂದರೆ ಯಾವ ಸರ್ಕಾರ ಅದು. ಮಾನ್ಯ ಸಿದ್ದರಾಮಯ್ಯನವರ ಸರ್ಕಾರವೋ, ಮಾನ್ಯ ಕುಮಾರಸ್ವಾಮಿಯವರ ಸರ್ಕಾರವೋ ಗೊತ್ತಿಲ್ಲ. ನಮ್ಮವರು ಪಾಪ take-off ಆಗಿಲ್ಲ, tack of ಆಗಿಲ್ಲವೆಂದು ಹೇಳುತ್ತಿದ್ದಾರೆ.

**ಸಭಾಪತಿಯವರು:–** ನನ್ನ ಸರ್ಕಾರವೆಂದರೆ ಇರುವ ಸರ್ಕಾರ ಎಂದರ್ಥ. ಹಾಗೆ ಹೇಳುವುದಕ್ಕೆ ಹೋಗಬೇಡಿ. ಬಹಳ ಅನುಭವಿಗಳು ಈಗ ಇರುವಂತಹ ಸರ್ಕಾರಕ್ಕೆ ನನ್ನ ಸರ್ಕಾರ ಎಂದು ಹೇಳಿದ್ದಾರೆ.

**ಶ್ರೀ ಆಯನೂರ ಮಂಜುನಾಥ್:–** ಮಾನ್ಯ ಸಭಾಪತಿಯವರೇ, ನನಗೆ ಅರ್ಥವಾಗಿಲ್ಲವೆಂದು ಹೇಳುತ್ತಿದ್ದೇನೆ. ನನ್ನ ಅಜ್ಞಾನವನ್ನು ಪ್ರದರ್ಶನ ಮಾಡುತ್ತಿದ್ದೇನೆ. ನನಗೆ ಗೊತ್ತಾಗುತ್ತಿಲ್ಲ ಎಂಬುದನ್ನು ಪ್ರದರ್ಶನ ಮಾಡುತ್ತಿದ್ದೇನೆ.

**ಸಭಾಪತಿಯವರು:–** ಅರ್ಥವಾಗಿದೆ. ಇರಲಿ ಮಾತನಾಡಿ.

**ಶ್ರೀ ಆಯನೂರ ಮಂಜುನಾಥ್:–** ಮಾನ್ಯ ಸಭಾಪತಿಯವರೇ, ನನಗೆ ಅರ್ಥವಾಗಿಲ್ಲ. ಏಕೆಂದರೆ ನಿನ್ನೆ, ಮೊನ್ನೆವರೆಗೂ ಸಹ ವಿವಿಧ ಮಾಧ್ಯಮಗಳಲ್ಲಿ ಗಮನಿಸಿದ್ದೇವೆ. ನಡೆದದ್ದು ಬಹಳಷ್ಟು ಇದ್ದೆ ಇರುತ್ತದೆ, ಕೆಲವು ಒಪ್ಪದೇ ಇರುವುದು ಇರಬಹುದು. ಒಟ್ಟಾರೆ ಕಾರ್ಯಕ್ರಮದ ಬಗ್ಗೆ ಒಂದು ಸಮನ್ವಯ ಸಮಿತಿ ರಚನೆಯಾಗಿ ಒಮ್ಮತಕ್ಕೆ ಬರುವುದಕ್ಕೆ ಬಹಳ ದೊಡ್ಡ ಪ್ರಯತ್ನವನ್ನು ಮಾಡಿದ್ದಾರೆ. ಸಮ್ಮಿಶ್ರ ಸರ್ಕಾರವಾಗುವುದಕ್ಕೆ ಏನೇನು ಮಾಡಬೇಕೋ ಆ ಪ್ರಯತ್ನವನ್ನು ಮಾಡಿದ್ದಾರೆ. ರಾಜ್ಯಪಾಲರು ಭಾಷಣ ಮಾಡುವ ಸಂದರ್ಭದಲ್ಲಿ ಆ ರೀತಿ ಏನು ಹೊಂದಾಣಿಕೆಯಾಗಿರುವುದಿಲ್ಲ. ಆ ಕಾರಣಕೋಸ್ಕರ ಇದು bald. ಏನೇನೂ ದಿಕ್ಸೂಚಿ ಇಲ್ಲದೇ ಇರತಕ್ಕಂಥ, plan ಇಲ್ಲದೇ ಇರತಕ್ಕಂಥ ಆಡಳಿತದ ಬಗ್ಗೆ ಕಲ್ಪನೆ ಇಲ್ಲದೇ ಇರತಕ್ಕಂಥ ಒಂದು ಭಾಷಣದ ಪುಸ್ತಕವನ್ನು ಘನತೆವೆತ್ತ ರಾಜ್ಯಪಾಲರ ಕೈಯಲ್ಲಿರಿಸಿ ಓದಿಸಿದ್ದಾರೆ. ನಾನು ಇವತ್ತು ವಿಧಾನ ಸಭೆ ಕಡೆಗೆ ಹೋಗಿದ್ದೆ. ಮಾನ್ಯ ಕುಮಾರಸ್ವಾಮಿಯವರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಡಳಿತದ ಪಕ್ಷದ ಮುಖ್ಯಮಂತ್ರಿಗಳಾಗಿ ಮುಂದೆ ಕುಳಿತಿದ್ದರು. ಸಹಜವಾಗಿ ವ್ಯವಸ್ಥೆ ಇದೆ ಕುಳಿತಿದ್ದಾರೆ. ಆಡಳಿತ ಪಕ್ಷದಲ್ಲಿ ಈ ವ್ಯವಸ್ಥೆ ಹೀಗೆ ಇರುವುದು. ಅವತ್ತಿನ ದಿವಸ ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ಸಿದ್ಧರಾಮಯ್ಯನವರು driving seat ನಲ್ಲಿ ಕುಳಿತಿದ್ದರು. ಇವತ್ತು ಮಾನ್ಯ ಕುಮಾರಸ್ವಾಮಿಯವರು driving seat ನಲ್ಲಿದ್ದಾರೆ. ಆದರೆ, conductor ಜಾಗದಲ್ಲಿ ಸಿದ್ದರಾಮಯ್ಯನವರಿದ್ದಾರೆ. ನಮ್ಮ ಕಡೆ conductor ರೈಟ್ ಅಣ್ಣಾ ಜಾಂದೆ ಎಂದ ಮೇಲೆ ಬಸ್ಸು ಮುಂದೆ ಹೋಗುವುದು. ಅಲ್ಲಿಯವರೆಗೂ bus start ಮಾಡಿ ಆನ್‌ನಲ್ಲಿಯೇ ಇಟ್ಟುಕೊಂಡಿರುತ್ತಾನೆ. Conductor ಬಸ್ಸಿನ ಬಾಗಿಲನ್ನು ಎರಡು ಸಲ ಬಡಿದು ರೈಟ್ ಎಂದು ಹೇಳಬೇಕು. ಆಗಲೇ ಬಸ್ಸು ಹೋಗುವುದು. ಅಲ್ಲಿಯವರೆಗೂ ಬಸ್ಸು ಹೋಗುವುದಿಲ್ಲ. ಇಲ್ಲಿಯೂ ಹಾಗೆಯೇ ಹಿಂದೆಯಿಂದ conductor ರೈಟ್ ಅಣ್ಣಾ ಜಾಂದೆ ಅಣ್ಣಾ ಎಂದು ಇನ್ನೂ ಹೇಳಿಲ್ಲ. ಹಾಗಾಗಿ ಇದು take-off ಆಗಿಲ್ಲ. Take ಆಗಿದೆ ಎಂದು ಭಾವಿಸಿದರೆ ಅದು off ಆಗಿರುತ್ತದೆ. Take-off ಎಂಬ ಪದವನ್ನು ಒಟ್ಟಾಗಿ ಉಪಯೋಗಿಸುವುದರಿಂದ take and got off ಆಗುತ್ತದೆ. ಆ ಕಾರಣದಿಂದ ಯೋಜನೆಗಳನ್ನು ಮಾಡುವುದಕ್ಕೆ ಸಾಧ್ಯವಾಗಿಲ್ಲ. ನಾನು ಅದರ ಅಂಶ ಅಂಶಗಳನ್ನು ನೋಡುತ್ತಾ ಹೋದರೆ, ಇನ್ನೂ ಕಲ್ಪನೆಗಳು ಬಂದಿಲ್ಲ. ಅನುಮಾನಗಳು ಸದೃಢವಾಗುತ್ತಾ ಹೋಗುತ್ತದೆ. ಮೊನ್ನೆವರೆಗೂ ಮಾನ್ಯ ಮುಖ್ಯಮಂತ್ರಿಗಳಾದ ಕುಮಾರಸ್ವಾಮಿಯವರು ದೂರದರ್ಶನದಲ್ಲಿ ಮಾತನಾಡುತ್ತಿರುವುದನ್ನು ನೋಡಿದಾಗ ಸ್ವತಃ ಹಾಲಿ ಮುಖ್ಯಮಂತ್ರಿಗಳು ನಮ್ಮ ಸರ್ಕಾರ ಎಷ್ಟು ದಿನದ ಮಟ್ಟಿಗೆ ಅಧಿಕಾರದಲ್ಲಿರುತ್ತದೆಯೋ ಎಂಬುದು ಗೊತ್ತಿಲ್ಲ, ನಾನು ಬಜೆಟ್ ಮಾಡುತ್ತೇನೋ ಗೊತ್ತಿಲ್ಲ ಎಂದು ಹೇಳುವ supporting voice ನ್ನು ದೂರದರ್ಶನದಲ್ಲಿ ಕೇಳಿದ್ದೆ. ನಾನೇನು ಧರ್ಮಸ್ಥಳದ ಶಾಂತಿವನದ ಕಡೆಗೆ ಹೋಗಿರಲಿಲ್ಲ, ದೂರದರ್ಶನದಲ್ಲಿ ಕೇಳಿದ್ದೆ. ಈ ಸರ್ಕಾರ ಎಷ್ಟು ದಿವಸ ಇರುತ್ತದೆಯೋ ನೋಡೋಣ ಪಾರ್ಲಿಮೆಂಟ್ ಚುನಾವಣೆ ಆದಮೇಲೆ ಹೇಗಿರುತ್ತದೆಯೋ ಏನೋ ಎಂಬ ಒಂದು ಸಂಶಯಾಧಾರದ ಮೇಲೆ ಸಹಜವಾದ ಕಾಳಜಿಯಿಂದ ಈ ಮಾತನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಇಲ್ಲಿ ಒಂದು ಸದೃಢ ಸರ್ಕಾರ ಇರಬೇಕು. ಜನರ ಪರವಾಗಿ ಕೆಲಸ ಮಾಡಬೇಕು. ಜನರಿಗೆ ಒಳ್ಳೆಯದಾಗಬೇಕು, ಜನರು ಬಹಳ ಕಷ್ಟದಲ್ಲಿದ್ದಾರೆ. ಹಾಗಾಗಿ ಈ ಇಬ್ಬರೂ ನಾಯಕರಾದ driver and conductor ಬಗ್ಗೆಯೇ ಅನುಮಾನ ಇದೆ. ಬಸ್ಸು ಮುಂದೆ ಹೋಗುತ್ತದೆಯೋ, ಇಲ್ಲವೋ, ಇಲ್ಲಿಯೇ ಬಸ್ಸು ನಿಂತು ಕೊಳ್ಳುತ್ತದೆಯೋ ಎಂಬುದು ಗೊತ್ತಿಲ್ಲ.

**ಶ್ರೀ ಆರ್.ಧರ್ಮಸೇನ:-** ಮಾನ್ಯ ಸಭಾಪತಿಯವರೇ, ಸಮಯಕ್ಕೆ ಸರಿಯಾಗಿ ಹೊರಡುತ್ತದೆ ಬಿಡಿ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಆಯನೂರ ಮಂಜುನಾಥ್**:- ಮಾನ್ಯ ಸಭಾಪತಿಯವರೇ, ಇರಲಿ ಹಾಗೆಯೇ ಹೋಗಲಿ ಎಂಬುದು ನನ್ನ ಆಸೆಯಾಗಿದೆ. ಇಲ್ಲಿಗೆ ಬಂದ ಮೇಲೆ ನಾವು ಜನರ ಪರವಾಗಿ ಕಾಳಜಿ ಇಟ್ಟುಕೊಂಡು ಮಾತನಾಡುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು)**:- ಮಾನ್ಯ ಸಭಾಪತಿಯವರೇ, ಆಗಲೇ ಮಾನ್ಯ ಧರ್ಮಸೇನರವರು ಮಾತನಾಡಿದ್ದನ್ನು ಕೇಳಿದ ಮೇಲೆ ಇದು ರೈಲು ಹತ್ತಿಸುವ ಕೆಲಸವೆಂದು ಗೊತ್ತಾಯಿತು.

**ಶ್ರೀ ಆಯನೂರ ಮಂಜುನಾಥ್**:- ಮಾನ್ಯ ಸಭಾಪತಿಯವರೇ, ನಾವು ಸಹ ಇದು ಜನರ ಪರವಾಗಿ ಆಗಲಿ ಎಂದೇ ಹೇಳುವುದು. ನಾವು ಆಯ್ಕೆಯಾಗಿ ಬಂದ ಮೇಲೆ ಜನರ ಪರವಾಗಿ ಮಾತನಾಡಬೇಕು. ಅವರ ಹಿತದ ಬಗ್ಗೆ ಮಾತನಾಡಬೇಕು. ಪಕ್ಷದ ರಾಜಕಾರಣ ಮಾತನಾಡಿಕೊಳ್ಳುವುದಕ್ಕೆ ಬೇಕಾದರೆ ಹೊರಗೆ ಅಖಾಡ ಇದೆ ಅಲ್ಲಿ ಮಾತನಾಡಿಕೊಳ್ಳೋಣ. ಆದಕಾರಣ ಯಾರು conductor ಪರವಾಗಿ ಇದ್ದೀರಿ ಅವರು ಸ್ವಲ್ಪ ಜಾಂಡ್ಲೆ ಅಣ್ಣಾ ರೈಟ್ ಎಂದು ಹೇಳಿ. ಆದರೆ, ಇಲ್ಲಿ ಮತದಾರ ಪ್ಯಾಸೆಂಜರ್ ಆಗಿದ್ದಾರೆ. ಆತನಿಗೂ ಒಂದು ಬದುಕು, ಗುರಿ ಇದೆ. ನಿಮ್ಮ ಬಸ್ಸನ್ನು start ಮಾಡಿ, ಬಸ್ ಸ್ಟ್ಯಾಂಡ್‌ನಲ್ಲಿ ನಿಲ್ಲಿಸಿಕೊಂಡು, ನೋಡಿ start ನಲ್ಲಿದೆ ಎಂದರೆ ಡೀಸೆಲ್ ಖರ್ಚಾಗುವುದು ಸರ್ಕಾರದ್ದು. ಜನರ ತೆರಿಗೆ ಖರ್ಚಾಗಿದೆ. ನೀವು ಬಸ್ಸು ಓಡಿಸದೇ ಸುಮ್ಮನೆ start ನಲ್ಲಿಟ್ಟುಕೊಂಡು, ನಾವು ಏನಾದರೂ ಹೇಳುವುದಕ್ಕೆ ಹೋದರೆ, ಎಲ್ಲರೂ ಸೇರಿ ನಮ್ಮ ಮೈಮೇಲೆ ಬರುತ್ತೀರಿ. ಆ ರೀತಿ ಆಗುವುದು ಬೇಡ.

(ಮುಂದು) . . .

(033)/03.07.2018/05.30/ಎಸ್‌ಕೆ-ಬಿಎನ್‌ಎಸ್

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ)**:-ಮಾನ್ಯ ಸಭಾಪತಿಯವರೇ, ಡಬಲ್ ಇಂಜಿನ್ ಎಂಬುದು ಗೊತ್ತಾಗಿದೆ ಅವರು ಸಿಂಗಲ್ ಪಾರ್ಟಿ ಅಲ್ಲ. ನಮ್ಮ ಗೆಳೆಯರು ಹೇಳಿದ್ದು ಸತ್ಯವಿದೆ. ಯಾವಾಗ ಅವರು ಆ ಪಾರ್ಟಿಯಿಂದ ಬಿಡಿಸಿಕೊಂಡು ನಮ್ಮ ಪಕ್ಷದ ಜೊತೆ ಸೇರಿಕೊಳ್ಳುವುದಕ್ಕೆ ಬರುತ್ತಾರೋ ಗೊತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಎರಡು ಮೂರು ಬಾರಿ ನಮ್ಮ ಪ್ರಧಾನ ಮಂತ್ರಿಗಳಾದ ಮಾನ್ಯ ನರೇಂದ್ರ ಮೋದಿಯವರನ್ನು ಭೇಟಿ ಮಾಡಿ ಬಂದಿದ್ದಾರೆ. ಒಳ್ಳೆಯ ಉದ್ದೇಶಕ್ಕೆ ಹೋಗಿರಬಹುದು. ನಮಗೆ ಡಬಲ್ ಇಂಜಿನ್ ಬಗ್ಗೆ ಅನುಮಾನ ಇರುವುದು. ಡಬಲ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಂಜಿನ್ ಅನ್ನು ರಾಜಕೀಯಕ್ಕೆ ಮಾತ್ರ ಇಟ್ಟುಕೊಳ್ಳಿ. ವ್ಯಕ್ತಿಗತ ಬದುಕಿನಲ್ಲಿ ಡಬಲ್ ಇಂಜಿನ್ ಇಟ್ಟುಕೊಳ್ಳಬೇಡಿ. ಆ ರೀತಿ ಏನಾದರೂ ಮಾಡಿಕೊಂಡು ಬಿಟ್ಟರಿ! ಡಬಲ್ ಇಂಜಿನ್ ಅಪಾಯ. ಸಿಂಗಲ್ ಇಂಜಿನ್ ಇರಲಿ.

**S.R.PATIL (ELECTED BY LOCAL AUTHORITY)** :- **Aircraft** ಗೆ ಡಬಲ್ ಇಂಜಿನ್ ಇದ್ದರೆ ಅದು ಸೇಫ್ ಇರುತ್ತದೆ.

**ಶ್ರೀ ಆಯನೂರು ಮಂಜುನಾಥ್**:- ಮಾನ್ಯ ಸಭಾಪತಿಯವರೇ, ಅದು ತುಂಬಾನೇ ಮೇಲೆಯೇ ಇರಬಾರದು. ಕೆಳಗೆ ಬರಬೇಕಾಗುತ್ತದೆ. ಲ್ಯಾಂಡ್ ಆಗದೇ ಇದ್ದರೆ ಅಪಾಯವಾಗುತ್ತದೆ. ಒಂದು ಇಂಜಿನ್ ಕೈಕೊಟ್ಟರೆ ಅಪರೇಟ್ ಆಗುವುದೇ ಇಲ್ಲ. ಎರಡನೇಯದಾಗಿ, ಐದನೇ ತಾರೀಖು ಬಜೆಟ್ ಮಂಡನೆ ಆಗಬಹುದು ಎಂದು ನಾನು ನಂಬಿದ್ದೇನೆ. ಬಜೆಟ್ ಮಂಡನೆ ಆದ ನಂತರ ಬಹುಶಃ ನಮ್ಮ ಜೆಡಿ(ಎಸ್)ನ ಸದಸ್ಯರು ಕೂಡ ನನ್ನ ನಿಲುವನ್ನು ಬೆಂಬಲಿಸುತ್ತಾರೆಂದು ಭಾವಿಸಿದ್ದೇನೆ. ಬಜೆಟ್ ಮಂಡನೆಯಾಗುವ ವಿಷಯದಲ್ಲಿ ಒಂದು ಗಂಭೀರವಾದ ಪ್ರಶ್ನೆ ಉದ್ಭವ ಏನಾಗಿದೆ ಎಂದರೆ ಸನ್ಮಾನ್ಯ ಮುಖ್ಯಮಂತ್ರಿಯವರಾದ ಹೆಚ್.ಡಿ. ಕುಮಾರಸ್ವಾಮಿಯವರು ಬಜೆಟ್‌ನಲ್ಲಿ ಸಾಲ ಮನ್ನಾ ಮಾಡುವುದು ಖಚಿತ ಎಂದು ಹೇಳಿದರು. ಅದನ್ನು ಎಲ್ಲರೂ ಸ್ವಾಗತ ಮಾಡುತ್ತಿದ್ದಾರೆ. ಈ ಸಾಲ ಮನ್ನಾ ಮಾಡುವುದರಿಂದ ನನಗೇನು ಕಮಿಷನ್ ಸಿಗುವುದಿಲ್ಲ. ಈ ಹಿಂದೆ ಯಾರೂ ತೆಗೆದುಕೊಂಡಿದ್ದಾರೆಂಬುದು ನನಗೆ ಗೊತ್ತಿದೆ ಎಂಬ ಮಾತನ್ನು ಈ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಅದು ನಾನು ಮಾಡುತ್ತಿರುವ ಆಪಾದನೆಯಲ್ಲ. ಅವರು ಯಾರ ಬಗ್ಗೆ ಹೇಳಿದ್ದಾರೆ? ಅದು ಹಾಗೆಯೇ ಇರಲಿ. ಕಾಂಗ್ರೆಸ್‌ನವರು ಭ್ರಮೆಯಲ್ಲಿ ಬದುಕಬೇಕೆಂಬುದೇ ನಮ್ಮ ಇಚ್ಛೆ ಇರುವುದು. ಅವರು ವಾಸ್ತವಕ್ಕೆ ಬರಬಾರದು. ವಾಸ್ತವದ ನೆಲಗಟ್ಟಿಗೆ ಬಂದರೆ ನಮ್ಮ movement ಗೆ ತೊಂದರೆಯಾಗುತ್ತದೆ. ಇಂತಹ ಭ್ರಮೆಯಲ್ಲಿರುವ ಕಾರಣಕ್ಕಾಗಿಯೇ ಕಾಂಗ್ರೆಸ್‌ನವರು 122 ಶಾಸಕರು ಇದ್ದವರು 78 ಶಾಶಕರು ಗೆದ್ದು ಬಂದಿರುವುದು ಈ ಭ್ರಮೆಯನ್ನೇ continue ಮಾಡಿ. ದಯವಿಟ್ಟು, ನನ್ನದೇನು objection ಇಲ್ಲ. ಮಾನ್ಯ ಭೋಜೆಗೌಡರವರೇ ನನ್ನ ಜೊತೆಗೇನೆ ನೈರುತ್ಯ ಕ್ಷೇತ್ರದಿಂದ ಬಂದಿದ್ದಾರೆ. ಸ್ವಲ್ಪ ಬ್ರೇಕ್ ಹಾಕಿಕೊಂಡಿರುವುದು ಒಳ್ಳೆಯದು. ಅವರ ಗಾಡಿಗೆ ಬ್ರೇಕ್, ಗೇರ್ ಏನು ಇದ್ದ ಹಾಗೇ ಕಾಣುತ್ತಿಲ್ಲ. ಅದು ಬೇಡ. ನಾನು ಇವರ ತಂದೆಯಾದ ಲಕ್ಷ್ಮಯ್ಯನವರ ಜೊತೆಗೂ ಶಾಸಕನಾಗಿದ್ದೆ. ಇಂದು ಅವರಿಬ್ಬರ ಸಹೋದರರ ಜೊತೆಗೆ ಇದ್ದೇನೆ. ನನಗೆ ಧರ್ಮೇಗೌಡರ ಬಗ್ಗೆ ಬೆಳಗ್ಗೆಯಿಂದ ಎಷ್ಟು ಗೌರವ ಬರುತ್ತದೆ. ಎಷ್ಟು ಗಂಭೀರವಾಗಿ ತೂಕವಾಗಿ ಇರುತ್ತಾರೆ. ಅವರ ತಮ್ಮ ಏಕೆ ಹೀಗೆ ಮಾಡುತ್ತಿದ್ದಾನೆಂಬುದು ನನಗೆ ಗೊತ್ತಾಗುತ್ತಿಲ್ಲ. ಅವರ ತಮ್ಮ ತುಂಬಿದ ಕೊಡ ಇದ್ದ ಹಾಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾಣುತ್ತಾರೆ. ಆದರೆ ಮಾನ್ಯ ಭೋಜೇಗೌಡರು ಎಲ್ಲೋ ಸ್ವಲ್ಪ ಕೊಡದ ಕಂಟದ ಹತ್ತಿರ ತುಂಬಿದಾಗೇ ಕಾಣುತ್ತಿಲ್ಲ. ಅದು ತುಂಬುವ ತನಕ ಸ್ವಲ್ಪ ಸುಧಾರಿಸಿಕೊಳ್ಳುವುದು ಒಳ್ಳೆಯದು.

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ);-** ಅವರು ಸಣ್ಣವರಾಗಿರುವುದರಿಂದ ಆ ರೀತಿ ಮಾಡುತ್ತಿದ್ದಾರೆ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಹೌದು ಇವರೇ ಸಣ್ಣವರು. ಅದಕ್ಕೆ ಹಾಗೇ ಮಾಡುತ್ತಾರೆಯೇ ಮಾನ್ಯ ಮುಖ್ಯಮಂತ್ರಿಗಳೂ ಕಮೀಷನ್ ಯಾರು ತೆಗೆದುಕೊಂಡಿದ್ದಾರೆಂದು ಹೇಳಿದರೋ ಗೊತ್ತಿಲ್ಲ. ಅದು ಬೇರೆ ಮಾತು. ರೈತರ ಬಗ್ಗೆ ನಾವೆಲ್ಲರೂ ದೊಡ್ಡ ಕಣ್ಣೀರು ಹಾಕುತ್ತೇವೆ. ರೈತರ ಬದುಕಿನಲ್ಲಿ ಸಾಲ ಮನ್ನಾವಾದಾಗ ಕಮಿಷನ್ ಹೊಡೆದಿದ್ದಾರೆ ಎಂಬುದನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕಾದರೆ, ಅವರ ಹತ್ತಿರ ಸಂಪೂರ್ಣ ಮಾಹಿತಿ ಇದೆ ಎಂಬುದನ್ನು ನಾನು ನಂಬುತ್ತೇನೆ. ಮಾನ್ಯ ಕುಮಾರಸ್ವಾಮಿಯವರು ಸಂಪೂರ್ಣ ಮಾಹಿತಿಯನ್ನಿಟ್ಟುಕೊಂಡೇ ಮಾತನಾಡುತ್ತಾರೆ. ಅವರು ಹಾಗೇ ಸುಮ್ಮ ಸುಮ್ಮನೇ ಮಾತನಾಡುವವರಲ್ಲ. ಅವರು ದಾಖಲೆಯನ್ನು ಇಟ್ಟುಕೊಂಡು ಮಾತನಾಡುತ್ತೇನೆಂದು ಪುಸ್ತಕವನ್ನು ಮತ್ತು ಟೇಬಲ್‌ನ್ನು ತಟ್ಟಿರುತ್ತಾರೆ. ಆ ರೀತಿ ನಾನು ಬಹಳ ಸಂದರ್ಭದಲ್ಲಿ ಮಾಡನಾಡಿರುವುದನ್ನು ನೋಡಿದ್ದೇನೆ. ಹಾಗಾಗಿ, ಈ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳನ್ನು ಈ ಹಿಂದೆ ಇದ್ದಂತಹ ಸರ್ಕಾರ ಯಾರದು? ಕಮಿಷನ್ ಯಾರು ತೆಗೆದುಕೊಂಡರು? ಕಮಿಷನ್ ರೈತರಿಗೆ ಕೊಟ್ಟರಾ. ಬ್ಯಾಂಕ್ ಕೊಡುತ್ತಾ ಅಥವಾ ಮಧ್ಯೆ ಏಜನ್ಸಿ ಕೊಡುತಾ. ಈ ಎಲ್ಲಾ ಅಂಶಗಳನ್ನು ಅವರು ಪ್ರಮಾಣಿಕ ದಿಟ್ಟ ಮುಖ್ಯಮಂತ್ರಿಯಾದರೆ ಹೇಳಬೇಕಾಗುತ್ತದೆ. ಇಲ್ಲದಿದ್ದರೆ, ಆ ತಪ್ಪಿಗಾಗಿ ಈ ಸದನದಲ್ಲಿ ಕ್ಷಮೆಯನ್ನು ಕೇಳಬೇಕೆಂದು ತಮ್ಮ ಮುಖಾಂತರ ಒತ್ತಾಯವನ್ನು ಮಾಡುತ್ತೇನೆ. ಏಕೆಂದರೆ ಸಾಲ ಮನ್ನಾ ಮಾಡುವುದು ಸಾರ್ವಜನಿಕರ ತೆರಿಗೆ ಹಣ. ಯಾರ ಇಚ್ಛೆಯ ಮೇಲೆ ಯಾರೋ ತಿಂದು ಹೋದರು ಎಂದು ಹೇಳುವುದಕ್ಕೆ ಆಗುವುದಿಲ್ಲ ಅಥವಾ hit and run case ಮಾಡುವುದಕ್ಕೆ ಆಗುವುದಿಲ್ಲ. ನಾನು ಭಾವಿಸಿದ್ದೇನೆಂದರೆ, ಅದು ಏನೆಂದರೆ ಹಿಂದಿನ ಮಾನ್ಯ ಮುಖ್ಯಮಂತ್ರಿಯಾದಂತಹ ಸಿದ್ದರಾಮಯ್ಯನವರ ಕಡೆ ಬೆರಳು ತೋರಿಸಿದ್ದೀರೆಂಬುದು ಅನುಮಾನ.

**ಐವನ್ ಡಿ'ಸೋಜಾ :-** ಮಾನ್ಯ ಸಭಾಪತಿಯವರೇ,...

**ಶ್ರೀ ಆಯನೂರು ಮಂಜುನಾಥ್:-** ನಾನು ಅದು ಅನುಮಾನ ಎಂದು ಹೇಳಿದ್ದೇನೆ. ಅದು ಯಾಕಪ್ಪ ಶ್ರೀ ಐವನ್ ಡಿ'ಸೋಜಾರವರೇ ಅಷ್ಟು ಅವಸರ ಏಕೆ ನಿಮಗೆ? ಯಾಕೆಂದರೆ, ಆವತ್ತಿನ scenario ಮಾಜಿ ಮಖ್ಯಮಂತ್ರಿಗಳು ಮತ್ತು ಹಾಲಿ ಮಾನ್ಯ ಮುಖ್ಯಮಂತ್ರಿಗಳ ಮಧ್ಯೆ ಮಾತಿನ

ಚಕಮಕಿ ನಡೆಯುತ್ತಿತ್ತು. ಆ ಕಾರಣಕ್ಕೋಸ್ಕರ ನಾನು ಅನುಮಾನ ಎಂದು ಹೇಳುತ್ತಿದ್ದೇನೆ. ನೀವು ಯಾರು ಅದನ್ನು ಅಲ್ಲಗಳೆದಿಲ್ಲ ಅಥವಾ ಪ್ರತಿಭಟಿಸಿಲ್ಲ. ನನ್ನ ಮಾತಿಗೆ ಇಲ್ಲಿ ಯಾರು ಅಡ್ಡ ಬರುತ್ತಿದ್ದೀರಿ. ತಾವು ಯಾರೂ ಕೂಡ ಅದನ್ನು ಆ ಹಂತದಲ್ಲಿ ಅಲ್ಲಗಳೆದಿಲ್ಲ ಮತ್ತು ಪ್ರತಿಭಟಿಸಿಲ್ಲ ಹಾಗೂ ಮೌನವಾಗಿ ಒಪ್ಪಿದ್ದೀರಾ. ಚುನಾವಣೆಯ ಸಮಯದಲ್ಲಿ ಬಿಜೆಪಿಯವರು ಆಪಾದನೆ ಮಾಡಿದ್ದೇವೆ, ಅದೇನೆಂದರೆ, ತಮ್ಮದು ಹತ್ತು ಪರ್ಸೆಂಟ್ ಸರ್ಕಾರ ಎಂದು ನಾವು ಅಪಾದನೆ ಮಾಡಿದ್ದೇವೆ. ಅದನ್ನು ಮೊನ್ನೆ ಹಾಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದು, ಅದು ಎಷ್ಟು ಪರ್ಸೆಂಟ್ ಎಂಬುದು ನನಗೆ ಗೊತ್ತಾಗಬೇಕಲ್ಲ. ಅದು ಯಾರು ತೆಗೆದುಕೊಂಡಿರುವ ಪರ್ಸೆಂಟೇಜ್ ಎಂಬುದು ಗೊತ್ತಾಗಬೇಕಲ್ಲ. ನಾನು ಶಾಸಕನಾಗಿ ತಿಳಿದುಕೊಳ್ಳುವ ಹಕ್ಕು ನನಗೆ ಇದೆ. ಸಾರ್ವಜನಿಕರ ತೆರಿಗೆ ಹಣ ಕಮಿಷನ್ ಹೊಡೆದಿದ್ದಾರೆ ನನಗೆ ಗೊತ್ತು ಎಂಬ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿರುವುದರಿಂದ, ಅವರು ದಯವಿಟ್ಟು, ಅದನ್ನು ಪ್ರಕಟಣೆ ಮಾಡಬೇಕು. ಅವರ ಮೇಲೆ ಕ್ರಿಮಿನಲ್ ಕೇಸ್ ದಾಖಲೆ ಮಾಡಿ, ಅವರನ್ನು ಜೈಲಿಗೆ ಕಳುಹಿಸಿಕೊಡಬೇಕು. ಬರೀ ಹಾಗೆಯೇ ಮಾತನಾಡುವುದಕ್ಕೆ ಆಗುವುದಿಲ್ಲ. ನಾವು ಒಬ್ಬ ಶಾಸಕರಾಗಿ, ಮತ್ತು ಜನ ಪ್ರತಿನಿಧಿಯಾಗಿ, ನಮ್ಮ ಗಮನಕ್ಕೆ ಬಂದ ಮೇಲೆ ಲೂಟಿಯಾಗಿರುವಂತಹ ಹಣ ಕಣ್ಣುಮುಚ್ಚಿಕೊಂಡು ಕುಳಿತುಕೊಂಡು ನೋಡುವುದಕ್ಕೆ ಸಾಧ್ಯವಿಲ್ಲ. ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಹೇಳುತ್ತಾರೆಂದು ನಾನು ಭಾವಿಸಿದ್ದೇನೆ. ಎರಡನೇಯದಾಗಿ, ನಮ್ಮ ಸ್ನೇಹಿತರು ಮರಳಿನ ಹಗರಣದ ಬಗ್ಗೆ ಪ್ರಸ್ತಾಪ ಮಾಡಿದರು. ಇದರಲ್ಲಿ ಅದು ಕೂಡ ಇದೆ. ಸದನದಲ್ಲಿಯೂ ಮತ್ತು ಹೊರಗಡೆಯೂ ಕೂಡ ಹಾಲಿ ಮುಖ್ಯಮಂತ್ರಿಗಳು ಮರಳಿನ ಹಗರಣದ ಬಗ್ಗೆ ಸಾಕಷ್ಟು ಮಾತನಾಡಿದ್ದಾರೆ. ಹಿಂದಿನ ಲೋಕೋಪಯೋಗಿ ಸಚಿವರು ಹಾಗೂ ಅವರ ಮಗನ ಬಗ್ಗೆಯೂ ಮಾತನಾಡಿದ್ದಾರೆ. ಅಂತಹ ಎಲ್ಲಾ ಅಂಶಗಳ ಬಗ್ಗೆ ಇವತ್ತಿನ ಸರ್ಕಾರ ತೀರ್ಮಾನ ಮಾಡುವ ಕ್ರಮದ ಮೇಲೆ ಕುಳಿತಿದ್ದಾರೆ. ಮಾನ್ಯ ಹೆಚ್.ಡಿ. ಕುಮಾರಸ್ವಾಮಿಯವರು ಸದನದಲ್ಲಿ ಯಾವ್ಯಾವುದರ ಬಗ್ಗೆ ಅಪಾದನೆ ಮಾಡಿದ್ದರೋ, ಅವೆಲ್ಲವೂ ಸಹ on record ಇದೆ. Proceedings copy ಸಹ ನಮ್ಮ ಹತ್ತಿರವಿದೆ. ನಾಳೆ ಸಹ ಅವರ ಸರ್ಕಾರದೊಳಗೆ ಯಾರ್‍ಯಾರು ಮಂತ್ರಿಗಳಾಗುತ್ತಾರೋ, ಯಾರ್‍ಯಾರು ಅವರ ಸಹಚರಗಳಾಗುತ್ತಾರೋ, ಅಂತಹವರ ಮೇಲೆ ಸದನದಲ್ಲಿ ಒಳಗಡೆ ಮಾತನಾಡಿದಂತಹ ಮಾತುಗಳು ಈ ವಿಧಾನ ಪರಿಷತ್ತಿನಲ್ಲಿಯೂ ಮತ್ತು ವಿಧಾನ ಸಭೆಯಲ್ಲಿಯೂ ಸಹ ದಾಖಲೆಯಾಗಿವೆ. ಅದನ್ನು ನಾವೆಲ್ಲರೂ ತೆಗೆದುಕೊಂಡಿದ್ದೇವೆ. ಅಂತಹ ಎಲ್ಲಾ ಮಂತ್ರಿಗಳ ಮೇಲೆ ಈಗ ಅವರ ಮಂತ್ರಿಗಳಾಗಿದ್ದರೆ, ದಯವಿಟ್ಟು, ಆ ದಿನ ನೀವು ಯಾರ ಮೇಲೆ ಅಪಾದನೆ ಮಾಡಿದ್ದರೋ, ಅಂತಹವರು ಯಾರನ್ನು ನೀವು ತಮ್ಮ ಮಂತ್ರಿಮಂಡಲದಲ್ಲಿಟ್ಟುಕೊಳ್ಳಬಾರದು. ಪ್ರಮಾಣಿಕ ಸರ್ಕಾರವನ್ನು ನಡೆಸಬೇಕೆಂಬ ಇಚ್ಛೆ ಇದ್ದರೆ, ಆ ದಿನ ನೀವೇ ಮಾಡಿದಂತಹ ಅಪಾದನೆಯನ್ನಾ, ಅಂತಹವರು ಯಾರು ಮಂತ್ರಿಮಂಡಲದಲ್ಲಿ ಇರಬಾರದು. ಯಾವ ಅಧಿಕಾರಗಳ ಮೇಲೆ ಅಪಾದನೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡಿದ್ದಿರೋ, ಅಧಿಕಾರಿಗಳು ಆ ಜಾಗದಲ್ಲಿ ಇರಬಾರದು. ಆ ಎಲ್ಲಾ ಸಂಗತಿಗಳು ಮತ್ತೆ ಚರ್ಚೆಯಾಗಬೇಕು. ಅಂತಹ ಅಂಶಗಳು ನಮ್ಮ ರಾಜ್ಯಪಾಲರ ಭಾಷಣದಲ್ಲಿ ಕಾಣಿಸುವುದಿಲ್ಲ. ಎರಡನೆಯದು ಮಾನ್ಯ ಕುಮಾರಸ್ವಾಮಿಯವರು ಯುವಕರು ಮತ್ತು ಸ್ವಲ್ಪ ಉತ್ಸಾಹವೂ ಇದೆ. ಅವರು ಹಾಡಿದ ಮಾತಿನಂತೆ ನಡೆದುಕೊಳ್ಳುತ್ತಾರೆಂಬ ನಂಬಿಕೆಯೂ ಕೂಡ ನನಗೆ ಇದೆ. ಅವರು ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಂಡಿದ್ದಾಗ ನಾನು attend ಮಾಡಿದ್ದೇನೆ. ಅವರು ನನ್ನ ಆರೋಗ್ಯವನ್ನು ಮೀರಿ, ಜನರ ಸೇವೆಗೋಸ್ಕರ ಈ ಹೋರಾಟವನ್ನು ಮಾಡುತ್ತೇನೆಂಬುದು ಒಬ್ಬ ನಾಯಕನಾಗಿ ಸಹಜವಾಗಿ ಮಾತನಾಡುವಂತಹ ಮಾತು. ನನಗೆ ಪ್ರಾಣ ಉಳಿಯಬೇಕೆಂದರೆ ನನಗೆ ಅಧಿಕಾರ ಕೊಡಿ ಎಂಬ ಮಾತನ್ನು ಒಂದು ಸಭೆಯಲ್ಲಿ ಭಾಷಣ ಮಾಡಿ ಜನರಿಗೆ ಕರೆ ಕೊಟ್ಟಿರುವುದನ್ನು ನಾನು ದೂರದರ್ಶನದಲ್ಲಿ ನೋಡಿದೆ. ನಾನು ಜೀವನವನ್ನು ಇಷ್ಟೊಂದು ಅಪಾಯಕ್ಕೆ ತಳ್ಳಿ ಹೋರಾಟವನ್ನು ಮಾಡುತ್ತಿದ್ದೇನೆ. ದಯಮಾಡಿ, ಅಧಿಕಾರವನ್ನು ಕೊಡಿ ಎಂದು ಕೇಳಿದರು. ಆದಾದ ನಂತರ ಇನ್ನೊಂದು ಸಂದರ್ಶನದಲ್ಲಿ ಬಿಜೆಪಿಯವರ ಜೊತೆಗೂ ಮತ್ತು ಕಾಂಗ್ರೆಸ್‌ನವರ ಜೊತೆಗೂ ಅಷ್ಟೇ ಅಂತರ, ಯಾರಾ ಜೊತೆಗೂ ನಾನು ಸರ್ಕಾರ ಮಾಡುವುದಕ್ಕೆ ಹೋಗುವುದಿಲ್ಲ. ನನಗೆ ಪೂರ್ಣ ಬಹುಮತ ಕೊಟ್ಟರೆ ಮಾತ್ರ ನಾನು ಆಡಳಿತ ಮಾಡುತ್ತೇನೆ. ಅಗತ್ಯವಿದ್ದರೆ, ವಿರೋಧ ಪಕ್ಷದಲ್ಲಿ ಕುಳಿತುಕೊಳ್ಳುತ್ತೇನೆ. ಇನ್ನೂ ಅವಶ್ಯಕತೆ ಇದ್ದರೆ ...

**ಶ್ರೀ ಕೆ.ಬಿ. ಶಾಣಪ್ಪ (ನಾಮ ನಿರ್ದೇಶಿತರು):-** ಅವರು ಸರಿಯಾಗಿ ಹೇಳಿದ್ದಾರೆ.

**ಶ್ರೀ ಆಯನೂರು ಮಂಜುನಾಥ್:-** ಅವರು ಸರಿಯಾಗಿ ಹೇಳಿದ್ದಾರೆ.

**ಶ್ರೀ ಕೆ.ಬಿ. ಶಾಣಪ್ಪ (ನಾಮ ನಿರ್ದೇಶಿತರು):-** ಅವರು ಯಾರ ಜೊತೆಗೂ

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರು ಅಗತ್ಯ ಬಿದ್ದರೆ ಚುನಾವಣೆಗೆ ಹೋಗುತ್ತೇನೆಂದು ಹೇಳಿದರು. ಇದು ಈಗ ಯಾರ ಮಾತನ್ನು ಯಾರು ಉಳಿಸಿದರು. ಯಾವ ಸತ್ಯ ಸಂದ ಆಡಿದ ಮಾತು ಇದು. ಇದು ಸಾರ್ವಜನಿಕವಾಗಿ ಹೇಳಿದಂತಹ ಹೇಳಿಕೆ. ಕಾಂಗ್ರೆಸ್‌ನವರೇ ನಿಮ್ಮ ಮನೆಗೆ ಬಂದರೋ ಅಥವಾ ನೀವೇ ಅವರ ಮನೆಗೆ ಹೋದರೋ ಅದು ಬೇರೆ. ಯಾರ ಜೊತಿಯಲ್ಲಿಯೂ ಸೇರಿ ಅಧಿಕಾರ ಮಾಡಲ್ಲ ಎಂದು ಹೇಳಿದ್ದರು ಅಲ್ಲವೇ? ನೀವು ಮಾಡಿರುವುದರ ಬಗ್ಗೆ ನನ್ನದೇನು ಅಭ್ಯಂತರವಿಲ್ಲ. ನೀವು ಆಡಿದ ಮಾತುಗಳೇನು? ಅವರು ಇಷ್ಟು ಸಾರ್ವಜನಿಕವಾಗಿ ದಾಖಲೆಗಳ ಸಮೇತ ಆಡಿದಂತಹ ಮಾತಿಗಳಿಗೆ ಸಾರ್ವಜನಿಕರಿಗೆ ತಪ್ಪಿದ್ದಾರೆ. ನೀವು ನಾಳೆಯೂ ಕೂಡ ಸದನದಲ್ಲಿ ಮಾತನಾಡುವ ಮಾತಿಗೆ ನಾವು ಯಾವ ಭರವಸೆಯನ್ನು ಇಟ್ಟುಕೊಳ್ಳಬೇಕು. ನೀವು ಕೊಡುವ ಆಶ್ವಾಸನೆಗಳ ಮೇಲೆ, ನೀವು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಂಡಿಸುವ ಬಜೆಟ್ ಮೇಲೆ ನಾವು ಯಾವ ನಂಬಿಕೆಯನ್ನು ಇಟ್ಟುಕೊಳ್ಳಬೇಕು? ಆ ಕಾರಣಕ್ಕಾಗಿ ನಾನು ಈ ಪ್ರಶ್ನೆಗಳನ್ನು ಕೇಳುತ್ತಿದ್ದೇನೆ. ಮಾನ್ಯ ಹೆಚ್.ಡಿ. ಕುಮಾರಸ್ವಾಮಿಯವರ ಮೇಲೆ ಮತ್ತು ಸರ್ಕಾರದ ಮೇಲೆ ಜನ ಏನು ಭರವಸೆಯನ್ನು ಇಡಬೇಕಾಗಿಲ್ಲ ಎಂಬ ಮಾತನ್ನು ಹೇಳಿದ್ದಾರೆ. ಏಕೆಂದರೆ, "ಈ ಜನತೆ ನನಗೆ ಅಧಿಕಾರವನ್ನು ಕೊಟ್ಟಿಲ್ಲ." ಎಂಬುದನ್ನು ಮಾನ್ಯ ಕುಮಾರಸ್ವಾಮಿಯವರೇ ಸ್ವತಃ ಘೋಷಣೆಯನ್ನು ಮಾಡಿದ್ದಾರೆ. ಮಾನ್ಯ ರಾಹುಲ್ ಗಾಂಧಿಯವರ ಕೃಪೆಯಿಂದ ನಾನು ಮುಖ್ಯಮಂತ್ರಿಯಾಗಿದ್ದೇನೆ. ಅದಕ್ಕೆ ಧನ್ಯವಾದಗಳು. ಹಾಗಾಗಿ ಈ ರಾಜ್ಯದ ಜನತೆಗೆ ಒಳ್ಳೆಯದು ಮಾಡುವುದು ಸಾಧ್ಯವಿಲ್ಲ. ಹಾಗೆ ಏನಾದರೂ ಇದ್ದರೆ ಕಾಂಗ್ರೆಸ್ ನಾಯಕರಿಗೆ ಮಾಡಬಹುದು ಎಂಬುದು ಸ್ಪಷ್ಟ. ಅವರು ಹಾಗೆ ತಿಳಿದುಕೊಂಡಿದ್ದಾರೆ. ಸಾಲ ಮನ್ನಾ ಪ್ರಕರಣದೊಳಗೆ ಒಪ್ಪಿಗೆಯನ್ನು ಕೊಟ್ಟರು ಬಚಾವ್.

(ಮುಂದು...)

<u>(034)03.07.2018/5.40/ಎಂ.ಎಂ-ಬಿ.ಎನ್.ಎಸ್</u>

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಆಯನೂರು ಮಂಜುನಾಥ್ (ಮುಂದು)**

ನಾವು ಬಿಜೆಪಿಯವರು ಅವರ ಜೊತೆ ಅಧಿಕಾರ ನಡೆಸಿ ನೋಡಿದ್ದೇವೆ. ನಾನು ಶಿವಮೊಗ್ಗದಲ್ಲಿ 25 ದಿನಗಳ ಕೆಳಗೆ ಒಂದು statement ಮಾಡಿದ್ದೆ, ಜೆಡಿಎಸ್ ನವರು ಚಾಣಾಕ್ಷರಾಗಿದ್ದಾರೆ. ಅವರು ಹೆಂಗೂ ಇರುತ್ತಾರೆ, ಹೀಗೆ ಸಿಕ್ಕಿದರೆ ಹೀಗೆ, ಹಾಗೆ ಸಿಕ್ಕಿದರೆ ಹಾಗೆ ಎನ್ನುವಂತಿರುತ್ತಾರೆ. ಮಾನ್ಯ ಸಭಾಪತಿಯವರು ಹಾಗೆ ಇಲ್ಲ ಎಂದು ತಿಳಿದುಕೊಂಡಿದ್ದೇನೆ. ಅವರ ಬಗ್ಗೆ ನನಗೆ ನಂಬಿಕೆ ಇದೆ. ಆ ರೀತಿ ಇದ್ದವರು, ಕಾಂಗ್ರೆಸ್ಸಿನ ಹೆಗಲ ಮೇಲೆ ಬಂದೂಕಿದೆ. ಸಾಲ ಮನ್ನಾ ಮಾಡಲು ಒಪ್ಪಿಕೊಳ್ಳದಿದ್ದರೆ ಅದೇ ಗುಂಡಿನಲ್ಲಿ . . .

**ಶ್ರೀ ಟಿ.ಎ. ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡುವುದು ಬಿಟ್ಟು ಪಕ್ಷದ ಬಗ್ಗೆ ಮಾತನಾಡುತ್ತಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ನಾನು ಪಕ್ಷದ ಬಗ್ಗೆ ಮಾತನಾಡುತ್ತಿಲ್ಲ. ನನಗೆ ಏನು ಮಾತನಾಡಬೇಕೆಂಬುದು ಗೊತ್ತಿದೆ. ಅದನ್ನು ನಿಯಂತ್ರಿಸುವುದಕ್ಕೆ ಸಭಾಪತಿಯವರಿದ್ದಾರೆ.

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೇ, ಇದು ಸರಿಯಲ್ಲ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಮಾನ್ಯ ಶರವಣರವರೇ ನಿಮ್ಮ ಸ್ಥಾನಕ್ಕೆ ಬರಲಿ; ನನ್ನದೇನೂ ತಕರಾರು ಇಲ್ಲ. ಮಾನ್ಯ ಸದಸ್ಯರು ಸಭಾಪತಿಯವರ ಸಹಾಯಕ್ಕೆ ಹೋಗುತ್ತಿದ್ದಾರೆಂದು ಕಾಣುತ್ತದೆ. ಮಾನ್ಯ ಸದಸ್ಯರು ದಯಮಾಡಿ ಸುಮ್ಮನೆ ಕುಳಿತುಕೊಳ್ಳಲು ಹೇಳಿ. ಬಂದೂಕು ಇಟ್ಟಿರುವುದು ಕಾಂಗ್ರೆಸ್‌ನ ಹೆಗಲ ಮೇಲೆ, ಅದು ಹೆಚ್ಚು ಕಡಿಮೆಯಾದರೆ ಗುಂಡು ಬೀಳುವುದು ಕಾಂಗ್ರೆಸ್‌ನ ಮೇಲೆಯೇ ಆಗಿದೆ. ಈ ಅಪಾಯವನ್ನು ಅರಿತುಕೊಂಡು ನೀವು ಬಗ್ಗಿ ಅಧಿಕಾರ ನಡೆಸಬೇಕೇ ಹೊರತು ಜನಪರ ಸರ್ಕಾರ ನಡೆಸುವುದಕ್ಕೆ ಸಾಧ್ಯವಿಲ್ಲ. ಆ ಕಾರಣದಿಂದಲೇ ರಾಜ್ಯಪಾಲರ ಭಾಷಣದ ಬಗ್ಗೆ ನಾನು ಏನನ್ನೂ ಹೇಳುವುದಕ್ಕೆ ಹೋಗಿಲ್ಲ. ಸ್ವಲ್ಪ ದಿನಗಳಾದ ಮೇಲೆ ತಮಗೆ ಗೊತ್ತಾಗುತ್ತದೆ. 40 ಸ್ಥಾನಗಳಲ್ಲಿದ್ದವರು 37 ಸ್ಥಾನಗಳಿಗೆ ಇಳಿದ ಮೇಲೆಯೂ ಬುದ್ಧಿ ಬಂದಿಲ್ಲ ಎಂದ ಮೇಲೆ ಇನ್ನು ಬುದ್ಧಿ ಬರುವುದೇ ಇಲ್ಲ. ಯಾರದೋ ಹೆಗಲ ಮೇಲೆ ಕುಳಿತವರಿಗೆ ಇಷ್ಟು ಪೌರುಷ ಇರುವುದಾದರೆ, ನನ್ನ ಗೆಳೆಯರಿಗೆ ಕಾಂಗ್ರೆಸ್‌ನ ಹೆಗಲ ಮೇಲೆ ಕುಳಿತುಕೊಂಡು ಅದೇ ಕಿರೀಟ ಎಂದು ಭಾವಿಸುವುದಾದರೆ, 104 ಸ್ಥಾನಗಳನ್ನು ಇಟ್ಟುಕೊಂಡ ನಮಗೆ ಇನ್ನೆಷ್ಟು ಹಮ್ಮು-ಬಿಮ್ಮು ಇರಬಹುದು ಎನ್ನುವುದನ್ನು ನಮ್ಮ ಗೆಳೆಯರು ಅರ್ಥ ಮಾಡಿಕೊಳ್ಳುವುದು ಒಳ್ಳೆಯದು. ನಾನು ವಾಪಸ್ ಇವರಿಗೆ ಉತ್ತರ ಕೊಡುವುದಕ್ಕಿಂತ ಅವರು ನನಗೆ ಭಾಷಣ ಮಾಡಲು ಬಿಡುವುದು ಒಳ್ಳೆಯದು. ನಾನು ನಿಮ್ಮ ಪ್ರತಿಯೊಂದು ಉತ್ತರಕ್ಕೂ ಕೂಡ ನಿಮ್ಮದೇ ಧಾಟಿಯಲ್ಲಿ ಉತ್ತರ ಕೊಡಬಲ್ಲೆ. ನೀವು ತಡವಿದರೆ ನಾನು ಕೂಡ ತಡವುತ್ತೇನೆ. ದಯವಿಟ್ಟು ನನ್ನ ಭಾಷಣ ಮಾಡಲು ನನ್ನನ್ನು ಬಿಡಿ. ನನಗೇಕೆ ತಾವು ಅಡ್ಡ ಬರುತ್ತೀರಿ? ಸದನದ ನಿಯಮಾವಳಿ ಇದೆ; ಸದನ ನನಗೆ ಅವಕಾಶ ಕೊಟ್ಟಿದೆ, ಸಭಾಪತಿಯವರು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಾರೆ. ಅದನ್ನು ಕೇಳಲು ತಾವು ಯಾರು ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಆದ್ದರಿಂದ ರಾಜ್ಯಪಾಲರ ಭಾಷಣದೊಳಗೆ ಏನನ್ನೂ ಹೇಳಲಿಲ್ಲ. ಆದರೂ ಅವರು ನಿಯಮಾವಳಿ ಪ್ರಕಾರ ಹೇಳಬೇಕಾಗಿತ್ತು, ಹಾಗೆ ಹೇಳಿ ಹೋಗಿದ್ದಾರೆ.

ಇಲ್ಲಿ ಯುವ ಜನಾಂಗದವರು ಉದ್ಯೋಗಕ್ಕಾಗಿ ಪರಿತಪಿಸುವುದನ್ನು ನನ್ನ ಸರ್ಕಾರ ಗಂಭೀರವಾಗಿ ಪರಿಗಣಿಸಿದೆ ಎಂದು ಏನು ಹೇಳಿದ್ದಾರೆ, ಅದಕ್ಕಾಗಿ ಅವರನ್ನು ನಾನು ಅಭಿನಂದಿಸುತ್ತೇನೆ. ಆದರೆ ನನ್ನದೊಂದು ವಿನಂತಿ ಇದೆ. ಅದೇನೆಂದರೆ, ಅದು ನಮ್ಮದೇ ಸರ್ಕಾರ ಇರಲಿ ಅಥವಾ ಯಾವುದೇ ಸರ್ಕಾರ ಇರಲಿ, unemployment is a big problem. ಯಾವುದೇ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರವು ಒಮ್ಮೆಗೇ ಇದನ್ನು ಬಗೆಹರಿಸಲು ಸಾಧ್ಯವಾಗಿಲ್ಲ. ಅದು ಚಿರಂತನವಾಗಿ ಆಯಾ ಪ್ರಮಾಣದಲ್ಲಿ ಮುಂದುವರೆದುಕೊಂಡು ಹೋಗುತ್ತದೆ. ಇದನ್ನು ಹೊಸ ಸರ್ಕಾರದ ಮಂತ್ರಿಮಂಡಲ ಗಂಭೀರವಾಗಿ ಪರಿಗಣಿಸಿದೆ. ಆದರೆ ನನ್ನದೊಂದು ವಿನಂತಿ ಇದೆ. ರೈತರ ಸಾಲ ಮನ್ನಾ ಮಾಡುವಂತಹ ಸಂದರ್ಭದಲ್ಲಿ, ರೈತರ ಸಾಲ ಮನ್ನಾ ಮಾಡುವುದರ ಜೊತೆಗೆ, education loan ತೆಗೆದುಕೊಂಡಂತಹ ಬಹಳ ಜನ ಬಡವರ ಮಕ್ಕಳು ಇದ್ದಾರೆ. ಯಾರೋ ಶ್ರೀಮಂತರ ಮಕ್ಕಳು ಅಥವಾ ನನ್ನಂತಹ ಎಂ.ಎಲ್.ಎ., ಎಂ.ಎಲ್.ಸಿ., ಗಳ ಮಕ್ಕಳು ಬ್ಯಾಂಕ್ ಲೋನ್ ತೆಗೆದುಕೊಂಡು ಮಕ್ಕಳಿಗೆ ವಿದ್ಯಾಭ್ಯಾಸ ಕೊಟ್ಟಿಲ್ಲ. ಆರ್ಥಿಕವಾಗಿ ಮಧ್ಯಮ ವರ್ಗದವರು, ಬಡವರ ಮಕ್ಕಳು, ಸಾಮಾನ್ಯ ಪದವಿಯನ್ನು ಮಾಡಿದರೆ ಉದ್ಯೋಗ ಸಿಗುವುದಿಲ್ಲ, ಭವಿಷ್ಯ ಇರುವುದಿಲ್ಲ. ಆ ಕಾರಣಕ್ಕೋಸ್ಕರ, higher educational qualification ಬೇಕು ಎನ್ನುವ ಕಾರಣಕ್ಕೆ ಬ್ಯಾಂಕ್ ಸಾಲ ತೆಗೆದುಕೊಂಡಿದ್ದಾರೆ. ಬ್ಯಾಂಕುಗಳು ಕೂಡ education loan ಗೆ surety ತೆಗೆದುಕೊಳ್ಳಬಾರದು ಎಂದಿದ್ದರೂ ಕೂಡ surety ಅನ್ನು ತೆಗೆದುಕೊಂಡಿದ್ದಾರೆ. ಅವನ higher education ಮುಗಿದು ಹೋಗಿದೆ. ಆದರೆ ಬ್ಯಾಂಕ್‌ನವರು ಸಾಲ ತೀರಿಸಿಲ್ಲವೆಂದು ನೋಟಿಸ್ ಕೊಡುತ್ತಿದ್ದಾರೆ. ಆತನು ಬ್ಯಾಂಕ್ ಲೋನ್‌ಗೆ ಅಪ್ಪನ ಜಮೀನು ಅಥವಾ ಮನೆಯನ್ನು surety ಯಾಗಿ ಕೊಟ್ಟಿದ್ದಾನೆ. ಅದು ಹರಾಜಿಗೆ ಬರುತ್ತಿದೆ. ಆತ ಬಡವರ ಮಗ. ಇದು ಬಹಳ ದೊಡ್ಡ ಸಂಖ್ಯೆಯಲ್ಲಿಲ್ಲ. ಅಥವಾ ನೂರಾರು ಕೋಟಿಗಳೂ ಅಲ್ಲ. ಅಂತಹ ಬಡವರ ಮಗನು ನನ್ನ ಕಾರಣದಿಂದ ತಂದೆಯು ನನ್ನನ್ನು ಓದಿಸಿದ್ದಲ್ಲದೇ, ಅವರ ಮನೆ-ಮಠ ಹರಾಜಾಗಿ ಹೋಗುತ್ತಿದೆ ಎಂಬ ದುಃಖದಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಆದರೆ ಅದನ್ನು ಅವನ ವಯಸ್ಸಿನ ಕಾರಣಕ್ಕೋಸ್ಕರ ಅದು ಯಾವುದೋ ಪ್ರೇಮ ಪ್ರಸಂಗ ಎಂದು ಕೋಟ್ ಆಗಿ ಬಿಡುತ್ತದೆ. ಜನರು ಅದನ್ನು ಲವ್ ಕೇಸ್ ಇರಬಹುದು ಎಂದು ಭಾವಿಸುತ್ತಾರೆ. ಆ ಹಿನ್ನೆಲೆಯಲ್ಲಿ ಅದು ಬಹಳ ದೊಡ್ಡ ಮೊತ್ತವೇನಲ್ಲ, ಯುವ ಜನರ ಬಗ್ಗೆ ನಿಜಕ್ಕೂ ನಿಮಗೆ ಕಾಳಜಿ ಇರುವುದಾದರೆ ದಯಮಾಡಿ ಅವರ ಸಾಲ ಮನ್ನಾ ಮಾಡಿದರೆ ಸಂತೋಷ, ಮಾಡದೇ ಇದ್ದರೆ ಕನಿಷ್ಟ ಪಕ್ಷ ಬಡ್ಡಿ ಮನ್ನಾ ಆದರೂ ಮಾಡಿ. ಇದೇನೂ ಬಹಳ ದೊಡ್ಡ ಮೊತ್ತವಲ್ಲ. Free education loan, ಏಕೆಂದರೆ, ಒಬ್ಬ ಯುವಕ ಜ್ಞಾನಾರ್ಜನೆ ಮಾಡಿ ಅವನ ಜ್ಞಾನ ಭಂಡಾರ ಬೆಳೆದರೆ ಅಂತಿಮವಾಗಿ ಈ ದೇಶಕ್ಕೆ ಅವನೊಬ್ಬ ಕೊಡುಗೆಯಾಗಿರುತ್ತಾನೆ. ಅವನ ವಿದ್ಯಾಭ್ಯಾಸಕ್ಕೆ, ಶಿಕ್ಷಣಕ್ಕೆ ನಾವು ಬೆಲೆ ಕೊಡುತ್ತೇವೆ. ಏಕೆಂದರೆ, ಅವನ ಪಾಂಡಿತ್ಯ, ಅವನ talent, ಈ ಸಮಾಜ ಕಟ್ಟಲು, ದೇಶ ಕಟ್ಟಲು ಉಪಯೋಗವಾಗುತ್ತದೆ. ಅಂತಹ ಪಾಂಡಿತ್ಯವನ್ನು ಗಳಿಸಲು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡಿಕೊಂಡ ಸಾಲವನ್ನು ಅಥವಾ ಕನಿಷ್ಟ ಬಡ್ಡಿಯನ್ನು ಮನ್ನಾ ಮಾಡಬೇಕೆಂಬ ಆಗ್ರಹವನ್ನು ನಾನು ಈ ಸಂದರ್ಭದಲ್ಲಿ ಮಾಡುತ್ತೇನೆ.

ಸಾಲ ಮನ್ನಾದ ವಿಷಯ ಬಂದಾಗ ಇಲ್ಲೆಲ್ಲಿಯೂ ಕೂಡ ರಾಜ್ಯಪಾಲರ ಭಾಷಣದೊಳಗೆ... ಸಾಲ ಮನ್ನಾ ಬಗ್ಗೆ ಇಷ್ಟು ಚರ್ಚೆಯಾಗುತ್ತಿದೆ; 53 ಸಾವಿರ ಕೋಟಿ, 28 ಸಾವಿರ ಕೋಟಿ ಸಾಲವನ್ನು ಮನ್ನಾ ಮಾಡಬೇಕೋ ಬೇಡವೋ, ಹಣವನ್ನು ಎಲ್ಲಿಂದ ತರುತ್ತಾರೋ ಎಲ್ಲಿಂದ ಕೊಡುತ್ತಾರೆ ಎಂಬ ಬಗ್ಗೆ ನೂರಾರು ಚರ್ಚೆಯಾಗಿದೆ. ಆದರೆ ರಾಜ್ಯಪಾಲರ ಭಾಷಣದಲ್ಲಿ ಎಲ್ಲಿಯೂ ಕೂಡ ಸಾಲ ಮನ್ನಾದ ಬಗ್ಗೆ ವಿಚಾರವೇ ಇಲ್ಲ, ಸಾಲ ಮನ್ನಾ ಮಾಡುವ ಬಗ್ಗೆ ಚರ್ಚೆ ಕೂಡ ಇಲ್ಲ. ರೈತರನ್ನು ನಂಬಿಸಿ ಮೋಸ ಮಾಡಬೇಡಿ. ದಯವಿಟ್ಟು ತಾವು ಹೇಳಿದಷ್ಟು ಎಲ್ಲಾ ಸಾಲ ಮನ್ನಾವನ್ನೂ ಮಾಡಿ. ಅದನ್ನು ಬಜೆಟ್ ಅಧಿವೇಶನದಲ್ಲಿ ಮಾತನಾಡಬಹುದಾಗಿದೆ. ಏನೇನು ಸಾಲ ಮನ್ನಾ ಮಾಡುತ್ತೇವೆಂದು ಹೇಳಿದ್ದಿರಿ, ಈಗ ಯಾವುದಕ್ಕೆ ನುಣುಚಿಕೊಳ್ಳುತ್ತಿದ್ದೀರಿ; ಈ ಮಾತಿನ ವರಸೆಗಳನ್ನು ಬಜೆಟ್ ಅಧಿವೇಶನದಲ್ಲಿ ಮಾತನಾಡಲಾಗುವುದು. ಈಗ ತಮ್ಮ ಕುರ್ಚಿ ಭದ್ರವಾಗಿದ್ದು ಅದಕ್ಕೆ ಸಾಲ ಮನ್ನಾ ವಿಚಾರ ಮಾಡದೇ ಸುಮ್ಮನೆ ಕುಳಿತುಬಿಟ್ಟಿದ್ದೀರಿ ಎಂದು ನನಗನ್ನಿಸುತ್ತಿದೆ. ರೈತರ ಬಗ್ಗೆ ಕಾಳಜಿ ಇದ್ದರೆ ಸಾಲ ಮನ್ನಾ ಮಾಡುವ ಬಗ್ಗೆ ಪ್ರಸ್ತಾವ ಮಾಡಿ.

ಶಿಕ್ಷಣವೇ ಆಸ್ತಿ. ಶಾಲಾ ಕಾಲೇಜುಗಳ ಬಗ್ಗೆಯು ಸನ್ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಬಹಳ ಒಳ್ಳೆಯ ಅಭಿಪ್ರಾಯಗಳನ್ನು ಹೇಳಿದ್ದಾರೆ. ತಾವು ಅದೇ ಕ್ಷೇತ್ರದಿಂದ ಬಂದವರಾಗಿದ್ದೀರಿ. ಶಿಕ್ಷಣದ ಬಗ್ಗೆ ಕಾಳಜಿ ಹೇಗಿದೆ? ಎರಡೂ ಸರ್ಕಾರಗಳು ಇಲ್ಲಿ ಒಟ್ಟಿಗೇ ಇರುವುದರಿಂದ ಉತ್ತರವನ್ನು ಕೊಡಬೇಕು. ಹೆಣ್ಣುಮಕ್ಕಳ ಬಗ್ಗೆ ಕೂಡ ನಮಗೆ ಕಾಳಜಿ ಇದೆ. ನಮ್ಮ ಸಭಾನಾಯಕಿ ಕೂಡ ಒಬ್ಬ ಹೆಣ್ಣುಮಗಳಾಗಿದ್ದಾರೆ. Social Security programmes ನಲ್ಲಿ ಅದು ಯಾವುದೇ ಸರ್ಕಾರವಿರಲಿ, ಅದು ನಮ್ಮದು ಅಥವಾ ನಿಮ್ಮ ಸರ್ಕಾರವಾಗಿರಬಹುದು. ಒಬ್ಬ ಬಡವರ ಹೆಣ್ಣುಮಗಳು ಗರ್ಭಿಣಿಯಾದರೆ ಅವಳಿಗೋಸ್ಕರ ಅಂಗನವಾಡಿ ಮೂಲಕ ಔಷಧೋಪಚಾರ, ಆಸ್ಪತ್ರೆಗೆ ಕರೆದುಕೊಂಡು ಹೋಗುವುದು, ದಾಖಲಿಸುವುದು ನಂತರ ಅವಳ ಬದುಕಿಗಿಷ್ಟು ಎಂದು allowance ಕೊಟ್ಟು ಕಳುಹಿಸುತ್ತೇವೆ. ನಮ್ಮ ಊರಿನ 'ರಾಮಕ್ಕ'ನಂತಹ ಒಬ್ಬ ಅವಿದ್ಯಾವಂತೆಗೆ ಅಂತಹ ಸವಲತ್ತುಗಳನ್ನು ಕೊಡಬೇಕು, ಅವರು ಬಡವರ ಮಗಳು. ಅವಳಿಗೆ ಬಡತನದ ಕಾರಣಕ್ಕಾಗಿ ಪೌಷ್ಟಿಕಾಂಶದ ಕೊರತೆ ಇರುತ್ತದೆ. ಅದನ್ನು ಅಂಗನವಾಡಿ ಮೂಲಕ ಒದಗಿಸಿಕೊಡುತ್ತೇವೆ, ಅದು ಬಹಳ ಸ್ವಾಗತಾರ್ಹ. ಆಕೆಯನ್ನು ಕರೆದುಕೊಂಡು ಹೋಗಿ ವೈದ್ಯರಿಗೆ ತೋರಿಸುವ ಜವಾಬ್ದಾರಿ ಅಂಗನವಾಡಿಗಿದೆ, ಅದು ಸ್ವಾಗತಾರ್ಹ. ಆಕೆಯನ್ನು ಆಸ್ಪತ್ರೆಗೆ ದಾಖಲು ಮಾಡಿ ಕೇರ್ ತೆಗೆದುಕೊಳ್ಳುತ್ತಾರೆ ಅದು ಕೂಡ ಸ್ವಾಗತಾರ್ಹ. ಅದೆಲ್ಲಾ ಆದ ನಂತರ ಯಾವುದೋ ಯೋಜನೆಯಡಿಯಲ್ಲಿ 6000 ರೂಪಾಯಿಗಳನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಕೆಗೆ ಕೊಟ್ಟು ಕಳುಹಿಸುತ್ತೇವೆ. ಇದೆಲ್ಲವನ್ನೂ ನಾವು ಸ್ವಾಗತ ಮಾಡುತ್ತೇವೆ. ಆದರೆ ಇದೇ ಸವಲತ್ತು ಅವಿದ್ಯಾವಂತ ರಾಮಕ್ಕನಿಗೆ ಸಿಕ್ಕ ಹಾಗೆ ವಿದ್ಯಾವಂತ ಮಹಿಳೆ 'ಸೀತಕ್ಕ'ನಿಗೆ ಏಕೆ ಸಿಗುವುದಿಲ್ಲ? ಅವರು ಎಂ.ಎ., ಹಾಗೂ ಡಾಕ್ಟರೇಟ್ ವಿದ್ಯಾರ್ಹತೆಯನ್ನು ಹೊಂದಿದ್ದಾರೆ. N.E.T. (National Eligibility Test), S.L.E.T. (State Level Eligibility Test) ಗಳನ್ನು ಮಾಡಿದ್ದಾರೆ, ಅತಿಥಿ ಉಪನ್ಯಾಸಕರಾಗಿದ್ದಾರೆ. ಆಕೆ ವಿದ್ಯಾವಂತೆ ಎನ್ನುವ ಕಾರಣಕ್ಕಾಗಿ ಅವಳಿಗೆ ಕೊಡುವ ಸಂಬಳ ಕೂಡ ಕಡಿಮೆ ಇರುತ್ತದೆ. ಆಕೆ ಗರ್ಭಿಣಿಯಾದರೆ ಆಕೆಗೆ ರಜೆ ಇಲ್ಲ, ರಜೆ ಹೋದರೆ ಸಂಬಳ ಇಲ್ಲ. ಹೀಗಾದರೆ ಆಕೆಗೆ ಪೌಷ್ಟಿಕಾಂಶ ಎಲ್ಲಿರುತ್ತದೆ? ಸಂಬಳ ಬೇರೆ ಕಳೆದುಕೊಂಡಿರುತ್ತಾಳೆ. ಆಕೆಗೆ ಖಂಡಿತವಾಗಿ ರಜೆ ಕೊಡುತ್ತೇವೆ, ಅದು ಜಾರಿಯಲ್ಲಿದೆ. ಅತಿಥಿ ಉಪನ್ಯಾಸಕರಾಗಿರುವ ಹೆಣ್ಣುಮಕ್ಕಳಿಗೆ ಆರೋಗ್ಯ ಕೆಟ್ಟು ಹೋದರೆ, ಅಕಸ್ಮಾತ್ ನೈಸರ್ಗಿಕವಾದಂತಹ ಬಾಧೆಯನ್ನು ಅನುಭವಿಸಿ ಆರೋಗ್ಯ ವ್ಯತ್ಯಾಸವಾದರೆ ಅಂದು ಕರ್ತವ್ಯಕ್ಕೆ ಹೋಗದಿದ್ದರೆ ಅವರ ವೇತನ ಕಡಿತವಾಗುತ್ತದೆ. ಇದು ನಾವೆಲ್ಲರೂ ಪಕ್ಷಾತೀತವಾಗಿ ಯೋಚನೆ ಮಾಡಬೇಕಾದಂತಹ ಅಂಶವಾಗಿದೆ.

ಅತಿಥಿ ಉಪನ್ಯಾಸಕರಿಗೆ ಕೊಡುವ ಸಂಬಳ ಕೇವಲ 11,000 ದಿಂದ 13,000 ರೂಪಾಯಿಗಳಾಗಿರುತ್ತದೆ. ಶಿಕ್ಷಣದ ಬಗ್ಗೆ, ಮುಂದಿನ ಯುವ ಜನಾಂಗದ ಭವಿಷ್ಯದ ಬಗ್ಗೆ ಕನಸುಗಳನ್ನು ಕಾಣುತ್ತೇವೆ. ಚುನಾವಣೆ ಜಾತ್ರೆಯೊಳಗೆ ನಾವೆಲ್ಲರೂ ಮಾಡುತ್ತೇವೆ. ಆದರೆ ಅವರು Master Degree, Ph.D., N.E.T., S.L.E.T., ಪರೀಕ್ಷೆಗಳನ್ನೆಲ್ಲಾ ಮಾಡಿದ್ದಾರೆ. ಮೂರ್ನಾಲ್ಕು ಪದವಿಗಳಿವೆ, ಈ ರಾಜ್ಯದಲ್ಲಿ ಉದ್ಯೋಗಗಳು ಖಾಲಿ ಇದೆ, ಆತ 15-20 ವರ್ಷ ಸೇವೆ ಸಲ್ಲಿಸಿದ್ದಾನೆ, ಅವನ ವಯೋಮಿತಿ ಮೀರುತ್ತಿದೆ, ಅವನು 20 ವರ್ಷಗಳ ಕೆಳಗೆ ಪದವಿ ಪಡೆದಿದ್ದಾನೆ. ಆದರೆ ಇವತ್ತು ಯಾವುದೋ ಅಧಿಕಾರಿಗಳು ಹೇಳುತ್ತಾರೆಂದು ಅಥವಾ ಕೇಂದ್ರ ಸರ್ಕಾರದ ಯಾವುದೋ ನಿಯಮಾವಳಿ ಬಂದಿದೆಯೆಂದು ಹೇಳಿ, ಅವನು ಪಡೆದಿರುವ ಅಂಕ ಕಡಿಮೆ ಇದೆಯೆಂದು ಹೇಳುತ್ತಾರೆ. ಇವತ್ತಿನ ವಿದ್ಯಾಭ್ಯಾಸ ಬೇರೆ, ಅಂದಿನ ವಿದ್ಯಾಭ್ಯಾಸವೇ ಬೇರೆ. ಅಂದು ಶೇ.60-70 ಅಂಕಗಳನ್ನು ಪಡೆದವರು ರ್‍ಯಾಂಕ್ ಲೈನ್‌ನಲ್ಲಿದ್ದರು. ಆದರೆ ಇಂದಿನವರು ಶೇ.96-98 ಅಂಕಗಳನ್ನು ಪಡೆದಿರುತ್ತಾರೆ. ಅವರೊಂದಿಗೆ ಇವರನ್ನು ಹೋಲಿಸಿ ಹೊಸಬರನ್ನು ನೇಮಕಾತಿ ಮಾಡಿಕೊಳ್ಳುತ್ತಾರೆ. ಅದರಂತೆ ಕಳೆದ ವರ್ಷ 2400 ಜನರನ್ನು ನೇಮಕಾತಿ ಮಾಡಿದ್ದಾರೆ, ಇದರಿಂದ 4,600 ಜನರು ಬೀದಿ ಪಾಲಾದರು.

(ಮುಂವ..

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(35) 03-07-2018/5-50/ಕೆಹೆಚ್/ಕೆಎಸ್

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಆಯನೂರು ಮಂಜುನಾಥ್ (ಮುಂದು):-** ಅವರ ಬದುಕಿನ ಪ್ರಶ್ನೆ ಏನು? ಉನ್ನತ ಶಿಕ್ಷಣವನ್ನು ಹೊಂದಿರುವಂತಹ ಒಬ್ಬ ಪ್ರಾಧ್ಯಾಪಕನಿಗೆ ಸಂಬಳ 11 ಸಾವಿರ ಅಥವಾ 13 ಸಾವಿರ ಎನ್.ಆರ್.ಇ.ಜಿ., ನಲ್ಲಿ ನಮಗಿಂತ ಹೆಚ್ಚಾಗಿ ಒಬ್ಬ ಕೂಲಿ ಕಾರ್ಮಿಕರಿಗಿಂತ ಸಂಬಳ ಜಾಸ್ತಿ ಸಿಗುತ್ತದೆ. ಈ ರಾಜ್ಯದ ಪ್ರತಿಭಾವಂತನನ್ನು ಈ ರೀತಿ ನಡೆಸುಕೊಳ್ಳುವುದು ಸರಿಯಲ್ಲ. ಅತಿಥಿ ಶಿಕ್ಷಕರು, ಅತಿಥಿ ಉಪನ್ಯಾಸಕರುಗಳ ಬಗ್ಗೆ ನನಗಿಂತ ಹೆಚ್ಚಾಗಿ ತಮಗೆ ಗೊತ್ತಿದೆ. ಆ ಕ್ಷೇತ್ರದಿಂದಲೇ ಸುಮಾರು 40 ವರ್ಷಗಳಿಂದ ಬಂದಿದ್ದೀರಿ. ಖಾಯಂಗೊಳಿಸುವ ಬಗ್ಗೆ ಉತ್ತಮವಾದ ಪರಿಹಾರ ಸಿಗಲೇಬೇಕು. ಅವರ ಅನುಭವ ಮತ್ತು ವಯಸ್ಸನ್ನು ಇಟ್ಟುಕೊಂಡು age relaxation ಅನ್ನು ಕೊಟ್ಟು percentage ಆಧಾರದ ಮೇಲೆ ಮಾಡಬೇಕು. ಅದೇ ರೀತಿ ಯಾರ್‍ಯಾರು ಗುತ್ತಿಗೆ ಆಧಾರದ ಮೇಲೆ ಕೆಲಸವನ್ನು ಮಾಡಿಕೊಂಡು ಬಂದಿದ್ದಾರೆ. ಅಂತಹವರ ಬಗ್ಗೆ ಗಮನವನ್ನು ಹರಿಸಬೇಕು. ಕಾಲ್ಪನಿಕ ವೇತನದ ಸಮಸ್ಯೆಯ ಬಗ್ಗೆ ತಮ್ಮ ವರದಿಯಲ್ಲಿಯೇ ಇದೆ. ಅದರ ಬಗ್ಗೆ ನಾನು ಸಂಕ್ಷಿಪ್ತವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ತಮ್ಮ ನೇತೃತ್ವದಲ್ಲಿಯೇ ಕಾಲ್ಪನಿಕ ವೇತನದ ಬಗ್ಗೆ ಒಂದು ಸಮಿತಿ ರಚನೆಯಾಗಿದೆ. ಕಳೆದ ಬಾರಿ ಮಾನ್ಯ ಸದಸ್ಯರೆಲ್ಲರೂ ಇದರ ಬಗ್ಗೆ ಒಪ್ಪಿಕೊಂಡರೂ ಕೂಡ ಇನ್ನು ಜಾರಿಗೆ ಬಂದಿಲ್ಲ. ತಮಗೆಲ್ಲಾ ಇದರ ಒಳ ಸುಳಿವು ಎಲ್ಲಾ ಗೊತ್ತಿದೆ. ಈ ಸರ್ಕಾರದಲ್ಲಿ ಸಮಿತಿಯ ಅಧ್ಯಕ್ಷರಾಗಿ ತಾವು ಕೂಡ ಭಾಗಿಯಾಗಿರುವುದರಿಂದ ಮತ್ತು ಭಾಧ್ಯಸ್ಥರಾಗಿರುವುದರಿಂದ ತಮ್ಮ ಸಮಿತಿಯ ವರದಿಯನ್ನು ದಯಮಾಡಿ by hook or by crook ಆ ವರದಿಯು ಜಾರಿಗೆ ಬರಬೇಕು. ತಮ್ಮ ವರದಿಯನ್ನು ಪೂರ್ತಿಯಾಗಿ ಜಾರಿಗೆ ಕೊಟ್ಟರೆ ಮಾತ್ರ ಈ ಸದನದಲ್ಲಿ ತಮ್ಮ ಹಿಡಿತದ ನೇತೃತ್ವದಲ್ಲಿ ಆದಂತಹ ಆ ವರದಿಗೆ ಒಂದು ಮಾನ್ಯತೆ ಬರುತ್ತದೆ. ದಯಮಾಡಿ ಕಾಲ್ಪನಿಕ ವೇತನದ ಸಮಸ್ಯೆಯು ಇತ್ಯರ್ಥವಾಗಲೇಬೇಕು.

**ಸಭಾಪತಿಯವರು:-** ಮಾನ್ಯ ಸದಸ್ಯರೇ ತಾವು ಮಾತನಾಡುವುದಕ್ಕೆ ಪ್ರಾರಂಭ ಮಾಡಿ ಅರ್ಧತಾಸು ಆಯಿತು.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಇನ್ನೊಬ್ಬ ಸದಸ್ಯರ ಸಮಯವನ್ನು ನಾನು ತೆಗೆದುಕೊಳ್ಳುತ್ತೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ ತಾವು ಚೆನ್ನಾಗಿಯೇ ಮಾತನಾಡುತ್ತೀರಿ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರನ್ನು ವಿನಂತಿ ಮಾಡಿಕೊಂಡು ಅವರ ಸಮಯವನ್ನು ತೆಗೆದುಕೊಳ್ಳುತ್ತೇನೆ. ದಯಮಾಡಿ ನನಗೆ time extend ಮಾಡಿ.

**ಸಭಾಪತಿಯವರು:-** ಮಾನ್ಯ ಸದಸ್ಯರೇ ತಾವು ಮಾತನಾಡಿ. ಮಾತನಾಡಬೇಡಿ ಎಂದು ಹೇಳುವುದಿಲ್ಲ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಅದೇ ರೀತಿ N.P.S. (New Pension Scheme)., ನ ಸಮಸ್ಯೆ ಮತ್ತು ಕಾಲ್ಪನಿಕ ವೇತನ ಸಮಸ್ಯೆ ಇದೆ. ಮೊನ್ನೆಯ ದಿವಸ ಪ್ರಮಾಣ ವಚನವನ್ನು ತೆಗೆದುಕೊಳ್ಳುವವರೆಗೆ ಮಾಜಿ ಶಾಸಕನಾಗಿದ್ದು, ನನಗೆ ಪಿಂಚಣಿ ಹಣ ಬರುತ್ತಿತ್ತು. ಮೊನ್ನೆಯವರೆಗೂ ಯಾರು ಮಾಜಿ ಶಾಸಕರಾಗಿದ್ದರೋ, ಅವರಿಗೆಲ್ಲಾ ಪಿಂಚಣಿ ಹಣ ಬರುತ್ತಿತ್ತು. ನಮ್ಮ ರಾಜ್ಯ ಸರ್ಕಾರದಿಂದ 40 ಸಾವಿರ ರೂಪಾಯಿಯ ಪಿಂಚಣಿ ಮೊತ್ತ ಮತ್ತು 5 ಸಾವಿರ ರೂಪಾಯಿಗಳ medical allowance ಸಿಗುತ್ತದೆ. ಒಟ್ಟಾರೆಯಾಗಿ 45 ಸಾವಿರ ರೂಪಾಯಿಗಳು ಸಿಗುತ್ತದೆ. 1994 ರಲ್ಲಿ ವಿಧಾನಸಭೆಯ ಶಾಸಕನಾಗಿ 4 ವರ್ಷಗಳು ಮಾತ್ರ ಕೆಲಸವನ್ನು ಮಾಡಿದ್ದೇನೆ. ಅನಂತರ ರಾಜೀನಾಮೆಯನ್ನು ಕೊಟ್ಟು ಲೋಕಸಭೆಗೆ ಹೊರಟು ಹೋದೆ. ಆ 4 ವರ್ಷಗಳ ಕಾಲ ವಿಧಾನಸಭೆಯ ಸದಸ್ಯನಾಗಿದ್ದೆ ಎಂಬ ಕಾರಣಕ್ಕಾಗಿ ನನಗೊಂದು ಪಿಂಚಣಿಯನ್ನು ಕೊಡಲಾಗುತ್ತಿತು. ಏಕೆಂದರೆ ಎಲ್ಲಾ ಎಂ.ಎಲ್.ಎ., ಎಂ.ಪಿ., ಗಳು ಕೂಡ public servants ಎನ್ನುವಂತಹ category ಯಲ್ಲಿ ಬರುವುದರಿಂದ ಮತ್ತು ನಾವು ಸರ್ಕಾರಿ ನೌಕರರೆಂಬ ಕಾರಣಕ್ಕಾಗಿ ನಮಗೆ ವೇತನ, Travelling allowance (T.A.), Dearness allowance (D.A), House Rent allowance (H.R.A.) and Health allowance ಎಲ್ಲವೂ ಕೂಡ ಇದೆ. ಹಾಗಾಗಿ ಸರ್ಕಾರಿ ನೌಕರರು ಎಂಬ ಕಾರಣಕ್ಕೆ ನಾವು ನಿವೃತ್ತಿಯನ್ನು ಹೊಂದಿದ ಮೇಲೆ ಪಿಂಚಣಿಯನ್ನು ಕೊಡಲಾಗುತ್ತದೆ. ನಾನು ಕೂಡ 4 ವರ್ಷಗಳ ಕಾಲ ಪಿಂಚಣಿಯನ್ನು ತೆಗೆದುಕೊಂಡಿದ್ದೇನೆ, ಆದರೆ ಇಲ್ಲಿ 30 ವರ್ಷ, 32 ವರ್ಷಗಳ ಕಾಲ ಸರ್ಕಾರಿ ನೌಕರಿಯನ್ನು ಮಾಡಿದ್ದಾರೆ. 2006ರ ಮೊದಲು ಸರ್ಕಾರಿ ನೌಕರಿಯನ್ನು ಮಾಡಿದವರಿಗೆ ಒಂದು ರೀತಿಯ ಯೋಜನೆ ಇದೆ. 2006ರ ನಂತರ ಒಂದು ಯೋಜನೆ ಇದೆ. ಇಡೀ ದೇಶದಲ್ಲಿಯೇ ಹೊಸ ಸರ್ಕಾರಿ ನೌಕರರಿಗೆ ಇಡೀ ದೇಶದಲ್ಲಿಯೇ ಅನ್ವಯವಾಯಿತು. ಇದನ್ನು ನಮ್ಮ ರಾಜ್ಯದಲ್ಲಿಯೂ ಕೂಡ ಒಪ್ಪಿಕೊಂಡಿದ್ದೇವೆ. ಆದರೆ ಇದು ಬದಲಾವಣೆಯಾಗಬೇಕೆಂಬ ಆಗ್ರಹವಿದೆ. ಏಕೆಂದರೆ ರಾಜ್ಯ ಸರ್ಕಾರಕ್ಕೆ ಇದನ್ನು ಒಪ್ಪುವಂತಹ ಮತ್ತು ತಿರಸ್ಕರಿಸುವಂತಹ ಅಧಿಕಾರವಿದೆ. ಈ ಯೋಜನೆಯು ಕೇಂದ್ರ ಸರ್ಕಾರದಿಂದ ಬಂದಿರುವಂತಹ ಕಾನೂನು ಇದ್ದರೂ ಕೂಡ ಅದನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಿರಸ್ಕರಿಸುವಂತಹ ಅಧಿಕಾರ ನಮ್ಮ ರಾಜ್ಯ ಸರ್ಕಾರಕ್ಕೆ ಇದೆ. ನಮ್ಮ ಸರ್ಕಾರ ಕೊಡುವಂತಹ ಶೇಕಡ 10 ರಷ್ಟು ಮತ್ತು N.P.S., ನೌಕರರ ಶೇಕಡ 10 ರಷ್ಟು ಮೊತ್ತವನ್ನು ಷೇರು ಮಾರುಕಟ್ಟೆಯಲ್ಲಿ ಹಾಕುತ್ತಿದ್ದೇವೆ. ಪ್ರಪಂಚದ ಮಾರುಕಟ್ಟೆಯ ಆಧಾರದ ಮೇಲೆ ಷೇರು ಮಾರುಕಟ್ಟೆಯ ವ್ಯತ್ಯಾಸವಾದಾಗ ಅವನ ಬದುಕು ನಿವೃತ್ತಿ ವಯಸ್ಸಿಗೆ social security ಸಿಗಬೇಕೋ ಅದು ಸಿಗುತ್ತಿಲ್ಲ. ಈ ಯೋಜನೆಯು ಬಹಳ ಲಾಭದಾಯಕ ಎಂದಾದರೆ ದಯಮಾಡಿ, N.P.S. ಅನ್ನು ನಮ್ಮ ಎಲ್ಲಾ ಶಾಸಕರಿಗೂ ಅನ್ವಯ ಮಾಡಬೇಕು. ಈ ಯೋಜನೆಯು ಲಾಭದಾಯವಾದರೆ ನಮಗೇಕೆ ವಂಚನೆಯಾಗಬೇಕು. ನಾವು ಸರ್ಕಾರಿ ನೌಕರರಾಗಿರುವುದರಿಂದ ಹೊಸ ಪಿಂಚಣಿ ಯೋಜನೆಯನ್ನು ಅಳವಡಿಸಬೇಕು. ಆಕಸ್ಮಾತ್ ಈ ಯೋಜನೆಯು ನಷ್ಟವೆಂದಾದರೆ ಲಾಭದಾಯಕವನ್ನು ನಾವು ಮಾತ್ರ ಇಟ್ಟುಕೊಂಡು ಆ ಕಾನೂನನ್ನು ಒಪ್ಪಿಕೊಂಡು ಆ ಕಾನೂನನ್ನು ಸರ್ಕಾರಿ ನೌಕರರ ಮೇಲೆ ಪ್ರಯೋಗ ಮಾಡುವುದು ಬೇಡ. ಹೊಸ ಔಷಧಿಯನ್ನು ಕಂಡು ಹಿಡಿದಾಗ ಅದನ್ನು ಮೊಲ ಹಾಗೂ ಇಲಿಗಳ ಮೇಲೆ ಪ್ರಯೋಗ ಮಾಡಿ ನಂತರ ಜನರಿಗೆ ಕೊಡುತ್ತಾರೆ. ಹಾಗೆಯೇ ಹೊಸ ಯೋಜನೆಗಳನ್ನು ಸರ್ಕಾರಿ ನೌಕರರ ಮೇಲೆ ಪ್ರಯೋಗ ಮಾಡುವುದು ಬೇಡ. ದಯಮಾಡಿ ಈ ಯೋಜನೆಯನ್ನು ಬದಲಾವಣೆ ಮಾಡಬೇಕು. 2018ನೇ ಸಾಲಿನಿಂದ ಒಂದಿಷ್ಟು benefit ಕೊಡುತ್ತೇವೆ ಎಂದು ಮೊನ್ನೆಯ ದಿವಸ ಸರ್ಕಾರಿ ಆದೇಶವಾಗಿದೆ. ಇದರ ಬಗ್ಗೆ ನನ್ನ ಮೂಲಭೂತ ಆಗ್ರಹವಿದೆ. ದಯಮಾಡಿ ಹೊಸ ಪಿಂಚಣಿ ಯೋಜನೆಯನ್ನು ರದ್ದು ಮಾಡುವುದರ ಬಗ್ಗೆ ಯೋಚನೆಯನ್ನು ಮಾಡಬೇಕು.

ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಪಿಂಚಣಿ ವ್ಯವಸ್ಥೆಯೇ ಇಲ್ಲ. 2006ರ ಮೊದಲು ಪಿಂಚಣಿ ವ್ಯವಸ್ಥೆ ಇತ್ತು. ಸರ್ಕಾರವೇ ಶೇಕಡ 100 ರಷ್ಟು ಸಂಬಳವನ್ನು ಕೊಡುತ್ತದೆ. ನಮ್ಮ ಸರ್ಕಾರಕ್ಕೆ ಹಿಡಿತ ಎಂಬುದು ಇದೆ. ಹಾಗಿರುವಾಗ ಶಿಕ್ಷಣ ಸಂಸ್ಥೆಗಳಲ್ಲಿ ಕೆಲಸವನ್ನು ಮಾಡುವಂತಹ ಶಿಕ್ಷಕರಿಗೆ ವೇತನ ಇಲ್ಲ ಎಂಬ ಅಂಶ ಸರಿಯಲ್ಲ. ಇದರ ಬಗ್ಗೆ ಮತ್ತೆ ಸಮಯಾವಕಾಶ ದೊರೆತಾಗ ವಿವರವಾಗಿ ಮಾತನಾಡುತ್ತೇನೆ.

ಇನ್ನು ಖಾಸಗಿ ಕೃಷಿ ಕಾಲೇಜಿನ ಬಗ್ಗೆ ಹೇಳುತ್ತೇನೆ. ಖಾಸಗಿ ಕೃಷಿ ಕಾಲೇಜುಗಳನ್ನು ಪ್ರಾರಂಭ ಮಾಡುವ ಬಗ್ಗೆ ಒಪ್ಪಿಕೊಳ್ಳುತ್ತೇನೆ. ಖಾಸಗಿ ಕೃಷಿ ಕಾಲೇಜಿಗೆ ಯಾರದೋ ಬಂಡವಾಳ ಇದೆ ಎಂದು ಪ್ರಾರಂಭ ಮಾಡುತ್ತಾರೆ. ಸರ್ಕಾರಿ ಕೃಷಿ ವಿಶ್ವವಿದ್ಯಾಲಯವನ್ನು ಪ್ರಾರಂಭ ಮಾಡಬೇಕಾದರೆ ನೂರಾರು ಎಕರೆಗಳ ಜಾಗ ಇರಬೇಕೆಂದು ಷರತ್ತುಗಳನ್ನು ಹಾಕುತ್ತೇವೆ. ಆದರೆ ಖಾಸಗಿ ವ್ಯಕ್ತಿಯು ಯಾರೋ ಪ್ರಭಾವವನ್ನು ಉಪಯೋಗಿಸಿ ಖಾಸಗಿ ಕೃಷಿ ಕಾಲೇಜನ್ನು ಪ್ರಾರಂಭ ಮಾಡಿದ್ದಾನೆ. ಸರ್ಕಾರಿ ಕಾಲೇಜುಗಳಲ್ಲಿ students admission ಸಂಖ್ಯೆ ಕಡಿಮೆ ಇರುತ್ತದೆ. ನೂರು ವಿದ್ಯಾರ್ಥಿಗಳಿಗಿಂತಲೂ ಜಾಸ್ತಿ admissions ಮಾಡಿಕೊಳ್ಳುವುದಿಲ್ಲ. ಮಾಡಿಕೊಂಡರೂ ಅದಕ್ಕೂ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೂರಾರು ಷರತ್ತುಗಳಿವೆ. ಖಾಸಗಿ ವ್ಯಕ್ತಿ ಕೃಷಿ ಕಾಲೇಜನ್ನು ಪ್ರಾರಂಭ ಮಾಡಿ ಸಾವಿರಾರು ರೂಪಾಯಿಗಳ donation ಅನ್ನು ತೆಗೆದುಕೊಂಡು, ಖುಷಿ ಬಂದ ಹಾಗೆ ಅಂಕಗಳನ್ನು ಕೊಟ್ಟು ತೇರ್ಗಡೆ ಮಾಡಿದ ಪರಿಣಾಮವಾಗಿ ಇವತ್ತಿನ ದಿವಸ ನಮ್ಮ ಸರ್ಕಾರಿ ಕಾಲೇಜಿನ ವಿದ್ಯಾರ್ಥಿಗಳು ಪ್ರಾಮಾಣಿಕವಾಗಿ ಕಲಿತು ತೇರ್ಗಡೆ ಹೊಂದಿದಂತಹ ವಿದ್ಯಾರ್ಥಿಗಳಿಗೆ ಉದ್ಯೋಗ ಸಿಗುತ್ತಿಲ್ಲ. ಇದಕ್ಕೋಸ್ಕರ ಬಹು ದೊಡ್ಡ ಹೋರಾಟ ನಡೆಯುತ್ತಿದೆ. ಇದರ ಬಗ್ಗೆಯೂ ಕೂಡ ಸರ್ಕಾರ ಗಂಭೀರವಾಗಿ ಯೋಚನೆ ಮಾಡಬೇಕು.

**ಸಭಾಪತಿಯವರು**:- ಮಾನ್ಯ ಸದಸ್ಯರೇ, ಮಾನ್ಯ ಸಚಿವರು ಉತ್ತರವನ್ನು ಕೊಡುವಾಗ ಕೊಡಲಿ.

**ಶ್ರೀ ಆಯನೂರು ಮಂಜುನಾಥ್**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಡಲಿ, ಈ ಮೂಲಕ ಜನತೆಗೆ ಒಂದು ಸಂದೇಶ ಹೋಗುತ್ತದೆ.

**ಶ್ರೀ ಎನ್.ಎಚ್. ಶಿವಶಂಕರ ರೆಡ್ಡಿ (ಕೃಷಿ ಸಚಿವರು)**:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಎತ್ತಿರುವಂತಹ ವಿಚಾರವನ್ನು ಈಗಾಗಲೇ ಸರ್ಕಾರ ಬಹಳ ಗಂಭೀರವಾಗಿ ತೆಗೆದುಕೊಂಡಿದೆ. 2012-13 ರಲ್ಲಿ ಆದಂತಹ ಖಾಸಗಿ ವಿಧೇಯಕದಲ್ಲಿ ಖಾಸಗಿ ವಿಶ್ವವಿದ್ಯಾಲಯಗಳಿಗೆ ಅನುಮತಿಯನ್ನು ಕೊಡುವಂತಹ ಸಂದರ್ಭದಲ್ಲಿ agricultural science related course ಗಳನ್ನು ಖಾಸಗಿ ವಿಶ್ವವಿದ್ಯಾಲಯದಲ್ಲಿ ಸೇರಿಸಲಾಗಿದೆ. ಹಾಗಾಗಿ, The Universities of Agricultural Sciences Act ಈ ಕುರಿತು ಇಲ್ಲಿ ಖಾಸಗಿ ವಿಶ್ವವಿದ್ಯಾಲಯಗಳಿಗೆ ಅನುಮತಿಯನ್ನು ಕೊಟ್ಟು ಆ ವಿಧೇಯಕದಲ್ಲಿ ಸೇರಿಸಿದ್ದಾರೆ. ಇದರ ಬಗ್ಗೆ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಸೂಚನೆಯನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ನಾವು ಕೂಡ ತಯಾರಿಯನ್ನು ಮಾಡಿಕೊಂಡಿದ್ದೇವೆ. ಖಾಸಗಿ ವಿಶ್ವವಿದ್ಯಾಲಯದ ವಿಧೇಯಕದಲ್ಲಿ agricultural science related courses ಗಳನ್ನು ತೆಗೆದು amendment ತರುವುದಕ್ಕೆ ಈಗಾಗಲೇ proposal ಮಾಡಲಾಗಿದೆ. ಈ ವಿಧೇಯಕವನ್ನು ಮಂಡಿಸುವುದಕ್ಕೆ ಮಾನ್ಯ ಸದಸ್ಯರೆಲ್ಲರೂ ಸಹಕಾರವನ್ನು ಕೊಡಬೇಕು.

**ಸಭಾಪತಿಯವರು**:- ಮಾನ್ಯ ಸಚಿವರೇ, ಈ ವಿಚಾರವು ಬಹಳ ಗಂಭೀರವಾಗಿರುವುದರಿಂದ, ದಯಮಾಡಿ ಸರ್ಕಾರವು scope ಕೊಡಬಾರದು.

**ಶ್ರೀ ಆಯನೂರು ಮಂಜುನಾಥ್**:- ಮಾನ್ಯ ಸಭಾಪತಿಯವರೇ, ನಾನು ಇನ್ನು ಹೆಚ್ಚು comment ಮಾಡುವುದಕ್ಕೆ ಹೋಗುವುದಿಲ್ಲ. ನಮ್ಮ ರಾಜ್ಯದಲ್ಲಿ ಕಾನೂನು ತೃಪ್ತಿಕರವಾಗಿದೆ ಮತ್ತು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸುವ್ಯವಸ್ಥೆಯನ್ನು ಕಾಪಾಡಿಕೊಂಡಿದೆ ಎಂದು ಈ ಸರ್ಕಾರವು ಒಪ್ಪಿಕೊಳ್ಳುವುದಾದರೆ ಇದಕ್ಕೆ ನಮ್ಮ ತಕರಾರು ಇಲ್ಲ. ಬಹುಶಃ ಇನ್ನೊಂದು angle ನಲ್ಲಿ ಯೋಚನೆ ಮಾಡಿದರೆ ಸರ್ಕಾರವು ಭಯ ಬಿದ್ದಿದೆ ಎಂದು ತಿಳಿಯುತ್ತದೆ. ಏಕೆಂದರೆ ಪೋಲಿಸ್ ಇಲಾಖೆಯು fail ಆಗಿದೆಯೆಂದರೆ ಮೊನ್ನೆಯ ದಿವಸ ಬಿಜಾಪುರದಲ್ಲಿ ಪೋಲಿಸ್‌ನವರು ಸುಫಾರಿಯನ್ನು ತೆಗೆದುಕೊಂಡರಂತೆ, ಇದರ ಬಗ್ಗೆ ಆಪಾದನೆಗಳು ಬಂದಿದ್ದು, ಚರ್ಚೆಗಳು ನಡೆಯುತ್ತಿದೆ. ಇದರ ಬಗ್ಗೆ ನನಗೆ ಸತ್ಯಾಂಶಗಳು ಗೊತ್ತಿಲ್ಲ. ಆ ಜಿಲ್ಲೆಯಲ್ಲಿ ಪೋಲಿಸ್‌ನವರೇ ಸುಫಾರಿ ತೆಗೆದುಕೊಂಡು ಹೊಡೆದಿದ್ದಾರೆ ಎಂದು ಪೋಲಿಸ್‌ನವರ ಮೇಲೆ ಆಪಾದನೆ ಬಂದಿದೆ. ಇದರ ಬಗ್ಗೆ ನಮ್ಮ ಸರ್ಕಾರಕ್ಕೆ ಏನಾದರೂ ಭಯವಿದೆಯೇ, ಆ ಭಯದ ಕಾರಣಕ್ಕೆ ಒಂದು ನಾಗರೀಕ ರಾಜ್ಯದೊಳಗೆ, ಸರ್ಕಾರದೊಳಗೆ ಪೋಲಿಸ್ ಅಧಿಕಾರಿಗಳು ಈ ರೀತಿ ಹದ್ದು ಮೀರಿ ನಡೆದುಕೊಳ್ಳುತ್ತಾರೆ ಎಂದಾದರೆ ಆಗಲೇ ಪ್ರಸ್ತಾಪ ಮಾಡಿದ ಹಾಗೆ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರವಾಗುತ್ತದೆ. ಮಕ್ಕಳ ಮೇಲೆ ಅತ್ಯಾಚಾರವಾಗುತ್ತದೆ ಎನ್ನುವುದನ್ನು ಯಾವ ಮನಸ್ಸಿನಿಂದ ಸರ್ಕಾರವು ಸುವ್ಯವಸ್ಥಿತವಾಗಿದೆ ಎಂದು ಹೇಳುತ್ತೀರಿ. ಪೋಲಿಸ್ ಅಧಿಕಾರಿಗಳ ಮನೆಯವರಿಗೆ chain snatching ಆಗುತ್ತದೆ. ಯಾರದೋ ಮಕ್ಕಳ kidnap ಆಗುತ್ತದೆ. ಇದನ್ನು ಸರ್ಕಾರವು ಒಪ್ಪಿಕೊಳ್ಳುವುದಾದರೆ ಮತ್ತು ಸನ್ಮಾನ್ಯ ಮುಖ್ಯಮಂತ್ರಿಯವರಿಗೆ ತೃಪ್ತಿ ತರುವುದಾದರೆ ಹಾಗೆಯೇ ಒಪ್ಪಿಕೊಳ್ಳಲಿ ಮತ್ತು ಹೀಗೆಯೇ ರಾಜ್ಯವನ್ನು ನಡೆಸಲಿ. ಅದರ ಬದಲಾಗಿ ಒಳ್ಳೆಯ ಮುಖ್ಯಮಂತ್ರಿಯಾಗುವ ದೃಷ್ಟಿಯಿಂದ ಯೋಚನೆ ಮಾಡಲಿ. ಅಧಿಕಾರಿಗಳನ್ನು ನಿಯಂತ್ರಣದಲ್ಲಿಡಿ ಎಂಬ ಒತ್ತಾಯವನ್ನು ಮಾಡುತ್ತೇನೆ.

ಕೊನೆಯದಾಗಿ, ಹಣಕಾಸಿನ ಸ್ಥಿತಿ ಬಗ್ಗೆ. ಇನ್ನು ಬಹಳ ಮಾತನಾಡಬೇಕಾಗಿತ್ತು. ಆದರೆ ಮುಂದಿನ ದಿನಗಳಲ್ಲಿ ಮಾತನಾಡಲು ಅವಕಾಶವನ್ನು ಕೊಡಿ. ಮುಂದಿನ ಬಾರಿ ನನ್ನ ಮೇಲೆ ಕನಿಕರವನ್ನು ತೋರಿಸಬೇಕು. ಆಯವ್ಯಯದ ಬಗ್ಗೆ ಮಾತನಾಡಬೇಕಾದರೆ ನನಗೆ ಅವಕಾಶವನ್ನು ಕೊಡಬೇಕೆಂದು, ಈಗಲೇ ಒಂದು advance application ಹಾಕಿಕೊಂಡಿರುತ್ತೇನೆ. ಹಣಕಾಸಿನ ಸ್ಥಿತಿ ಚೆನ್ನಾಗಿದೆ ಎಂದು ಹೇಳಿದ್ದಾರೆ. 6 ತಿಂಗಳಿಂದ ವೃದ್ಧಾಪ್ಯ ವೇತನ ಕೊಟ್ಟಿಲ್ಲವೆಂಬ ಅಂಶ ಬಹಳ ಚೆನ್ನಾಗಿದೆ. ಇದು ಚೆನ್ನಾಗಿದೆ ಎಂದು ಹೇಳಿದರೆ ಅದರ ಬಗ್ಗೆ ನನ್ನ ತಕರಾರು ಇಲ್ಲ. ಅಂಗವಿಕರ ವೇತನವನ್ನು ಕೊಟ್ಟಿಲ್ಲ. ಈ ರೀತಿಯ ಸಾಮಾಜಿಕ ಭದ್ರತೆಯನ್ನು ಕೊಟ್ಟಿರುವಂತಹ ಯೋಜನೆಯ ಹಣ ಹಿಡಿದಿಟ್ಟುಕೊಂಡರೂ ಕೂಡ ರಾಜ್ಯಪಾಲರ ಬಾಯಿಯೊಳಗೆ ಎಲ್ಲವೂ ಚೆನ್ನಾಗಿದೆ ಎಂದು ಹೇಳಿದರೆ, ಮಾನ್ಯ ಕುಮಾರಸ್ವಾಮಿಯವರೇ ನಿಮ್ಮ ಸರ್ಕಾರವು ಬಹಳ ಧನ್ಯವಾಗಿದೆ. ಯಾರು ಸುಳ್ಳು ಹೇಳುತ್ತಾರೆಂದು ಜನರು ತೀರ್ಮಾನ ಮಾಡಬೇಕಾಗುತ್ತದೆ. ಇದು ತಪ್ಪೋ, ಸರಿಯೋ ಗೊತ್ತಿಲ್ಲ. ನಾಳೆಯ ದಿವಸ ಮಾನ್ಯ ಸಚಿವರು ಆಯವ್ಯಯ ಭಾಷಣದಲ್ಲಿ ಉತ್ತರವನ್ನು ಕೊಡುತ್ತಾರೆ. ಇನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಲೋಕೋಪಯೋಗಿ, ನೀರಾವರಿ ಇಲಾಖೆಗಳಲ್ಲಿ ಇನ್ನು ಸುಮಾರು 8 ಸಾವಿರದಿಂದ 9ಸಾವಿರ ಕೋಟಿ ರೂಪಾಯಿಗಳ ಬಿಲ್ಲು ಬಾಕಿ ಇದೆ. ಈ ವಿಷಯವನ್ನು ಯಾರೋ ಗುತ್ತಿಗೆದಾರರು ಹೇಳಿದ್ದಾರೆ. ಯಾರು ಎಂಬುದು ನನಗೆ ಗೊತ್ತಿಲ್ಲ. ಆ ಗುತ್ತಿಗೆದಾರರು ಯಾರು ಎಂಬುದು ಮಾನ್ಯ ಸಚಿವರಿಗೆಲ್ಲಾ ಗೊತ್ತಿರುತ್ತದೆ. ಇದರ ಬಗ್ಗೆ inspection ಮಾಡಿ, ಇದರಲ್ಲಿ ಅರ್ಧಂಬರ್ಧ ಕೆಲಸಗಳಾಗಿವೆ ಎಂದು ತಿಳಿಯುತ್ತದೆ. ಇದಕ್ಕೆಲ್ಲಾ 9 ಸಾವಿರ ಕೋಟಿ ರೂಪಾಯಿಗಳ ಮೊತ್ತವನ್ನು ಎಲ್ಲಿಂದ ತರುತ್ತೀರಿ. ಕಾಮಗಾರಿಗಳ ಕೆಲಸಗಳು ಏನಾಗಿದೆ, ಎಷ್ಟಾಗಿದೆ, ಬಿಲ್ಲಿನ ಮೊತ್ತ ಏಕೆ ನಿಂತು ಹೋಗಿದೆ? ಇಂತಹ ಎಲ್ಲಾ ಸಂಗತಿಗಳ ಬಗ್ಗೆ ಮುಂದಿನ ದಿನಗಳಲ್ಲಿ ಸಂಬಂಧಪಟ್ಟ ಇಲಾಖೆಯ ಮಾನ್ಯ ಸಚಿವರನ್ನು ಕೇಳುತ್ತೇನೆ. ಮಾನ್ಯ ಸಚಿವರು ತೃಪ್ತಿಕರವಾದ ಉತ್ತರವನ್ನು ಕೊಟ್ಟರೆ ಸಾಕು. ನಾವು ಬೇರೆ ವಿಷಯವನ್ನು ಮಾತನಾಡಬೇಕಾದರೆ ಆಯಾಯ ಇಲಾಖೆಯನ್ನು ಬಿಟ್ಟು, ಮಾನ್ಯ ಸಚಿವರು ಮಧ್ಯಪ್ರವೇಶ ಮಾಡುವ ಬದಲು ಕೈಮುಗಿದು ಪ್ರಾರ್ಥನೆ ಮಾಡುತ್ತೇನೆ. ಅವರ ಇಲಾಖೆಗೂ ಪ್ರವೇಶ ಮಾಡುತ್ತೇವೆ. ಆಗ ಮಾನ್ಯ ಸಚಿವರು ಉತ್ತರವನ್ನು ಕೊಡಲಿ ಎಂದು ಪ್ರಾರ್ಥನೆ ಮಾಡಿಕೊಂಡು ಮಾತನಾಡುವುದಕ್ಕೆ ಅವಕಾಶ ಕೊಟ್ಟಿತ್ತೀರಿ. ಮುಂದಿನ ಬಾರಿ ಕನಿಕರವನ್ನು ತೋರಿಸಿ ಎಂದು ಹೇಳಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

(ಮುಂದು)

**(36)03/07/2018/ಎಸ್‌ಪಿಆರ್/ಕೆ.ಎಸ್./6:00**

**(ಸಭಾಪತಿಯವರ ಉಪಸ್ಥಿತಿ)**

**ಡಾ॥ ತೇಜಸ್ವಿನಿ ಗೌಡ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಆಡಳಿತ ಪಕ್ಷದ ಕಡೆಯೂ ಸಹ ಹೆಣ್ಣುಮಕ್ಕಳ ಬಗ್ಗೆ ಒಂದಿಷ್ಟು ಅನುಕಂಪ ಬೇಡ, ಅಭಿಮಾನವನ್ನು ತೋರಿಸಿ. ನಾವು endangered species…

**ಸಭಾಪತಿಯವರು :-** ನಾವು ಶ್ರೀಮತಿ ವೀಣಾ ಅಚ್ಚಯ್ಯರವರನ್ನು ಕೇಳಿದ್ದೇನೆ, ಅವರು ನಾಳೆ ಮಾತನಾಡುವುದಾಗಿ ತಿಳಿಸಿದ್ದಾರೆ. ಅದಕ್ಕಾಗಿ ನಾನು ಹೇಳಿದ್ದೇನೆ. ನಾನಾಗಿಯೇ ಅವರು ಮಾತನಾಡಲಿ ಎಂದು ಹೇಳಿ ಕಳುಹಿಸಿದ್ದೇನೆ.

**ಡಾ॥ ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ನಾನು ಹೇಳುವುದೇನೆಂದರೆ, ಹೆಣ್ಣುಮಕ್ಕಳಿಗೆ ಅವಕಾಶ ದೊರೆತಾಗಲೂ ಸಹ ಗೆಲ್ಲುವಂತಹ ಸಂದರ್ಭ ಕಡಿಮೆ ಇದೆ. ಇಲ್ಲಿರುವಂತಹ ಪುರುಷರನ್ನಾಗಲೀ ಅಥವಾ ಪಕ್ಷಗಳನ್ನಾಗಲೀ ನಾನು ಟೀಕೆ ಮಾಡುವುದಿಲ್ಲ. ರಾಜಕೀಯ ಪದ್ಧತಿ,

ಚುನಾವಣಾ ಪದ್ಧತಿ, ಚುನಾವಣಾ ಸುಧಾರಣಾ ಪದ್ಧತಿಗಳು ಬಂದ ಕಾಲಕ್ಕೆ ಶೇಕಡಾ 50 ರಷ್ಟು ಇರುವಂತಹ ಮಹಿಳೆಯರು ತಮಗೆ ಯಾರು ಬೇಕು ಎನ್ನುವಂತಹ ಆಯ್ಕೆಯನ್ನು ಮಾಡುವಂತಹ ಜಾಗೃತಿಯನ್ನು ಮೂಡಿಸಿದ ದಿನ ಬಹುಶಃ ಈ ಮೀಸಲಾತಿ ಬಗ್ಗೆ ನಾವು ಗೋಳಾಡುವಂತಹ ಕಾಲ ಕೊನೆಯಾಗಬಹುದು. ಆ ದಿನ ಬರಬೇಕು ಎಂಬುದಾಗಿ ನಾನು ಸಂಸತ್ತಿನಲ್ಲಿ ಮಾತನಾಡಿದ್ದೇನೆ. ಶೇಕಡಾ 33, 35 ಹಾಗೂ 50 ರಷ್ಟು ಮೀಸಲಾತಿಯನ್ನು ಹೆಣ್ಣುಮಕ್ಕಳಿಗೆ ನೀಡಿ ಎಂಬುದಾಗಿ ಕೇಳಿದ್ದೇನೆ. ಶೇಕಡಾ 50 ರಷ್ಟು ಮೀಸಲಾತಿಯನ್ನು ಪಡೆದುಕೊಳ್ಳುವಂತಹ ಶಕ್ತಿ ನಮಗೆ ಇದೆ. ಆದರೆ ಅದನ್ನು ಪಡೆದುಕೊಳ್ಳಬೇಕಾದವರಿಗೆ ಅದರ ಅರಿವು ಸ್ವಲ್ಪ ಇಲ್ಲ. ಹೀಗಾಗಿ ಅಂತಹ ಅರಿವನ್ನು ಮೂಡಿಸುವತಂಹ ಕೆಲಸವನ್ನು ನಾವು ಮಾಡಬೇಕಾಗುತ್ತದೆ. ಬೇರೆ ಬೇರೆ ಕಾರಣಗಳಿಗಾಗಿ ಕೆಳಹಂತಗಳಲ್ಲಿ ಅವಕಾಶ ಸಿಕ್ಕಿದೆ. ಯಾವುದೋ ಗಂಡನಿಗೆ ಮೀಸಲಾತಿ ದೊರೆಯದಿದ್ದರೆ, ಆತನ ಸ್ಥಾನದಲ್ಲಿ ಹೆಣ್ಣು ಮಗಳನ್ನು ತಂದು ಕೂಡಿಸಿದ್ದೇವೆ. ಆದರೆ, ವಿಧಾನಸಭೆಗೆ ಮತ್ತು ವಿಧಾನ ಪರಿಷತ್ತಿಗೆ ಬರಬೇಕಾದರೆ ಬಹಳ ಕಷ್ಟವಿದೆ. ಆದರೂ ಅವುಗಳ ನಡುವೆಯೂ ಸಹ ಪಕ್ಷಗಳು ಅನೇಕ ಸಂದರ್ಭಗಳಲ್ಲಿ ಅವಕಾಶವನ್ನು ಮಾಡಿ ಕೊಟ್ಟಿದೆ. ಆ ಕಾರಣಕ್ಕಾಗಿ ಯಾವುದೇ ಪಕ್ಷಗಳಿರಲಿ, ಅಂತಹವರನ್ನು ನಾನು ಗೌರವದಿಂದ ಸ್ಮರಿಸುತ್ತೇನೆ. ಟೀಕೆ ಅಲ್ಲ; ಸಭಾನಾಯಕಿಯಾಗಿ ಆಯ್ಕೆಯಾಗುವುದು ಒಂದು ರೀತಿಯ ಅದೃಷ್ಟ. ಸಚಿವೆಯಾಗಿ ಆಯ್ಕೆಯಾಗುವುದೂ ಸಹ ಒಂದು ವಿಶೇಷವಾಗಿ ಅವಕಾಶ. ಇವತ್ತಿನ ದಿವಸ ವಿಭಿನ್ನ ಸಂದರ್ಭದಲ್ಲಿ ಸಮ್ಮಿಶ್ರ ಸರ್ಕಾರದಲ್ಲಿ ಒಬ್ಬ ಹೆಣ್ಣು ಮಗಳು ಸಭಾನಾಯಕಿಯಾಗಿಯೂ ಹಾಗೂ ಮಂತ್ರಿಯಾಗಿಯೂ ಸಹ ಆಯ್ಕೆಯಾಗಿದ್ದಾರೆ. ಇದಕ್ಕೆ ಸಹಕಾರವನ್ನು ನೀಡಿದ ಎಲ್ಲರನ್ನೂ ನಾನು ಅಭಿನಂದಿಸುತ್ತೇನೆ. ಏಕೆಂದರೆ ಹುಟ್ಟಿದ ತಕ್ಷಣ ಯಾವ ಮಗುವೂ ಸಹ ಓಡುವುದಿಲ್ಲ. ಅಥವಾ ಎಲ್ಲರೂ ಕೂಡ ರಾಜಕಾರಣಿಗಳ ಮನೆಯಲ್ಲಿಯೇ ಹುಟ್ಟುವುದಕ್ಕಾಗುವುದಿಲ್ಲ. ಬೇರೆ ಬೇರೆ ಕ್ಷೇತ್ರಗಳಲ್ಲಿ ಸಾಧನೆಯನ್ನು ಮಾಡಿ ಒಂದು ಹಂತದಲ್ಲಿ ಇಂತಹ ಅವಕಾಶ ದೊರೆತಾದ, ಆರಂಭದಲ್ಲಿ ಸ್ವಲ್ಪ ತೊಡಕು ಆಗಬಹುದು. ಅವಕಾಶ ಸಿಕ್ಕಿದರೆ ಖಂಡಿತವಾಗಿಯೂ ಪ್ರತಿಯೊಬ್ಬರೂ ಸಹ ಒಳ್ಳೆಯ ಜನಪ್ರತಿನಿಧಿ ಆಗುವುದಕ್ಕೆ ಸಾಧ್ಯವಾಗುತ್ತದೆ. ಅದಕ್ಕೆ ಸಹಕಾರ ಬೇಕಾಗುತ್ತದೆ. ಮಹಿಳಾ ಮತ್ತು ಮಕ್ಕಳ ಇಲಾಖೆಯ ಅಂಶಗಳು ರಾಜ್ಯಪಾಲರ ಭಾಷಣದಲ್ಲಿ ಬರುವುದರಿಂದಾಗಿ ನಾನು ಈ ಅಂಶಗಳ ಮಧ್ಯೆ ನಾನು ಮಾತನಾಡುತ್ತೇನೆ. ಏಕೆಂದರೆ, ನನ್ನ ಅನೇಕ ವೃತ್ತಿ ಬಾಂಧವರು ಅಲ್ಲಿ ಕುಳಿತುಕೊಂಡಿದ್ದಾರೆ. ಆ ಸ್ಥಾನದಲ್ಲಿ ಕುಳಿತಾಗಿಯೂ ಸಹ ನಾನು ಈ ಕಲಾಪಗಳನ್ನು ನೋಡಿದ್ದೇನೆ. ಸದನದಲ್ಲಿಯೂ ಕೂಡ ಹೆಣ್ಣುಮಕ್ಕಳ ವಿಚಾರ ಹಾಸ್ಯದ ವಿಚಾರವಾಗಿರುವಂತಹದ್ದು, ಮಹಿಳಾ ರಾಜಕಾರಣಿಗಳನ್ನು ಹಾಸ್ಯದ ವಸ್ತುವಾಗಿ ಚರ್ಚೆ ಮಾಡುವುದನ್ನು ನೋಡಿದಾಗಲೆಲ್ಲಾ ಅಸಹಾಯಕಳಾಗಿ ಆ ಸ್ಥಾನದಿಂದಲೂ ಕೂಡ ನೊಂದುಕೊಳ್ಳುತ್ತಿದ್ದೇನು. ಏಕೆಂದರೆ ನಮಗೆ ಹೇಳುವುದಕ್ಕೆ ಧ್ವನಿ ಇಲ್ಲ. ಇಂತಹ ಪ್ರಸಂಗಗಳಾಗಬಾರದು. ಮಹಿಳೆಯರು ಹಾಸ್ಯದ ವಸ್ತುವೂ

ಅಲ್ಲ, ಅವರಿಗೆ ಅವಕಾಶ ಸಿಕ್ಕಿದಾಗ ಸಹಕಾರವನ್ನು ಕೊಡಲೇಬೇಕು ಏಕೆಂದರೆ, ಸಂವಿಧಾನದಲ್ಲಿ ನಮಗೂ ಸಹ ಅಧಿಕಾರವಿದೆ. ಆದ್ದರಿಂದ ಅಂತಹ ಸನ್ನಿವೇಶದಲ್ಲಿ ಇವತ್ತಿನ ದಿವಸ ಮಾನ್ಯ ಸಭಾನಾಯಕಿಯರು ಇದ್ದಾರೆ. ಅವರು ಇದನ್ನು challenge ಅಗಿ ಸ್ವೀಕಾರ ಮಾಡಬೇಕೆಂದು ನಾನು ಹೇಳುತ್ತೇನೆ. ಅಧ್ಯಯನ ಮತ್ತು ಜ್ಞಾನ ಯಾರ ಸ್ವತ್ತೂ ಅಲ್ಲ. ಈ ಸದನದಲ್ಲಿ ಅನೇಕ ಹಿರಿಯ ಸದಸ್ಯರು ಕುಳಿತು ಕೊಂಡಿದ್ದಾರೆ, ಅವರಿಗೆ ಅವರೆಲ್ಲರ ಸಹಕಾರ ಸಿಗುತ್ತದೆ. ಇವತ್ತಿನ ದಿವಸ ಮಾನ್ಯ ಸಭಾನಾಯಕಿಯು ಆತ್ಮವಿಶ್ವಾಸದಿಂದ ನಮ್ಮ ವಿರೋಧ ಪಕ್ಷವನ್ನು ಎದುರಿಸಬೇಕು ಎಂದು ಮಾನ್ಯ ಸಭಾನಾಯಕಿಯಾದ ಡಾ॥ ಜಯಮಾಲ ರಾಮಚಂದ್ರ ರವರಿಗೆ ನಾನು ಒಂದು ಕಿವಿ ಮಾತನ್ನು ಹೇಳುತ್ತೇನೆ. ಇಲ್ಲಿ ನಮ್ಮನ್ನೂ ಸೇರಿಸಿಕೊಂಡು ಯಾರೂ ಹೆದರಿಕೊಳ್ಳುವ ಅವಶ್ಯಕತೆ ಇಲ್ಲ. ಇದು ನನಗೂ ಸಹ ಮೊದಲ ಅವಕಾಶವಾಗಿದೆ. ಇವತ್ತಿನ ದಿವಸ ಇಲ್ಲಿ ಇರುವಂತಹ ಅನೇಕರು ನಮಗೆ ವಿಶ್ವಾಸವನ್ನು ತುಂಬಿದ್ದರಿಂದಾಗಿ, ನಾವು ಅಧ್ಯಯನವನ್ನು ಮಾಡಬೇಕು. ಎಲ್ಲರಿಗೆ ಎಲ್ಲಾ ವಿಷಯದಲ್ಲಿ ಪಾಂಡಿತ್ಯವನ್ನು ಹೊಂದಿರುವುದಿಲ್ಲ. ಪ್ರತಿಪಕ್ಷದ ಕೆಲಸವನ್ನು ನಿಭಾಯಿಸುವುದು ಕಷ್ಟವೇ ಆಗಿದೆ. ಹಾಗೇಯೇ ಆಡಳಿತ ಪಕ್ಷದ ಕೆಲಸವನ್ನು ನಿರ್ವಹಿಸುವುದು ಕಷ್ಟವೇ ಆಗಿದೆ. ಆದರೆ ಪ್ರಯತ್ನವನ್ನು ಪಟ್ಟರೆ ಯಾವುದೂ ಅಸಾಧ್ಯವಲ್ಲ ಎನ್ನುವ ಕಾರಣಕ್ಕಾಗಿ, ಮಹಿಳೆಯರ ವಿಚಾರ ಬಂದಾಗ ನಾವು ಅಳಿವಿನ ಅಂಚಿನಲ್ಲಿರುವ ಪಳಯುವಳಿಕೆಗಳ ಹಾಗೆ ಆಗಿದ್ದೇವೆ. ಇವತ್ತಿನ ದಿವಸ ಮಹಿಳೆಯರು ರಾಜಕಾರಣದಲ್ಲಿ endangered species ಆಗಿದ್ದೇವೆ. ಹಾಗಾಗಿ ಬೇರೆ ವಿಷಯಗಳಡಿ ಹುಲಿಗಳ, ಆನೆಗಳ ಸಂರಕ್ಷಣೆಯ ಬಗೆಗಿನ ಯೋಜನೆಗಳ ಕುರಿತಾಗಿ ಹೇಳಲಾಗಿದೆ. ಹೆಣ್ಣುಮಕ್ಕಳ ಬಗ್ಗೆ ಹೆಣ್ಣುಮಕ್ಕಳೇ ಟೀಕೆ ಮಾಡುವಂತದ್ದು, ಬೇರೆಯವರು ಮಾತನಾಡಿದ್ದರೆ ಅದು ಪತ್ರಿಕೆಗಳಲ್ಲಿ ಬಿತ್ತರಗೊಂಡ ಸುದ್ದಿ ಎಂಬುದಾಗಿ ನೀವುಗಳು ಅಲ್ಲಗೆಳೆಯಬಹುದು. ಇವತ್ತಿನ ದಿವಸ ನಮ್ಮ ಸಹೋದರರೊಬ್ಬರು ವಿಷಯವನ್ನು ಪ್ರಸ್ತಾಪಿಸಿದಾಗ, ಕಿರುಚಾಡಿದಿರಿ. ಈ ಸಂಗತಿಯಿಂದ ನನಗೆ ಸ್ವಲ್ಪ ನೋವಾಯಿತು. ಏಕೆಂದರೆ, ಯಾರೋ ಮಾತನಾಡಿದ್ದನ್ನು ಅವರು ಉಲ್ಲೇಖಿಸಲಿಲ್ಲ, ಆಡಳಿತ ಪಕ್ಷದ ಘನತೆವೆತ್ತ ಶಾಸಕರೊಬ್ಬರು ನಿಮ್ಮ ಪಕ್ಷದ ಸಚಿವರ ಬಗ್ಗೆ ಮಾತನಾಡಿದಾಗ, ಅದನ್ನು ನೀವು ಟೀಕೆ ಮಾಡದೇ, ಇವತ್ತಿನ ದಿವಸ ಪ್ರತಿಪಕ್ಷಗಳು ಟೀಕೆ ಮಾಡುತ್ತೇವೆ. ಸಭಾನಾಯಕಿಯಾದ ಡಾ॥ ಜಯಮಾಲಾ ರಾಮಚಂದ್ರರವರ ಅನೇಕ ವಿಚಾರ ಧಾರೆಗಳನ್ನು ನಾನು ಒಪ್ಪುವುದಿಲ್ಲ. ಅವರು ಸಚಿವರಾಗಿದ್ದಾರೆ. ಆದರೆ ಅವರನ್ನು ಒಂದು ರಾಷ್ಟ್ರೀಯ ಪಕ್ಷವು ಸಭಾನಾಯಕಿಯಾಗಿ ಎಂದು ನೇಮಕ ಮಾಡಿದಾಗ, ಆ ವಿಚಾರವನ್ನು ನಿಮ್ಮ ನಾಲ್ಕು ಗೋಡೆಗಳ ಮಧ್ಯದಲ್ಲಿ ಮುಚ್ಚುಮರೆಯಲ್ಲಿ ನಿಭಾಯಿಸಿಕೊಳ್ಳಿ. ನಮಗೆ ಟೀಕೆ ಮಾಡಲು ಆಹಾರವಾಗಿ ಕೊಡಬೇಡಿ ಎಂಬ ಮಾತನ್ನು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಅಂಕಿ ಸಂಖ್ಯೆಗಳ ಬಗ್ಗೆ ನನ್ನ ಸಹೋದರರಾದ ಮಾನ್ಯ ಆಯನೂರು

ಮಂಜುನಾಥ್ ರವರು ಮಾತನಾಡುವಾಗ ಒಂದಿಷ್ಟು ಗದ್ದಲದ ವಾತಾವರಣ ಸೃಷ್ಠಿಯಾಯಿತು. ಹೌದು Politics is a game of numbers! 104 ಕ್ಷೇತ್ರಗಳಲ್ಲಿ ನಾವು ಗೆಲವನ್ನು ಸಾಧಿಸಿದ್ದೇವೆ, ಅಷ್ಟು ಕ್ಷೇತ್ರಗಳಲ್ಲಿ ಮತದಾರರು ನಮಗೆ ಗೆಲುವನ್ನು ನೀಡಿದ್ದಾರೆ. 224 ಸಂಖ್ಯೆಗಳ ಪೈಕಿ 104 ಅತೀ ದೊಡ್ಡ ಸಂಖ್ಯೆಯಾಗಿದೆ. ಸರ್ಕಾರವನ್ನು ರಚನೆ ಮಾಡುವುದಕ್ಕೆ 9 ಅಂಕಿಗಳ ಸಂಖ್ಯೆಯು ಕಡಿಮೆಯಾಯಿತು. ಜನರು ನಮಗೆ ಹೆಚ್ಚಿನ ಸಂಖ್ಯೆಯಲ್ಲಿಯೇ ಗೆಲುವನ್ನು ನೀಡಿದ್ದಾರೆ ಹಾಗೂ ಒಳ್ಳೆಯದನ್ನೇ ಮಾಡಿದ್ದಾರೆ. ಜನರು ನಮಗೆ first rank ಅನ್ನೇ ನೀಡಿದ್ದಾರೆ. ಎರಡನೇ ರಾಷ್ಟ್ರೀಯ ಪಕ್ಷದವರಿಗೆ ಸರ್ಕಾರವನ್ನು ರಚನೆ ಮಾಡಲು 36 ಅಂಕಿಗಳಷ್ಟು ಕಡಿಮೆ ಗೆಲುವನ್ನು ಜನರು ಕೊಟ್ಟರು. ನಮಗೆ 9 ಅಂಕಿಗಳು ಕಡಿಮೆ ಕೊಟ್ಟಿದ್ದಾರೆ ಹಾಗೆಯೇ ಅವರಿಗೆ 36 ಅಂಕಿಗಳ ಕಡಿಮೆ ಕೊಟ್ಟಿದ್ದಾರೆ. ಮತ್ತೊಂದು ಪಕ್ಷಕ್ಕೆ ಸರ್ಕಾರವನ್ನು ರಚನೆ ಮಾಡಲು 76 ಅಂಕಿಗಳನ್ನು ಕಡಿಮೆಯಾಗಿ ಜನರು ನೀಡಿದ್ದಾರೆ. ಇದರಿಂದಾಗಿ ನಮಗೆ ಯಾವುದೇ ರೀತಿಯಾದ ಅಭ್ಯಂತರವಿಲ್ಲ. ಸರ್ಕಾರ ರಚನೆ ಮಾಡಲು 76 ಅಂಕಿಗಳನ್ನು ಕಡಿಮೆ ತೆಗೆದುಕೊಂಡಿರುವವರು ಇವತ್ತಿನ ದಿವಸ ಲಾಂಚಿಂಗ್ ಪ್ಯಾಡ್ ಮುಖೇನ ಈಜುಕೊಳದಲ್ಲಿ ಬಿದ್ದಿದ್ದಾರೆ. ಕಾಂಗ್ರೆಸ್ ಪಕ್ಷವು ಇವತ್ತಿನ ದಿವಸ ಲಾಂಚಿಂಗ್ ಪ್ಯಾಡ್ ಆಗಿದೆ. ನೀವು ಹೇಳಿದ್ದೇನು? ನಮ್ಮ ಹಿರಿಯ ಮಾನ್ಯ ಸದಸ್ಯರಾದ ಶ್ರೀ ಸಿ.ಎಂ.ಇಬ್ರಾಹಿಂ ರವರು ನಮ್ಮನ್ನು ಅಧಿಕಾರದಿಂದ ಹಾಗೂ ಸರ್ಕಾರ ರಚನೆ ಮಾಡುವುದಕ್ಕೆ ತಡೆಯುವುದಕ್ಕಾಗಿಯೇ ನಾವು ಜೆ.ಡಿ.ಎಸ್. ಪಕ್ಷಕ್ಕೆ ಬೆಂಬಲವನ್ನು ನೀಡಿದ್ದೇವೆ ಎಂಬುದಾಗಿ ಹೇಳಿದ್ದಾರೆ. ಜೆ.ಡಿ.ಎಸ್. ಪಕ್ಷದ ಮೇಲೆ ವಿಶ್ವಾಸವಿದ್ದು ಅಥವಾ ನಮ್ಮ ಎರಡು ಪಕ್ಷಗಳು ನಡುವೆ ಸಹಕಾರವಿದ್ದು ಅಥವಾ ರಾಜ್ಯದ ಅಭಿವೃದ್ಧಿಗೋಸ್ಕರ ಒಂದು ರೀತಿಯಾದ ನಂಬಿಕೆ, ಭರವಸೆ ಇರುವ ಕಾರಣಕ್ಕಾಗಿಯೇ ಬೆಂಬಲವನ್ನು ನೀಡಿದ್ದೇವೆ ಎಂಬುದಾಗಿ ಹೇಳಲಿಲ್ಲ. ವಿರೋಧ ಪಕ್ಷ, ಕೋಮುವಾದಿ ಪಕ್ಷವಾದ್ದರಿಂದ ಅದು ಸರ್ಕಾರ ರಚನೆ ಮಾಡುವುದನ್ನು ತಡೆಯುವುದಕ್ಕಾಗಿಯೇ ನಾವು ಜೆ.ಡಿ.ಎಸ್. ಪಕ್ಷಕ್ಕೆ ಬೆಂಬಲವನ್ನು ನೀಡಿ ಸರ್ಕಾರವನ್ನು ರಚನೆ ಮಾಡುತ್ತಿದ್ದೇವೆ ಎಂಬುದಾಗಿ ಹೇಳಿದರು. ಹೌದು ಇಂತಹದುಕ್ಕೆ ಪ್ರಜಾಪ್ರಭುತ್ವದಲ್ಲಿ ಹಾಗೂ ಸಂವಿಧಾನದಲ್ಲಿ ಅವಕಾಶವಿದೆ. ನಾವು ಇದನ್ನು ಸ್ವೀಕಾರ ಮಾಡಿರುವುದರಿಂದಲೇ ನಮ್ಮ ಪ್ರತಿಪಕ್ಷದ ನಾಯಕರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿರವರಾದಿಯಾಗಿ ಹಾಗೂ ಕೆಳಮನೆಯಲ್ಲಿ ನಮ್ಮ ನಾಯಕರು ಆದ ಶ್ರೀ ಬಿ.ಎಸ್.ಯಡಿಯೂರಪ್ಪನವರೂ ಸಹ ಇವತ್ತಿನ ದಿವಸ ನಾವು ಪ್ರತಿಪಕ್ಷದ ಭಾಗದಲ್ಲಿ ಕುಳಿತುಕೊಂಡಿದ್ದೇವೆ. ಆದರೆ, ನಾವು ಪ್ರತಿಜ್ಞಾ ವಿಧಿಯನ್ನು ಸ್ವೀಕಾರ ಮಾಡಬೇಕಾದರೆ ನಮ್ಮೆಲ್ಲರೂ ಬಾಯಲ್ಲಿ "ನನ್ನ ಆತ್ಮ ಸಾಕ್ಷಿಗೆ ಸಂಬಂಧಪಟ್ಟಂತೆ, ನಾನು ನನ್ನ ಅರಿವಿಗೆ ಬಂದಂತೆ" ಎಂಬಂತಹ ಶಬ್ದಗಳನ್ನು ನಮ್ಮ ಸಂವಿಧಾನವು ಹೇಳಿಸುತ್ತದೆ. ನನಗೆ ಮತವನ್ನು ನೀಡಿದ್ದಾರೆ. ನಾನು ಈ ರಾಜ್ಯಕ್ಕಾಗಿಯೇ ಇರಲಿ ಅಥವಾ ದೇಶಕ್ಕಾಗಿಯೇ ಇರಲಿ, ಅಂಖಂಡತೆಗಾಗಿಯೇ ಇರಲಿ,

ಪ್ರಜಾಪ್ರಭುತ್ವಕ್ಕೆ ದ್ರೋಹವನ್ನು ಬಗೆಯುವುದಿಲ್ಲ, ಅನ್ಯಾಯವನ್ನು ಮಾಡುವುದಿಲ್ಲ ಆ ಆತ್ಮಸಾಕ್ಷಿ ಎನ್ನುವ ಅಂಶದ ಮೇಲೆ ನಾವು ಚರ್ಚೆಯನ್ನು ಪ್ರಾರಂಭಿಸಿದರೆ, ಅದನ್ನು ಆತ್ಮ ಸಾಕ್ಷಿಯಿಂದ ಮಾಡಿದರೆ, ಇವತ್ತಿನ ದಿವಸ ಆತ್ಮ ಸಾಕ್ಷಿಯ ಮತಗಳನ್ನು ನೀವು ಪರಿಗಣಿಸಿದಿದ್ದರೆ ಅಥವಾ ಸಮ್ಮಿಶ್ರ ಸರ್ಕಾರವನ್ನು ರಚನೆ ಮಾಡುತ್ತೇವೆ, ಇದಕ್ಕೆ ನಿಮ್ಮ ಬೆಂಬಲವಿದೆಯೇ ಎಂಬುದಾಗಿ ನೀವು ಕೇಳಿದ್ದರೆ, ಇದಕ್ಕೆ ಪೂರಕವಾಗಿ ಕಾಂಗ್ರೆಸ್ ಪಕ್ಷದಲ್ಲಿ ಎಷ್ಟು ಜನ ಶಾಸಕರು ಇದಕ್ಕೆ ತಮ್ಮ ಸಮ್ಮತಿಯನ್ನು ಸೂಚಿಸಿದ್ದರೋ, ಅಥವಾ ಸೂಚಿಸುತ್ತಿದ್ದರೋ ಎಂಬ ಅಂಶವು ನಮಗೆ ಗೊತ್ತಿಲ್ಲ. ಈ ರೀತಿಯ ಅನುಮಾನವು ಏಕೆ ಬರುತ್ತದೆ ಹಾಗೂ ಈ ವಿಷಯವನ್ನು ನಾನು ಇಲ್ಲಿ ಏಕೆ ಉಲ್ಲೇಖಿಸುತ್ತಿದ್ದೇನೆ ಎಂದು ಹೇಳಿದರೆ, ಏಕೆಂದರೆ ನಿಮ್ಮ ಎರಡು ಪಕ್ಷಗಳ ಒಟ್ಟು ಸಂಖ್ಯೆಯು ಜಾಸ್ತಿ ಇದೆ. ನೀವಿಬ್ಬರು ಒಗ್ಗಟ್ಟಾಗಿದ್ದರೆ ನಾವು ಏನೂ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅನೀತಿಯ ದಾರಿಯಲ್ಲಿ ಹೋಗಲೇಬೇಕು ಎನ್ನುವುದಾದರೆ, ಸಮ್ಮಿಶ್ರ ಸರ್ಕಾರವನ್ನು ರಚನೆ ಮಾಡುವುದಕ್ಕೆ ಸಾಧ್ಯವೇ ಇಲ್ಲ ಎಂಬುದಾಗಿ ನೀವು ಸವಾಲನ್ನು ನೀಡುವುದಾದರೆ, ಸರ್ಕಾರ ರಚನೆ ಮಾಡಲು 9 ಅಂಕಿಗಳಷ್ಟು ಕಡಿಮೆ ಇರುವ ನಾವು ಪ್ರತಿಪಕ್ಷ ಸ್ಥಾನದಲ್ಲಿ ಕುಳಿತುಕೊಳ್ಳುವುದು ಸರಿಯಲ್ಲ ಎಂದು ಜನರಿಗೆ ಅನ್ನಿಸಿದರೆ, ಈ ಪ್ರತಿಜ್ಞಾ ವಿಧಿಯನ್ನು ಬಿಟ್ಟು ನಡೆದರೆ, ಒಂದು ಸರ್ಕಾರ ರಚನೆ ಮಾಡುವುದು ಅಸಾಧ್ಯವಾದ ವಿಚಾರವೇನೂ ಅಲ್ಲ ಎಂದು ಭಾರತ ದೇಶದ ಅನೇಕ ರಾಜ್ಯಗಳಲ್ಲಿ ಸರ್ಕಾರ ರಚನೆ ಮಾಡಿರುವಂತಹ ಸಂದರ್ಭದಲ್ಲಿ ನಾವು ನೋಡಿದ್ದೇವೆ.

**ಶ್ರೀ ಜಿ.ರಘು ಆಚಾರ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಮ್ಮ ಪಕ್ಷವು ಸರ್ಕಾರವನ್ನು ರಚನೆ ಮಾಡಲು ಪ್ರಯತ್ನ ಮಾಡಿತ್ತು. ಆದರೆ ಹಾಗೆ ಮಾಡಲು ನಿಮ್ಮ ಕೈಯ್ಯಲ್ಲಿ ಆಗಲಿಲ್ಲ. ಅಡ್ಡಿ ದಾರಿಯಲ್ಲಿ ಹೋಗಿ ನೀವು ಸರ್ಕಾರವನ್ನು ರಚನೆ ಮಾಡಲು ಪ್ರಯತ್ನ ಪಟ್ಟಿದ್ದೀರಿ. ಜನರು ತಮ್ಮ ಪಕ್ಷಕ್ಕೂ ಸಹ ನಿಮ್ಮ ಪಕ್ಷಕ್ಕಿಂತ ಹೆಚ್ಚಾಗಿ ಶೇಕಡಾವಾರು ಮತವನ್ನು ನೀಡಿದ್ದಾರೆ. As numbers play an important role in game of politics, ನಾವು ಈ ರೀತಿಯ ಸಮ್ಮಿಶ್ರ ಸರ್ಕಾರವನ್ನು ರಚನೆ ಮಾಡಿದ್ದೇವೆ. ಶ್ರೀ ಸಿದ್ಧರಾಮಯ್ಯನವರ ನೇತೃತ್ವದಲ್ಲಿ ಅಧಿಕಾರದಲ್ಲಿದ್ದ ಸರ್ಕಾರವು ಮಾಡಿರುವ ಕೆಲಸಗಳಿಗಾಗಿಯೇ ಜನರು ಸಕಾರಾತ್ಮಕವಾಗಿ ಪ್ರತಿಕ್ರಿಯೆ ನೀಡಿದ್ದಾರೆ. ಕಳೆದ ಚುನಾವಣೆಗೆ ಹೋಲಿಸಿದರೆ, ಈ ಬಾರಿ ಮತಗಳ ಶೇಕಡಾವಾರು ಜಾಸ್ತಿಯಿದೆ. ಈ ಅಂಶಗಳನ್ನು ಮಾನ್ಯ ಸದಸ್ಯರು ಮಾತನಾಡುವ ಮುಂಚೆ ದಯಮಾಡಿ ತಿಳಿದುಕೊಳ್ಳಬೇಕು. ಈ ಸದನದಲ್ಲಿ ವಿಷಯಗಳ ಮೇಲೆ ಚರ್ಚೆಯನ್ನು ಮಾಡಬೇಕು. ಇಲ್ಲಿಯೂ ಸಹ ರಾಜಕಾರಣವನ್ನು ಮಾಡಲಿಕ್ಕೆ

ಪ್ರಾರಂಭ ಮಾಡಿದರೆ, ಅದು ಚೆನ್ನಾಗಿ ಕಾಣುವುದಿಲ್ಲ. ಅದು ಈ ಸದನಕ್ಕೆ ಶೋಭೆ ತರುವಂತಹದ್ದು ಅಲ್ಲ.

**ಡಾ|| ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ನಮ್ಮ ಚುನಾವಣೆಯ ಪದ್ಧತಿಯಲ್ಲಿ ಇಂತಿಷ್ಟೇ ಲಕ್ಷಗಳಷ್ಟು ಮೊತ್ತವನ್ನು ಖರ್ಚು ಮಾಡಿ ಚುನಾವಣೆಯನ್ನು ಮಾಡಬೇಕು ಎಂಬ ನಿಯಮವಿದೆ. ನಾನು ಈ ವಿಚಾರದ ಬಗ್ಗೆ ಮಾತನಾಡಲು ಹೋಗುವುದಿಲ್ಲ. ಇಂತಿಷ್ಟೇ ಮೊತ್ತದಲ್ಲಿ ಚುನಾವಣೆಯನ್ನು ಮಾಡಿದ್ದೇವೆ, ಈ ಅಂಶದ ಬಗ್ಗೆಯೂ ಸಹ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಅದೇ ರೀತಿಯಾಗಿ ಅತ್ಯಂತ ಪಾರದರ್ಶಕವಾದ, ಪ್ರಾಮಾಣಿಕವಾದ ಚುನಾವಣೆ ಪದ್ಧತಿಯು ನಡೆದಿದೆ, ಈ ವಿಚಾರದ ಬಗ್ಗೆಯೂ ಸಹ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಈ ವಿಚಾರದ ಬಗ್ಗೆ ಚರ್ಚೆಯನ್ನು ಪ್ರಾರಂಭ ಮಾಡಿದರೆ, ಎಲ್ಲಿಂದ ಪ್ರಾರಂಭ ಮಾಡಬೇಕು ಹಾಗೂ ಎಲ್ಲಿಗೆ ಕೊನೆಗೊಳಿಸಬೇಕು ಎಂಬ ಅಂಶಗಳ ಬಗ್ಗೆ ನಮಗೆ ಗೊತ್ತಿದೆ. ಈ ವಿಚಾರದ ಬಗ್ಗೆಯೂ ಸಹ ನಾನು ಚರ್ಚೆಯನ್ನು ಮಾಡುವುದಕ್ಕೆ ಹೋಗುವುದಿಲ್ಲ. ನಾನು ಒಂದೇ ಒಂದು ಪದದಲ್ಲಿ ಹೇಳುವುದಾದರೆ, ಇವತ್ತಿನ ದಿವಸ meritorious people, ಕಟ್ಟ ಕಡೆಯಲ್ಲಿರುವಂತಹವರು, ಹಿಂದುಳಿದ ವರ್ಗದವರು, ಒಬ್ಬ ಹೊಲ ಉಳುವ ರೈತನ ಮಗ ಕೂಡ ಈ ದೇಶಕ್ಕೆ ನಾಯಕನಾಗಬೇಕಾದರೆ, ಅವಕಾಶ ಸಿಗಬೇಕು. ಅವಕಾಶ ಸಿಗಬೇಕು ಎನ್ನುವುದಾದರೆ ಜನತೆಯಲ್ಲಿ ಜಾಗೃತಿ ಮೂಡಬೇಕು.

(ಮುಂದು)

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ

(037) 03-7-2018 06.10 ಬಿಎಸ್‌ಡಿ/ಜಿಆರ್

ಶ್ರೀಮತಿ ತೇಜಸ್ವಿನಿ ಗೌಡ (ಮುಂದು)

ಈ ಚುನಾವಣಾ ಪದ್ಧತಿಯ ಎಲ್ಲಾ ಕಲುಷಿತ ವ್ಯವಸ್ಥೆಗಳು ಕೊನೆಯಾಗಬೇಕು. ಕೆಲವರಂತೂ ನಮಗೆ ಆದರ್ಶಪ್ರಾಯರಾಗಿದ್ದಾರೆ. ಅವರನ್ನು ನಾವು ಚಿಕ್ಕ ಮಕ್ಕಳಿಂದ ನೋಡಿಕೊಂಡು ಬಂದಿದ್ದೇವೆ. ಇವತ್ತಿಗೂ ನನಗೆ ಖುಷಿ ಇದೆ. ಕರ್ನಾಟಕದ ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನ ಅನೇಕ ಗಣ್ಯರು ಭಾರತ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಅತಿ ದೊಡ್ಡ ಕೊಡುಗೆಯನ್ನು ಕೊಟ್ಟಿದ್ದಾರೆ, ಅತೀ ದೊಡ್ಡ ಮುತ್ಸದ್ಧಿಗಳನ್ನು, ಗಣ್ಯರನ್ನು ಕರ್ನಾಟಕ ಕೊಟ್ಟಿದೆ. ಇವತ್ತಿಗೂ ಕರ್ನಾಟಕದಿಂದ ಭಾರತ ದೇಶದ ವ್ಯವಸ್ಥೆ ಉತ್ತಮವಾದದ್ದನ್ನು ನಿರೀಕ್ಷೆ ಮಾಡುತ್ತದೆ. ಆ ಕಾರಣಕ್ಕೋಸ್ಕರ ಮಾನ್ಯ ಐವನ್ ಡಿ'ಸೋಜಾರವರು ಮಾತನಾಡುವಾಗ ಅನೇಕ ವಿಚಾರಗಳನ್ನು ಹೇಳಿದರು. ಅದರಲ್ಲಿ ತಪ್ಪೇನೂ ಇಲ್ಲ,

ಮಾತನಾಡುವಾಗ ಅದೆಲ್ಲವನ್ನು ಮಾಡಬೇಕು. ಭಾರತ ದೇಶದ ಒಂದು ಭಾಗವಾಗಿ ಕರ್ನಾಟಕ ಇರುವಾಗ ಸಂಸತ್ತಿಗೆ ಮೂರು ಪಕ್ಷಗಳಿಂದ ಸದಸ್ಯರನ್ನು ಕಳುಹಿಸಿಕೊಟ್ಟಿರುವುದರಿಂದ ಕೆಲವೊಂದು ವಿಚಾರಗಳನ್ನು ಮಾತನಾಡುವುದು ತಪ್ಪೇನೂ ಇಲ್ಲ. ಕೆಲವು ತಪ್ಪು ಅಂಶಗಳು ಪ್ರಸ್ತಾಪವಾದಾಗ ನಮ್ಮ ಪಕ್ಷದವರು ಪ್ರತಿರೋಧ ಮಾಡಿದ್ದಾರೆಯೇ ಹೊರತು ಮತ್ತೇನೂ ಇಲ್ಲ. ಇವತ್ತಿನ ಪ್ರಧಾನ ಮಂತ್ರಿಗಳ ನಾಯಕತ್ವದಲ್ಲಿ ಭಾರತದ ಚಿತ್ರಣ ಬದಲಾಗಿದೆಯೋ, ಇಲ್ಲವೋ, ಭಾರತದ ಹಿರಿಮೆ-ಗರಿಮೆ ಹೆಚ್ಚಿದೆಯೋ, ಇಲ್ಲವೊ ಎಂಬ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಭಾರತ ದೇಶದ ಅನೇಕ ರಾಜ್ಯಗಳಲ್ಲಿ ಬಿಜೆಪಿ ನೇತೃತ್ವದ ಮತ್ತು ಸಮ್ಮಿಶ್ರ ನೇತೃತ್ವದ ಸರ್ಕಾರಗಳು ಬಂದಿವೆ. ಅದು ಬ್ಯಾಲೆಟ್ ಬಾಕ್ಸ್‌ನಿಂದ ಬಂದಿರುವುದರಿಂದ ಜನರು ಸಮ್ಮತಿಯನ್ನು ಕೊಟ್ಟಿದ್ದಾರೆ.

**ಶ್ರೀ ಐವನ್ ಡಿ'ಸೋಜಾ :-** ಅವರ ಸ್ಲೋಗನ್ ಕೊನೆಯಾಗುತ್ತಾ ಬಂದಿದೆ.

**ಡಾ|| ತೇಜಸ್ವಿನಿ ಗೌಡ :-** ಮಾನ್ಯ ಸಭಾಪತಿಯವರೇ, ಅವರ ವಿಚಾರಕ್ಕೂ ನಾನು ಬರುತ್ತೇನೆ. ನಾವು ಚಿಕ್ಕ ಮಕ್ಕಳಾಗಿರುವಾಗ ಗರೀಬಿ ಹಠಾವೋ ಎಂದರೆ ಗೊತ್ತಾಗುತ್ತಿರಲಿಲ್ಲ. ಭಾರತ ದೇಶಕ್ಕೆ ಬ್ರಿಟಿಷರಿಂದ ಸ್ವಾತಂತ್ರ್ಯ ಬಂದ ಸಂದರ್ಭದಲ್ಲಿ ಅಥವಾ ಹಸಿರು ಕ್ರಾಂತಿಯ ಸಂದರ್ಭದಲ್ಲಿ ಹಸಿವು ಇತ್ತು, ನೀರಾವರಿ ಇರಲಿಲ್ಲ, ಆ ಸಂದರ್ಭದಲ್ಲಿ ಆ ಕಾಲಕ್ಕೆ ಗರೀಬಿ ಹಠಾವೋ ಸೂಕ್ತವಾಗಿತ್ತು. ಅದನ್ನು ಜಾರಿಗೆ ತರಬೇಕು ಎಂಬ ಜ್ಞಾನ ಅವರಿಗೆ ಇತ್ತು, ಅವರಿಗೆ ಗುರಿ ಇತ್ತು, ನಾನು ಅದನ್ನು ಇಲ್ಲ ಎಂದು ಹೇಳುತ್ತಿಲ್ಲ. ಆದರೆ ಆವತ್ತಿನಿಂದ ಇವತ್ತಿನವರೆಗೂ ಅಂದರೆ ಯುಪಿಎ ಸರ್ಕಾರದ ಅವಧಿಯಲ್ಲಿ ಆಹಾರ ಭದ್ರತೆ ಕಾಯ್ದೆ ಮಂಡಿಸಿದಾಗ ಶೇ.86 ಜನರಿಗೆ ಆಹಾರ ಭದ್ರತೆಯನ್ನು ಒಳಪಡಿಸಿದರು. ಆದರೆ 70 ವರ್ಷಗಳಲ್ಲಿ ಕೇವಲ ಶೇ.14 ಜನರಿಗೆ ಮಾತ್ರ ಆಹಾರ ಭದ್ರತೆ ಕೊಡಲು ಸಾಧ್ಯವಾಗಿತ್ತು ಎಂದಾಗ ಈ ವೈಫಲ್ಯಕ್ಕೆ ಗುರುತರವಾದ ಕಾರಣ ಇರಬೇಕಲ್ಲವೇ? ಅದನ್ನು ಗುರುತಿಸುವಲ್ಲಿ ಅವರು ಏಕೆ ವಿಫಲರಾದರು. ಇವತ್ತಿಗೂ ಶೇ.33 ರಷ್ಟು ಅನಕ್ಷರಸ್ಥರನ್ನು ಭಾರತ ದೇಶ ಹೊಂದಿದೆ. ಇದಕ್ಕೆ ಯಾರನ್ನು ಹೊಣೆ ಮಾಡಿ, ಯಾರನ್ನು ದೂಷಣೆ ಮಾಡಬೇಕು? ಅನಾರೋಗ್ಯ ಭಾರತದಲ್ಲಿ ಮಾನ್ಯ ಮೋದಿಯವರು ಆಯುಷ್ಮಾನ್ ಭಾರತ ಯೋಜನೆಯನ್ನು ತರಬೇಕಾದರೆ ನಮ್ಮ ಬಗ್ಗೆ ಏನೂ ಹೇಳದೇ ಹಾಗೆ ಬಿಟ್ಟಿದ್ದಾರೆ. ಕೇವಲ 5 ತಿಂಗಳು 26 ದಿನಗಳ ಹಿಂದೆ ಪ್ರಸ್ತಾಪವಾದ ರಾಜ್ಯಪಾಲರ ಭಾಷಣದ ಪ್ರತಿಯಲ್ಲಿ 'ಎರಡೂ ಸದನಗಳನ್ನು ಸೌಭಾಗ್ಯವೆಂದು ಭಾವಿಸುತ್ತೇನೆ' ಎನ್ನುವುದನ್ನು ಹೇಳಿದ್ದಾರೆ. ಆದರೆ ಇವತ್ತು ಅದೇ ರಾಜ್ಯಪಾಲರು ಪರಿಸ್ಥಿತಿ ಬದಲಾದ ಸಂದರ್ಭದಲ್ಲಿ ಹಿಂದಿನ 38 ಪುಟಗಳ ರಾಜ್ಯಪಾಲರ ಭಾಷಣದ ಪುಸ್ತಕ 19 ಪುಟಗಳಿಗೆ ಇಳಿದಿದೆ. ಈ 38 ಪುಟಗಳು ದ್ವಿಗುಣಗೊಳ್ಳಬೇಕಾಗಿತ್ತು. ಮಾನ್ಯ ರಘು ಆಚಾರ್‌ರವರನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಸಮ್ಮಿಶ್ರ ಸರ್ಕಾರದ ಹುಮ್ಮಸ್ಸು, ಸಮ್ಮಿಶ್ರ ಸರ್ಕಾರದ ಸದೃಢತೆ ಹೆಚ್ಚಿರಬೇಕಾದರೆ 38 ಪುಟಗಳ ಭಾಷಣದ ಪ್ರತಿ 78 ಪುಟಗಳು ಆಗಬೇಕಾಗಿತ್ತು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇವತ್ತು ಅದು 19 ಪುಟಗಳಿಗೆ ಇಳಿದು ಅರ್ಧ ಅಂದರೆ 50% ಆಗಿದೆ. ಅಂದರೆ ಅದರ ಆತ್ಮವಿಶ್ವಾಸ 50% ಇದೆಯೇ? 30ನೇ ತಾರೀಖು ಮಾಧ್ಯಮಗಳಲ್ಲಿ ಒಂದು ವಿಚಾರ ಬಂತು. ಮಾನ್ಯ ಸಿದ್ದರಾಮಯ್ಯನವರು ಒಬ್ಬ ವ್ಯಕ್ತಿಯಾಗುವುದಿಲ್ಲ. ಈ ಸರ್ಕಾರವು ಕಾಂಗ್ರೆಸ್‌ನ ಬೆಂಬಲದಿಂದ ನಿಂತಿದೆ. ಕಾಂಗ್ರೆಸ್ ಪಕ್ಷವು ಮಾನ್ಯ ಸಿದ್ದರಾಮಯ್ಯನವರನ್ನು ಶಾಸಕಾಂಗ ಪಕ್ಷದ ನಾಯಕರನ್ನಾಗಿ ಮಾಡಿರುವುದರಿಂದ, ಮಾನ್ಯ ಸಿದ್ದರಾಮಯ್ಯನವರ ಯಾವುದೇ ಹೇಳಿಕೆಗಳು ಮತ್ತು ಚಲನ-ವಲನಗಳನ್ನು ಹಾಗೂ ಅವರ ಭಾವನೆಗಳನ್ನು ವಿರೋಧ ಪಕ್ಷವಾಗಿ ನಾವು ಸಂಪೂರ್ಣ ಗಂಭೀರವಾಗಿ ಪರಿಗಣಿಸುತ್ತೇವೆ, ಪರಿಗಣಿಸಬೇಕಾಗುತ್ತದೆ. ಅವರ ಪ್ರತಿಯೊಂದು ನಡೆಯಲ್ಲಿ ಈ ಸರ್ಕಾರದ ಅಳಿವು-ಉಳಿವು ನಿಂತಿದೆ ಎಂಬ ಅಂಶವನ್ನು ಉಲ್ಲೇಖ ಮಾಡಿದರೆ ಜಗಳಕ್ಕೆ ಏಕೆ ಬರುತ್ತಾರೆ? ಮಾನ್ಯ ಸಿದ್ದರಾಮಯ್ಯನವರು ಅನೇಕ ಯೋಜನೆಗಳನ್ನು ಮಾಡಿದ್ದಾರೆ. ನೀರಾವರಿ ಯೋಜನೆಯ ನಿರ್ಮಾಣದಲ್ಲಿ ಇವತ್ತು ಶ್ರೀಯುತ ಲಾಲ್ ಬಹಾದ್ದೂರ್ ಶಾಸ್ತ್ರಿಯವರ ಫೋಟೋ ನೋಡುತ್ತೇವೆ. ಆಲಮಟ್ಟಿ ಅಣೆಕಟ್ಟನ್ನು ಕಟ್ಟಿದಾಗ ಶಿಲಾನ್ಯಾಸ ಆಯಿತು. ಇವತ್ತಿನವರೆಗೂ ತುಂಬಿಟ್ಟ ನೀರನ್ನು ಉಪಯೋಗ ಮಾಡಿಕೊಳ್ಳಲು ಬೇಕಾದ ಕಾಲುವೆಗಳನ್ನು ನಿರ್ಮಿಸಲು ಬಜೆಟ್ ಕೊರತೆಯಾಗುತ್ತಿದೆಯೇ? ಸಾಲ ಮನ್ನಾದ ಬಗ್ಗೆ ಏಕೆ ಉಲ್ಲೇಖವನ್ನು ಮಾಡಿಲ್ಲ. 6 ತಿಂಗಳ ಹಿಂದಿನ ಹೇಳಿಕೆಗೂ ಇವತ್ತಿನ ಹೇಳಿಕೆಗೂ ಉತ್ತರ ಬೇಕಲ್ಲವೇ!. 13 ಬಜೆಟ್‌ಗಳನ್ನು ನೀಡಿದ ಹಾಗೂ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಮತ್ತು ಇವತ್ತು ಸಮನ್ವಯ ಸಮಿತಿಯ ಅಧ್ಯಕ್ಷರಾಗಿರುವ ಮಾನ್ಯ ಸಿದ್ದರಾಮಯ್ಯನವರು ಕೊಟ್ಟಿರುವ ಅಥವಾ ಅರ್ಧಕ್ಕೆ ಬಿಟ್ಟಿರುವ ಯೋಜನೆಗಳ ಭವಿಷ್ಯ ಏನು? ಅದನ್ನು ಮುಂದುವರೆಸುತ್ತಾರೋ ಇಲ್ಲವೋ? ರೈತರ ಸಾಲ ಮನ್ನಾ ಬಗ್ಗೆ ಮಾನ್ಯ ಕುಮಾರಸ್ವಾಮಿಯವರು ಆಶಯ ಹೊಂದಿದ್ದಾರೆಯೇ? ಅವರು ಕೊಟ್ಟ ಭರವಸೆಗಳನ್ನು ಈಡೇರಿಸಬೇಕಾದರೆ ಸುಮ್ಮನೆ ಲೆಕ್ಕಾಚಾರ ಮಾಡಿದರೂ ಸುಮಾರು 3 ಲಕ್ಷ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಜೆಡಿ(ಎಸ್) ಪಕ್ಷ ಪ್ರಣಾಳಿಕೆಯಲ್ಲಿ ಕೊಟ್ಟಿರುವ ವಾಗ್ದಾನವನ್ನು ಈಡೇರಿಸಬೇಕಾದರೆ ಈ ಹಣ ಬೇಕಾಗುತ್ತದೆ. ವಾಗ್ದಾನ ಕೊಡುವುದು ತಪ್ಪಿಲ್ಲ. ಏಕೆಂದರೆ ರಾಜ್ಯಕ್ಕೆ ಏನಾದರೂ ಮಾಡಬೇಕು ಎಂದು ಭರವಸೆಗಳನ್ನು ಕೊಡುವುದು ತಪ್ಪಿಲ್ಲ. ಆದರೆ ಬಹು ಮುಖ್ಯವಾಗಿ 3,800 ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿರುವ ಸಂದರ್ಭದಲ್ಲಿ ಪ್ರತಿಪಕ್ಷವಾಗಿದ್ದುಕೊಂಡು ಯಾವ ಸರ್ಕಾರವನ್ನು ಎಲ್ಲದ್ದಕ್ಕೂ ಹೊಣೆಗಾರರನ್ನಾಗಿ ಮಾಡಿದ್ದರೋ, ಇವತ್ತು ಆ ಪಕ್ಷದ ಶಾಸಕಾಂಗ ಪಕ್ಷದ ಅಧ್ಯಕ್ಷರೂ ಹಾಗೂ ಸಮನ್ವಯ ಸಮಿತಿ ನಾಯಕರಾಗಿ ಅವರ ಬೆಂಬಲ ಪಡೆದು ಸರ್ಕಾರವನ್ನು ನಡೆಸುವುದಾಗಿದೆ. ಅವರ ಸಹಮತ ಇಲ್ಲದಿದ್ದರೆ ಈ ಸರ್ಕಾರದ ಬಜೆಟ್ ಮಂಡನೆ ಸಾಧ್ಯವಾಗುತ್ತದೆಯೇ? 79 ಜನ ಕಾಂಗ್ರೆಸ್ ಪಕ್ಷದ ಶಾಸಕರ ಪ್ರತೀಕವಾಗಿ ಮಾನ್ಯ ಸಿದ್ದರಾಮಯ್ಯನವರು ಇದ್ದಾರೆ. ಅವರೊಟ್ಟಿಗೆ ಸಮಾಲೋಚನೆ ಮಾಡದಿದ್ದರೆ ಆಗುತ್ತದೆಯೇ? ನಾವ್ಯಾರೂ ಕೇಳಲಿಲ್ಲ, ಬೈಟ್ ಅನ್ನು ನಾವು ಕೊಟ್ಟಿಲ್ಲ. ನಾಲ್ಕು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗೋಡೆಗಳ ಮಧ್ಯೆ ಗಣ್ಯರು ಮತ್ತು ರಾಜಕೀಯ ಮುತ್ಸದ್ಧಿಗಳನ್ನು ಎಲ್ಲೋ ಆಂತರಿಕವಾಗಿ ಸೆರೆಹಿಡಿಯುವ ಕೆಲಸ ಮಾಧ್ಯಮಗಳ ಕರ್ತವ್ಯ ಹಾಗೂ ಆ ಕೆಲಸವನ್ನು ಅವರು ಮಾಡುತ್ತಾರೆ, ಮಾಡಲೇಬೇಕಾಗುತ್ತದೆ. ಅದನ್ನು ಸಾಕ್ಷಿ ಎಂದು ಪರಿಗಣಿಸಲು ಸಾಧ್ಯವಿಲ್ಲದೇ ಇರಬಹುದು. ಆದರೆ ಜನರು ಅದನ್ನು ನಂಬುತ್ತಾರೆ. ಎಲ್ಲದ್ದಕ್ಕೂ ಸಾಕ್ಷಿ ಕೇಳಿದರೆ ಕೊಡುವುದಕ್ಕಾಗುವುದಿಲ್ಲ. ಜನರ ನಂಬಿಕೆ ಬಹಳ ಮುಖ್ಯ. ಈಗ ಸಾಲ ಮನ್ನಾ ಮಾಡುತ್ತಾರೆಂದರೆ ಜನರು ನಂಬುತ್ತಿಲ್ಲ. ಆದ್ದರಿಂದ ಅವರು ಸಾಮರಸ್ಯದಿಂದ ನಡೆದುಕೊಳ್ಳಬೇಕು. ಅದರಲ್ಲೂ ವಿಶೇಷವಾಗಿ ಶಾಸಕಾಂಗ ಪಕ್ಷದ ನಾಯಕರಾದ ಮಾನ್ಯ ಸಿದ್ದರಾಮಯ್ಯನವರು ವ್ಯತಿರಿಕ್ತವಾಗಿ ಹೇಳಿಕೆಯನ್ನು ಕೊಟ್ಟಾಗ ನಾವು ಪ್ರಶ್ನೆ ಮಾಡಬೇಕಾಗುತ್ತದೆ. ಆಗ ನಮಗೆ ಆತಂಕ ಉಂಟಾಗುತ್ತದೆ. ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕಾರ ಮಾಡುವ ಮುನ್ನಾ ಹೇಳಿದಂತೆ ಸಾಲ ಮನ್ನಾ ಮಾಡಬೇಕಲ್ಲವೇ? ' ನಾನು ಮಾತು ಕೊಟ್ಟಿದ್ದೇನೆ, ವಾಗ್ದಾನ ಮಾಡಿದ್ದೇನೆ, ಸಾಲ ಮನ್ನಾ ಮಾಡಲು ಬೆಂಬಲ ಇದ್ದರೆ ಮಾತ್ರ ಮುಖ್ಯಮಂತ್ರಿಯಾಗುತ್ತೇನೆ, ಇಲ್ಲದಿದ್ದರೆ ಆಗುವುದಿಲ್ಲ' ಎಂದು ಹೇಳಬೇಕಾಗಿತ್ತಲ್ಲವೇ? ' ನಾನು ಜನರಿಂದ ಆಯ್ಕೆ ಆಗಲಿಲ್ಲ, ನಾನು ಪರಿಸ್ಥಿತಿಯ ಕೂಸು' ಎಂದೆಲ್ಲಾ ಹೇಳಿದರೆ ಈ ಜಾದುವನ್ನು ಜನರು ಕೇಳುವುದಿಲ್ಲ. ಜನರಿಗೆ ಪರಿಹಾರ ಬೇಕು. ಈ ರಾಜ್ಯಪಾಲರ ಭಾಷಣವನ್ನು ನಾನು ಭಾಗ-2 ಎಂದು ಅಂದುಕೊಳ್ಳುತ್ತೇನೆ. ಏಕೆಂದರೆ ಇದರಲ್ಲಿ ಏನೂ ಇಲ್ಲ. ನಾನು ಪ್ರತಿಯೊಂದು ಪದವನ್ನು ಓದಿದ್ದೇನೆ. ಕೇವಲ ಶಾಸ್ತ್ರಕ್ಕೆ ರಾಜ್ಯಪಾಲರ ಬಾಯಿಂದ ಹೇಳಿಸಿದ್ದಾರೆ. ಅವರಿಗೂ ಹಿಂದಿನಿಂದ ಅನೇಕ ಗೊಂದಲಗಳು ಇದ್ದಿದ್ದರಿಂದ, ಪ್ರಿಂಟ್ ಮಾಡಲು ಕಾಂಗ್ರೆಸ್ ಪಕ್ಷ ಒಪ್ಪಿದ್ದರಿಂದ ಮತ್ತು ಸದನ ಮರು ದಿವಸವೇ ಸೇರಿದ್ದರಿಂದ ....

ಇನ್ನು ನೀರಾವರಿ ವಿಚಾರಕ್ಕೆ ಬಂದಾಗ ಅರ್ಧಕ್ಕೆ ಬಿಟ್ಟ ಅನೇಕ ಯೋಜನೆಗಳ ಬಗ್ಗೆ ಹೇಳಿದ್ದಾರೆ. ಭ್ರಷ್ಟಾಚಾರದ ಪ್ರಶ್ನೆ ಬಂದಾಗ ಭ್ರಷ್ಟ ಮುಕ್ತತೆ ಬಗ್ಗೆ ಹೇಳಿದ್ದಾರೆ. ನಾನು ಆ ಅಂಶವನ್ನು ಪುನರಾವರ್ತಿಸುವುದಿಲ್ಲ. ಮಾನ್ಯ ಸಿದ್ದರಾಮಯ್ಯನವರ ಸರ್ಕಾರದಲ್ಲಿ ಭ್ರಷ್ಟಾಚಾರ ನಡೆಯುತ್ತಿತ್ತು ಎಂದು ಹಾಲಿ ಮುಖ್ಯಮಂತ್ರಿಗಳು ಹೇಳಿ, ಅವರ ಬೆಂಬಲದಿಂದಲೇ ಈಗ ಮುಖ್ಯಮಂತ್ರಿಯಾಗಿದ್ದಾರೆ. ಅವರು ಮುಖ್ಯಮಂತ್ರಿಯಾಗಿ ಇರಬೇಕು ಅಥವಾ ಬೇಡ ಎಂದು ತೀರ್ಮಾನ ಮಾಡುವ ಶಕ್ತಿ ಅವರಿಗೆ ಇದೆ ಎಂಬುದನ್ನು ನಾವು ಒಪ್ಪುತ್ತೇವೆ. ಅವರು ಒಪ್ಪುತ್ತಾರೋ, ಇಲ್ಲವೋ ನನಗೆ ಗೊತ್ತಿಲ್ಲ. ಅವರು ಒಪ್ಪಬೇಕಾದ ಅವಶ್ಯಕತೆ ಕೂಡ ನಮಗೆ ಇಲ್ಲ. ಹಾಗಾದರೆ 5 ವರ್ಷ ಹೇಳಿದ್ದೆಲ್ಲಾ ಸುಳ್ಳೇ? ಮಾನ್ಯ ಮುಖ್ಯಮಂತ್ರಿಯವರು ಸದನದ ಎದುರು ತಪ್ಪೊಪ್ಪಿಗೆ ಕೇಳಬೇಕಾಗುತ್ತದೆ. ಮಾನ್ಯ ಸಿದ್ದರಾಮಯ್ಯನವರ ವಿರುದ್ಧ ಹಾಗೂ ಕಾಂಗ್ರೆಸ್ ಪಕ್ಷದ ವಿರುದ್ಧ ಮಾಡಿದ ಆಪಾದನೆಗಳು ಸುಳ್ಳು ಎಂದು ಮಾನ್ಯ ಕುಮಾರ ಸ್ವಾಮಿಯವರು ಸಮ್ಮಿಶ್ರ ಸರ್ಕಾರದ ಮುಖ್ಯಮಂತ್ರಿಗಳಾಗಿ ಹೇಳಬೇಕಾಗುತ್ತದೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇನ್ನು ಕಾನೂನು ಸುವ್ಯವಸ್ಥೆ ಬಗ್ಗೆ ಹೇಳಬೇಕಾದರೆ ಮಾನ್ಯ ಲೋಕಾಯುಕ್ತರ ಹತ್ಯೆ ಪ್ರಯತ್ನ ನಡೆಯಿತು. ಭ್ರಷ್ಟಾಚಾರ ನಿಗ್ರಹ ಮಾಡುವ ಲೋಕಾಯುಕ್ತರ ಹತ್ಯೆ ಪ್ರಯತ್ನ ಅವರ ಕೊಠಡಿಯಲ್ಲಿಯೇ ನಡೆಯಿತು. ಹಾಗಾದರೆ ಅವರು ಪ್ರತಿಪಕ್ಷದ ನಾಯಕರಾಗಿ ಹೇಳಿದ ಮಾತಿಗೆ ಏನು ಬೆಲೆ ಇದೆ. ಇವತ್ತು ಮುಖ್ಯಮಂತ್ರಿಯಾದ ಸಂದರ್ಭದಲ್ಲಿ ಪರಿಸ್ಥಿತಿ ಸುಧಾರಿಸುತ್ತದೆ ಎಂದು ನಾವು ನಿರೀಕ್ಷೆ ಮಾಡಿದ್ದೆವು.

(ಮುಂದು)

38/03.07.2018/6.20/ಹೆಚ್‌ವಿಃಜಿಆರ್

**ಡಾಃತೇಜಸ್ವಿನಿ ಗೌಡ (ಮುಂದುವರೆದದ್ದು):-**

ಸನ್ಮಾನ್ಯ ಸಭಾಪತಿಯವರೇ, ಎ.ಸಿ.ಬಿ., ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ವ್ಯಾಖ್ಯಾನಗಳನ್ನು ನಾವು ಕೇಳಿದ್ದೆವು. ಅದರಲ್ಲಿ ಸುಧಾರಣೆಗಳನ್ನು ತರುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಪ್ರಯತ್ನ ಮಾಡಿದ್ದಾರೆಯೇ ಅಥವಾ ಆ ಸುಧಾರಣೆಗಳಿಗೆ ಪ್ರತಿಪಕ್ಷಗಳು ಒಪ್ಪಿಗೆಯನ್ನು ನೀಡಿಲ್ಲವೇ ಎನ್ನುವುದು ನನ್ನ ಪ್ರಶ್ನೆಯಾಗಿದೆ. ನಮ್ಮನ್ನು ಬ್ಯಾಲೆಟ್ ಬಾಕ್ಸ್‌ನಲ್ಲಿ ಸೋಲಿಸುವಂತಹ ಎಲ್ಲ ಅಧಿಕಾರಗಳು ಕಾಂಗ್ರೆಸ್ ಪಕ್ಷಕ್ಕಿದೆ.

ಸನ್ಮಾನ್ಯ ಸಭಾಪತಿಯವರೇ, ಭಾರತೀಯ ಜನತಾ ಪಕ್ಷವನ್ನು ಕಾಂಗ್ರೆಸ್ ಪಕ್ಷದವರು 'ಕೋಮುವಾದಿ ಪಕ್ಷ' ಎನ್ನುವ ರೀತಿಯಲ್ಲಿ ಬಿಂಬಿಸಿದರು. ಕರಾವಳಿ ಭಾಗದಲ್ಲಿಯೇ ಕೋಮುವಾದದ ದಳ್ಳುರಿ ಹಚ್ಚಿದ್ದು, ಪೋಲೀಸ್ ಇಲಾಖೆಯಲ್ಲಿ ಹಸ್ತಕ್ಷೇಪ ಮಾಡಿ, ಪೋಲೀಸ್ ಅಧಿಕಾರಿಗಳನ್ನು ಮನೆಗಳಿಗೆ ಕರೆಯಿಸಿಕೊಂಡಿದ್ದರು. ಪೋಲೀಸರು, ಪೋಲೀಸ್ ಕೆಲಸವನ್ನು ಮಾಡುವುದಕ್ಕೆ ಇವರುಗಳು ಬಿಟ್ಟಿರಲಿಲ್ಲ. ಮಾನ್ಯ ಸಿದ್ದರಾಮಯ್ಯನವರು ಫುಟ್‌ಬಾಲ್ ಪ್ರಿಯರು ಮತ್ತು ಅವರು ಉತ್ತಮ ಕುಸ್ತಿಪಟುಗಳು. ನಾವು ಈ ಮಾತನ್ನು ನಂಬುತ್ತೇವೆ. ತೀವ್ರ ಪ್ರತಿರೋಧಗಳ ನಡುವೆಯೂ  ಕಾಂಗ್ರೆಸ್ ಪಕ್ಷ 78 ಸ್ಥಾನಗಳನ್ನು ಗಳಿಸಿಕೊಂಡಿದೆ. ನಾವು ಕಡಿಮೆ ಸ್ಥಾನಗಳ ಅಂತರದಿಂದ ಸೋತಿರುವ ಕಾರಣದಿಂದಾಗಿ ಈಗ ವಿರೋಧ ಪಕ್ಷದಲ್ಲಿ ಕುಳಿತುಕೊಂಡಿದ್ದೇವೆ. ಆದರೂ ತೊಂದರೆಯಿಲ್ಲ. ಪೋಲೀಸ್ ಇಲಾಖೆಯಲ್ಲಿನ ಭ್ರಷ್ಟಾಚಾರದ ಬಗ್ಗೆ ನಾವು ಉಲ್ಲೇಖ ಮಾಡಿದಾಗ ಅವರು ಅದನ್ನು ಒಪ್ಪುವುದಕ್ಕೆ ತಯಾರೇ ಇರಲಿಲ್ಲ. 'ಇಲ್ಲ, ಎಲ್ಲ ಸರಿ ಇದೆ, ನಾವು 130 ಸ್ಥಾನಗಳನ್ನು ಪಡೆದುಕೊಳ್ಳುತ್ತೇವೆ' ಎನ್ನುವ ಮಾತುಗಳನ್ನೇ ಹೇಳುತ್ತಿದ್ದರು. Anti-incumbency ಇದೆ ಎಂದು ಹೇಳಿದರೆ ಅದನ್ನು ಒಪ್ಪುವುದಕ್ಕೆ ಅವರು ತಯಾರಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಬಿ.ಎಸ್.ಯಡಿಯೂರಪ್ಪನವರು 224 ಕ್ಷೇತ್ರಗಳಲ್ಲಿ 11 ಸಾವಿರ ಕಿಲೋಮೀಟರ್‌ಗಳಷ್ಟು ದೂರ 'ಪರಿವರ್ತನಾ ಯಾತ್ರೆ'ಯನ್ನು ಕೈಗೊಂಡಾಗ, ನಾವು ಜನರ ನಾಡಿ ಮಿಡಿತವನ್ನು ಹೇಳಿದರೂ, ಅವರು ಅದನ್ನು ಒಪ್ಪುವುದಕ್ಕೆ ತಯಾರಿರಲಿಲ್ಲ. ಪ್ರತಿಪಕ್ಷದಲ್ಲಿ ಕುಳಿತು ಕೆಲಸ ಮಾಡುವುದು ಎಷ್ಟು ಕಷ್ಟವೆನ್ನುವುದು ತಮಗೂ ಗೊತ್ತಿದೆ. ನಾವು ವೈಯಕ್ತಿಕ ನಿಂದನೆಗಳಿಗೆ ಮತ್ತು ವೈಯಕ್ತಿಕ ವಿಚಾರಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗಲಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಜಾತೀಯತೆಯ ಬಗ್ಗೆ ಈಗ ನಾವು ಮಾತನಾಡಲೇ ಬೇಕಾಗಿದೆ. ಒಂದೊಂದು ವರ್ಗಕ್ಕೆ ಸೇರಿದವರಿಗೆ ಒಂದೊಂದು ರೀತಿಯಲ್ಲಿ ರಕ್ಷಣೆ ಸಿಗುತ್ತದೆ. ಕೆಲವೊಮ್ಮೆ, ದಕ್ಷತೆ ಮತ್ತು ಸಾಮರ್ಥ್ಯ ಇದ್ದಾಗಲೂ ಯಾವುದೋ ದುರ್ಬಲ ವರ್ಗಕ್ಕೆ ಅಥವಾ ಕಡೆಗಣಿಸಲ್ಪಟ್ಟ ವರ್ಗಕ್ಕೆ ಸೇರಿದವರಾಗಿದ್ದರೆ ಅವರಿಗೆ ಮಾನ್ಯತೆ ದೊರೆಯುವುದಿಲ್ಲ. ಹಿಂದೂ ಕಾರ್ಯಕರ್ತರ ಹತ್ಯೆ ವಿಚಾರದಲ್ಲಿ ಪೋಲೀಸ್ ಇಲಾಖೆಯಲ್ಲಿ ನಡೆದಿರುವ ಭ್ರಷ್ಟಾಚಾರವನ್ನು ಸರಾಸಗಟಾಗಿ ತಳ್ಳಿ ಹಾಕಬೇಡಿ, ಜನತೆಯ ನಾಡಿ ಮಿಡಿತವನ್ನು ತಾವು ಪರಿಗಣಿಸಬೇಕೆಂದು ನಾವು ಹೇಳಿದಂತಹ ಸಂದರ್ಭದಲ್ಲಿ ಆ ಭಾಗದಲ್ಲಿ ಕುಳಿತಿರುವಂತಹ ನನ್ನ ಸಹೋದರರು ಆ ಮಾತಿಗೆ ಬೆಲೆ ಕೊಡಲಿಲ್ಲ. ಭಾರತೀಯ ಜನತಾ ಪಕ್ಷ ಉಲ್ಲೇಖ ಮಾಡಿದಂತಹ ಕರಾವಳಿ ಪ್ರದೇಶದಲ್ಲಿನ ವಿಚಾರಗಳು ಸತ್ಯಕ್ಕೆ ಹತ್ತಿರವಾಗಿದ್ದ ಕಾರಣ, ಮಂತ್ರಿಗಳಾಗಿದ್ದ ಮಾನ್ಯ ಯು.ಟಿ.ಖಾದರ್ ಅವರನ್ನು ಬಿಟ್ಟರೆ ಉಳಿದವರನ್ನೆಲ್ಲ ಜನರು ತಿರಸ್ಕರಿಸಿದ್ದಾರೆ ಎನ್ನುವ ಅಂಶವನ್ನು ಅವರಿಗೆ ಆತ್ಮಸಾಕ್ಷಿ ಇದ್ದರೆ ಈ ಸದನದಲ್ಲಿ ಒಪ್ಪಿಕೊಳ್ಳಬೇಕಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಘನತೆವೆತ್ತ ರಾಜ್ಯಪಾಲರು ದಯಪಾಲಿಸಿರುವ ಹಿಂದಿನ ಮತ್ತು ಇಂದಿನ ಭಾಷಣದಲ್ಲಿ 'ಅಲ್ಪ ಸಂಖ್ಯಾತರು' ಎನ್ನುವ ಪದ ಬಳಕೆ ಮಾಡಿದ್ದಾರೆ. ಸಿಖ್ಖರು, ಪಾರ್ಸಿಗಳು, ಜೈನ ಧರ್ಮಕ್ಕೆ ಸೇರಿದವರು ಇವರ ಕಲ್ಪನೆಯಲ್ಲಿಯೂ ಅಲ್ಪ ಸಂಖ್ಯಾತರಾಗಿ ಕಂಡು ಬರುವುದಿಲ್ಲ. ಇವರು ಬದಲಾಗಬೇಕಾಗಿದೆ. ಮುಸಲ್ಮಾನ ಸಮಾಜದ ಅಭಿವೃದ್ಧಿಗೆ ಇವರು ಭಿಕ್ಷೆ ಕೊಡಬೇಕಾಗಿಲ್ಲ. ಈ ದೇಶದ ಸಂವಿಧಾನ ಮತ್ತು ಈ ದೇಶದ ಎಲ್ಲ ಸದನಗಳು ಅವರಿಗೆ ಅವರ ಹಕ್ಕನ್ನು ನೀಡಿದೆ. ಅದು ನೇರವಾಗಿ ಫಲಾನುಭವಿಗಳಿಗೆ ತಲುಪಿಸುವಂತಹ ಕೆಲಸವನ್ನು ನಾವು ಮಾಡಬೇಕಾಗಿದೆ.

ಸನ್ಮಾನ್ಯ ಸಭಾಪತಿಯವರೇ, 'ಹಜ್ ಭವನ' ಎಂದು ನಾಮಕರಣ ಮಾಡುವ ಬಗ್ಗೆ ಇತ್ತೀಚೆಗೆ ದೊಡ್ಡ ಚರ್ಚೆಯಾಗಿತ್ತು. ಇವರ ಪಕ್ಷ ದಶಕಗಳಿಂದ ಅಧಿಕಾರದಲ್ಲಿತ್ತು ಆದರೆ, ಇಂತಹ ಭವ್ಯ ಭವನ ನಿರ್ಮಾಣ ಮಾಡುವುದಕ್ಕೆ ಸುಮಾರು 40 ಕೋಟಿ ರೂಪಾಯಿಗಳ ಅನುದಾನವನ್ನು ನೀಡಿರುವುದು ಮಾನ್ಯ ಯಡಿಯೂರಪ್ಪನವರ ಬಿ.ಜೆ.ಪಿ., ಸರ್ಕಾರ ಎನ್ನುವುದನ್ನು ಅವರು ಸ್ಮರಿಸಬೇಕು. 'ಹಜ್ ಭವನ'

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂದರೆ, ದೇವರ ಭವನ, ಕ್ರೈಸ್ತ ಭವನ ಎಂದರೆ, ದೇವರ ಭವನ. ಈ ದೇವರ ಭವನವನ್ನು 'ಹಜ್ ಭವನ' ಎಂದು ಕರೆಯಲು ಹೊರಟಿದ್ದಾರೆ. ಏತಕ್ಕಾಗಿ ಈ ಪ್ರಯತ್ನವನ್ನು ಮಾಡುತ್ತಿದ್ದಾರೆ? ಕೇವಲ 78 ಸ್ಥಾನಗಳನ್ನು ಗಳಿಸಿಕೊಂಡಿರುವುದಕ್ಕೆ ಅವರ ಆತ್ಮವಿಶ್ವಾಸ ಕುಂದಿದೆಯೇ? ರೂಲಿಂಗ್ ಪಾರ್ಟಿ ಆಗುವುದಕ್ಕೆ ಇನ್ನಷ್ಟು appeasement ಮಾಡುವುದಕ್ಕೆ ಹೊರಟಿದ್ದಾರೆಯೇ? ಹಿಂದು ಕಾರ್ಯಕರ್ತರ ಮೇಲೆ ಎಷ್ಟೊಂದು ಕೇಸ್‌ಗಳನ್ನು ದಾಖಲು ಮಾಡಲಾಗಿದೆ ಎನ್ನುವ ವಿಚಾರದ ಬಗ್ಗೆ ನಾವು ಚರ್ಚೆ ಮಾಡುತ್ತೇವೆ. ಇಂತಹ ವಿಚಾರಗಳನ್ನು ಬಿಟ್ಟು ಅವರು ಮುಂದುವರೆಯಬೇಕಾಗಿದೆ. ಅವರಿಗೆ ಬಹಳ ಹಿನ್ನಡೆಯಾಗಿದೆ. ಅವರು ಮತ್ತಷ್ಟು ಮುಂದುವರೆದರೆ, ನಾನು ಅವರ ಭಾಷೆಯಲ್ಲಿಯೇ, 'ಇದನ್ನೇ ಮುಂದುವರಿಸಿ' ಎಂದು ಹೇಳುತ್ತೇನೆ. ಸ್ವಾಗತ ಮಾಡುತ್ತೇನೆ.

**ಶ್ರೀ ಜಿ.ರಘು ಆಚಾರ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಪಾರ್ಲಿಮೆಂಟ್ ಚುನಾವಣೆಗೆ ಇನ್ನೊಂದು ವರ್ಷಗಳ ಕಾಲಾವಕಾಶವಿದೆ. ಆಗ ಜನರು ನಿರ್ಧರಿಸುತ್ತಾರೆ.

**ಡಾ:ತೇಜಸ್ವಿನಿ ಗೌಡ:-** ಸನ್ಮಾನ್ಯ ಸಭಾಪತಿಯವರೇ, 2004ರಲ್ಲಿ ಕೇಂದ್ರದಲ್ಲಿ ಯು.ಪಿ.ಎ. ಸರ್ಕಾರ ಅಧಿಕಾರದಲ್ಲಿ ಇದ್ದಂತಹ ಸಂದರ್ಭದಲ್ಲಿ ನಾನು ಕಾಂಗ್ರೆಸ್ ಪಕ್ಷದಿಂದ ಸಂಸದಳಾಗಿ ಆಯ್ಕೆಗೊಂಡಿದ್ದೆ. ಮಾಜಿ ಪ್ರಧಾನಿಗಳನ್ನು ಸೋಲಿಸಿ ನನ್ನ ಜನ ನನ್ನನ್ನು ಆಯ್ಕೆ ಮಾಡಿ ಪಾರ್ಲಿಮೆಂಟಿಗೆ ಕಳುಹಿಸಿಕೊಟ್ಟಿದ್ದರು. ಆಗ ಮತದಾರರು ಕಾಂಗ್ರೆಸ್ ಪಕ್ಷಕ್ಕೆ ಎಷ್ಟು ದಯೆ ತೋರಿದ್ದರು ಎನ್ನುವುದರ ಬಗ್ಗೆ ಕಾಂಗ್ರೆಸ್ ಪಕ್ಷ ಮತ್ತೊಮ್ಮೆ ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ. ಇದರ ಬಗ್ಗೆ ನಾನು ನಂತರ ಮಾತನಾಡುತ್ತೇನೆ. ನಾನು ಚುಚ್ಚುವುದಕ್ಕೆ ಇಷ್ಟಪಡುವುದಿಲ್ಲ, ಅವರು ಚುಚ್ಚಿಸಿಕೊಳ್ಳುವುದೂ ಬೇಡ. ಚುಚ್ಚುವವರಿಗೂ ನೋವು, ಚುಚ್ಚಿಸಿಕೊಳ್ಳುವವರಿಗೂ ನೋವು ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ಅವರು ಮೆರಿಟ್ ಅನ್ನು ಗುರುತಿಸಬೇಕಾಗಿದೆ. ಹೆಣ್ಣುಮಕ್ಕಳಿಗೆ ಮತ್ತು ಸಜ್ಜನರಿಗೆ ರಕ್ಷಣೆಯನ್ನು ಕೊಡಬೇಕಾಗಿದೆ. ನಾನು ಇದನ್ನು ವಿಸ್ತರಣೆ ಮಾಡುವುದಕ್ಕೆ ಇಷ್ಟಪಡುವುದಿಲ್ಲ ಆಗಿನ ಲೋಕಸಭಾ ಚುನಾವಣೆಯಲ್ಲಿ ಇಡೀ ದೇಶದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಉತ್ತಮ ಸಂಖ್ಯೆ ದೊರೆತರೂ ಕರ್ನಾಟಕ ರಾಜ್ಯದಿಂದ ಕಾಂಗ್ರೆಸ್ ಪಕ್ಷ 6 ಜನ ಸಂಸದರನ್ನು ಮಾತ್ರ ಚುನಾಯಿಸಿ ಕಳುಹಿಸಿಕೊಟ್ಟಿತ್ತು. ನಮ್ಮ ಪಕ್ಷದಿಂದ ಅತಿ ಹೆಚ್ಚು ಅಂದರೆ 18 ಜನ ಸಂಸದರನ್ನು ಆಯ್ಕೆ ಮಾಡಿ ಇಲ್ಲಿಂದ ಕಳುಹಿಸಿ ಕೊಡಲಾಗಿತ್ತು. ಆದ್ದರಿಂದ ಮಾನ್ಯ ರಘು ಆಚಾರ್‌ರವರ ಭಯ ನಮಗಿಲ್ಲ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಜಿ.ರಘು ಆಚಾರ್‌ಃ–** ಸನ್ಮಾನ್ಯ ಸಭಾಪತಿಯವರೇ, ಚುನಾವಣೆಯ ಬಗ್ಗೆ ನಮಗೇನೂ ಭಯವಿಲ್ಲ. ಜನರು ಅವರ ಫಲಿತಾಂಶವನ್ನು ಸಹ ಬರೆಯುತ್ತಾರೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ.

**ಡಾಃತೇಜಸ್ವಿನಿ ಗೌಡಃ–** ಸನ್ಮಾನ್ಯ ಸಭಾಪತಿಯವರೇ, ಭಾರತ ದೇಶಕ್ಕೆ ಯಾವ ಸರ್ಕಾರವನ್ನು ಕೊಡಬೇಕು ಎನ್ನುವುದು ಮತದಾರರಿಗೆ ಗೊತ್ತಿದೆ. ಒಂದೇ ಕುಡಿಯಲ್ಲಿ ಹುಟ್ಟಿರುವವರೇ ದೇಶ ಆಳಬೇಕಾಗಿಲ್ಲ. ದೇಶ ಬದಲಾಗಿದೆ. ಒಂದು ಮತಕ್ಕೆ ಸೋಲಿಸುವ ಶಕ್ತಿ ಇದೆ. ಆ ಭಾಗದಲ್ಲಿರುವ ನನ್ನ ಸ್ನೇಹಿತರು 9 ಮತಗಳನ್ನು ತೆಗೆದುಕೊಳ್ಳುವುದಕ್ಕೆ ಆಗದೇ ನಾವು ಈ ಭಾಗದಲ್ಲಿ ಕುಳಿತಿದ್ದೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಅಧಿಕಾರಕ್ಕೆ ಬರುವ ಮಾರ್ಗವೂ ಮುಖ್ಯವಾಗಿದೆ. ಒಂದೇ ಒಂದು ಸ್ಥಾನದ ಅವಶ್ಯಕತೆ ಇದ್ದಾಗಲೂ ಸಹ ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರು ಅದನ್ನು ಮತ್ತೊಂದು ಕಡೆಯಿಂದ ಪಡೆದುಕೊಳ್ಳುವಂತಹ ಪ್ರಯತ್ನಕ್ಕೆ ಕೈ ಹಾಕಲಿಲ್ಲ ಎನ್ನುವುದು ಈ ದೇಶದ ಚರಿತ್ರೆಯಲ್ಲಿ ಸುವರ್ಣಾಕ್ಷರಗಳಲ್ಲಿ ಬರೆಯಲ್ಪಟ್ಟಿದೆ. ಇದೇ ಮಾರ್ಗ ಮಾನ್ಯ ನರೇಂದ್ರ ಮೋದಿಯವರ ಕಾಲದಲ್ಲಿಯೂ ಸಹ ಮುಂದುವರೆದಿದೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಐವನ್ ಡಿ'ಸೋಜಾರವರು ಕೆಲವೊಂದು ಅಂಶಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ಸಂತೋಷವನ್ನು ವ್ಯಕ್ತಪಡಿಸುತ್ತಿದ್ದೇನೆ. 'ಜನ್‌ಧನ್' ಯೋಜನೆ ಬಗ್ಗೆ ಹೇಳಬೇಕಾದರೆ, ಈ ದೇಶದ ಬಡಜನರಿಗೊಂದು ಅಕೌಂಟ್ ಬೇಕು ಎನ್ನುವ ಯೋಚನೆ ಇವರಿಗೆ ಯಾಕೆ ಬರಲಿಲ್ಲ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಕೇಂದ್ರ ಸರ್ಕಾರ ಕೊಡುವಂತಹ ಎಲ್ಲ ಯೋಜನೆಗಳ ಫಲ ಮಧ್ಯವರ್ತಿಗಳ ಕೈಗೆ ಸೇರದೇ ನೇರವಾಗಿ ಫಲಾನುಭವಿಗಳಿಗೆ ದೊರೆಯಬೇಕೆನ್ನುವ ಉದ್ದೇಶದಿಂದ 40 ಕೋಟಿ ಜನರಿಗೆ ಜನ್‌ಧನ್ ಅಕೌಂಟ್ ತೆರೆಯಲಾಗಿದೆ.

**ಶ್ರೀ ಐವನ್ ಡಿ'ಸೋಜಾಃ–** ಸನ್ಮಾನ್ಯ ಸಭಾಪತಿಯವರೇ, ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಿದ್ದು ನಮ್ಮ ಪಕ್ಷ.

**ಶ್ರೀ ಎಂ.ನಾರಾಯಣಸ್ವಾಮಿಃ–** ಸನ್ಮಾನ್ಯ ಸಭಾಪತಿಯವರೇ, ಶ್ರೀಮತಿ ಇಂದಿರಾಗಾಂಧಿಯವರ ಕಾಲದಲ್ಲಿ ಬ್ಯಾಂಕುಗಳನ್ನು ರಾಷ್ಟ್ರೀಕರಣಕ್ಕೆ ಒಳಪಡಿಸಲಾಯಿತು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಐವನ್ ಡಿ'ಸೋಜಾಃ–** ಸನ್ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರ 'ಜನ್‌ಧನ್' ಯೋಜನೆಯಡಿಯಲ್ಲಿ ಬ್ಯಾಂಕ್ ಅಕೌಂಟ್ ತೆರೆಯುವುದಕ್ಕೆ ಹೇಳಿದೆ. ಆ ರೀತಿ Zero-Balance Savings Account ತೆರೆದವರ ಖಾತೆಗೆ ಮಾನ್ಯ ನರೇಂದ್ರ ಮೋದಿಯವರು 5 ಸಾವಿರ ರೂಪಾಯಿಗಳನ್ನು ಕೊಡುತ್ತಾರೆ ಮತ್ತು ಸ್ವಯಂ ಉದ್ಯೋಗಕ್ಕಾಗಿ 25 ಸಾವಿರ ರೂಪಾಯಿಗಳನ್ನು ಕೊಡುತ್ತಾರೆ ಎನ್ನುವ ಸುಳ್ಳು ಹೇಳಿಕೆಯನ್ನು ನೀಡಿ ಅಕೌಂಟ್‌ಗಳನ್ನು ಓಪನ್ ಮಾಡಿಸಿದರು. Zero-Balance Savings Account ಎಂದು ಹೇಳಿದ್ದರಿಂದ ಅಜ್ಜಿ ತಾತ ಎಲ್ಲರೂ ಮನೆಯಲ್ಲಿ ಇಟ್ಟುಕೊಂಡಿದ್ದ ದುಡ್ಡನ್ನು ಆ ಅಕೌಂಟ್‌ಗೆ ಹಾಕಿದರು. ನಮ್ಮಲ್ಲಿ ಅಕೌಂಟ್ ಓಪನ್ ಮಾಡುವ ಸಂದರ್ಭದಲ್ಲಿ 500 ಅಥವಾ 1000 ರೂಪಾಯಿಗಳನ್ನು ಆ ಅಕೌಂಟ್‌ಗೆ ಹಾಕಿದ್ದರು. ನಂತರ ಕೇಂದ್ರ ಸರ್ಕಾರ to maintain your account, you have to deposit this much of money ಎಂದು ಹೇಳಿ ಅವರ ಖಾತೆಗಳಲ್ಲಿ ಇದ್ದಂತಹ 500 ರೂಪಾಯಿಗಳಲ್ಲಿ 10 ರೂಪಾಯಿ ಅಥವಾ 50 ರೂಪಾಯಿಗಳನ್ನು ಕಳೆದು ಕೊನೆಗೆ ಅವರ ಖಾತೆಯಲ್ಲಿರುವ ಹಣ ಖಾಲಿಯಾದ ಮೇಲೆ 'Your Account is closed' ಎಂದು ನೋಟೀಸ್ ಕೊಟ್ಟರು. ಇದು ಜನರಿಗೆ ಮಾಡಿದ ಮೋಸವಲ್ಲವೇ ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ಎಂ.ನಾರಾಯಣಸ್ವಾಮಿಃ–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮನಮೋಹನ್ ಸಿಂಗ್‌ರವರು ಪ್ರಧಾನ ಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಎನ್.ಆರ್.ಐ.ಜಿ. ಯೋಜನೆಯನ್ನು ಜಾರಿಗೊಳಿಸಿದ ಸಂದರ್ಭದಲ್ಲಿ ಈ ರಾಷ್ಟ್ರದ ಜನರಿಗೆ ಬ್ಯಾಂಕ್ ಅಕೌಂಟ್ ಓಪನ್ ಮಾಡುವಂತೆ ತಿಳಿಸಿದ್ದೆವು. ಈಗ ಇವರು ಅದನ್ನೇ 'ಜನ್‌ಧನ್' ಎಂದು ಮಾಡಿದ್ದಾರೆ.

**ಡಾಃತೇಜಸ್ವಿನಿ ಗೌಡಃ–** ಸನ್ಮಾನ್ಯ ಸಭಾಪತಿಯವರೇ, ಮಾಜಿ ಪ್ರಧಾನಿಗಳಾದ ಮಾನ್ಯ ಮನಮೋಹನ್ ಸಿಂಗ್‌ರವರು ಈ ರಾಷ್ಟ್ರದ ಅತ್ಯುನ್ನತ ಸ್ಥಾನವನ್ನು ಅಲಂಕರಿಸಿದ್ದವರು ಮತ್ತು ಆರ್ಥಿಕ ತಜ್ಞರು ಎನ್ನುವುದರಲ್ಲಿ ಎರಡು ಮಾತಿಲ್ಲ. ಎಲ್ಲಾ ಸಂದರ್ಭಗಳಲ್ಲಿ ಉತ್ತಮ ನಾಯಕರ ಅಭಿಪ್ರಾಯಗಳಿಗೆ ಮತ್ತು ಸೂಚನೆಗಳಿಗೆ ರಾಜಕಾರಣದಲ್ಲಿ ಅವಕಾಶ ಸಿಗುತ್ತದೆಂದು ನಾನು ಭಾವಿಸುವುದಿಲ್ಲ. ಅವರಿಗೆ ಬೆಂಬಲ ಕೊಟ್ಟಿದ್ದ ನಾಯಕರು ವಿದೇಶಕ್ಕೆ ಹೋಗಿ ನಮ್ಮ ದೇಶದ ತೀರ್ಮಾನಗಳನ್ನು ಹರಿದು ಹಾಕಿರುವುದನ್ನು ಪತ್ರಿಕಾಗೋಷ್ಠಿ ನಡೆದಂತಹ ಸಂದರ್ಭದಲ್ಲಿ ನೋಡಿದ್ದೇವೆ. ಈ ರೀತಿ ಯಾರು ವರ್ತಿಸಿದರೂ ಸರಿಯಲ್ಲ ಎಂದು ಹೇಳುವುದಕ್ಕೆ ಬಯಸುತ್ತೇನೆ. ಆ ಸ್ಥಾನಕ್ಕೆ ಗೌರವ ಕೊಡಬೇಕಾಗುತ್ತದೆ. ಯು.ಪಿ.ಎ., ಸರ್ಕಾರ ಅಧಿಕಾರದಲ್ಲಿ ಇದ್ದಂತಹ ಸಂದರ್ಭದಲ್ಲಿ ಸುಮಾರು 70 ಸಾವಿರ ಕೋಟಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೂಪಾಯಿಗಳಷ್ಟು ಸಾಲವನ್ನು ಮನ್ನಾ ಮಾಡಲಾಯಿತು. ಈ ಪ್ರಮಾಣದಲ್ಲಿ ಸಾಲ ಮನ್ನಾ ಮಾಡುವ ಸ್ಥಿತಿ ಯಾಕೆ ನಿರ್ಮಾಣವಾಯಿತು ಎನ್ನುವ ಬಗ್ಗೆ ಚರ್ಚೆ ಮಾಡಬೇಕಾಗಿದೆ. ಈ ದೇಶದ ರೈತನನ್ನು ಭಿಕ್ಷುಕನ ರೀತಿಯಲ್ಲಿ ಚಿತ್ರಿಸುವುದು ಬೇಡ. ಒಬ್ಬ ರೈತನಿಗೆ ಎಷ್ಟು ಬಾರಿ ಪುಕ್ಕಟೆ ಸಾಲವನ್ನು ನೀಡುವುದಕ್ಕೆ ಸಾಧ್ಯ? ಇದಕ್ಕೆ ಬದಲಾಗಿ ಶಾಶ್ವತವಾಗಿ ನೀರಾವರಿ ಯೋಜನೆಗಳನ್ನು ಮಾಡಬೇಕಾಗುತ್ತದೆ. ಇದಕ್ಕೆ ಪ್ರತಿಪಕ್ಷದಲ್ಲಿರುವ ನಾವುಗಳು ಅವರಿಗೆ ಸಹಕಾರವನ್ನು ನೀಡುತ್ತೇವೆ. ನಾವು ಆ ಭಾಗಕ್ಕೆ ಹೋದಾಗ ಅವರು ನಮಗೆ ಸಹಕಾರವನ್ನು ನೀಡಬೇಕಾಗುತ್ತದೆ. ಅವರು ಮಾಡಿರುವ ಕಾಲುವೆಗಳನ್ನು ಅಲ್ಲಿಗೇ ಬಿಟ್ಟು ಹೊಸದಾಗಿ ಕಾಲುವೆಗಳನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ? ಯಾರು ಅಧಿಕಾರಕ್ಕೆ ಬಂದರೂ ಅಭಿವೃದ್ಧಿ ಕೆಲಸಗಳನ್ನು ಮಾಡಬೇಕಾಗುತ್ತದೆ. ರೈತರಿಗೆ ಉತ್ತಮ ಬಿತ್ತನೆ ಬೀಜವನ್ನು ಕೊಡಬೇಕು, ಕಾಳಸಂತೆಯನ್ನು ತಪ್ಪಿಸಬೇಕು ಮತ್ತು ಉತ್ತಮ ಗುಣಮಟ್ಟದ ಗೊಬ್ಬರವನ್ನು ನೀಡಬೇಕಾಗಿದೆ. ಕೇಂದ್ರದಲ್ಲಿ ರಸಗೊಬ್ಬರ ಮಂತ್ರಿಗಳಾದ, ಕರ್ನಾಟಕದವರೇ ಆದ ಮಾನ್ಯ ಅನಂತಕುಮಾರ್‌ರವರು ಬೇವು ಮಿಶ್ರಿತ ಯೂರಿಯಾವನ್ನು ಪರಿಚಯಿಸಿದ್ದಾರೆ.

(ಮುಂದುವರಿದಿದೆ)

(39) 3.7.2018 : 6.30 : ಪಿಕೆ:ಎಂಡಿ

**ಡಾ|| ತೇಜಸ್ವಿನಿ ಗೌಡ (ಮುಂದುವರೆದಿದೆ)**

ಯೂರಿಯಾವನ್ನು ಕಳ್ಳತನದಿಂದ ಫ್ಯಾಕ್ಟರಿಗಳಿಗೆ ಸಾಗಿಸುತ್ತಿದ್ದುದು ತಪ್ಪಿತು. ಭಾರತ ಸರ್ಕಾರ ಇವತ್ತು ನಿರೀಕ್ಷಿತ ಪ್ರಮಾಣದಲ್ಲಿ ರೈತರಿಗೆ ರಸಗೊಬ್ಬರವನ್ನು ಸರಬರಾಜು ಮಾಡುತ್ತಿದೆ. ದಿವಂಗತ ಶ್ರೀಮತಿ ಇಂದಿರಾಗಾಂಧಿಯವರು ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಿದುದರ ಹಿಂದೆ ಸದುದ್ದೇಶ ಇತ್ತು. ಆದರೆ ಸೋರಿಕೆ ಬಗ್ಗೆ ದಿವಂಗತ ಶ್ರೀ ರಾಜೀವ್‌ಗಾಂಧಿ ಒಂದು ಮಾತನ್ನು ಹೇಳಿದ್ದರು. ಆದರೆ ನಾವು ಅದನ್ನು ಟೀಕೆ ಮಾಡುವುದಕ್ಕೆ ಬಳಸಿಕೊಳ್ಳುವುದಿಲ್ಲ. ಕೇಂದ್ರದಿಂದ ಬರುವ ಒಂದು ರೂಪಾಯಿ ಹಣದಲ್ಲಿ ತಲುಪುವುದು ಕೇವಲ ಹದಿನೈದು ಪೈಸೆ ಮಾತ್ರ ಎಂದು ಹೇಳಿದ್ದರು. 85 ಪೈಸೆ ಏನು ಅವ್ಯವಹಾರ ಆಗುತ್ತಿತ್ತೋ ಆ ಪ್ರಸಂಗವನ್ನು ಇಟ್ಟುಕೊಂಡು ಇವತ್ತು ಮಾನ್ಯ ಪ್ರಧಾನ ಮಂತ್ರಿಗಳು 40 ಕೋಟಿ ಜನರ 'ಜನ್‌ಧನ್' ಅಕೌಂಟ್ ತೆರೆಸುವುದರ ಮೂಲಕ ಕೇಂದ್ರದಿಂದ ಬರುವಂತಹ ಸಬ್ಸಿಡಿ ನೇರವಾಗಿ ರೈತರಿಗೆ ತಲುಪುವಂತಹ ಪರಿಣಾಮಕಾರಿ ಯೋಜನೆ ಮಾಡಿದ್ದಾರೆ. ಮಾನ್ಯ ಐವನ್

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಡಿ'ಸೋಜಾರವರು ಮಾತನಾಡುತ್ತಾ, ಅಚ್ಛೇ ದಿನ್ ಯಾವಾಗ ಬರುತ್ತದೆ ಎಂದು ಕೇಳಿದರು. ಮಾನ್ಯ ಸಭಾಪತಿಯವರೇ, ಅಚ್ಛೇ ದಿನ್ ನೋಡುವುದಕ್ಕೆ ಇವರು ಕಣ್ಣೇ ಬಿಡುತ್ತಿಲ್ಲ. ಹಳದಿ ಕನ್ನಡಕ ಹಾಕಿಕೊಂಡು ನೋಡುತ್ತಿದ್ದಾರೆ. ಯಾರೇ ಆಗಿರಲಿ, ಒಬ್ಬ ಕಳ್ಳ ಭಾರತ ದೇಶದ ಹಣವನ್ನು ವಿದೇಶದಲ್ಲಿಟ್ಟು ದೇಶಕ್ಕೆ ವಂಚನೆ ಮಾಡಿದ್ದರೆ ಅವನು ಕಾಂಗ್ರೆಸ್‌ನವನೇ, ಬಿಜೆಪಿಯವನೇ ಅಥವಾ ಜನತಾ ದಳದವನೇ ಎಂದು ನೋಡುವುದಿಲ್ಲ. ಕಳ್ಳ ಕಳ್ಳನೇ ಆಗಿರುತ್ತಾನೆ. ಹೊರಗಡೆ ಇರುವಂತಹ ಕಪ್ಪು ಹಣವನ್ನು ತಂದರೆ ಭಾರತ ದೇಶ ಸುಭಿಕ್ಷೆ ಹೊಂದುತ್ತದೆ, ಭಾರತೀಯರ ಜೀವನ ಸುಧಾರಣೆ ಆಗುತ್ತದೆ. ಇವತ್ತು ರಿಯಲ್ ಎಸ್ಟೇಟ್ ಶೇಕಡ 70 ರಷ್ಟು ಕುಸಿತ ಕಂಡಿದೆ ನಿಜ. 2022ನೇ ಇಸವಿಗೆ ಸರ್ವರಿಗೂ ತಲೆಯ ಮೇಲೆ ಸೂರು ಇರಬೇಕೆಂದು ಭಾರತ ಸರ್ಕಾರ ಹೇಳಿದೆ. ಅದು ಸಾಧ್ಯವಾಗಬೇಕು ಎಂದರೆ ಯಾವುದೇ ಯೋಜನೆಗಳನ್ನು ಪರಿಣಾಮಕಾರಿಯಾಗಿ ತಲುಪಿಸುವಂಥದ್ದು ಆಗಬೇಕು. ನಿಮ್ಮ ಉರಿಯುವ ಮನೆಯಲ್ಲಿ ಗಳ ಎಳೆಯುವಂತಹ ಸಂಸ್ಕೃತಿ ನಮ್ಮದಲ್ಲ. ನೀವು ಒಂದು ಸರ್ಕಾರವನ್ನು ಕೊಟ್ಟಿದ್ದೀರಿ. ಸರ್ಕಾರವನ್ನು ಪರಿಣಾಮಕಾರಿಯಾಗಿ ನಡೆಸಿ. ನಿಮ್ಮ ನಿಮ್ಮ ನಾಯಕರ ಬಗ್ಗೆ ನೀವು ಮಾತನಾಡಬಹುದು, ಆದರೆ ನಾವು ಮಾತನಾಡಬಾರದು ಎಂದು ಹೇಳಿದರೆ ಅದು ಸಾಧ್ಯವಾಗುವಂಥದ್ದಲ್ಲ. ಕಾಂಗ್ರೆಸ್ ಸರ್ಕಾರ ಬಜೆಟ್‌ನ್ನು ಮಂಡಿಸುವ ಮೂಲಕ 2018ರಲ್ಲಿ ಕೊಟ್ಟ ಎಲ್ಲಾ ವಾಗ್ದಾನಗಳನ್ನು ಈಡೇರಿಸದೇ ಪಲಾಯನ ಮಾಡುವುದಕ್ಕೆ ಆಗುವುದಿಲ್ಲ. ನಾವು ಪ್ರತಿಪಕ್ಷದಲ್ಲಿದ್ದುಕೊಂಡು ನೋಡುತ್ತಿರುತ್ತೇವೆ. ನಿಮ್ಮ ಬೆಂಬಲದಿಂದ ಈ ಸರ್ಕಾರ ನಡೆಯುತ್ತಿದೆ. ಕಾಂಗ್ರೆಸ್ ಇಲ್ಲೇನು ಬಜೆಟ್ ಮಂಡಿಸಿದೆಯೋ, ರಾಜ್ಯಕ್ಕೆ ವಾಗ್ದಾನ ಮಾಡಿದೆಯೋ ಆ ಎಲ್ಲಾ ಯೋಜನೆಗಳನ್ನು, ಮಾತುಗಳನ್ನು ಅನುಷ್ಠಾನ ಮಾಡದೇ ಹೋದರೆ ಭಾರತೀಯ ಜನತಾ ಪಾರ್ಟಿ ಸುಮ್ಮನೆ ಕುಳಿತುಕೊಳ್ಳುವುದಿಲ್ಲ. ನೀವು ವಚನವನ್ನು ಕೊಟ್ಟಿದ್ದೀರಿ. ಈಗ ಹೊಸದಾಗಿ ಬಜೆಟ್ ಮಂಡಿಸುವುದು ಬೇಕಾಗಿಲ್ಲ ಎನ್ನುವ ಮಾತನ್ನೂ ನಿಮ್ಮ ನಾಯಕರು ಹೇಳಿದ್ದರು. ಇವತ್ತು ಮತ್ತೊಂದು ಬಜೆಟ್ ಮಂಡಿಸಿ, ಹಿಂದೆ ನೀವು ಮಂಡಿಸಿದ ಬಜೆಟ್‌ನಿಂದ ಹಿಂಜರಿದರೆ ನಾಡಿನ ಜನರಿಗೆ ಮಾಡುವ ಮತ್ತೊಂದು ವಚನ ಭ್ರಷ್ಟತೆ ಆಗುತ್ತದೆ ಎನ್ನುವ ಮಾತನ್ನು ಹೇಳಿ, ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ, ರಾಜ್ಯಪಾಲರ ವಂದನಾ ನಿರ್ಣಯಗಳ ಮೇಲಿನ ನನ್ನ ಮಾತುಗಳಿಗೆ ವಿರಾಮ ಹೇಳುತ್ತೇನೆ, ನಮಸ್ತೇ.

(ಈ ಹಂತದಲ್ಲಿ ಪ್ಯಾನಲ್ ಸದಸ್ಯರಾದ ಮಾನ್ಯ ಕೆ. ಪ್ರತಾಪ್‌ಚಂದ್ರ ಶೆಟ್ಟಿಯವರು ಪೀಠಾಸೀನರಾದರು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಭೋಜೇಗೌಡ (ಶಿಕ್ಷಕರ ಕ್ಷೇತ್ರ)** :- ಮಾನ್ಯ ಸಭಾಪತಿಯವರೇ, ನಾಳೆ ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಬಹಳಷ್ಟು ಜನ ಮಾತನಾಡುವವರಿರುವುದರಿಂದ, ನನಗೆ ಅವಕಾಶ ಸಿಗುತ್ತದೆಯೋ ಇಲ್ಲವೋ ಎನ್ನುವ ಹಿನ್ನೆಲೆಯಲ್ಲಿ ಇವತ್ತು ಮಾತನಾಡಲು ನಿಂತು ಕೊಂಡಿದ್ದೇನೆ.

ನುರಿತ ಮತ್ತು ಅನೇಕ ಮಜಲುಗಳನ್ನು ನೋಡಿದಂತಹ, ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡಿದಂತಹ ಗಣ್ಯರು, ಪಾರ್ಲಿಮೆಂಟ್‌ಗೆ ಹೋಗಿ ಬಂದಿರುವಂತಹ ಗಣ್ಯರು ಇಲ್ಲಿ ಮಾತನಾಡಿದರು. ನಾನು ಹಳ್ಳಿಯಿಂದ ಬಂದವನು. ನಾನು ಮಾತನಾಡುವಾಗ ತಪ್ಪುಗಳಾದರೆ ಮಾನ್ಯ ಸದಸ್ಯರುಗಳು ಕ್ಷಮಿಸಬೇಕು. ನಾನು ಅನೇಕ ವಿಷಯಗಳ ಬಗ್ಗೆ ಕಲಿಯಬೇಕಾಗಿದೆ, ನಡವಳಿಕೆಯ ಪುಸ್ತಕವನ್ನೂ ಸಹ ಸರಿಯಾಗಿ ಓದಿಲ್ಲ. ಮುಂದಿನ ದಿನಗಳಲ್ಲಿ ಅವುಗಳನ್ನು ಓದುತ್ತೇನೆ. ಈಗೇನಾದರೂ ಮಾತನಾಡುವಾಗ ತಪ್ಪಾದರೆ ದಯವಿಟ್ಟು ಮಾನ್ಯ ಸದಸ್ಯರುಗಳು ಕ್ಷಮಿಸಬೇಕೆಂದು ಮೊದಲೇ ವಿನಂತಿ ಮಾಡಿಕೊಳ್ಳುತ್ತೇನೆ.

ಮಾನ್ಯ ಸಭಾಪತಿಯವರೇ, ನಾನು ನೇರವಾಗಿ ವಿಚಾರಕ್ಕೆ ಬರುತ್ತೇನೆ. ರಾಜ್ಯಪಾಲರ ಭಾಷಣದಲ್ಲಿ, ಹೊಸ ಸರ್ಕಾರದ ಹೊಸ ವಿಚಾರಗಳನ್ನು, ಜನರಿಗೆ ನಾವು ಏನು ಕೊಡುತ್ತೇವೆ, ಜನರಿಗೆ ಯಾವರೀತಿ ಸಹಕಾರ ನೀಡುತ್ತೇವೆ, ಹಿಂದೆ ನಮ್ಮ ಚುನಾವಣೆ ಪ್ರಣಾಳಿಕೆಗಳಲ್ಲಿ ಏನು ಹೇಳಲಾಗಿತ್ತೋ ಆ ಎಲ್ಲಾ ಬೇಡಿಕೆಗಳನ್ನು ಈಡೇರಿಸುವಂತಹ ಕೆಲಸ ಮಾಡುವ ನಿಟ್ಟಿನಲ್ಲಿ ಹೇಳಲಾಗಿದೆ. ಆದರೆ ಪೂರ್ಣವಾಗಿ, ಸವಿಸ್ತಾರವಾಗಿ ಅದೆಲ್ಲವನ್ನೂ ತಿಳಿಸಬೇಕು ಎಂದರೆ ಸುಮಾರು 200 ಪುಟಗಳ ಪುಸ್ತಕವಾಗುತ್ತದೆ. ಆದುದರಿಂದ ಇದರಲ್ಲಿ, gist of the programme ಅನ್ನು ಹೇಳಲಾಗಿದೆ. ರೈತರಿಗೆ ಏನೇನು ಕೊಡುತ್ತೇವೆ, ಯಾವರೀತಿ ಸ್ತ್ರೀ ಶಕ್ತಿ ಕೇಂದ್ರಗಳಿಗೆ ಸಹಕಾರ ಮಾಡುತ್ತೇವೆ, ಶಿಕ್ಷಣ ಕ್ಷೇತ್ರದಲ್ಲಿ ಏನು ಸುಧಾರಣೆ ಮಾಡುತ್ತೇವೆ, ಕೃಷಿ ಕ್ಷೇತ್ರದಲ್ಲಿ ಏನೇನು ಮಾಡುತ್ತೇವೆ ಎನ್ನುವ ವಿಚಾರಗಳನ್ನು ಹೇಳಲಾಗಿದೆ. ಈ ಕುರಿತು ನಾನು ಮುಂದಿನ ದಿನಗಳಲ್ಲಿ ಮಾತನಾಡುತ್ತೇನೆ.

ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರದ ಅವಧಿ ಈಗಾಗಲೇ ಮುಗಿಯುತ್ತಾ ಬಂದಿದೆ. 2020ಕ್ಕೆ ನಮ್ಮ ರೈತರ ಆದಾಯ ದ್ವಿಗುಣವಾಗುತ್ತದೆ, ದುಪ್ಪಟ್ಟ ಆಗುತ್ತದೆ ಎಂದು ಹೇಳಿದ್ದಾರೆ. ಅದು ಯಾವರೀತಿ ಆಗುತ್ತದೆ ಎನ್ನುವುದು ಗೊತ್ತಾಗುತ್ತಿಲ್ಲ. ಈಗಿನ ಭಾರತೀಯ ಜನತಾ ಪಕ್ಷದ ಅಧ್ಯಕ್ಷರು ಹಿಂದೆ ಒಂದು ಮಾತನ್ನು ಹೇಳಿದರು. ನನ್ನ ಜೀವಮಾನದಲ್ಲಿ ಕಡೆ ಉಸಿರು ಇರುವವರೆಗೂ ನಾನು ಬಿಜೆಪಿಗೆ ಸೇರುವುದಿಲ್ಲ, ನನ್ನ ಕಾಲಿನ ಪಾದರಕ್ಷೆ ಕೂಡ ಬಿಜೆಪಿ ಕಚೇರಿಗೆ ಹೋಗುವುದಿಲ್ಲ ಎಂಬ ಮಾತನ್ನು ಹೇಳಿದ್ದರು. ಹೇಳಿದ್ದರೋ ಇಲ್ಲವೋ? ಪ್ರತಿ ಪಕ್ಷದ ಸದಸ್ಯರು ಇಂತಹ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದರಿಂದ ನಾನೂ ಕೂಡ ಈ ಮಾತುಗಳನ್ನು ಹೇಳುತ್ತಿದ್ದೇನೆ. ಮತ್ತೆ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಟಿಪ್ಪುಸುಲ್ತಾನ್‌ರಂತೆ ಖಡ್ಗ ಹಿಡಿದು ಮೆರವಣಿಗೆ ಮಾಡಿದ್ದರು. ಆದರೆ ಇವತ್ತು ಟಿಪ್ಪು ಜಯಂತಿ ಆಚರಿಸಬೇಕಾದರೆ ಬಹಳ ವಿರೋಧ ಮಾಡುತ್ತಿದ್ದಾರೆ. ಹಜ್ ಭವನಕ್ಕೆ ಟಿಪ್ಪು ಸುಲ್ತಾನ್‌ನ ಹೆಸರಿಡುವುದಕ್ಕೆ ಹೋದರೆ ಅದಕ್ಕೆ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಏನು ನೈತಿಕತೆ ಇದೆ ಎಂದು ನೀವು ಈ ರೀತಿ ಮಾತನಾಡುತ್ತಿದ್ದೀರಿ? ಬಿಜೆಪಿ ಪಕ್ಷವನ್ನು ಬಿಟ್ಟಿದ್ದ ಮೂರು ಜನ ನಾಯಕರುಗಳಲ್ಲಿ ಇವತ್ತು ಇಬ್ಬರು ಕೇಂದ್ರದಲ್ಲಿ ಮಂತ್ರಿಗಳಾಗಿದ್ದಾರೆ, ಒಬ್ಬರು ಮುಖ್ಯಮಂತ್ರಿಗಳಾಗಿದ್ದರು. ಮಾನ್ಯ ಜಗದೀಶ್ ಶೆಟ್ಟರ್‌ರವರು ಮುಖ್ಯಮಂತ್ರಿಗಳಾಗಿದ್ದಾಗ, ಆ ಸರ್ಕಾರದಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ ಎನ್ನುವ ಮಾತನ್ನೂ ಸಹ ಇವರು ಹೇಳಿದ್ದರು. ಇವತ್ತು ನಮ್ಮ ಬಗ್ಗೆ ಮಾತನಾಡುವುದಕ್ಕೆ ಇವರಿಗೆ ಯಾವ ನೈತಿಕತೆ ಇದೆ? ಮೂರು ಜನ ಯಾರು ಬಿಜೆಪಿಯನ್ನು ಸರ್ವನಾಶ ಮಾಡಲು ಹೊರಟರೋ ಆ ಪೈಕಿ ಇಬ್ಬರು ಕೇಂದ್ರ ಮಂತ್ರಿಗಳಾಗಿದ್ದಾರೆ. ಅವರ ಜೊತೆಯಲ್ಲೇ ಕುಳಿತುಕೊಂಡು ಇವತ್ತು ಎಲ್ಲಾ ವಿಚಾರಗಳನ್ನು ಮಾತನಾಡುತ್ತಿದ್ದಾರೆ. ಮಾನ್ಯ ಸಭಾಪತಿಯವರೇ, ಇವರಿಗೆ ಇರುವ ನೈತಿಕತೆ ಎಂಥದ್ದು ಎನ್ನುವುದರ ಬಗ್ಗೆ ರಾಜ್ಯದ ಜನ ತೀರ್ಮಾನ ಮಾಡುತ್ತಾರೆ.

ಮಾನ್ಯ ಸಭಾಪತಿಯವರೇ, 'ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ' ಎಂದು ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಜಾಹೀರಾತು ಕೊಟ್ಟು ರೈತರನ್ನು ವಂಚಿಸಿದರು. 'ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ' ಇದರ ಮಾಲೀಕರು ಯಾರು? ಅದಾನಿಯವರಿಗೆ ಸೇರಿದ ದೇಶದ ಒಂದು ಭ್ರಷ್ಟ ಕಂಪನಿಯಾದ *Universal Sompo* General Insurance *Co.* Ltd., ಅವರಿಗೆ 'ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ' ಯನ್ನು ಕೊಟ್ಟು ರೈತರ ಮಾರಣ ಹೋಮ ಮಾಡಿದಿರಿ. ಈ ಯೋಜನೆಯಲ್ಲಿ ರೂ. 45 ಸಾವಿರ ಕೋಟಿ ಲೂಟಿ ಮಾಡಲಾಗಿದೆ. ನಾನು ಈ ಮಾತನ್ನು ಎಲ್ಲಿ ಬೇಕಾದರೂ ಹೇಳುತ್ತೇನೆ, ದಾಖಲೆಗಳನ್ನೂ ತರುತ್ತೇನೆ. *Universal Sompo* General Insurance *Co.* Ltd. ಯ ಕಚೇರಿ ಎಲ್ಲಿದೆ ಎನ್ನುವುದನ್ನು ನಮ್ಮ ಮಾನ್ಯ ಸದಸ್ಯರು ಹೇಳಬೇಕು. ಮಾನ್ಯ ಸಭಾಪತಿಯವರೇ, ನಾನೂ ಕೂಡ ಡಿಸಿಸಿ ಬ್ಯಾಂಕ್‌ನ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ಈಗ ಆ ಬ್ಯಾಂಕಿನ ಸದಸ್ಯನಾಗಿ ಕೆಲಸ ಮಾಡುತ್ತಿದ್ದೇನೆ. ನನ್ನ ಸಹೋದರ ಈಗ ಈ ಬ್ಯಾಂಕಿನ ಅಧ್ಯಕ್ಷರಾಗಿದ್ದಾರೆ. ನಮ್ಮ ಬ್ಯಾಂಕಿನಿಂದ ಕೂಡ ರೈತರಿಗೆ ರೂ.೩೦೦ ಕೋಟಿ ಹಣವನ್ನು ಸಾಲದ ರೂಪದಲ್ಲಿ ವಿತರಣೆ ಮಾಡಿದ್ದೇವೆ. ಯಾವ ರೈತರಿಗೆ ನೀವು *interest free loan* ಕೊಟ್ಟಿದ್ದೀರೋ ಅವರಿಗೆ 'ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ' ಅಡಿಯಲ್ಲಿ ರೂ. 1 ಲಕ್ಷಕ್ಕೆ ಶೇಕಡ 7ರಷ್ಟು ಚಾರ್ಜ್ ಮಾಡಲಾಗುತ್ತದೆ. ರೂ. 3 ಲಕ್ಷದವರೆಗೆ ಬಡ್ಡಿರಹಿತ ಸಾಲ ಮತ್ತು ರೂ. 10 ಲಕ್ಷ ಸಾಲಕ್ಕೆ ಶೇಕಡ 3 ರಷ್ಟು ಬಡ್ಡಿ ಹಾಕಲಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮುಂದು . . . )

(040)3-7-2018 6.40 ಡಿಎಸ್-ಎಂಡಿ

**ಶ್ರೀ ಭೋಜೇಗೌಡ :-** (ಮುಂದು)

ಈ ರೀತಿ ಸಾಲವನ್ನು ಕೊಟ್ಟಂಥ ಯೋಜನೆಗೆ, ಇವರು introduce ಮಾಡಿರುವಂತಹ ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಯಲ್ಲಿ 7 ಪರ್ಸೆಂಟ್, ಅಂದರೆ 21 ಪರ್ಸೆಂಟ್ ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆ ತರುವುದರ ಮುಖಾಂತರ ರೈತರ ಮಾರಣ ಹೋಮ ಮಾಡಿದ್ದೀರಿ. ನಮ್ಮಿಂದ ಹಣವನ್ನು ಸಂಗ್ರಹ ಮಾಡಿದ್ದೀರಿ. ಆ ಹಣ ಎಲ್ಲಿಗೆ ಹೋಯಿತು? ಆ ಆಫೀಸ್ ಎಲ್ಲಿದೆ? ರೈತರು ಯಾರನ್ನು ಕೇಳಬೇಕು? ಯಾವ ಸಂದರ್ಭದಲ್ಲಿ ರೈತ ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಗೆ ಹಣ ಹಾಕುತ್ತಾನೆ? ಆಲಿಕಲ್ಲು ಮಳೆ ಸುರಿದು ರೈತನ ಬೆಳೆ ನಷ್ಟವಾದಾಗ; ಯಾವ ಸಂದರ್ಭದಲ್ಲಿ ರೈತ ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಯಡಿ ವಿಮೆಯ ಹಣ ಪಡೆಯಬಹುದು ಎನ್ನುವುದಕ್ಕೆ clause ನಲ್ಲಿ ವಿವರಗಳಿವೆ. ಅದನ್ನು ಮುಂದಿನ ಬಾರಿ ತರುತ್ತೇನೆ. Landslide ಆದಾಗ cloudburst ಆದಾಗ ನಮಗೆ ಕುಡಿಯುವುದಕ್ಕೆ ನೀರು ಇರಲಿಲ್ಲ. ಮಾನ್ಯ ಕುಮಾರಸ್ವಾಮಿಯವರು ಸರ್ಕಾರ ರಚನೆ ಮಾಡಿದಾಗ ಮಳೆಯಲ್ಲಿಯೇ ಪ್ರಮಾಣ ವಚನವನ್ನು ಸ್ವೀಕಾರ ಮಾಡಿದ್ದಾರೆ, ಅವರಿಗೆ ಬೆಂಬಲಿಗರು ಮಳೆಯಲ್ಲಿಯೇ ಜೈಕಾರ ಮಾಡಿದ್ದಾರೆ. ಇವತ್ತು ಕೆರೆಕಟ್ಟೆಗಳೆಲ್ಲಾ ತುಂಬುತ್ತಿವೆ. ಆಲಿಕಲ್ಲು ಮಳೆ, cloud burst ಎಲ್ಲಾದರೂ ಉಂಟೇ ಸ್ವಾಮಿ? Cloudburst or landslide north-eastern states ನಲ್ಲಿ ಆಗುವಂಥದ್ದು. ನಮ್ಮಲ್ಲಿ ಎಲ್ಲಿ ಆಗುತ್ತದೆ? ನಮ್ಮಲ್ಲಿ ಕುಡಿಯುವುದಕ್ಕೆ ನೀರು ಇಲ್ಲದೆ ಜನರು ಸತ್ತು ಹೋಗುತ್ತಿದ್ದಾರೆ, ದನಗಳು ಸತ್ತು ಹೋಗಿವೆ. ಇಂತಹ clause ಹಾಕಿ ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಯನ್ನು ತಂದು ಈ ದೇಶದ ರೈತರಿಗೆ ಕೊಟ್ಟಿದ್ದಾರೆಲ್ಲಾ ರೈತರ ಬಗ್ಗೆ ಮಾತನಾಡುವುದಕ್ಕೆ ಇವರಿಗೆ ಯಾವ ನೈತಿಕತೆ ಇದೆ?

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಮಾನ್ಯ ಕುಮಾರಸ್ವಾಮಿಯವರ ಕಾಲ ಗುಣದಿಂದ ಮಳೆ ಬಂದಿರುವುದು ನಮಗೆ ಗೊತ್ತಾಯಿತು. ಕಳೆದ ಬಾರಿ ಬರಗಾಲ ಬಂದಿತ್ತು, ಅದು ಯಾರ ಕಾಲ ಗುಣದಿಂದ ಎನ್ನುವುದನ್ನು ನಮಗೆ ಜ್ಞಾನೋದಯ ಮಾಡಿಸಿಬಿಟ್ಟರೆ ತುಂಬಾ ಒಳ್ಳೆಯದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪ್ರಿಯಾಂಕ್ ಖರ್ಗೆ(ಸಮಾಜ ಕಲ್ಯಾಣ ಸಚಿವರು)**:- ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರ ಈಗ *NDRF* (National Disaster Response Fund) norms ಬದಲಾವಣೆ ಮಾಡಿಬಿಟ್ಟಿದೆ. ಈಗ ಎಲ್ಲೂ ಬರಗಾಲ ಬರುವ ಹಾಗೆಯೇ ಇಲ್ಲ. 50 ಪರ್ಸೆಂಟ್ ಎಂದು ಹೇಳಿಬಿಟ್ಟಿದ್ದಾರೆ. ಯಾರು claim ಮಾಡುವ ಹಾಗಿಲ್ಲ; ಬರ ಬರುವ ಹಾಗಿಲ್ಲ, ಅತಿವೃಷ್ಟಿಯೂ ಆಗುವ ಹಾಗಿಲ್ಲ. ಅವರು ರೈತರ ಪರ ಹೇಗಿದ್ದಾರೆ ಎನ್ನುವುದು ನನಗೆ ಆಶ್ಚರ್ಯವಾಗುತ್ತಿದೆ. ಅವರು ಇಷ್ಟೊಂದು ಹೇಳುತ್ತಿದ್ದಾರಲ್ಲಾ, ಮೊದಲನೆ ಬಾರಿಗೆ ಮೇಡಮ್‌ನವರು ಮಾತನಾಡಬೇಕಾದರೆ ತಮಿಳುನಾಡು ರೈತರು ದೆಹಲಿಯಲ್ಲಿ ಬೆತ್ತಲೆ ಪ್ರತಿಭಟನೆ ಮಾಡಿದ್ದಾರೆ. ಮಹಾರಾಷ್ಟ್ರದ 30,000 ರೈತರು ಮುಂಬಯಿಯಲ್ಲಿ ಪ್ರತಿಭಟನೆ ಮಾಡಿದ್ದಾರೆ. Central Relief Fund ನ rotating fund ನಮ್ಮ ರಾಜ್ಯಕ್ಕೆ ಇನ್ನು ಬಂದಿಲ್ಲ. ಕೇಂದ್ರ ಸರ್ಕಾರ ರೈತರ ಪರವಾಗಿದೆ ಎಂಬುದನ್ನು ಮಾನ್ಯ ಸದಸ್ಯರು ಹೇಗೆ ಸಮರ್ಥನೆ ಮಾಡಿಕೊಳ್ಳುತ್ತಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಬರ, ಅತಿವೃಷ್ಟಿ ಪ್ರಕೃತಿ ನಿಯಮದ ಪ್ರಕಾರ ಆಗುತ್ತದೆ. ಆದರೆ norms ನ್ನು ನಾವೇ ನಿರ್ಣಯ ಮಾಡಬೇಕಲ್ಲವೆ? *NDRF* norms ಬದಲಾವಣೆ ಮಾಡಿಬಿಟ್ಟರೆ ಬರ ಎಲ್ಲಿಂದ ಬರುತ್ತದೆ? ಬರ ಘೋಷಣೆ ಮಾಡುವ ನಿಯಮಗಳನ್ನೇ ಕೇಂದ್ರ ಸರ್ಕಾರ ಬದಲಾವಣೆ ಮಾಡಿಬಿಟ್ಟಿದೆ.

**ಶ್ರೀ ಭೋಜೇಗೌಡ**:- ಮಾನ್ಯ ಸಭಾಪತಿಯವರೇ, ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಯಲ್ಲಿ ಒಂದು ಮಾತನ್ನು ಹೇಳುತ್ತಾರೆ. ಪಕ್ಷವನ್ನು ಪ್ರತಿನಿಧಿಸತಕ್ಕಂಥವರಿಗೆ ನಿಜವಾದ ರೈತ ಕಾಳಜಿ ಇದ್ದರೆ ದಯಮಾಡಿ ಆ clause ಗಳನ್ನೆಲ್ಲಾ ತೆಗೆಯಬೇಕೆಂದು ಕೇಳಿಕೊಳ್ಳುತ್ತೇನೆ. ಪ್ರತಿ ಪಂಚಾಯಿತಿಯಲ್ಲಿ Rain Gauge ಹಾಕಬೇಕೆಂದು ಹೇಳುತ್ತಾರೆ. ರಾಜ್ಯದ ಯಾವ ಊರಿನಲ್ಲಿ Rain Gauge ಇದೆ ಎಂಬುದನ್ನು ಮೂಲೆ ಮೂಲೆಯಲ್ಲಿ ಆರಿಸಿ ಬಂದಿದ್ದಾರಲ್ಲಾ ಅವರು ಹೇಳಲಿ. ಎಷ್ಟು ಮಳೆ ಆಯಿತು ಅದರ ಮೇಲೆ ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಯಲ್ಲಿ ರೈತರಿಗೆ ವಿಮೆ ಕೊಡುವುದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು)**:- ಮಾನ್ಯ ಸಭಾಪತಿಯವರೇ, ಅವರು ಕೇಂದ್ರ ಸರ್ಕಾರದ ಯೋಜನೆಗಳ ಬಗ್ಗೆ ಟೀಕೆ ಮಾಡಲಿ, ಅದನ್ನು ನಾವು ಗೌರವಿಸುತ್ತೇವೆ. ಅದನ್ನು ಬಿಟ್ಟು ಅವರು ಬಾಯಿಗೆ ಬಂದ ಹಾಗೆ ಮಾತನಾಡಬಾರದು.

**ಶ್ರೀ ಭೋಜೇಗೌಡ**:- ಮಾನ್ಯ ಸಭಾಪತಿಯವರೇ, ತಾವು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರು ಎದ್ದು ನಿಂತಾಗ ಮಾನ್ಯ ಸದಸ್ಯರು yield ಆಗಬೇಕು. ಆ ಬಗ್ಗೆ ತಾವು ಅವರಿಗೆ ಆದೇಶ ಮಾಡಬೇಕೆಂದು ನಾನು ವಿನಂತಿ ಮಾಡುತ್ತೇನೆ. ಇದೇನು ಜಗಳ ಸಭೆ ಎಂದುಕೊಂಡಿದ್ದಾರೆಯೇ?

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೊಸ ಸದಸ್ಯರಾಗಿರುವುದರಿಂದ ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

(ಗೊಂದಲ)

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರು ಎದ್ದು ನಿಂತಾಗ ಮಾತನಾಡುವುದಕ್ಕೆ ಅವಕಾಶ ಕೊಡಬೇಕೆಂದು ನಿಯಮದಲ್ಲಿದೆ.

**ಸಭಾಪತಿಯವರು:-** ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಮಾತನಾಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಕಾಗೋಡು ತಿಮ್ಮಪ್ಪನವರು ಕಂದಾಯ ಮಂತ್ರಿಗಳಾಗಿದ್ದಾಗ ಇದೇ ಸದನದಲ್ಲಿ ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಯ ಬಗ್ಗೆ ಪ್ರಸ್ತಾಪವಾದಾಗ ಮತ್ತು ಅತಿವೃಷ್ಟಿ ಅನಾವೃಷ್ಟಿಯಂತಹ ಪ್ರಕೃತಿ ವಿಕೋಪದಿಂದಾಗಿ ಕೇಂದ್ರ ಸರ್ಕಾರದಿಂದ ಹಣ ಬಂತು ಎಂದು ನಾನು ಚರ್ಚೆ ಮಾಡಿದೆ. ಕಾಗೋಡು ತಿಮ್ಮಪ್ಪನವರು ಎರಡೂವರೆ ಸಾವಿರ ಕೋಟಿ ರೂಪಾಯಿ ಹಣ ಬಂದಿದೆ. ಬೇರೆ ಬೇರೆ ಕಾರಣದಿಂದಾಗಿ ವಿತರಣೆ ಮಾಡುವುದಕ್ಕೆ ಕೆಲವು guidelines ನಿಂದ ನಮಗೆ ತೊಂದರೆ ಆಯಿತು, ದಯವಿಟ್ಟು ಕ್ಷಮಿಸಿ ಅದನ್ನು ನಾವು ಪೂರ್ಣಗೊಳಿಸುತ್ತೇವೆಂದು ಹೇಳಿದರು. ನಾವು ವಾಸ್ತವಿಕತೆಯನ್ನು ಮರೆಯಬಾರದು. ಕೇಂದ್ರ ಸರ್ಕಾರ ಅವರದ್ದು ಇತ್ತು, ನಮ್ಮದು ಇದೆ. ಆದರೆ ಮಾತನಾಡುವಾಗ ವಿಷಯದ ಮೇಲೆ ಮಾತನಾಡಿ, ವಿಚಾರಗಳು ತಪ್ಪಾಗಿದ್ದರೆ ಹೇಳಿ. ಯಾವುದೋ ಸಂದರ್ಭದಲ್ಲಿ ನಾನು ಮಾತನಾಡುವಾಗ ಅವರ ಕಡೆಯಿಂದ ತಪ್ಪಾಗಿದೆ ಎಂದು ಹೇಳಿದೆ. ಮಾನ್ಯ ಬೈರೇಗೌಡರು ಅದನ್ನು ಒಪ್ಪಿಕೊಂಡು ಸರಿ ಮಾಡಿಕೊಳ್ಳುತ್ತೇವೆಂದು ಹೇಳಿದರು. ಅದು ಬಿಟ್ಟು 'ಉಡಾಫೆ' ಮಾತನಾಡಿದರೆ ನಮಗೆ ಸಹಿಸಿಕೊಳ್ಳುವುದಕ್ಕೆ ಶಕ್ತಿ ಇಲ್ಲ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಭೋಜೇಗೌಡ**:- ಮಾನ್ಯ ಸಭಾಪತಿಯವರೇ, 'ಉಡಾಫೆ' ಮಾತನಾಡಿಲ್ಲ. Give me time. I will come with the documents.

(ಗೊಂದಲ)

**(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರೂ ಒಳಗೊಂಡಂತೆ ಎಲ್ಲ ಸದಸ್ಯರು ಸದನದ ಬಾವಿಗೆ ಬಂದರು)**

**ಶ್ರೀ ಭೋಜೇಗೌಡ**:- ನೀವು ರೈತರಿಗೆ ಮೋಸ ಮಾಡಿಲ್ಲವೆ?

**ಸಭಾಪತಿಯವರು**:- ಮಾನ್ಯ ಪ್ರಿಯಾಂಕ ಖರ್ಗೆಯವರೇ, ತಾವು ಕುಳಿತುಕೊಳ್ಳಿ. ಸದನದ ಬಾವಿಯಲ್ಲಿರುವವರು ಯಾರು ಮಾತನಾಡಬಾರದು. ಬಾವಿಯಲ್ಲಿ ಸುಮ್ಮನಿರಬೇಕು. ಮಾನ್ಯ ಭೋಜೇಗೌಡರೇ, ತಾವು ಮಾತನಾಡಿ.

**ಶ್ರೀ ಭೋಜೇಗೌಡ**:- ಮಾನ್ಯ ಸಭಾಪತಿಯವರೇ, ನಾನು ಇರುವಂತಹ ವಿಚಾರಗಳನ್ನು ಸದನದ ಮುಂದಿಟ್ಟಿದ್ದೇನೆ; ಈ August House ನಲ್ಲಿ ಹೇಳಿದ್ದೇನೆ.

**(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರು ಬಾವಿಯಿಂದ ತಮ್ಮ ಸ್ಥಾನಕ್ಕೆ ತೆರಳಿದರು)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೇ,......

**ಸಭಾಪತಿಯವರು**:- ವಿರೋಧ ಪಕ್ಷದ ನಾಯಕರೇ, ನೀವು ಬಾವಿಗೆ ಹೋದ ನಂತರ ಮತ್ತೆ ತಿರುಗಿ ಬಂದು ಮಾತನಾಡುವ ಅವಶ್ಯಕತೆ ಇಲ್ಲ. ಬಾವಿಯಲ್ಲಾದರೂ ಇರಿ ಅಥವಾ ಹೊರಗಾದರೂ ಇರಿ. ನೀವು ಹಿಂದಿನದು ಹೇಳಬೇಡಿ, ನಾನು ಇವತ್ತಿನದು ಹೇಳುತ್ತಿದ್ದೇನೆ. ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಒಂದೊಂದು ಸಲ ರಾಜಕಾರಣ ಮಾತನಾಡಬೇಕಾಗುತ್ತದೆ. ನೀವೂ ಮಾತನಾಡುತ್ತೀರಿ, ಅವರೂ ಮಾತನಾಡುತ್ತಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೇ, ರಾಜಕಾರಣ ಮಾತನಾಡೋಣ. ಆದರೆ ಈ ರೀತಿ ಟೀಕೆ ಮಾಡಬಾರದು. ಒಂದು ಯೋಜನೆಯ ಬಗ್ಗೆ ಅಪಹಾಸ್ಯದ ಮಾತುಗಳನ್ನು ಕೇಳುವುದಕ್ಕಾಗುವುದಿಲ್ಲ.

**ಸಭಾಪತಿಯವರು**:- ನಾನು ನೋಡುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೇ, ದಯವಿಟ್ಟು ಅದನ್ನು ಕಡತದಿಂದ ತೆಗೆದು ಹಾಕಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ನಾನು ಹೇಳುವುದನ್ನು ಕೇಳುವುದಕ್ಕೆ ನಿಮಗೆ ಪುರಸತ್ತು ಇಲ್ಲವೆಂದರೆ ನಾನು ಹೇಗೆ ಹೇಳಲಿ? ಬೆಳಗ್ಗೆ ನೀವೇ complaint ಮಾಡಿದಾಗ ಅದನ್ನು ಕಡತದಿಂದ ತೆಗೆಯಬೇಕೋ ಬೇಡವೋ ಎಂದು ನಾನು ನಡವಳಿಗಳನ್ನು ತರಿಸಿ ನೋಡಿದ್ದೇನೆ. ನಾನು ಹೇಳುವುದೇನೆಂದರೆ, ಸದನ ನಡೆಯಬೇಕು. ಸದನದಲ್ಲಿ ಎಲ್ಲರೂ ಸರಿಯಾಗಿ ಮಾತನಾಡಬೇಕೆಂಬುದನ್ನು ನಾನು ಒಪ್ಪುತ್ತೇನೆ. ಒಬ್ಬರಿಗೆ ನೋವು ಆಗದ ರೀತಿಯಲ್ಲಿ ಮಾತನಾಡಬೇಕೆಂದು ನಾನು ಹೇಳುತ್ತಿದ್ದೇನೆ. ತಾವು ಒಮ್ಮಿಂದೊಮ್ಮೆಗೆ ಬಾವಿಗೆ ಬಂದರೆ ಅದು ಸರಿಯಲ್ಲ. ನಾನು ತೀರ್ಮಾನ ಮಾಡಿದ ನಂತರ ತಾವು ಬಾವಿಗೆ ಬರಬೇಕು. ನಾನು ತೀರ್ಮಾನವೇ ಮಾಡಿಲ್ಲ ನೀವು ಬಾವಿಗೆ ಬಂದರೆ ಹೇಗೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಪೀಠದಲ್ಲಿ ಕುಳಿತುಕೊಂಡಿರುವವರು ನಮಗೆ ಸರಿಯಾಗಿ ನ್ಯಾಯ ಕೊಡಲಿಲ್ಲ. ಅದಕ್ಕೋಸ್ಕರ ಅನಿವಾರ್ಯವಾಗಿ ಬಾವಿಗೆ ಬಂದೆವು.

**ಸಭಾಪತಿಯವರು:-** ತಾವು ಸ್ವಲ್ಪ ಸಮಾಧಾನದಿಂದ ಇರಬೇಕು. ಇನ್ನು 15 ಮಂದಿ ಮಾತನಾಡುವವರು ಇದ್ದಾರೆ. ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಕೊಡಬೇಕಾಗಿದೆ. ಮಾತನಾಡುವಾಗ ತೀವ್ರ ಘರ್ಷಣೆಗಳಾಗುತ್ತವೆ. ಅದನ್ನು ನಾನು ನೋಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಎಲ್ಲರೂ ಮಾತನಾಡಿದ್ದಾರೆ. ನಾವು ಸ್ವೀಕಾರ ಮಾಡಿದ್ದೇವೆ. ಆದರೆ ಈ ರೀತಿ ಮಾತನಾಡುತ್ತಾರೆಯೇ? ಬೀದಿ ಜಗಳಕ್ಕೂ ಸದನದ ಜಗಳಕ್ಕೂ ಏನು ವ್ಯತ್ಯಾಸ? ಈ ರೀತಿ ಬೆಂಬಲ ಕೊಡುತ್ತಾ ಹೋದರೆ ಹೇಗೆ? ಅವರ ಮುಖಂಡರು ಅವರಿಗೆ ಹೇಳಬೇಕಾಗುತ್ತದೆ. ವಯಸ್ಸು ಯಾರಿಗೂ ಕಡಿಮೆಯಾಗಿಲ್ಲ. ಇದು 'ಉಡಾಫೆ' ಮಾತಲ್ಲವೇ?

(ಗೊಂದಲ)

**ಶ್ರೀ ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಅವರಿಂದ ಕಲಿಯಬೇಕಾಗಿಲ್ಲ. 'ಉಡಾಫೆ' ಮಾತು ಹೇಗೆ ಆಗುತ್ತದೆ? ದಯಮಾಡಿ ಇದನ್ನು ಕಡತದಿಂದ ತೆಗೆದು ಹಾಕಬೇಕು.

**ಸಭಾಪತಿಯವರು:-** ಮಾನ್ಯ ಭೋಜೇಗೌಡರೇ, ತಾವು ಎಷ್ಟು ಸಲ ಮಧ್ಯೆ ಎದ್ದು ನಿಂತು ಮಾತನಾಡುತ್ತೀರಿ?

**ಶ್ರೀ ಎನ್.ಎಚ್.ಶಿವಶಂಕರ ರೆಡ್ಡಿ (ಕೃಷಿ ಸಚಿವರು):-** ಮಾನ್ಯ ಸಭಾಪತಿಯವರೇ, ಯಾರು ಕೂಡ ಅಸಭ್ಯವಾದ ಪದಗಳನ್ನು ಬಳಸಿಲ್ಲ. ಸಂಸದೀಯ ನಡವಳಿಕೆಯಲ್ಲಿ ಏನು ಮಾತನಾಡಬೇಕೋ ಅದನ್ನು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾತನಾಡಿದ್ದಾರೆ. ಮಾನ್ಯ ತೇಜಸ್ವಿನಿ ಗೌಡರವರು ಕೂಡ ಮಾತನಾಡಿದ್ದಾರೆ, ಸಂಸದೀಯ ಭಾಷೆಯಲ್ಲಿಯೇ ಮಾತನಾಡಿದ್ದಾರೆ. ಹಾಗೆಯೇ ಅವರೂ ಮಾತನಾಡುತ್ತಿದ್ದರು. ಯಾರು ಕೂಡ ಅಸಂಸದೀಯ ಪದಗಳನ್ನು ಬಳಸಿಲ್ಲ. ಎಲ್ಲರೂ ವಾಸ್ತವಾಂಶವನ್ನೇ ಮಾತನಾಡಿದ್ದಾರೆ.

(ಮುಂದು)

(ಸಭಾಪತಿಯವರ ಉಪಸ್ಥಿತಿ)

(41) 6.50 ಬಿಕೆಪಿ 3-7-18

(ಗೊಂದಲ)

**ಸಭಾಪತಿಯವರು:-** ನಾನು ಕಡತವನ್ನು ನೋಡುತ್ತೇನೆ. ಆಕಸ್ಮಾತ್ ಅದು ಏನಾದರೂ ಹೊರಗಡೆ ಇದ್ದರೆ, ಖಂಡಿತವಾಗಿಯೂ ಅದನ್ನು ನಾನು ಕಡತದಿಂದ ತೆಗೆಯುತ್ತೇನೆ. ಸಂವಿಧಾನವನ್ನು ಬಿಟ್ಟು ಬೇರೆ ಏನಾದರೂ ಮಾತನಾಡಿದ್ದರೆ, ಅದನ್ನು ನಾನು ಒಪ್ಪಲಿಕ್ಕೆ ಸಾಧ್ಯವೇ ಇಲ್ಲ. ಅದಕ್ಕೋಸ್ಕರ, ನೀವು ಬಾವಿಯೊಳಗಡೆ ಹೋಗಿ ಕುಳಿತುಕೊಳ್ಳಬೇಡಿ.

**ಶ್ರೀ ಕೋಟಾ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ತಾವು ನಮ್ಮ ರಕ್ಷಣೆಗೆ ಬರಬೇಕು. ಈ ವಿಚಾರದಲ್ಲಿ ತಾವು ಆದೇಶವನ್ನು ಕೊಡಬೇಕಲ್ಲವೇ? ನಿಮ್ಮ ಆದೇಶವನ್ನು ಅವರು ಪಾಲನೆ ಮಾಡಲಿಲ್ಲವೆಂದರೆ ನಾವು ಏನು ಮಾಡಬೇಕು.

**ಸಭಾಪತಿಯವರು:-** ತಾವು ಸ್ವಲ್ಪ ಕೇಳಿ. ಮಾತನಾಡುವಾಗ ಮಾನ್ಯ ಸದಸ್ಯರುಗಳಿಗೆ ಗೊತ್ತಾಗುವುದಿಲ್ಲ. ಮಾತನಾಡಿದಾಗ ಅದು ಕಡತಕ್ಕೆ ಹೋಗುತ್ತದೆ. ಕಡತದಲ್ಲಿ ಅಸಂವಿಧಾನ ಪದಗಳು ಇದ್ದರೆ ಖಂಡಿತವಾಗಿಯೂ ಸಹ ಅದರ ಬಗ್ಗೆ ಕ್ರಮ ತೆಗೆದುಕೊಂಡು, ಅದರ ಬಗ್ಗೆ ತಮಗೆ ತಿಳಿಸುತ್ತೇನೆ. ಅಲ್ಲಿಯವರೆಗೆ ತಾವು ಸಮಾಧಾನವಾಗಿರುವುದನ್ನು ಕಲಿಯಿರಿ. ಆದ್ದರಿಂದ, ಬಾಯಿಯಿಂದ ಹೊರಗಡೆ ಬನ್ನಿ. ತಮ್ಮ ಸದಸ್ಯರುಗಳಿಗೆ ಹೊರಗಡೆ ಬರಲಿಕ್ಕೆ ಹೇಳಿ.

**ಶ್ರೀ ಕೋಟಾ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ತಾವು ಸರ್ಕಾರಕ್ಕೆ ಹೇಳಿ.

(ಗೊಂದಲ)

ಸಭಾಪತಿಯವರು:- ಎಲ್ಲರೂ ಕುಳಿತುಕೊಳ್ಳಿ, ನಾನು ಹೇಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟಾ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಈ ಭಾಗದಲ್ಲಿ ಇದ್ದಂತಹ ಸಂದರ್ಭದಲ್ಲಿ ತಾವು ಏನು ನಮಗೆ ಹೇಳುತ್ತಿದ್ದೀರಿ?

(ಗೊಂದಲ)

ಸಭಾಪತಿಯವರು:- ನಾನು ಕಡತವನ್ನು ನೋಡಿ ಸರಿಯಾದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುತ್ತೇನೆ. ಸರಿಯಾಗಿದ್ದರೆ ಸರಿ ಎಂದು ಹೇಳುತ್ತೇನೆ. ತಪ್ಪು ಇದ್ದರೆ ಅದನ್ನು ಕಡತದಿಂದ ತೆಗೆಯುತ್ತೇನೆ. ಇದಕ್ಕಿಂತ ಹೆಚ್ಚಿಗೆ ನಾನು ಹೇಳಲಿಕ್ಕೆ ಸಾಧ್ಯವಿಲ್ಲ.

ಶ್ರೀ ಕೋಟ ಶ್ರೀನಿವಾಸ ಪೂಜಾರಿ:- ನೀವು ಈ ಪೀಠದಲ್ಲಿದ್ದಾಗ, ನಾವು ಆಡಳಿತ ಪಕ್ಷದಲ್ಲಿದ್ದಾಗ ನೀವೇ ನಮಗೆ ಹೇಳುತ್ತಿದ್ದೀರಿ. ಆಡಳಿತ ಪಕ್ಷದಲ್ಲಿರುವ ತಾವುಗಳು ಸ್ವಲ್ಪ ತಾಳ್ಮೆಯಿಂದ ಕೇಳಿ ಎಂದು ಹೇಳುತ್ತಿದ್ದೀರಿ. ಇದು ಆ ರೀತಿಯಲ್ಲಿ ಇಲ್ಲ. ಬೀದಿಯಲ್ಲಿ ಮಾತನಾಡಿದಂತೆ ಸದಸ್ಯರು ಮಾತನಾಡುತ್ತಿದ್ದಾರೆ. ನೀವು ಹೇಳಿದ ರೀತಿಯಲ್ಲಿ ಅವರು ಕೇಳಲಿಲ್ಲವೆಂದರೆ ನಾವು ಏನು ಮಾಡಬೇಕೆಂದು ಹೇಳಬೇಕು.

ಸಭಾಪತಿಯವರು:- ಅದಕ್ಕೆ ರೆಮಿಡಿ ಏನೆಂದು ತಾವೇ ಹೇಳಿ. ಒಂದು ವೇಳೆ ಅವರು ಅಸಂವಿಧಾನವಾಗಿ ಮಾತನಾಡಿದ್ದಾರೆಂದು ತಿಳಿದುಕೊಳ್ಳಿ. ಅದಕ್ಕೆ remedy ಏನು?

ಶ್ರೀ ಕೋಟ ಶ್ರೀನಿವಾಸ ಪೂಜಾರಿ:- ಮಾನ್ಯ ಸಭಾಪತಿಯವರೇ, ಅವರಿಗೆ ಎಚ್ಚರಿಕೆ ಕೊಡುವುದು ನಿಮ್ಮ ಜವಾಬ್ದಾರಿ.

ಸಭಾಪತಿಯವರು:- ಕಡತವನ್ನು ನೋಡದೇ ಅವರಿಗೆ ಹೇಗೆ ಹೇಳಲಿಕ್ಕೆ ಸಾಧ್ಯ? ಕಡತವನ್ನು ನೋಡಿ, ಅವರು ಸಂವಿಧಾನಾತ್ಮಕವಾಗಿ ಮಾತನಾಡಿರುವುದಾದರೆ, ಅದರ ಬಗ್ಗೆ ನಾವು ಏನಾದರೂ ಹೇಳಬಹುದು. ಅವರು within the purview of the rule ಮಾತನಾಡಿದ್ದರೆ ನಾವು ಏನು ಮಾಡಲಿಕ್ಕೆ ಸಾಧ್ಯ? ನಾವು ಕಡತವನ್ನು ನೋಡೋಣ.

ಶ್ರೀ ಕೋಟ ಶ್ರೀನಿವಾಸ ಪೂಜಾರಿ:- ಮಾನ್ಯ ಸಭಾಪತಿಯವರೇ, ನಾವು ರಾಜ್ಯ ಸರ್ಕಾರವನ್ನು ಟೀಕೆ ಮಾಡುತ್ತೇವೆ. ಅದರ ಬಗ್ಗೆ ಅರೋಗ್ಯಕರವಾಗಿ ಚರ್ಚೆ ಮಾಡಬೇಕು. ನಾನು ಹತ್ತಾರು ಬಾರಿ ನಮ್ಮ ಸದಸ್ಯರಿಗೆ ಹೇಳುತ್ತಾರೆ. ನಾನು ಈ ವಿಚಾರವಾಗಿ ತಮ್ಮ ಪೀಠಕ್ಕೂ ಕೂಡ ಹೇಳಿದ್ದೇನೆ. ಆದ್ದರಿಂದ, ತಾವು ಅವರಿಗೆ ಎಚ್ಚರಿಕೆಯನ್ನು ಕೊಡಬೇಕು. ಇಲ್ಲವೆಂದರೆ ನಾವು ಸದನದಲ್ಲಿ ಏನು ಮಾಡಬೇಕು?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಭಾಪತಿಯವರು:- ನೀವು ಮಾತನಾಡಬೇಡಿ ಎಂದು ಹೇಳಿ, ನಾನು ಅವರಿಗೆ ಕುಳ್ಳಿರಿಸಿದ್ದೇನೆ. ನಾನು ಈ ಬಗ್ಗೆ ಹೇಳುತ್ತೇನೆ. ನಾನು ಹೇಳುವವರೆಗಾದರೂ ನಿಮಗೆ ಸಮಾಧಾನ ಬೇಕಲ್ಲವೇ?

ಶ್ರೀ ಕೋಟ ಶ್ರೀನಿವಾಸ ಪೂಜಾರಿ:-ಅಡ್ಡಿಯಿಲ್ಲ, ನಮ್ಮ ಸದಸ್ಯರೆಲ್ಲರೂ ಬಾವಿಯಿಂದ ಹೊರಗಡೆ ಬನ್ನಿ.

ಡಾ॥ ಜಯಮಾಲ ರಾಮಚಂದ್ರ(ಸಭಾ ನಾಯಕರು):- ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಾಗ “ಉಡಾಫೆ” ಎನ್ನುವ ಪದವನ್ನು ಬಳಕೆ ಮಾಡಿದ್ದಾರೆ. ಅದನ್ನು ಕಡತದಿಂದ ತೆಗೆದು ಹಾಕಬೇಕು.

ಶ್ರೀ ಕೋಟ ಶ್ರೀನಿವಾಸ ಪೂಜಾರಿ:- ಮಾನ್ಯ ಸಭಾಪತಿಯವರೇ, ಒಂದು ವೇಳೆ ಅದು “ಉಡಾಫೆ”ಅಲ್ಲದಿದ್ದರೆ ಅದನ್ನು ಕಡತದಿಂದ ತೆಗೆಯಿರಿ. ಅದು “ಉಡಾಫೆ” ಹೌದಾದರೆ ಹಾಗೆಯೇ ಇಡಿ.

ಸಭಾಪತಿಯವರು:- ನೋಡಿ, ಎಲ್ಲರೂ ಸ್ವಲ್ಪ ಸಮಾಧಾನದಿಂದ ಮಾತನಾಡುವುದರ ಮೂಲಕ ಸದನವನ್ನು lively ಆಗಿ ಇಡೋಣ.

ಶ್ರೀ ಭೋಜೇಗೌಡ(ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು):- ಮಾನ್ಯ ಸಭಾಧ್ಯಕ್ಷರವರೇ,

ಸಭಾಪತಿಯವರು:- ಸಭಾಧ್ಯಕ್ಷರವರೇ ಎಂದು ಹೇಳಬಾರದು, ಸಭಾಪತಿಗಳೇ ಎಂದು ಹೇಳಬೇಕು. ತಾವು ಹೊಸದಾಗಿ ಬಂದಿದ್ದೀರಿ.

ಶ್ರೀ ಭೋಜೇಗೌಡ(ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು):- ಮಾನ್ಯ ಸಭಾಪತಿಯವರೇ, ಮೊದಲಿಗೆ ಹೇಳಿದ್ದೇನೆ. ಏನಾದರೂ ತಪ್ಪ ಮಾತನಾಡಿದ್ದರೆ, ದಯಮಾಡಿ ಕ್ಷಮಿಸಬೇಕೆಂದು ಹೇಳಿದ್ದೇನೆ.

ಸಭಾಪತಿಯವರು:- ನಾನು ನಿಮ್ಮ ತಪ್ಪುಗಳನ್ನು ತಿದ್ದಲಿಕ್ಕೆ ಎಂದು ಹೇಳಿದ್ದೇನೆ.

ಶ್ರೀ ಭೋಜೇಗೌಡ:- ಮಾನ್ಯ ಸಭಾಪತಿಯವರೇ, ನಾನು ಮೊದಲ ಬಾರಿಗೆ ಈ ಒಂದು ಚೊಚ್ಚಲ ಸಭೆಯಲ್ಲಿ ಮಾತನಾಡುತ್ತಿದ್ದೇನೆ.

ಸಭಾಪತಿಯವರು:- ಶ್ರೀಯುತ ಭೋಜೇಗೌಡ ರವರೇ, ತಾವು ಕೋರ್ಟಿನಲ್ಲಿ ಮಾತನಾಡಿದಂತೆ ಮಾತನಾಡಬೇಡಿ. ಸದನದಲ್ಲಿ ಮಾತನಾಡಿದಂತೆ ಮಾತನಾಡಿ.

ಶ್ರೀ ಭೋಜೇಗೌಡ:- ಮಾನ್ಯ ಸಭಾಪತಿಯವರೇ, ಆಯಿತು. ನಾನು ಪ್ರಧಾನ ಮಂತ್ರಿ ಫಸಲು ಭೀಮಾ ಯೋಜನೆಯು ಮಹತ್ತರವಾದ ಮಹತ್ವಾಕಾಂಕ್ಷೆಯಾದ ಕೇಂದ್ರ ಸರ್ಕಾರದ ಯೋಜನೆಯಾಗಿದ್ದು,

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ ರಾಷ್ಟ್ರದ ರೈತರಿಗೆ ಉಪಯೋಗವಾಗುವಂತಹ ಒಂದು ಯೋಜನೆಯನ್ನು ಏನು ತಂದಿದ್ದೀರಿ, ಅದರಲ್ಲಿ ಇಂತಿಂತಹ ನ್ಯೂನ್ಯತೆಗಳಿವೆ ಎಂದು ಇನ್ನು ಹೇಳುತ್ತಲೇ ಇದ್ದೇನೆ ಅಷ್ಟೆ. ಅದನ್ನು ಬಿಟ್ಟು ಬೇರೇನೂ ಹೇಳುತ್ತಿಲ್ಲ. ಎಲ್ಲರೂ ಕೇಳುತ್ತಿದ್ದಾರೆ. ಇಂತಿಂತಹ ನ್ಯೂನ್ಯತೆಗಳಿದ್ದು, ಅವುಗಳನ್ನು ಸರಿ ಮಾಡಿ ಕೊಟ್ಟರೆ ಅದು ರೈತರಿಗೆ ಒಳ್ಳೆಯ ಯೋಜನೆಯಾಗುತ್ತದೆ. ವಿರೋಧ ಪಕ್ಷದ ಸದಸ್ಯರುಗಳೆಲ್ಲರೂ ಆ ಒಂದು ಪಕ್ಷದಲ್ಲಿ ಕೆಲಸ ಮಾಡುತ್ತಿದ್ದೀರಿ, ಆ ಪಕ್ಷದ ನಾಯಕರುಗಳಿದ್ದೀರಿ, ನೀವು ದಯಮಾಡಿ ಈ ಬಗ್ಗೆ ತಿಳಿಸಿ ಎಂದು ಹೇಳಿದ್ದೇನೆ ಅಷ್ಟೆ.

ಶ್ರೀ ಕೋಟ ಶ್ರೀನಿವಾಸ ಪೂಜಾರಿ:- ಮಾನ್ಯ ಸಭಾಪತಿಯವರೇ,

ಸಭಾಪತಿಯವರು:- ಒಂದು ನಿಮಿಷ ನಾನು ಹೇಳುತ್ತೇನೆ. ವಿರೋಧ ಪಕ್ಷದ ನಾಯಕರಿಗೆ ಮಧ್ಯ ಪ್ರವೇಶ ಮಾತನಾಡುವುದಕ್ಕೆ ಅಧಿಕಾರ ಇದೆ. ಆದರೆ, ತಾವು ಪದೇ ಪದೇ ಎದ್ದು ನಿಂತು ಮಾತನಾಡಿದರೆ ಮಾನ್ಯ ಸದಸ್ಯರಿಗೆ ಹೇಗೆ ಮಾತನಾಡಲಿಕ್ಕೆ ಸಾಧ್ಯ?

ಶ್ರೀ ಕೋಟ ಶ್ರೀನಿವಾಸ ಪೂಜಾರಿ:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದ ವಿಷಯವನ್ನೇ ಪದೇ ಪದೇ ಹೇಳಿದರೆ ಹೇಗೆ?

ಸಭಾಪತಿಯವರು:- ಮಾನ್ಯ ಸದಸ್ಯರು ಈಗ ಏನು ಹೇಳಿದರು?

ಶ್ರೀ ಕೋಟ ಶ್ರೀನಿವಾಸ ಪೂಜಾರಿ:- ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರವು ಒಂದು ಯೋಜನೆಯನ್ನು ಜಾರಿಗೆ ತರುತ್ತದೆ. ಎಲ್ಲಾ ರಾಜ್ಯಗಳಲ್ಲಿ ಭೌಗೋಳಿಕವಾಗಿ ಅನುಷ್ಠಾನಗೊಳಿಸುತ್ತಾರೆ. ಇದರಲ್ಲಿ ತೊಂದರೆ ಇದ್ದಲ್ಲಿ ಈ ಬಗ್ಗೆ ರಾಜ್ಯ ಸರ್ಕಾರವೂ ಕೇಂದ್ರ ಸರ್ಕಾರಕ್ಕೆ ಒಂದು ಪ್ರಸ್ತಾವನೆಯನ್ನು ಕಳುಹಿಸಿಕೊಟ್ಟು ಅದನ್ನು ಸರಿಪಡಿಸಿಕೊಳ್ಳಲಿಕ್ಕೆ ಅವಕಾಶವಿದೆ. ಈ ವಿಚಾರವಾಗಿ ಸಚಿವರಾದ ಶ್ರೀಯುತ ಪ್ರಿಯಾಂಕ್ ಖರ್ಗೆಯವರು ಅಲ್ಲವೆಂದು ಹೇಳಲಿ ನೋಡೋಣ. ಅದನ್ನು ಬಿಟ್ಟು ಕೇಂದ್ರ ಸರ್ಕಾರದ ತಪ್ಪು, ಕೇಂದ್ರ ಸರ್ಕಾರದ ತಪ್ಪು' ಪ್ರಧಾನ ಮಂತ್ರಿಗಳದ್ದು ತಪ್ಪು ಎಂದು ಹೇಳಿದರೆ ಹೇಗೆ? ಅದನ್ನು ಸರಿ ಮಾಡಿಕೊಳ್ಳಬೇಕಾದರೆ, ಇಂತಿಂತಹ ತಪ್ಪುಗಳಿವೆ, ಇವುಗಳನ್ನು ಸರಿ ಮಾಡಿ ಎಂದು ಹೇಳಿ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿಕೊಡುವ ಮೂಲಕ ಸರಿ ಮಾಡಿಕೊಳ್ಳಬಹುದು. ನಾವುಗಳು ಇಂತಿಂತಹ ತಪ್ಪುಗಳಿವೆ, ಅದನ್ನು ಸರಿಪಡಿಸಿಕೊಳ್ಳಿ ಎಂದು ರಾಜ್ಯ ಸರ್ಕಾರಕ್ಕೆ ಹೇಳುವ ರೀತಿಯಲ್ಲಿಯೇ ನೀವು ಸಹ ಕೇಂದ್ರ ಸರ್ಕಾರಕ್ಕೆ ಇಂತಿಂತಹ ತಪ್ಪುಗಳಿವೆಂದು ಹೇಳಬೇಕಲ್ಲವೇ? ಅದನ್ನು ಬಿಟ್ಟು, ರಾಜಕೀಯವಾಗಿ ಹೋಲಿಕೆ ಮಾಡಿಕೊಂಡರೆ ಹೇಗೆ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಪ್ರಿಯಾಂಕ್ ಖರ್ಗೆ(ಸಮಾಜ ಕಲ್ಯಾಣ ಸಚಿವರು):- ಮಾನ್ಯ ಸಭಾಪತಿಯವರೇ, ತಮ್ಮಲ್ಲಿ ಒಂದು ಮನವಿ. ನಾವು ವೈಯಕ್ತಿಕವಾಗಿ ಏನೂ ಹೇಳುತ್ತಿಲ್ಲ. ಮಾನ್ಯ ಸದಸ್ಯರು ಪ್ರಧಾನ ಮಂತ್ರಿಗಳ ಫಸಲ್ ಭೀಮಾ ಯೋಜನೆಯ ಬಗ್ಗೆ ಮಾತನಾಡುತ್ತಿದ್ದಾರೆ. ನಮ್ಮ ರಾಜ್ಯಕ್ಕೆ, ನಮ್ಮ ಸರ್ಕಾರಕ್ಕೆ, ಹಿಂದಿನ ಸರ್ಕಾರಕ್ಕೆ ಎಷ್ಟು ಹಣ ಬಂದಿದೆ ಎನ್ನುವುದರ ಬಗ್ಗೆ ಅಂಕಿ-ಅಂಶಗಳ ಸಮೇತ ಮಾನ್ಯ ಸದಸ್ಯರು ಹೇಳುತ್ತಿದ್ದರು. ನಾವು ಎಷ್ಟು ಕೇಳಿದ್ದೇವೆ, ಅಷ್ಟು ಹಣ ಬಂದಿಲ್ಲ, ಮಹಾರಾಷ್ಟ್ರ ರಾಜ್ಯಕ್ಕೆ ಅವರು ಕೇಳಿದ್ದಕ್ಕಿಂತ ಹೆಚ್ಚು ಹಣವನ್ನು ಕೊಟ್ಟರು, ಗುಜರಾತ್ ರಾಜ್ಯಕ್ಕೆ ಅವರು ಕೇಳಿದ್ದಕ್ಕಿಂತ ಜಾಸ್ತಿ ಕೊಟ್ಟಿದ್ದಾರೆಂದು ಅವರು ಅಂಕಿ-ಅಂಶಗಳ ಸಮೇತ ಹೇಳಿದ್ದಾರೆ.

ಸಭಾಪತಿಯವರು:- ಅದರಲ್ಲಿ ತಪ್ಪೇನಿದೆ?

ಶ್ರೀ ಪ್ರಿಯಾಂಕ್ ಖರ್ಗೆ:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುವುದನ್ನು ಕೇಳಲಿಕ್ಕೆ ವಿರೋಧ ಪಕ್ಷದ ನಾಯಕರಿಗೆ ತಾಳ್ಮೆ ಇಲ್ಲವೆಂದರೆ ಹೇಗೆ?

(ಗೊಂದಲ)

ನಾವು ವೈಯಕ್ತಿಕವಾಗಿ ಏನೂ ಹೇಳುತ್ತಿಲ್ಲ, ನಮ್ಮ ರಾಜ್ಯಕ್ಕೆ ಎಷ್ಟು ಪಾಲು ಬರಬೇಕಾಗಿದೆ, ಅಷ್ಟು ಹಣವನ್ನು ಕೊಡಿ ಎಂದು ನಾವು ಕೇಳುತ್ತಿದ್ದೇವೆ ಅಷ್ಟೆ. ಬರಬೇಕಾದ ಹಣ ಬಂದಿಲ್ಲವೆಂದು ಹೇಳುತ್ತಿದ್ದೇವೆ. ಆದರೆ, ಮಹರಾಷ್ಟ್ರ ರಾಜ್ಯಕ್ಕೆ ಅವರು ಕೇಳಿದ್ದಕ್ಕಿಂತ ಹೆಚ್ಚು ಹಣವನ್ನು ಕೊಡುತ್ತಿದ್ದಾರೆ.

ಶ್ರೀ ಕೋಟ ಶ್ರೀನಿವಾಸ ಪೂಜಾರಿ:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿದ್ದು ಸರಿ ಇದೆ ನಾನು ಒಪ್ಪಿಕೊಂಡಿದ್ದೇನೆ, ಇಲ್ಲವೆಂದು ಹೇಳಿಲ್ಲ. ನಮಗೆ ಪಾಲು ಕಡಿಮೆ ಇದೆ, ಹಣ ಬರಬೇಕು, ಅದಕ್ಕೆ ಪ್ರಸ್ತಾಪ ಕಳುಹಿಸಬೇಕು. ಎಲ್ಲವೂ ಸರಿ ಇದೆ. ಆದರೆ, ಶ್ರೀಯುತ ಭೋಜೇಗೌಡರು ಹೇಳಿದ ರೀತಿ ಏನಿದೆ. . .ಅದು ಅವರು ಬರಿ ಭೋಜೇಗೌಡರಲ್ಲ, ಆಡಳಿತ ನಡೆಸುವಂತಹ ಒಂದು ಪಕ್ಷದ, ಒಬ್ಬ ಶಾಸಕರು ಹೇಳಿದ ರೀತಿಯನ್ನು ನಾನು ಆಕ್ಷೇಪ ಮಾಡಿದೆ. ಆಕ್ಷೇಪ ಮಾಡಿದ ಮೇಲೆ ಅದನ್ನು ನಿಯಂತ್ರಣ ಮಾಡಬೇಕೆನ್ನುವ ನನ್ನ ಅಪೇಕ್ಷೆ ಇತ್ತು. ಈ ಬಗ್ಗೆ ತಾವು ಅವರಿಗೆ ಎಚ್ಚರಿಕೆಯನ್ನು ಕೊಡುತ್ತೀರಿ ಎಂದು ನಾನು ತಿಳಿದುಕೊಂಡಿದ್ದೆ. ಈ ಬಗ್ಗೆ ಏನೂ ಕ್ರಮವಾಗದೇ ಇದ್ದಾಗ ಪ್ರತಿಪಕ್ಷವಾಗಿ ಅದನ್ನು ಪ್ರತಿರೋಧ ಮಾಡುವ ನಿಟ್ಟಿನಲ್ಲಿ ನಾವು ಬಾವಿಗೆ ಹೋಗಿ ಧರಣಿ ಮಾಡಬೇಕಾಯಿತು.

ಸಭಾಪತಿಯವರು:- ನೀವು ಹೇಳಿದ ಮೇಲೆ ನಾನು ಅವರನ್ನು ಕುಳಿತುಕೊಳ್ಳಲಿಕ್ಕೆ ಹೇಳಿದೆ. ಇನ್ನು ಅವರು ಸರಿಯಾಗಿ ಮಾತನಾಡಬೇಕು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಶ್ರೀ ಭೋಜೇಗೌಡ:- ಮಾನ್ಯ ಸಭಾಪತಿಯವರೇ, ನಾನು ಸರಿಯಾಗಿ ಮಾತನಾಡಿಲ್ಲವೆಂದು ತಮ್ಮ ಕಡತ ಹೇಳಿದರೆ ನಾನು ಇಡೀ ಸದನಕ್ಕೆ ಕ್ಷಮೆ ಕೇಳುತ್ತೇನೆ. ನಾನು ಸರಿಯಾಗಿ ಮಾತನಾಡಿಲ್ಲವೆಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಗೆ ಹೇಳುತ್ತಾರೆ?

ಮಾನ್ಯ ಸಭಾಪತಿಯವರೇ, ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಯಲ್ಲಿ ಕೆಲವು ಮಹತ್ತವಾದ ಅಂಶಗಳಿವೆ. ನಾನು ಇಲ್ಲವೆಂದು ಹೇಳುತ್ತಿಲ್ಲ. ಆ ಒಳ್ಳೆಯ ಅಂಶಗಳ ಬಗ್ಗೆಯೂ ನಾನು ಹೇಳಿದ್ದೇನೆ. ಅದರಲ್ಲಿ ರೈತರಿಗೆ ಮಾರಕವಾಗಿರುವಂತಹ ಅಂಶಗಳನ್ನು ತೆಗೆಯಲಿಕ್ಕೆ ಹೇಳಿ, ನಾವು ತಮ್ಮ ಜೊತೆ ಬರುತ್ತೇವೆಂದು ನಾವು ಅವರಿಗೆ ವಿನಂತಿ ಮಾಡಿದ್ದೇವೆ. ಇದರಲ್ಲಿ ಏನು ತಪ್ಪು ಇದೆ? ಇದರಲ್ಲಿ ತಪ್ಪಿಲ್ಲ. ಎಲ್ಲೆಲ್ಲಿ ಮಳೆ ಬಿದ್ದಿದೆ, ಎಲ್ಲೆಲ್ಲಿ ಮಳೆ ಬಿದ್ದಿಲ್ಲವೆಂದು ನೀವು ಹೇಗೆ ಕಂಡು ಹಿಡಿಯುತ್ತೀರಿ ಎನ್ನುವ ವಿಚಾರದಲ್ಲಿ ಅದರೊಳಗಡೆ ಹೇಳಿದ್ದಾರೆ. ನಾವು ಅದನ್ನು Rain Gauge ಮೂಲಕ ಕಂಡು ಹಿಡಿಯುತ್ತೇವೆಂದು ಹೇಳಿದ್ದಾರೆ. ಗ್ರಾಮ ಪಂಚಾಯಿತಿ ಇರುವಂತಹ ಸ್ಥಳದಲ್ಲಿ ನೋಡುತ್ತೇವೆಂದು ಹೇಳಿದ್ದಾರೆ. ಇವತ್ತಿನ ಕಾಲ ಹೇಗೆ ಆಗಿದೆ ಎಂದರೆ ಒಂದು ಗ್ರಾಮ ಪಂಚಾಯಿತಿಯಲ್ಲಿ 10 ಹಳ್ಳಿಗಳಿದ್ದರೆ ಒಂದು ಹಳ್ಳಿಗೆ ಮಳೆ ಬಂದಿದ್ದರೆ, ಪಕ್ಕದ ಹಳ್ಳಿಯಲ್ಲಿ ಮಳೆ ಬಂದಿರುವುದಿಲ್ಲ. ಹೀಗಿರುವಾಗ ಪ್ರತಿ ಗ್ರಾಮಪಂಚಾಯಿತಿಗೆ Rain Gauge ಹಾಕಿ 10 ಹಳ್ಳಿಗಳಲ್ಲಿ ಎಷ್ಟು ಮಳೆ ಬಿದ್ದಿದೆ ಎಂದು ಕಂಡು ಹಿಡಿಯಲಿಕ್ಕೆ ಆಗುತ್ತದೆಯೇ?

ಶ್ರೀ ಆಯನೂರು ಮಂಜುನಾಥ್(ಪದವೀಧರರ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ನಂಬಿಕೆ ಇಟ್ಟುಕೊಂಡು ಕುಮಾರಸ್ವಾಮಿಯನ್ನು ಬಿಟ್ಟರೆ ಎಲ್ಲಾ ಕಡೆ ಮಳೆ ಬರುತ್ತದೆ.

ಶ್ರೀ ಭೋಜೇಗೌಡ:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರತಿಬಾರಿ ಅಡ್ಡ ಬರುತ್ತಾರೆ.

ಸಭಾಪತಿಯವರು:- ಶ್ರೀಯುತ ಆಯನೂರು ಮಂಜುನಾಥ್ ರವರೇ, ಮಾನ್ಯ ಸದಸ್ಯರು ಮಾತನಾಡುವುದರಲ್ಲಿ ತಪ್ಪೇನಿಲ್ಲ. ಅವರು ಮಾತನಾಡಲಿಕ್ಕೆ ಬಿಡಿ.

ಶ್ರೀ ಭೋಜೇಗೌಡ:- ಮಾನ್ಯ ಸದಸ್ಯರಾದ ಶ್ರೀಮಾನ್ ಆಯನೂರು ಮಂಜುನಾಥ್‌ರವರು ಮಾತನಾಡುವಂತಹ ಸಂದರ್ಭದಲ್ಲಿ ನಾನು ಬಹಳ ಗಂಭೀರವಾಗಿ ಕುಳಿತುಕೊಂಡಿದ್ದೆ.

ಸಭಾಪತಿಯವರು:- ಬಹಳ ಗಂಭೀರವಾಗಿ ಏನೂ ಕುಳಿತುಕೊಂಡಿಲ್ಲ. ಸ್ವಲ್ಪಮಟ್ಟಿಗೆ ನೀವು ಮಧ್ಯೆ ಪ್ರವೇಶ ಮಾಡಿ ಮಾತನಾಡುತ್ತಿದ್ದೀರಿ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಶ್ರೀ ಭೋಜೇಗೌಡ:- ಮಾನ್ಯ ಸದಸ್ಯರಾದ ಶ್ರೀಮಾನ್ ಮಂಜುನಾಥ್ ರವರು ನಮ್ಮ ಅಪ್ಪನವರನ್ನು ನೆನಪು ಮಾಡಿದರು, ಆಗ ಅವರು ನಮ್ಮ ಅಪ್ಪನ ಸ್ನೇಹಿತರಿದ್ದಾರೆ, ಅವರಿಗೆ ನಾನು ಏತಕ್ಕೆ disturb ಮಾಡಲಿಕ್ಕೆ ಹೋಗಲಿ ಎಂದು ಹೇಳಿ ಸುಮ್ಮನಿದ್ದೆ. ಮತ್ತೆ ಶ್ರೀಮತಿ ತೇಜಶ್ವನಿ ಗೌಡ ರವರು ಮಾತನಾಡುವಾಗ . . .

ಸಭಾಪತಿಯವರು:- ನಿಮ್ಮ ಅಪ್ಪ ಈ ರೀತಿಯಲ್ಲಿ ಗದ್ದಲ ಮಾಡುತ್ತಿರಲಿಲ್ಲವೆಂದು ಹೇಳಿದರು.

ಶ್ರೀ ಭೋಜೇಗೌಡ:- ಇನ್ನು ಶ್ರೀಮತಿ ತೇಜಶ್ವನಿಗೌಡ ರವರು ಮಾತನಾಡುವಾಗ ನಾನು ಏತಕ್ಕೆ ಮಾತನಾಡಬೇಕು, ನನ್ನ ಸರದಿ ಬಂದಾಗ ಮಾತನಾಡಿ, ತೀರಿಸೋಣ ಎಂದು ಕಾಯುತ್ತಿದ್ದೆ. ನನ್ನ ಸರದಿ ಬಂದಾಗ ತೀರಿಸಲಿಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಆದರೆ, ಅ ಕೆಲಸ ಇನ್ನೂ ಆಗುತ್ತಿಲ್ಲ. ಈ ವಿಚಾರದಲ್ಲಿ ಅವರುಗಳು ಬಹಳ ನುರಿತವರಾಗಿರುತ್ತಾರೆ. ನಾನು ಇಂದು ಮೊದಲ ಭಾರಿಗೆ ಬಂದಿದ್ದೇನೆ. ಇದರಲ್ಲಿ ಬಹಳ ಗಂಭೀರವಾಗಿ ಇರುವಂತಹ ವಿಚಾರ ಏನೆಂದರೆ Rain Gauge ಮೂಲಕ ನಾವು ಮಳೆಯನ್ನು ಅಳೆಯಲಿಕ್ಕೆ ಸಾಧ್ಯವೇ ಇಲ್ಲ. ಹೀಗಾಗಿ ಎಲ್ಲಿ ಮಳೆ ಬಿದ್ದಿದೆ ಎಂದು ಕಂಡು ಹಿಡಿಯಲಿಕ್ಕೆ ಸಾಧ್ಯವೇ ಇಲ್ಲ. ಹೀಗಾಗಿ, ರೈತರಿಗೆ ಫಸಲು ಎಲ್ಲಿ ನಷ್ಟವಾಗಿದೆ, ಎಲ್ಲಿ ಬಂದಿದೆ ಎಂದು ನಮ್ಮ ರಾಜ್ಯದಲ್ಲಿ ಕಂಡು ಹಿಡಿಯಲಿಕ್ಕೆ ಸಾಧ್ಯವಿಲ್ಲ. ಜೊತೆಯಲ್ಲಿ ಎಲ್ಲಿ ಫಸಲು ನಷ್ಟವಾಗಿದೆ ಎಂದು ತಿಳಿದುಕೊಳ್ಳಲಿಕ್ಕೆ helicopter ಮೂಲಕ ಸರ್ವೆ ಮಾಡುತ್ತಾರಂತೆ. ನಾನು ಇಲ್ಲಿ ಕುಳಿತುಕೊಂಡು ನನ್ನ ಆಲೂಗಡ್ಡೆ ಬೆಳೆ ಹೋಗಿದೆ ಎಂದು ಹೇಳಿ ನಾನು ನನ್ನ ಜಮೀನಿನಲ್ಲಿ ಕುಳಿತುಕೊಂಡಿದ್ದರೆ ಯಾವ helicopter ಬಂದಿತ್ತು, ಎಲ್ಲಿ ಬಂದಿತ್ತು ಎನ್ನುವುದನ್ನು ಯಾರು ನಮಗೆ ತಿಳಿಸುತ್ತಾರೆ? ಇದರ ಆಫೀಸ್ ಎಲ್ಲಿದೆ? ಹೀಗಾಗಿ, ಇದು ಒಂದು fraud company ಎಂದು ನಾನು ಈಗಾಗಲೇ ಬಿರುದು ಕೊಟ್ಟಿದ್ದೇನೆ. ನಂತರ ಏನು ಮಾಡಿದೇ ಎಂದರೆ I went to the High Court. ಈ ರಾಜ್ಯದ ರೈತರ ಹಿತವನ್ನು ಕಾಪಾಡುವುದಕ್ಕೋಸ್ಕರ ಹೈಕೋರ್ಟ್‌ಗೆ ಹೋಗಿರುತ್ತೇನೆ. ಅಲ್ಲಿಗೆ ಹೋಗಿ ನಾನು ತಡೆಯಾಜ್ಞೆಯನ್ನು ತಂದಿರುತ್ತೇನೆ. "ಪ್ರಧಾನ ಮಂತ್ರಿ ಫಸಲು ಭೀಮಾ ಯೋಜನೆ" ಯ ಅಧಿಕಾರಿಗಳೆಲ್ಲರೂ ಬಂದರು. ನೀವು ಈ ನಿಟ್ಟಿನಲ್ಲಿ ಕೆಲಸ ಮಾಡಲಿಲ್ಲವೆಂದರೆ ನೀವೆಲ್ಲರೂ (ನಿರ್ದೇಶಕರುಗಳೆಲ್ಲರೂ) disqualify ಆಗುತ್ತೀರಿ ಎಂದವರು ನಮಗೆ ಹೇಳಿದರು. ಬ್ಯಾಂಕ್ supersede ಆಗುತ್ತದೆ ಎಂದವರು ಹೇಳಿದರು. Supersede ಆಗಲಿ, ನಾವು disqualify ಆಗಲಿ, in the interest of farmers ನಾವು ಹಣವನ್ನು ಕಟ್ಟುವುದಿಲ್ಲ, ನೀವು ಏನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡುತ್ತೀರೋ ಮಾಡಿ ಹೋಗಿ ಎಂದವರಿಗೆ ನಾವು ಹೇಳಿದೆವು. ನನ್ನ ಅಣ್ಣ ಆ ಬ್ಯಾಂಕಿನ ಅಧ್ಯಕ್ಷರಿದ್ದು, ಅವರು ನಮ್ಮನ್ನೆಲ್ಲಾ disqualify ಮಾಡುತ್ತಾರೆಂದು ಹೇಳಿ, ಅವರುಗಳು ದುಡ್ಡನ್ನು ಕಟ್ಟಿಯೇ ಬಿಟ್ಟರು. ಆಗ ನಾನು ನಾನು disqualify ಆದರೂ ಪರವಾಗಿಲ್ಲ, ನಾನು ಹಣವನ್ನು ಕಟ್ಟುವುದಿಲ್ಲವೆಂದು ನಾನು ಅವರಿಗೆ ಹೇಳಿದೆ. ಆದರೆ, ಅವನ ತಲೆ ಸರಿಯಿಲ್ಲವೆಂದು ಹೇಳಿ ಅಧ್ಯಕ್ಷರು ತಾನೂ ಸೇರಿದಂತೆ 2-3 ಜನ ನಿರ್ದೇಶಕರಿಗೆ ಹೇಳಿ ಹಣವನ್ನು ಕಟ್ಟಿಸಿಯೇ ಬಿಟ್ಟರು.

ಮುಂದು. . .

(042) 03.07.2018 07.00 ಎಸ್‌ವಿ-ಎಕೆ

**Sri BOJEGOWDA (contd.):-**

I got a stay from the High Court. ನಾನು ಈ ವಿಚಾರಗಳನ್ನು ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಿ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಗೆ ತಡೆಯಾಜ್ಞೆಯನ್ನು ಪಡೆದುಕೊಂಡೆನು. Fraud ಎಂದು ಒಪ್ಪಿಕೊಳ್ಳದಿದ್ದರೆ ನ್ಯಾಯಾಲಯವು ತಡೆಯಾಜ್ಞೆಯನ್ನು ನೀಡುತ್ತಿತ್ತೆ? ತಡೆಯಾಜ್ಞೆ ನೀಡಿದ ನಂತರ ಅನೇಕ ಡಿಸಿಸಿ ಬ್ಯಾಂಕುಗಳು ಆ ತಡೆಯಾಜ್ಞೆ ಆದೇಶದ ಪ್ರತಿಯನ್ನು ಪಡೆದುಕೊಂಡು ಇಡೀ ರಾಜ್ಯದಲ್ಲಿ ಈ ಯೋಜನೆಗೆ ತಡೆಯಾಜ್ಞೆಯನ್ನು ತಂದರು. ಈಗ ಆ ಯೋಜನೆಯು ಕೇವಲ ಒಂದು optional ಆಗಿದೆ. ಯಾವ ರೈತನಿಗೆ ಬೇಕೋ ಅವನು ಪಡೆದುಕೊಳ್ಳಬಹುದು. ನನಗೆ ಇಷ್ಟವಾದರೆ ನಾನು ಕಟ್ಟಿಕೊಳ್ಳುತ್ತೇನೆ. ನನಗೇಕೆ ಅದನ್ನು ಕಡ್ಡಾಯಗೊಳಸುತ್ತಾರೆ? What vested interest they have in it? ನನ್ನ ಬೆಳೆ ಹಾಳಾಗುತ್ತದೆ ಎಂದರೆ, ನಾನು ಕಟ್ಟಲು ಸಿದ್ಧನಿದ್ದೇನೆ. ನನಗೆ ಅಡಿಕೆ ಫಸಲು ಇದೆ. I am cocksure that ಇಂತಹ ಫಸಲು ಇಷ್ಟು ಬರುತ್ತದೆ ಎಂದು ನನಗೆ ಗ್ಯಾರಂಟಿ ಇದೆ. ಗ್ಯಾರಂಟಿ ಫಸಲಿಗೆ ನಾನೇಕೆ ವಿಮೆಯನ್ನು ಕಟ್ಟಬೇಕು. ಕಡ್ಡಾಯವಾಗಿ ಕಟ್ಟಲೇ ಬೇಕೆಂದು ಅದರಲ್ಲಿ ಒಂದು clause ಇದೆ. ನೀವು ಕಟ್ಟಲೇ ಬೇಕು, ಕಟ್ಟದಿದ್ದರೆ ಬಿಡುವುದಿಲ್ಲ ಎಂದು ಅಧಿಕಾರಿಗಳು ದೌಡು ಬಂದರು. ಕೇವಲ ನಮ್ಮ ರಾಜ್ಯ ಒಂದರಿಂದಲೇ 2,500 ಕೋಟಿ ರೂಪಾಯಿಗಳು ಸಂಗ್ರಹವಾಗುತ್ತದೆ. ಅಖಂಡ ಭಾರತದಲ್ಲಿ 45,000 ಕೋಟಿ ರೂಪಾಯಿಗಳು ಸಂಗ್ರಹವಾಗುತ್ತದೆ. ಸಂಗ್ರಹವಾದ ದುಡ್ಡು ಎಲ್ಲಿಗೆ ಹೋಯಿತು? ವಾಪಸ್ ಕರ್ನಾಟಕ ರಾಜ್ಯಕ್ಕೆ ಎಷ್ಟು ಬಂದಿದೆ ಎಂಬ ಮಾಹಿತಿಯನ್ನು ತೆಗೆಸಬೇಕು. ಪ್ರತಿ ಜಿಲ್ಲೆಯಲ್ಲೂ ನೂರಾರು ವಿಮಾ ಕಂಪನಿಗಳಿವೆ. ಅದೇ ರೀತಿ ಇಲ್ಲಿಯೂ ಕೂಡ ಕಂಪನಿಯನ್ನು ಸ್ಥಾಪನೆ ಮಾಡಿ, in every district and taluk

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

headquarter, an insurance company affiliated to the government or a government based insurance company ಯಾವುದಾದರೊಂದು ವಿಮಾ ಕಂಪನಿಯನ್ನು ಮಾಡುವುದಕ್ಕೆ ಈಗಲೂ ಕಾಲ ಮಿಂಚಿರುವುದಿಲ್ಲ. ಆ ರೀತಿ ಮಾಡುವುದರಿಂದ ರೈತರಿಗೆ ನ್ಯಾಯ ದೊರಕುತ್ತದೆ. ಅದು ಬಿಟ್ಟು ಯಾವುದೋ ಒಂದು ಕಂಪನಿ ದೆಹಲಿಯಲ್ಲಿ ಕಛೇರಿ ಇಟ್ಟುಕೊಂಡು ಕೆಲಸ ಮಾಡುತ್ತಿದ್ದು, ಅವರ ಅಡಿಯಾಳಾಗಿ ರಾಜ್ಯದ ಜಿಲ್ಲಾಧಿಕಾರಿಗಳು ಕೆಲಸ ಮಾಡುತ್ತಾರೆಂದರೆ ನಮ್ಮ ರೈತರು ಎಲ್ಲಿಗೆ ಹೋಗಬೇಕು? ಮಾನ್ಯ ಪ್ರಧಾನಮಂತ್ರಿಯವರು ತಂದಿರುವ ಈ ಯೋಜನೆಯು ರೈತರ ಹಿತವನ್ನು ಕಾಪಾಡತಕ್ಕಂತಹ ಕೆಲಸವನ್ನು ಮಾಡದೆ, ರೈತರಿಗೆ ಮಾರಕವಾದಂತಹ ಯೋಜನೆಯಾಗಿದೆ. ಇಲ್ಲವಾದಲ್ಲಿ ಎಲ್ಲೆಲ್ಲಿ ರೈತರಿಗೆ ತೊಂದರೆಯಾಗತಕ್ಕಂತಹ ಅಂಶಗಳಿವೆಯೋ ಅವುಗಳನ್ನು ತೆಗೆದು ಯೋಜನೆಯನ್ನು ಜಾರಿಗೊಳಿಸಿದಲ್ಲಿ ರಾಜ್ಯದ ರೈತರಿಗೆ ಒಳ್ಳೆಯದಾಗುತ್ತದೆ ಎಂದು ಹೇಳಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಯವರೊಂದಿಗೆ ಕೂಡ ಇದನ್ನು modify ಮಾಡುವುದರ ಬಗ್ಗೆ ನಾವು ಈಗಾಗಲೇ ಮಾತನಾಡಿದ್ದೇವೆ. ಇದರ ಬಗ್ಗೆ ನಮ್ಮ ಸರ್ಕಾರ ಕೇಂದ್ರಕ್ಕೆ ಬರೆದು ಮುಂಬರುವ ದಿನಗಳಲ್ಲಿ ಕ್ರಮ ಕೈಗೊಳ್ಳಲಿದೆ.

ರಾಜ್ಯಪಾಲರ ಭಾಷಣದಲ್ಲಿ ಬಂದಂತಹ ಮತ್ತೊಂದು ಗಂಭೀರವಾದ ವಿಚಾರವೇನೆಂದರೆ ಕೋ-ಆಪರೇಟಿವ್ ಬ್ಯಾಂಕುಗಳ ಬಗ್ಗೆ ಆಗಿದೆ. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ರೈತರಿಗೆ ಯಾರೂ ಕುರ್ಚಿ ಹಾಕುವುದಿಲ್ಲ. ನಮ್ಮ ಮಾನ್ಯ ಆಯನೂರು ಮಂಜುನಾಥ್‌ರವರ ತರಹ ಚೆನ್ನಾಗಿರುವವರು ಹೋದರೆ ಕಾಫಿ ಕೊಡಿಸಿ ಕೂರಿಸುತ್ತಾರೆ. ಸಮಾಜದ ಕಟ್ಟಕಡೆಯ ಮನುಷ್ಯ ರೈತ ಹೋದರೆ ಕಾಫಿ ಕೊಡಿಸುವುದಿರಲಿ, ಒಳಗೆ ಕೂರಿಸಲೂ ಸಹ ಹಿಂಜರಿಯುತ್ತಾರೆ. ಈ ತರಹದ ಪರಿಸ್ಥಿತಿ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿದೆ. ದೊಡ್ಡ ದೊಡ್ಡವರು 50 ಲಕ್ಷ, ಒಂದು ಕೋಟಿ, ಎರಡು ಕೋಟಿ ಸಾಲ ತೆಗೆದುಕೊಂಡಿರುತ್ತಾರೆ. ಇಲ್ಲಿಯವರೆವಿಗೂ ಕೋಆಪರೇಟಿವ್ ಬ್ಯಾಂಕಿನಲ್ಲಿ ನಮ್ಮ ರೈತರ ಸಾಲ ಮುಟ್ಟಿರುವುದು ಕೇವಲ 18% ಎಂದು ಬಹಳ ನೋವಿನಿಂದ ಹೇಳುತ್ತೇನೆ. ಉಳಿದ 82%ನಲ್ಲಿ ನಮ್ಮ ರೈತರಿಗೆ ಕೋಆಪರೇಟಿವ್ ಸಾಲದಲ್ಲಿ ಕೊಡಲಾಗಿರುವುದಿಲ್ಲ ಎಂದರೆ ನಾವೆಲ್ಲಿದ್ದೇವೆ ಎಂದು ಗಂಭೀರವಾಗಿ ಯೋಚಿಸಬೇಕಾಗಿದೆ. ರೈತರ ಹಿತ ಕಾಪಾಡುವ ನಿಟ್ಟಿನಲ್ಲಿ ಕನಿಷ್ಟ 35-38% ಕೋಆಪರೇಟಿವ್ ಸಾಲವನ್ನು ಹೆಚ್ಚಿಗೆ ಮಾಡಿ ಯೋಜನೆಯನ್ನು ತಯಾರು ಮಾಡಬೇಕಾಗಿದೆ. ರಾಜ್ಯಪಾಲರ ಭಾಷಣದ ಒಟ್ಟಾರೆ ಸಾರಾಂಶದಲ್ಲಿ ರೈತರ ಹಿತ ಕಾಪಾಡುವುದಕ್ಕೆ ಒತ್ತು ನೀಡಲಾಗಿದೆ.

ಮಾನ್ಯ ಸಭಾಪತಿಯವರೇ, ತಮಗೆ ಹಾಗೂ ಇಲ್ಲಿರುವ ಪ್ರವಾಸೋದ್ಯಮ ಸಚಿವರಿಗೆ ತಿಳಿದಿರುವಂತೆ ಅನೇಕ ಕೃಷಿ ಯೋಜನೆಗಳ ಬಗ್ಗೆ ಇಸ್ರೇಲ್‌ಗೆ ಅಧ್ಯಯನ ಪ್ರವಾಸವನ್ನು ಕೈಗೊಳ್ಳಲಾಗಿತ್ತು. ನಾನು ಚುನಾವಣೆಗೆ ಸ್ಪರ್ಧೆ ಮಾಡಿದ್ದುದರಿಂದ ನನಗೆ ಅವಕಾಶವಿದ್ದರೂ ಸಹ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೋಗಲಾಗಲಿಲ್ಲ. ನಮ್ಮ ಮುಖ್ಯಮಂತ್ರಿಗಳು ಸಂಪೂರ್ಣವಾಗಿ ಎಲ್ಲವನ್ನೂ ಅಧ್ಯಯನ ಮಾಡಿದ್ದಾರೆ. ನಾನೂ ಸಹ ಟೊಮೆಟೊ ಬೆಳೆಗಾರನಾಗಿದ್ದೇನೆ. ನೀವು ನನ್ನನ್ನು ನೋಡಿ ನಗುತ್ತೀರಿ. ನಾನು ರೈತನ ಕೆಲಸವನ್ನು ಮಾಡಿಯೇ ಬಂದಿರುವವನು. ಮುಂದೆಯೂ ಸಹ ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಭೋಜೇಗೌಡರವರೆ, ಎಲ್ಲಾ ಬೆಳೆಯನ್ನು ಬೆಳೆಯುವವರು ಮಾನ್ಯ ಧರ್ಮೇಗೌಡರು. ನೀವು ಕೇವಲ ಹೆಸರು ತೆಗೆದುಕೊಳ್ಳುವವರು.

**(ಸದನದಲ್ಲಿ ನಗುವಿನ ಅಲೆ)**

**ಶ್ರೀ ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಇವತ್ತು ಹನಿ ಹನಿ ನೀರನ್ನು ಕಾಪಾಡತಕ್ಕಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಕಳೆದ ನಾಲ್ಕು ವರ್ಷಗಳ ಕಾಲ ರಾಜ್ಯವು ಬರಗಾಲದ ದವಡೆಗೆ ಸಿಲುಕಿದ್ದು...

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರ ಕಾಲ್ಗುಣ.

**ಶ್ರೀ ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಕಾಲ್ಗುಣ ಎಂಬುದನ್ನು ಒಪ್ಪಿಕೊಳ್ಳಲಿ. ಹಿಂಜರಿಕೆ ಏಕೆ? ಕಾಲ್ಗುಣದಿಂದಲೇ ಆಗಿರತಕ್ಕಂಥದ್ದು. ಕಳೆದ ನಾಲ್ಕು ವರ್ಷಗಳ ದಿನಗಳನ್ನು ನೆನಪಿಸಿಕೊಳ್ಳಲಿ. ಮಾನ್ಯ ಸದಸ್ಯರು ಹಾಗೇನಾದರೂ ಹೇಳಿದಲ್ಲಿ ಅದನ್ನು ನಾನು ತುಂಬು ಹೃದಯದಿಂದ ಸ್ವಾಗತಿಸುತ್ತೇನೆ. I thank him. ಇಸ್ರೇಲ್ ಮಾದರಿಯ ಕೃಷಿಯನ್ನು ಯಾವ ರೀತಿಯಲ್ಲಿ ಮಾಡುತ್ತಾರೆಂದು ನಮ್ಮ ಸ್ನೇಹಿತರು ಕೇಳಿದರು. ಇಲ್ಲಿಗೆ ಇಸ್ರೇಲ್ ತಂಡ ಬರುತ್ತದೆ. ಪ್ರತಿ ಜಿಲ್ಲೆಯಲ್ಲೂ ಅವರ ತಂಡವನ್ನು ನೇಮಿಸಿ ರೈತರಿಗೆ ಟ್ರೈನಿಂಗ್ ಕೊಡತಕ್ಕಂತಹ ವಿಚಾರವನ್ನು ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರು ಮಾತನಾಡಿದ್ದಾರೆ. ಸಮ್ಮಿಶ್ರ ಸರ್ಕಾರದಲ್ಲಿ ಯಾವುದೇ ರೀತಿಯ ಭಿನ್ನಾಭಿಪ್ರಾಯವಿಲ್ಲ. ಭಿನ್ನಾಭಿಪ್ರಾಯಗಳ ಬಗ್ಗೆ ಅನೇಕ ವಿಚಾರಗಳನ್ನು ಚರ್ಚೆ ಮಾಡಿದ್ದಾರೆ. ನನಗೆ ಮಾನ್ಯ ಜೆ.ಹೆಚ್.ಪಟೇಲರ ಕಾಲದ ನೆನಪಾಗುತ್ತಿದೆ. ಆದರೆ ಆ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಏನಾದರೂ ಸಿಗುತ್ತದೆಂದು ಕಾಯುತ್ತಿದ್ದಾರೆ. ಆದರೆ ಯಾರಿಗೂ ಏನೂ ಸಿಗುವುದಿಲ್ಲ. ಐದು ವರ್ಷ ಸರ್ಕಾರ ಸುಭದ್ರವಾಗಿರಲಿದೆ. ಐದನೇ ತಾರೀಖಿನಂದು ನಮ್ಮ ವಿರೋಧಪಕ್ಷದವರು ಕೂಡ ಮೇಜು ಕುಟ್ಟಿ ಸ್ವಾಗತಿಸತಕ್ಕಂತಹ ಬಜೆಟ್ ಅನ್ನು ಕೊಡುತ್ತೇವೆಂದು ಈ ಸಂದರ್ಭದಲ್ಲಿ ಹೇಳಿ ನನಗೆ ಅವಕಾಶ ಕೊಟ್ಟದ್ದಕ್ಕಾಗಿ ವಂದಿಸುತ್ತೇನೆ. ಇನ್ನೂ ಬಹಳಷ್ಟು ವಿಚಾರಗಳನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾನು ಮಾತನಾಡುವುದಿದೆ. ಮಾನ್ಯ ಆಯನೂರು ಮಂಜುನಾಥ್‌ರವರು ಹೇಳಿದಂತಹ ಮಾತನ್ನು ನಾನು ಸಂಪೂರ್ಣವಾಗಿ endorse ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಭೋಜೇಗೌಡರೆ, ನಿಮ್ಮನ್ನು ಕೊನೆಯಲ್ಲಿ ಏನಕ್ಕೆ ಅವಕಾಶ ನೀಡಿದೆ ಎಂದರೆ ಎಲ್ಲರನ್ನೂ ಸ್ವಲ್ಪ ನಗೆಗಡಲಿನಲ್ಲಿ ತೇಲಿಸಲಿ ಎಂದು.

**ಶ್ರೀ ಭೋಜೇಗೌಡ:-** ಧನ್ಯವಾದಗಳು. Guest Lecturers ವಿಚಾರದಲ್ಲಿ ಎ, ಬಿ, ಸಿ ವಲಯಗಳನ್ನು ಮಾಡಲಾಗಿದ್ದು, ಅದರಲ್ಲಿ ಬೆಂಗಳೂರು ಎ ವಲಯಕ್ಕೆ ಸೇರಿದೆ. ಹಾಗೆಯೇ ನಮ್ಮ ಜಿಲ್ಲೆಯ ಅಜ್ಜಂಪುರ ತಾಲ್ಲೂಕು ಕೂಡ ಎ ವಲಯಕ್ಕೆ ಸೇರಿದೆ. Cosmopolitan cities ಬೇರೆ, ತಾಲ್ಲೂಕುಗಳನ್ನು ಬೇರೆ ಮಾಡಬೇಕು. ತಮಗೆ ಈ ವಿಷಯದಲ್ಲಿ ಅಪಾರವಾದ ಅನುಭವವಿದೆ. ನಾವು ಹೆಚ್ಚಿಗೆ ಹೇಳಬೇಕಾದುದೇನು ಇಲ್ಲ. ಎ ವಲಯದಲ್ಲಿ ಕೆಲಸ ಮಾಡುವವರು ಸಿ ವಲಯಕ್ಕೆ ಹೋಗಬೇಕೆಂದು ಹೇಳುತ್ತಾರೆ. ಅದಕ್ಕೆ ನೂರಕ್ಕೆ ನೂರು ಭಿನ್ನಾಭಿಪ್ರಾಯವಿಲ್ಲ. ಸಿ ವಲಯದವರು ಅಲ್ಲಿಯೇ ಇದ್ದು ಜಾಗ ಖಾಲಿ ಆಗದಿದ್ದರೆ ಎ ವಲಯದವರು ಅಲ್ಲಿಗೆ ಹೋಗುವುದು ಹೇಗೆ? ಸಿ ವಲಯಕ್ಕೂ ಕಡ್ಡಾಯ ಮಾಡಬೇಕು. ಈಗಾಗಲೇ ಸಿ ವಲಯದಲ್ಲಿ 10 ವರ್ಷ ಕೆಲಸ ಮಾಡಿದವರು ಎ ವಲಯದಲ್ಲಿ ಈಗಿದ್ದವರಿಗೆ ಮುಂದಿನ ಪರಿಸ್ಥಿತಿ ಏನು ಎಂಬ ಒಂದು ವಿಚಾರವಿದೆ. ದಯವಿಟ್ಟು ಕ್ಷಮಿಸಬೇಕು ಮಾನ್ಯ ಸಭಾಪತಿಯವರೇ. ನಿಮಗೆ ಹೇಳುವಷ್ಟು ನಾನು ಶಕ್ತನಲ್ಲ.

ಇನ್ನೊಂದು ವಿಷಯವನ್ನು ನಮ್ಮ ಎಲ್ಲಾ ಸದಸ್ಯರು ಗಮನಿಸಬೇಕು. ಐಎಎಸ್ ಆಫೀಸರ್ ಆದವರು ಆಕಾಶದಿಂದ ಇಳಿದು ಬಂದವರಲ್ಲ. ಐಎಎಸ್ ಅಧಿಕಾರಿ ಆದವರಿಗೆ ಈ ನಾಡಿನ practical difficulty ಗೊತ್ತಿರಬೇಕು. ಅದು ರೈತರದ್ದಿರಬಹುದು ಅಥವಾ ಶಿಕ್ಷಕರದ್ದಿರಬಹುದು. ಆ practical difficulty ಗೊತ್ತಿದ್ದಂತಹ ಐಎಎಸ್ ಅಧಿಕಾರಿಗಳು ಇದ್ದಾರೆ. ಇಲ್ಲವೆಂದು ನಾನು ಹೇಳುತ್ತಿಲ್ಲ. ಆದರೆ ಒಂದು circular ವಿಚಾರದಲ್ಲಿ ಕಾಯ್ದೆಯೇ ಬೇರೆ, circular ಬೇರೆ. ಒಂದು circular ಅನ್ನು implement ಮಾಡುವಂತಹ ದುಸ್ಥಿತಿಗೆ ನಾವು ಬಂದರೆ ಈ ಶಾಸನ ಸಭೆ ಏಕಿರಬೇಕು? ಶಾಸನ ಮಾಡುವವರು ಯಾರು? ಕಾಯಿದೆ ಬಂದಂತಹ ಸಂದರ್ಭದಲ್ಲಿ ಅದನ್ನು implement ಮಾಡಬೇಕು. Circular ಅನ್ನು ನಮಗೆ ಕಳುಹಿಸಿ, ನಮ್ಮೊಟ್ಟಿಗೆ ಚರ್ಚೆ ಮಾಡುವ ಮುಖಾಂತರ ಸಾಧಕ ಬಾಧಕಗಳನ್ನು ನೋಡಬೇಕಾಗುತ್ತದೆ. Pros and cons ನೋಡದೆ circular ಅನ್ನು implement ಮಾಡುವಂತಹ ಐಎಎಸ್ ಅಧಿಕಾರಿಗಳು ಈ ನಾಡಿನಲ್ಲಿದ್ದಾರೆಂದರೆ ನಾವು ಎಲ್ಲಿಗೆ ಹೋಗಬೇಕು? ಇದರಿಂದ ಯಾರಿಗೇ ಆಗಲಿ ನ್ಯಾಯವನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೊಡಲು ಸಾಧ್ಯವೆ? ಹಾಗಾಗಿ circular ಏನಿದೆ ಅದು circular ಆಗಿಯೇ ಉಳಿಯಬೇಕು. ಕಾಯಿದೆ ಕಾಯಿದೆಯಾಗಿಯೇ ಇರಬೇಕೆನ್ನುವುದು ನನ್ನ ಮನದಾಳದ ಮಾತು. 1972ನಲ್ಲಿ ಮಾಡಿದಂತಹ ಕಾಯಿದೆಯನ್ನು ಶಿಕ್ಷಣ ಇಲಾಖೆಯನ್ನು ರಜಾರಹಿತ ಇಲಾಖೆಯೆಂದು ಮಾಡಲು ಹೊರಟಿದ್ದಾರೆ. ಇದು ಎಷ್ಟರ ಮಟ್ಟಿಗೆ ಸರಿ? ಮಾಡುವುದಾದರೆ ಮಾಡಲಿ, ಬೇಜಾರು ಇಲ್ಲ. ಆದರೆ ಒಬ್ಬರಿಗೊಂದು ಒಬ್ಬರಿಗೊಂದು ಮಾಡಬಾರದು. ಶಿಕ್ಷಣ ಇಲಾಖೆ ರಜಾ ಇಲಾಖೆ ಎಂದು ಮಾಡಿರುವುದು ನಾವಲ್ಲ. Psychiatrist ಆದಂಥವರಿಂದ ಒಬ್ಬ ಮೇಷ್ಟ್ರು ಎಷ್ಟು ಗಂಟೆ ಪಾಠ ಮಾಡಿದರೆ ಏನಾಗುತ್ತದೆ? ಮಕ್ಕಳಿಗೆ ಯಾವ ರೀತಿಯಾಗುತ್ತದೆ? ಪೋಷಕರಿಗೆ ಏನಾಗುತ್ತದೆ? ಎಂದು ಅಧ್ಯಯನ ಮಾಡಿ ಮಾಡಿರುವಂತಹ ಕಾಯಿದೆಯನ್ನು ಏಕಾಏಕಿ ರಾತ್ರೋರಾತ್ರಿ ಒಬ್ಬ ಐಎಎಸ್ ಅಧಿಕಾರಿ ತೆಗೆದು ಬಿಸಾಕುತ್ತಾರೆ ಎಂದರೆ ನಾವು ಎಲ್ಲಿದ್ದೇವೆ? ಐಎಎಸ್ ಅಧಿಕಾರಿಗಳು ಆಡಳಿತ ನಡೆಸುತ್ತಿದ್ದಾರೆಯೇ ಅಥವಾ ನಾವು ಆಡಳಿತ ನಡೆಸುತ್ತಿದ್ದೇವೆಯೇ? ದಯಮಾಡಿ ಇದನ್ನೆಲ್ಲಾ ಗಂಭೀರವಾಗಿ ಪರಿಗಣಿಸಬೇಕೆಂದು ಹೇಳಿ ಅತ್ಯಂತ ಕಳಕಳಿಯಿಂದ ಪ್ರಾರ್ಥಿಸುತ್ತೇನೆ. ಅವಕಾಶಕ್ಕಾಗಿ ಧನ್ಯವಾದಗಳು. ನಾನು ಯಾವುದೇ ಉಡಾಫೆ ಮಾತನಾಡಿರುವುದಿಲ್ಲ. ಉಡಾಫೆ ಮಾತನಾಡುವ ಮನುಷ್ಯನೂ ಅಲ್ಲ. ವಿರೋಧಪಕ್ಷದವರು ದಯಮಾಡಿ ಆ ರೀತಿ ಅರ್ಥೈಸಬಾರದು. ಅವರ ಮನಸ್ಸಿಗೆ ನೋವಾಗುವಂತಹ ಕೆಲಸ ಯಾವತ್ತೂ ಮಾಡುವುದಿಲ್ಲ. ಮಾಡಿದ್ದಲ್ಲಿ ದಯಮಾಡಿ ಕ್ಷಮಿಸಿ. Thank you.

(...ಮುಂದ

(43) ಕೆಜಿ /ಆರ್ ಎನ್ 7-10 3-7-18

**(ಸಭಾಪತಿಯವರ ಉಪಸ್ಥಿತಿ)**

**ಸಭಾಪತಿಯವರು:-** ಇವತ್ತಿನ ದಿವಸದ ಸದನವನ್ನು ಎಲ್ಲಾ ಮಾನ್ಯ ಸದಸ್ಯರು ಬಹಳ ಉತ್ತಮ ರೀತಿಯಲ್ಲಿ ನಡೆಸಿಕೊಟ್ಟಿದ್ದೀರಿ. ಆದ್ದರಿಂದ, ಎಲ್ಲಾ ಮಾನ್ಯ ಸದಸ್ಯರಿಗೂ ನಾನು ಹೃದಯಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**(ಸದನವು ಸಂಜೆ 7 ಗಂಟೆ 12 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ: 04ನೇ ಜುಲೈ ಮಾಹೆ 2018ರ ಬುಧವಾರದಂದು ಬೆಳಿಗ್ಗೆ 10.30 ಗಂಟೆಗೆ ಸೇರಲು ನಿಶ್ಚಯಿಸಿತು.)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"